ತಖಾವಿಲಾ

ಕೃಷ್ಯಭಿವೃದ್ಧ್ಯರ್ಥವಾಗಿ ಸರ್ಕಾರದವರು ಜಮೀನುದಾರರಿಗೆ
ಮಾಡುವ ಸಹಾಯಗಳ ವಿಷಯಕವಾದ ಲಾ.

"ವ್ಯವಹಾರನಿರ್ಣಯ" ಗ್ರಂಥಕರ್ತರೂ, "ಕನ್ನಡಲಾ
ರಿಪೋರ್ಟಿನ" ಪ್ರಚಾರಕರೂ ಆದ ಫಸ್ಟ್ ಗ್ರೇಡ್
ಪ್ಲೀಡರ್ ಎಂ. ಮಲ್ಲಾರಾಧ್ಯರು, ಇವರಿಂದ
ರಚಿಸಲ್ಪಟ್ಟು

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ ಮತ್ತು ಕ್ಲಾರ್ಕ್ ಪ್ರೆಸ್
ಇವುಗಳಲ್ಲಿ
ಮುದ್ರಿಸಲ್ಪಟ್ಟಿತು.

ಕ್ರಯ ವಿ. ಪಿ. ಚಾರ್ಜು ಸಹಿತ 10 ಆಣೆ.

ಉಪೋದ್ಘಾತ.

ನಮ್ಮ ವ್ಯವಹಾರನಿರ್ಣಯದಲ್ಲಿ ರೆವಿನ್ಯೂ ಲಾವು ಸೇರಿಲ್ಲವಾಗಿ ಇದನ್ನು ಅನೇಕ ಭಾಗಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ಭಾಗವನ್ನು ಇಂತಹ ಪ್ರಬಂಧದ ರೂಪದಲ್ಲಿ ಬರೆದು ಪ್ರತ್ಯೇಕವಾಗಿ ಪ್ರಕಟಿಸಲು ನಾವು ಪ್ರಯತ್ನಿಸಿರುವಮೇರೆ ಈ ಪ್ರಭಂಧವು ಆ ಲಾದಲ್ಲೊಂದು ಭಾಗವಾದ 'ತಖಾವಿ ಲಾ' ವನ್ನು ಕುರಿತು ಬರೆಯಲ್ಪಟ್ಟಿದೆ. ಭೂಮಿಯ ಫಲವತ್ತತೆಗಾಗೂ, ಕೃಷಿಯಭಿವೃದ್ಧಿಗಾಗೂ, ಕೃಷಿಕಾರರ (ರೈತರ) ರಕ್ಷಣೆಗಾಗೂ ಸರ್ಕಾರದವರು ಯಾವ ವಿಧಿಗಳಿಗನುಸಾರವಾಗಿ, ಎಂದರೆ, ಯಾವ ಲಾಕ್ಕೆ ಅನುಸಾರವಾಗಿ ಸಾಲಗಳನ್ನು ಕೊಡುತ್ತಾರೋ, ಇತರ ವಿಧವಾದ ಸಹಾಯಗಳನ್ನು ಮಾಡುತ್ತಾರೋ ಅಂತಹ ಲಾದ ವಿಷಯಕವಾದ ಈ ಪ್ರಬಂಧವನ್ನು "ತಖಾವಿ ಲಾ" ಎಂದು ನಾವು ಕರೆದಿದ್ದೇವೆ.

ಸಾಲಗಳ ವಿಷಯಕವಾದ "ಜಮೀನಾಬಾದಿನ ಸಾಲಗಳ (ಲ್ಯಾಂಡ್ ಇಂಪ್ರೂವ್‌ಮೆಂಟ್ಸ್) ಆಕ್ಟು" "ಬೇಸಾಯಗಾರರ ಸಾಲಗಳ (ಅಗ್ರಿಕಲ್ಚರಿಸ್ಟ್ಸ್ ಲೋನ್ಸ್) ಆಕ್ಟು" ಇವುಗಳ ಜತೆಗೆ, ಮದ್ರಾಸ್, ಬೊಂಬಾಯಿ, ಮೈಸೂರು ಈ ಆಧಿಪತ್ಯಗಳಲ್ಲಿ ಪ್ರವರ್ತನೆಯಲ್ಲಿರುವ ಖಾನೂನುಗಳೊಳಗೆ ಯಾವುಗಳ ಪ್ರವೃತ್ತಿಯು ಸಸ್ಯಾಭಿವೃದ್ಧಿಕಡೆಗಿದೆಯೋ ಅವುಗಳೆಲ್ಲವನ್ನೂ ಪ್ರಸ್ತಾಪಿಸಿದ್ದೇವೆ. ಸಸ್ಯೋತ್ಪತ್ತಿಗೆ ಮೂಲಕಾರಣಗಳಾದ ಭೂಮಿ ನೀರು ಇತ್ಯಾದಿ ಸಹಜಕಾರಕಗಳ ಮತ್ತು ಮನುಷ್ಯನಕರ್ಮ, ಬಂಡವಾಳ ಇವುಗಳ ವಿಚಾರವು ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟಿರುತ್ತದೆಯಾಗಿ ಈ ಶಾಸ್ತ್ರದ ಕೃಷಿಸಂಬಂಧವಾದ ಭಾಗವು ಸಹ ಇಲ್ಲಿ ದರ್ಶಿಸಲ್ಪಟ್ಟಿದೆ. ಅಲ್ಲದೆ, ಪೂರ್ವದ ಹಿಂದೂರಾಜ್ಯಗಳ ಕೃಷ್ಯಭಿವೃದ್ಧ್ಯರ್ಥವಾದ ಪ್ರವರ್ತನೆಗಳು ಶಾಸ್ತ್ರಪಂಜ್ತಾಗಳಿಂದ ಉದಹರಿಸಲ್ಪಟ್ಟಿವೆ. ಮತ್ತೂ ರಷ್ಯ ಪ್ರಷ್ಯದೇಶಗಳಲ್ಲಿ ಕೃಷಿ–ಕೃಷಿಕಾರರಭ್ಯುದಯಕ್ಕಾಗಿ ನಡೆದಿರುವ ಮಾರ್ಪಾಟಾಗಳು ಸಹ ವಿವರಿಸ್ಪಡುತ್ತವೆ. ಇಲ್ಲಿ ಉಚ್ಚರಿಸಲ್ಪಟ್ಟಿರುವ ನಮ್ಮ ಸ್ವಾಭಿಪ್ರಾಯಗಳಿಗೆ ಏಕದೇಶದ ಶಬ್ದಾರ್ಥವನ್ನು ಕಲ್ಪಿಸದೆ ಪೂರ್ವಾಪರ ಸಂಬಂಧದಲ್ಲಿ ಅವುಗಳಿಗೆ ಯಾವ ಅರ್ಥವಾಗುವುದೋ ಅದನ್ನು ಮಾತ್ರ ಕಲ್ಪಿಸತಕ್ಕುದು. ಈ ತಖಾವಿಲಾವು ನಮ್ಮ ಕನ್ನಡಲಾರಿಪೋರ್ಟಿನ 1909 ನೆಯ ಜುನ್ನಿನಿಂದ ಡಿಶಂಬರವರೆಗಿನ ಸಂಚಿಕೆಗಳಲ್ಲಿ ಪ್ರಕಟಿತವಾಗಿದೆ.

ಭೂಮಿಯಾಬಾದಿನ ಸಾಲಗಳ ಮತ್ತು ಬೇಸಾಯಗಾರರ ಸಾಲಗಳ ಆಕ್ಟುಗಳ ಕೆಳಗೆ ಮೈಸೂರು ಮತ್ತು ಮದ್ರಾಸ್ ಗೌರ್ವನ್‌ಮೆಂಟಿನವರು ಅನುಶಾಸಿಸಿರು

ವ ಉಪವಿಧಿಗಳು (ರೂಲುಗಳು) ಪರಿಶಿಷ್ಟರೂಪವಾಗಿ ಪುಸ್ತಕದ ಉತ್ತರಭಾಗದಲ್ಲಿ ಪ್ರಕಟಿಸಲ್ಪಟ್ಟಿವೆ. ಮೇಲೆಕಂಡ ಆಕ್ಟುಗಳು ವಿಶಿಷ್ಟಸ್ಥಳೀಯ ಗೌವರ್ನಮೆಂಟು ಗಳಿಗೆ ಸಾಮಾನ್ಯವಾಗಿದ್ದರೂ, ಅವುಗಳಿಗನುಸಾರವಾಗಿ ಅನುಶಾಸಿಸಲ್ಪಡಬೇಕಾದ ಉಪವಿಧಿಗಳನ್ನು ಆ ಆ ಸ್ಥಳೀಯ ಗೌವರ್ನಮೆಂಟಿನವರು ಬೇರೆ ಬೇರೆ ಅನುಶಾಸಿಸಿ ಕೊಳ್ಳುತ್ತಾರೆ. ಆದರೂ ಅವುಗಳಲ್ಲಿರುವ ಭಿನ್ನರೂಪತೆಗಳು ಬಹುಸ್ವಲ್ಪ. ಏಕ ರೂಪತೆಯೇ ಹೆಚ್ಚಾಗಿದೆ. ಅದುಕಾರಣ ಬೊಂಬಾಯಿ ಮತ್ತು ಕೊಡಗು ಈ ಪ್ರಾ ವಿನ್ಸುಗಳ ರೂಲುಗಳು ಸಹ ಅತ್ಯಂತ ವಿವರಗಳಲ್ಲಿವಿನಾ ಮೂಲಸ್ವಭಾವಗಳಲ್ಲಿ ಮದ್ರಾಸುಮೈಸೂರಿನ ರೂಲುಗಳಂತೆಯೇ ಇರುತ್ತವೆ.

ಪುಸ್ತಕವನ್ನಪೇಕ್ಷಿಸುವವರು ಈ ವಿಳಾಸಕ್ಕೆ ಬರೆದುಕೊಳ್ಳಬಹುದು.

ಬೆಂಗಳೂರು.
1910 ನೆಯ ಇಸವಿ ಮೆ.

* ಎಂ. ಮಲ್ಲಾರಾಧ್ಯರು,
ಫಸ್ಟ್ ಗ್ರೇಡ್ ಪ್ಲೀಡರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ವಿಷಯವಿಭಜನೆ ಮತ್ತು ಅನುಕ್ರಮಣಿಕೆ.

ಪೂರ್ವಭಾಗ (ತಖಾವಿಲಾ).

ಉತ್ತರಭಾಗ (ತಖಾವಿ ರೂಲ್ಸು).

ಶುದ್ಧಾಶುದ್ಧ ಪತ್ರಿಕೆ.

81 ನೆಯದರಿಂದ 105ನೆಯದರ ವರೆಗಿನ ಪುಟಗಳಲ್ಲಿ ಬಲಗಡೆ ಪುಟ
ಶಿರೋಪಙ್ಕ್ತಿಯಲ್ಲಿ “ ತಖಾವಿಲಾ ” ಎಂಬುವ ಮಾತುಗಳ ಸ್ಥಾನದಲ್ಲಿ “ ಕೃಷ
ಭಿವೃದ್ಧ್ಯರ್ಥವಾದ ಶಾಸನಗಳು ” ಎಂಬುವ ಮಾತುಗಳನ್ನು ಇಟ್ಟುಕೊಳ್ಳ
ದು, ಮತ್ತು ಬರೆದುಕೊಳ್ಳುವುದು. ಈ ಪ್ರಬಂಧದಲ್ಲಿರಬಹುದಾದ ಇತರ ಲೇಖ
ಮುದ್ರಣಗಳ ಸ್ಖಾಲಿತ್ಯಗಳನ್ನು ವಾಚಕರು ದಯಮಾಡಿ ಲೇಖಕರ ದೃಷ್ಟಿ
ತರಲು ಪ್ರಾರ್ಥಿಸಲ್ಪಡುತ್ತಾರೆ.

ತಖಾವಿ ಲಾ

I ರಾಜ್ಯನೀತಿ.

ಭೂಮಿಯ ಮೇಲೆ ಬೆಳೆಯುವ ಆಹಾರವನ್ನೇ ಅದನ್ನು ಬೆಳೆಯುವವರೂ ಬೆಳೆಯದವರೂ ವಿಶಿಷ್ಟರೂ ತಿಂದು ಜೀವಿಸಬೇಕಾಗುತ್ತದೆ. ರಾಜಕಟ್ಟು ಇಲ್ಲದಿದ್ದರೆ, ಮನುಷ್ಯರು ತಂತಮ್ಮ ಆಹಾರವನ್ನು ದೊರೆಕಿಸಿಕೊಳ್ಳುವುದರಲ್ಲಿ ಕಾಡು ಮೃಗಗಳಂತೆ ಪ್ರವರ್ತಿಸುತ್ತಿದ್ದರು. ಈ ಸ್ವೇಚ್ಛಾಚಾರವು ಹೇಗೆ ಪರಿಣಮಿಸುತ್ತಿದ್ದಿತೆಂದರೆ: —

ಯದಿನಪ್ರಣಯೇದ್ರಾಜಾ ದಂಡಂ ದಂಡ್ಯೇಷ್ವತಂದ್ರಿತಃ।
ಜಲೇಮತ್ಸ್ಯಾನಿವ ಹಿಂಸ್ಯುರ್ದುರ್ಬಲಾನ್ಬಲವತ್ತರಾಃ ॥

*　　*　　*

ಸ್ವಾಮ್ಯಂಚನಸ್ಯಾತ್ ಕಸ್ಮಿಂಶ್ಚಿತ್ಪ್ರವರ್ತೇತಾಧರೋತ್ತರಂ । ॥ಮನು॥

ದೊಡ್ಡ ಮೀನು ಸಣ್ಣ ಮೀನನ್ನು ತಿನ್ನುವಂತೆ ಬಲಿಷ್ಠರು ದುರ್ಬಲರನ್ನು ಹಿಂಸಿಸುವುದು, ಯಾವನಿಗೂ ಯಾವ ಸೊತ್ತಿನಲ್ಲೂ ಸ್ವಾಮ್ಯವಿಲ್ಲದಿರುವುದು, ಲೋಕವೇ ತಳಮೇಲಾಗುವುದು, ಈ ದುರವಸ್ಥೆಗಳಲ್ಲಿ ಪರಿಣಮಿಸುತ್ತಿತ್ತು. ಇಂತಹ ದುರವಸ್ಥೆಯ ಪರಿಹಾರಾರ್ಥವಾಗಿ ರಾಜಾಧಿಕಾರವು ಪ್ರವರ್ತನೆಗೆ ಬಂದು,

ಬಲಾದ್ದತ್ತಂ ಬಲಾದ್ಭುಕ್ತಂ ಬಲಾದ್ಯಚ್ಚಾಪಿಲೇಖಿತಂ।
ಸರ್ವಾನ್ಬಲ ಕೃತಾನರ್ಥಾನ್ ನಕೃತಾನ್ಮನುರಬ್ರವೀತ್ ॥
ಆಗಮೋಽಭ್ಯಧಿಕೋಽಭೋಗಾ ದ್ವಿನಾಪೂರ್ವಕ್ರಮಾಗತಾತ್ ।
ಆಗಮೋಽಪಿಬಲಂನೈವ ಭುಕ್ತಿಸ್ಸ್ತೋಕಾಪಿಯತ್ರನೋ ॥

ಬಲಾತ್ಕಾರದಿಂದ ಸ್ವತ್ವಾಪಹಾರಮಾಡಿದರೆ ಅದು ದಕ್ಕುವುದಿಲ್ಲವೆಂಬ, ಮತ್ತು ಕ್ರಯ ದಾನ ಮೊದಲಾದ ವ್ಯವಹಾರಗಳಿಂದಲೂ, ಬಹುಕಾಲದ (ಈಗಣ ಲಾದ ಪ್ರಕಾರ ೧೨ ವರ್ಷ) ಅನುಭವದಿಂದಲೂ ಸಂಪಾದಿಸುವ ಸ್ವತ್ವಾಧಿಕಾರವು ಸಿದ್ಧಿಸುವುದೆಂಬ ವಿಧಿಗಳುಂಟಾದುವು.

ಆದರೆ, ಭೂಮಿಯು, ನೀರು, ಗಾಳಿ ಇವು ದೇವನಿರ್ಮಿತವಾದುವುಗಳು ; ದೇವರಿಂದ ಸಮಸ್ತ ಪ್ರಾಣಿಗಳಿಗೂ ಅನುಗೃಹೀತವಾದ ಪ್ರಾಣಾಧಾರಪದಾರ್ಥಗಳು ;

ಇವುಗಳಿಲ್ಲದೆ ಯಾವ ಪ್ರಾಣಿಯೂ ಜೀವಿಸಲಾಗುವುದಿಲ್ಲ ; ಇವುಗಳಿಂದ ಉಪಯೋಗವನ್ನು ಹೊಂದಲು ಮನುಷ್ಯರೆಲ್ಲರಿಗೂ ಸಮನಾದ ಅಧಿಕಾರವಿದೆ ಈ ಅಧಿಕಾರವು ಲೋಕನ್ಯಾಯ ಸಮ್ಮತವಾದುದು ; ಈಗಲಾದರೋ, ಉತ್ಕೃಷ್ಟ ಭೂಮಿ (ವಿಶೇಷ ಫಲವತ್ತಾದ ಭೂಮಿ) ಯು ಕೆಲ ಜನರಿಗೆ ಮಾತ್ರ ಸೇರಿಹೋಗಿದೆ; ಮಿಕ್ಕವರೂ, ಮುಂದಕ್ಕೆ ಹುಟ್ಟುವವರೂ ಕಾಡುಮೇಡಿನ ಮರುಭೂಮಿಯನ್ನು ವ್ಯವಸಾಯಮಾಡಬೇಕಾಗುತ್ತದೆ ; ಈ ವ್ಯವಸಾಯವು ಫಲಕಾರಿಯಲ್ಲ ; ಒಂದು ವೇಳೆ ಅಷ್ಟಿಷ್ಟು ಫಲವುಂಟಾದರೂ, ಅದು ಅದಕ್ಕಾಗಿ ಪಡತಕ್ಕ ಶ್ರಮಕ್ಕಿಂತಲೂ, ಮುಟ್ಟಿಸುವ ದ್ರವ್ಯಕ್ಕಿಂತಲೂ ಬಹು ಕಡಮೆ ; ಉತ್ಕೃಷ್ಟ ಭೂಮಿಯನ್ನನುಭವಿಸಲೂ ಜನಸಾಮಾನ್ಯಕ್ಕೆ ಅಧಿಕಾರವಿದೆ. ಅದನ್ನು ಕೆಲವರು ಮಾತ್ರ ಪುತ್ರಪರಂಪರೆ ಅಧಿಕಾರಿಪರಂಪರೆಯಲ್ಲಿ ಶಾಶ್ವತವಾಗಿ ಅನುಭೋಗಿಸಲು ಹಕ್ಕಿಲ್ಲ ; ಮಿಕ್ಕವರೂ ಮುಂದಕ್ಕೆ ಹುಟ್ಟುವವರೂ ಅದರಲ್ಲಿ ಸಮನಾದ ಭೋಗವನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ.'' ಈ ವಿಧದ ತರ್ಕಗಳನ್ನು ಕೆಲ ಲೋಕಹಿತೈಷಿಗಳು ಮಾಡುತ್ತಾರೆ. ಮತ್ತೂ, ಭೂಮಿಯ ಸುವ್ಯವಸ್ಥಾವಿಷಯದಲ್ಲಿ —‹‹ ಸರ್ಕಾರದವರು ಭೂಮಾಲೀಕರಿಗೆ ಪರಿಹಾರವನ್ನು ಕೊಟ್ಟು ಅಥವಾ ಕೊಡದೆ, ಭೂಮಿಗಳನ್ನು ಅವರಿಂದ ವಾಪಸು ತೆಗೆದುಕೊಂಡು ಎಲ್ಲ ಸಂಸಾರಿಗಳಲ್ಲೂ ಆ ಆ ಸಂಸಾರಕ್ಕೆ ತಕ್ಕಂತೆ ಅವನ್ನು ಪ್ರತಿ ವರ್ಷವು ಹಂಚುತ್ತಿರಬೇಕೆಂಬುವ, ಅಥವಾ, ಭೂಮಾಲೀಕರು ತಂತಮ್ಮ ಭೂಮಿಗಳನ್ನು ತಂತಮ್ಮ ಜೀವಿತಾವಧಿಮಾತ್ರ ಅನುಭವಿಸಿದ ಬಳಿಕ ಅವು ಸರ್ಕಾರಕ್ಕೆ ಸೇರಿಹೋಗಿ ಸಮಾನಾನುಭೋಗಕ್ಕಾಗಿ ವಿನಿಯೋಗಿಸಲ್ಪಡಬೇಕೆಂಬುವ, ಅಥವಾ, ಅವು ಮಾಲೀಕರಿಂದ ಇತರರ ಹಸ್ತಗತವಾಗುವುದಾದರೆ, ಆ ಪರಾಧೀನಗಳಿಗೆ ವಿಶೇಷ ತೆರಿಗೆಯನ್ನು ಹಾಕಬೇಕೆಂಬುವ,'' ಉತ್ತಮ-ಮಧ್ಯಮ-ಅಧಮ ಭೂಮಿಗಳಲ್ಲಿ ಸರ್ವರೂ ಸಮಾನವಾದ ಪ್ರಯೋಜನವನ್ನು ಪಡೆಯಬಹುದಾದ ಈ ತರದ ಸೂಚನೆಗಳನ್ನು ಆ ಹಿತೈಷಿಗಳು ಮಾಡುತ್ತಾರೆ. ಆ ಸೂಚನೆಗಳನ್ನು ಪ್ರವರ್ತನೆಗೆ ತರುವುದು ಯುಕ್ತಿಯುಕ್ತವಲ್ಲವೆಂದು ಇದಿರುಪಕ್ಷದವರು ಹೇಳುತ್ತಾರೆ; ಏಕೆಂದರೆ, ‹‹ ಈ ಸೂಚನೆಗಳನ್ನು ಪ್ರವರ್ತನೆಗೆ ತರಬೇಕಾದರೆ ಅತಿಯಾಗಿ ದ್ರವ್ಯ ವ್ಯಯವನ್ನು ಮಾಡಬೇಕಾಗುತ್ತದೆ ; ಅಧಿಕಾರಿಗಳ ಸಂಖ್ಯೆಯನ್ನು ಅತಿಹೆಚ್ಚಿಸಬೇಕಾಗುತ್ತದೆ. ಜನರ ಮೇಲೆ ಅಧಿಕಾರಿಗಳ ಅಧಿಕಾರವು ಅತಿಯಾಗಿ ಹೆಚ್ಚುತ್ತದೆ. ಮತ್ತೂ (ಈ ಕಾರಣವು ಇಲ್ಲಿ ಬಹಳ ಮುಖ್ಯವಾದುದು) ‹‹ ಭೂಮಿಯು ತನ್ನಲ್ಲಿಯೇ ಬಹಳ ದಿವಸ ಇರುತ್ತದೆ; ತಾನೇ ಅದನ್ನು ಬಹುಕಾಲ ಅನುಭವಿಸಬಹುದು'' ಎಂಬ ದಾರ್ಢ್ಯವೂ ನಂಬಿಕೆಯೂ ಯಾವನಿಗಿಲ್ಲವೋ ಅವನು ಆ ಭೂಮಿಯನ್ನು ಫಲವತ್ತಾಗಿ ಮಾಡುವುದಿಲ್ಲ. ಅದುಕಾರಣ ಭೂಮಿಯಲ್ಲಿ ಬೆಳೆಯುವ ಬೆಳೆಯು ಬಹಳ ಕಡಮೆಯಾಗುತ್ತದೆ. ಭೂಮಿಯ ಬೆಳೆಯು ಕಡಮೆಯಾಗುವುದು ದೇಶಕ್ಕೆ ಬಹು ಅಹಿತ.'' ಈ ಕಾರಣಗಳೊಳಗೆ ಎರಡನೆಯದನ್ನು ನಾವು ಮುಂದಕ್ಕೆ ವಿಚಾರಮಾಡುವೆವು. ಭೂಮಿಯ ಸರ್ವಸ್ವತ್ವವನ್ನು ಹೊಂದಿರುವ ಜಮೀನ್ದಾರರು, ಜಹಗೀರ್‌ದಾರರು, ಇನಾಮುದಾರರು ಭೂಮಿಗೆ ಎಷ್ಟು ಫಲವತ್ತತೆಯನ್ನು ಕೊಟ್ಟಿದ್ದಾರೆ? ಭೂಮಿ

ಯಲ್ಲಿ ಇತರರಿಗಿಂತ ಹೆಚ್ಚಾಗಿ ಬೆಳೆಯುತ್ತಾರೆಯೇ? ಎಂಬುವುದನ್ನು ಮುಂದೆಮುಂದೆ ವಿಚಾರಮಾಡುವೆವು.

ಈ ಸೂಚನೆಗಳ ಯುಕ್ತಿಯುಕ್ತತ್ವವು, ಇವುಗಳನ್ನು ಖಂಡಿಸುವವರು ಹೇಳುವ ಕಾರಣಗಳ ಔಚಿತ್ಯವು ಹೇಗಾದರೂ ಇರಲಿ; ಈ ವಿವಾದದಿಂದ ಈ ಎರಡು ನಿಶ್ಚಯಗಳು ಹೊರಬೀಳುತ್ತವೆ:—(1) ಸ್ಥಿರಸೊತ್ತುಗಳ ಮೇಲೆ ವಿಶೇಷತಃ ಭೂಮಿಯ ಮೇಲೆ ಪೂರ್ಣವಾದ ಅಧಿಕಾರವು ಪ್ರಜೆಗಳೊಳಗೆ ಖಾಸ್ಗಿ ಯಾವನೊಬ್ಬ ಮನುಷ್ಯನಿಗೂ ಇರುವುದಿಲ್ಲ. ಇವುಗಳ ವರಿಷ್ಠಸ್ವಾಮ್ಯವು ರಾಜನಿಗೆ (ಪ್ರಜಾ ಸಮೂಹದ ಹಿತವೇ ಸ್ವಹಿತವೆಂದು ತಿಳಿದು ಅದರಂತೆ ಆಚರಿಸುವ ವರಿಷ್ಠಾಧಿಕಾರಿಗೆ) ಸೇರಿದುದು. (2) ಭೂಮಿಗಳ ಮೇಲಿನ ಪೂರ್ಣಸ್ವತ್ವಾಧಿಕಾರವನ್ನು ಖಾಸ್ಗಿ ಜನರಿಗೆ ಕೊಟ್ಟುಬಿಡುವುದು ನ್ಯಾಯವಲ್ಲ. ಮತ್ತೂ ಹೀಗೆ ಮಾಡುವುದು ಬಹು ಭಾಗದ ಪ್ರಜೆಗಳಿಗೂ, ಮುಂದಕ್ಕೆ ಹುಟ್ಟುವವರಿಗೂ, ಅದುಕಾರಣ ದೇಶಕ್ಕೂ ಹಿತಕರವಲ್ಲ. ಮಾಲೀಕರಿಗೆ ಚರಸೊತ್ತಿನ ಮೇಲಿರುವ ಸ್ವತ್ವಾಧಿಕಾರಕ್ಕೂ, ಭೂಮಿಯ ಮೇಲಿರುವ ಸ್ವತ್ವಾಧಿಕಾರಕ್ಕೂ ಇರುವ ತಾರತಮ್ಯವನ್ನು ಉದಾಹರಣೆಯಿಂದ ವ್ಯಕ್ತಪಡಿಸುವ—ರಾಮನೆಂಬೊಬ್ಬನಿಗೆ 1,00,000 ರೂಪಾಯಿ ಇದೆ. 50 ಎಕರೆ ಜಮೀನಿನ ಉತ್ಪತ್ತಿಯಿಂದ ದೇಶಕ್ಕೆ ಎಷ್ಟು ಹಿತವಾಗುತ್ತದೋ ಅದಕ್ಕಿಂತ ನೂರು ಪಾಲಿನಷ್ಟು ಹಿತವು ಆ ಲಕ್ಷ ರೂಪಾಯಿನ ಸದ್ವಿನಿಯೋಗದಿಂದ ಉಂಟಾಗಬಹುದು. ಈ ಧನಿಯು ಈ ಹಣವನ್ನು ಆ ಪ್ರಕಾರ ಸದ್ವಿನಿಯೋಗಮಾಡದೆ, ಆ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಚೆಲ್ಲಿಬಿಟ್ಟರೂ, ಬೆಂಕಿಯಲ್ಲಿ ಸುಟ್ಟುಬಿಟ್ಟರೂ, ಅವನ ಕೈಹಿಡಿಯಲು ಯಾರಿಗೂ ಅಧಿಕಾರವಿಲ್ಲ; ಸರ್ಕಾರಕ್ಕೂ ಅಧಿಕಾರವಿಲ್ಲ. ಹಾಗೆ ದುರ್ವಿನಿಯೋಗಮಾಡಬಾರದೆಂದು ಯಾರಾದರು ಬುದ್ಧಿವಾದ ಮಾತ್ರ ಹೇಳಬಹುದೇ ಹೊರತು ದುರ್ವಿನಿಯೋಗಮಾಡದಂತೆ ನಿರ್ಬಂಧಿಸಲಾಗುವುದಿಲ್ಲ. ಈ ಹಣಕ್ಕೆ ಬದಲಾಗಿ ಒಂದು ಅಮೌಲ್ಯವಾದ ರತ್ನವಿದ್ದರೂ ಸ್ವತ್ವಾಧಿಕಾರವು ಹಣದ ಮೇಲೆ ಇದ್ದಂತೆಯೇ ರತ್ನದ ಮೇಲೂ ಇರುವುದು. ಇದನ್ನು ನಿರ್ಬಂಧದಿಂದ ಕೊಂಡುಕೊಳ್ಳಲು ಸರ್ಕಾರಕ್ಕೂ ಹಕ್ಕಿಲ್ಲ. ಮತ್ತೂ ಅವನು ಈ ಹಣದಿಂದ ಸಂಪಾದನೆಮಾಡಿದರೆ ಬ್ರಿಟಿಷ್ ಇಂಡಿಯದಲ್ಲಿ ಆದಾಯದ ತೆರಿಗೆಯ ಆಕ್ಟಿನ ಮೇರೆ ಆ ಸಂಪಾದನೆಯ ಮೇಲೆ ತೆರಿಗೆ ಬೀಳುತ್ತದೆಯೇ ಹೊರತು, ಅವನು ಅದನ್ನು ಸ್ವಸ್ಥವಾಗಿ ಪೆಟ್ಟಿಗೆಯಲ್ಲಿಟ್ಟುಕೊಂಡರೆ ಅದಕ್ಕಾಗಿ ಯಾವ ತೆರಿಗೆಯನ್ನೂ ಕೊಡಬೇಕಾದುದಿಲ್ಲ. ಈಗ ಇವನು ಆ ಹಣದಿಂದ ಒಂದು ಭೂಮಿಯನ್ನು ಕೊಂಡುಕೊಳ್ಳಲಿ. ಕೊಂಡುಕೊಂಡ ಗಳಿಗೆಯಲ್ಲೇ ಅವನ ಸ್ವತ್ವಾಧಿಕಾರಕ್ಕೆ ಎಷ್ಟೋ ನಿರ್ಬಂಧಗಳು ಬಂದು ಅಂಟಿಕೊಳ್ಳುವವು. ಆ ಭೂಮಿಯನ್ನು ಅವನು ವ್ಯವಸಾಯಮಾಡಲಿ, ಹಾಳುಗೆಡವಿರಲಿ, ಭೂಕಂದಾಯವನ್ನು ಕೊಟ್ಟೇ ಕೊಡಬೇಕು. ಕೃಷಿಗುಪಯೋಗವಾಗದಂತೆ ಅದರಲ್ಲಿ ಇಟ್ಟಿಗೆ ಸುಡುವುದು, ಸಾಧಾರಣವಾಸಕ್ಕೆ ಮನೆಯನ್ನು ಕಟ್ಟಿಸುವುದು, ಈ ಕಾರ್ಯಗಳಿಂದ ಅದನ್ನು ವಿರೂಪಮಾಡಲಿಕ್ಕೆ ಅವನಿಗೆ ಸ್ವಲ್ಪವೂ ಹಕ್ಕಿರುವುದಿಲ್ಲ. ಮತ್ತೂ ಅದನ್ನು ಸರ್ಕಾರ

ದವರು ನಿರ್ಬಂಧದಿಂದ ಭೂಮ್ಯಧಿಗಮನದ (ಲ್ಯಾಂಡ್ ಅಕ್ವಿಸಿಷನ್) ಆಕ್ಟಿನ ಮೇರೆ ಕೊಂಡುಕೊಳ್ಳಬಹುದು.

ಹೀಗೆ ಜಮೀನಿನ ಮೇಲೆ ವರಿಷ್ಠಸ್ವತ್ವಾಧಿಕಾರವನ್ನು ಸರ್ಕಾರದವರೇ ಇಟ್ಟುಕೊಂಡಿರುವುದು, ಮತ್ತು ಜನಸಾಮಾನ್ಯದ ಉಪಯೋಗಾರ್ಥವಾಗಿ ಸ್ಥಿರಸ್ವತ್ತನ್ನು ನಿರ್ಬಂಧದಿಂದ ಕೊಳ್ಳುವ ಅಧಿಕಾರವು ಸರ್ಕಾರಕ್ಕಿರುವುದು ಸಹ ದೇಶಕ್ಕೆ ಹಿತಕರವು; ಮತ್ತು ದೇಶದ ಹಿತಕ್ಕೆ ಅವಶ್ಯಕವಾದುದು. ಈ ಅಧಿಕಾರವನ್ನು ಇಟ್ಟುಕೊಳ್ಳದಿದ್ದಲ್ಲಿ ಸಂಭವಿಸಬಹುದಾದ ಅನಾಹುತವನ್ನು ಊಹಿಸುವ. ಈ ಕಾಲದಲ್ಲಿ ಒಂದೊಂದು ಗ್ರಾಮದ ಮುಕ್ಕಾಲು ಮೂರುವೀಸ ಪಾಲಿನ ಭೂಮಿಗಳೆಲ್ಲವೂ ಒಬ್ಬೊಬ್ಬ ಧನಿಕನಿಗೆ ಸೇರಿಹೋಗಿರುತ್ತವೆ. ಅನೇಕ ಜಹಗೀರು ಗ್ರಾಮಗಳಲ್ಲಿ ಮುಕ್ಕಾಲುಮೂರುವೀಸ ಪಾಲಿನ ರೈತರಿಗೆ ಹಿಡುವಳಿಯ ಹಕ್ಕೇ ಇರುವುದಿಲ್ಲ. ಈ ಧನಿಕನಾಗಲಿ, ಜಹಗೀರುದಾರನಾಗಲಿ ಆ ಗ್ರಾಮಗಳ ಅಂತಹ ಜಮೀನುಗಳನ್ನೆಲ್ಲ ವ್ಯವಸಾಯಕ್ಕೆ ಕೊಡದೆ ವಿನೋದಾರ್ಥವಾಗಿ ಬೇಟೆಯಾಡಲು ಆ ಜಮೀನುಗಳ ಮೇಲೆ ಜಂಗ್ಲಿ ಬೆಳೆಯಿಸಿ ಅಲ್ಲಿಗೆ ಕಾಡು ಮೃಗಗಳನ್ನು ತಂದು ಕೂಡಿದರೂ, ಅಥವಾ ಆ ರೈತರಮೇಲಿನ ಮನಸ್ತಾಪದಿಂದ ಆ ಜಮೀನುಗಳನ್ನು ಯಾರಿಗೂ ಸಾಗುವಳಿಗೆ ಕೊಡದೆ ಅವನ್ನು ಹಾಳುಗೆಡವಿಟ್ಟುಕೊಂಡಿದ್ದರೂ, ಅಥವಾ ವಿಶೇಷ ಲಾಭಕ್ಕಾಗಿ ಆ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ (ಮಸಲ—ಇಟ್ಟಿಗೆ ಸುಡಿಸುವುದು, ಈಚಲಗಿಡಗಳನ್ನು ಬೆಳೆಯಿಸುವುದು) ಉಪಯೋಗಿಸಿದರೂ, ಆ ನೂರಾರು ಗೃಹಸ್ಥರಾದ ಬಡ ರೈತರಿಗೆ ಗತಿ ಏನಾಗಬಹುದು? ಈಗಲಾದರೋ ಅವರೆಲ್ಲರೂ ಸರ್ಕಾರವನ್ನು ಪ್ರಾರ್ಥಿಸಿಕೊಂಡರೆಂದರೆ ರೆವಿನ್ಯೂ ಲಾ ಪ್ರಕಾರವಾಗಲಿ, ಸನ್ನದಿನ ಪ್ರಕಾರವಾಗಲಿ ಉಳಿಸಿಕೊಂಡಿರುವ ಅಧಿಕಾರಬಲದಿಂದ ಆ ದುರ್ವಿನಿಯೋಗವನ್ನು ತಪ್ಪಿಸುತ್ತಾರೆ. ಅಂತಹ ಅಧಿಕಾರವನ್ನು ಉಳಿಸಿಟ್ಟುಕೊಳ್ಳದಿದ್ದಲ್ಲಿ ಲ್ಯಾಂಡ್ ಅಕ್ವಿಸಿಷನ್ ಆಕ್ಟಿನ ಮೇರೆ ಆ ಭೂಮಿಗಳನ್ನು ಹಿಂದಕ್ಕೆ ಕೊಂಡುಕೊಂಡು ರೈತರಿಗೆ ಹಂಚಿಕೊಡುತ್ತಾರೆ. ಭೂಮಿಯ ಮೇಲಿನ ಸ್ವತ್ವಾಧಿಕಾರವನ್ನು ಸರ್ಕಾರದವರು ಸ್ವಲ್ಪವೂ ಇಟ್ಟುಕೊಳ್ಳದೆ ಎಲ್ಲವನ್ನೂ ಖಾಸ್ಗಿ ಪ್ರಜೆಗಳಿಗೆ ವಹಿಸಿಬಿಡಬೇಕೆಂದು ಕೆಲ ಸ್ವಪ್ರಯೋಜಕರಾದ ಶ್ರೀಮಂತರು ಹೇಳುತ್ತಾರೆ. ಇದು ಶ್ರೀಮಂತರಿಗೆ ಅನುಕೂಲವೇ ಸರಿ. ಪ್ರಜೆಗಳಲ್ಲಿ ನೂರರೊಳಗೆ ತೊಂಬತ್ತು ಒಂಬತ್ತು ಜನರಾದ ಅನುಪಪನ್ನರಿಗೆ ಬಹು ಹಾನಿಕರವಾಗಿರುತ್ತದೆ. ಸರ್ಕಾರದ ಸೊತ್ತಿನಮೇಲೆ ಪ್ರತಿಯೊಬ್ಬನಿಗೂ ತಾಯ್ತಂದೆಗಳ ಸೊತ್ತಿನ ಮೇಲಿರುವಂತಹ ಸಲಿಗೆ ಸಂಬಂಧಗಳಿರುತ್ತವೆ. ಆ ಸೊತ್ತು ಪ್ರಜೆಗಳಲ್ಲೊಬ್ಬನಿಗೆ ಸೇರಿರಲಿ, (ಅವನ ಅಣ್ಣತಮ್ಮನಿಗೆ ಏಕೆ ಸೇರಿರಬೊಲ್ಲದು?) ಅವನಿಗೆ ಅದರ ಮೇಲೆ ಯಾವ ಸಲಿಗೆಯೂ ಹಕ್ಕೂ ಇರುವುದಿಲ್ಲ.

ಒಬ್ಬರನುಭವಿಸುತ್ತಿರುವ ಭೂಮಿಯ ಹಕ್ಕನ್ನು ಇತರರು ಕ್ರಯ ದಾನ ಮೊದಲಾದ ವ್ಯವಹಾರಗಳ ಮೂಲಕವಾದರೂ ದಾಯಭಾಗದ ಮೂಲಕವಾದರೂ ಪಡೆಯಬಹುದೇ ಹೊರತು ಬಲಾತ್ಕಾರವಾಗಿ ಪಡೆಯಕೂಡದು ಎಂಬ ಧರ್ಮವು ವಿಧಿತವಾ

ಗಿದೆ ಎಂಬುದನ್ನು ಮೊದಲು ಹೇಳಿದ್ದೇವಷ್ಟೆ. ಭೂಮಿ, ನೀರು, ಗಾಳಿ ಈ ಸ್ವಭಾವಿಕ ವಾದ ಪದಾರ್ಥಗಳು ಪ್ರಾಣಿಗಳೆಲ್ಲರಿಗೂ ದೇವರಿಂದ ಅನುಗೃಹೀತವಾದುವುಗಳು ಎಂಬುದೂ, ಇವುಗಳನ್ನು ಪ್ರಾಣಿಗಳೆಲ್ಲರೂ ಸಮನಾಗಿ ಅನುಭವಿಸಲು ಅಧಿಕಾರವಿದೆ ಎಂಬುದೂ, ಇದು ಲೋಕಸಮ್ಮತವಾದ ಧರ್ಮವೆಂಬುದೂ ಸಹ ಇಳಿಕ ಸೂಚಿಸಲ್ಪಟ್ಟವಷ್ಟೆ. ಈ ಲೋಕಸಮ್ಮತವಾದ ನ್ಯಾಯಕ್ಕೂ ರಾಜ್ಯಸಮ್ಮತವಾದ ಮೇಲಿನ ನ್ಯಾಯಕ್ಕೂ ಸಮಂಜಸವಿದೆಯೇ ? ಅತ್ಯುಕೃಷ್ಟವಾದ ಭೂಮಿಗಳು ಕೆಲರಲ್ಲಿಯೇ ಶಾಶ್ವತವಾಗಿ ಉಳಿದುಬಿಟ್ಟರೆ, ಅವುಗಳ ಉಪಯೋಗವನ್ನು ಇತರರಿಗೆ ತಪ್ಪಿಸಿದಂತೆ ಆಗಲಿಲ್ಲವೇ ? ಎಂದರೆ ಅಂತಹ ಅಸಮಂಜಸ ಯಾವುದೂ ಇಲ್ಲ. ಭೂಮಾಲೀಕರು ಭೂಮಿಗಳಿಗೆ ಸ್ವಾಮಿಗಳಾಗಿರುವುದು, ಮೇಲೆ ಉದಾಹರಿಸಿರುವ ಹಣಕ್ಕೆ ಅಥವಾ ರತ್ನಕ್ಕೆ ಸ್ವಾಮಿಯಾಗಿರುವಂತೆ ಆ ಭೂಮಿಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಉಪಯೋಗಿಸುವುದಕ್ಕಲ್ಲ. ಭೂಮಿಯೆಂಬುದು ರಾಜಧನ ಎಂದರೆ ಪ್ರಜಾಸಮೂಹದ ಧನ. ಇದಕ್ಕೆ ಸ್ವಾಮಿಗಳಾಗಿರುವ ಪ್ರಜೆಗಳೊಳಗಿನ ಕೆಲರು ನಿಕ್ಷೇಪಧಾರಿಗಳೇ ಹೊರತು ನಿಜವಾದ ಸ್ವಾಮಿಗಳಲ್ಲ. ಆ ನಿಕ್ಷೇಪವನ್ನು ಅದರ ನಿಜಸ್ವಾಮಿಗಳಾದ ಪ್ರಜಾಸಮೂಹದ ಹಿತಾರ್ಥವಾಗಿಯೇ ಉಪಯೋಗಿಸಬೇಕು. ಭೂಮಾಲಿಕರು ತಂತಮ್ಮ ಭೂಮಿಗಳಲ್ಲಿ ತಮಗೂ ಇತರರಿಗೂ ಆಗುವಷ್ಟು ಬೆಳೆಯಲು ತಮ್ಮ ಶಕ್ತಿ ಬುದ್ಧಿಗಳನ್ನೆಲ್ಲಾ ವೆಚ್ಚಮಾಡಬೇಕು. ಹಾಗೆ ಮಾಡದಿದ್ದರೆ ತಮ್ಮ ಕರ್ತವ್ಯವನ್ನು ನೆರವೇರಿಸಿದಂತಾಗುವುದಿಲ್ಲ. ಭೂಮಾಲೀಕರು ತಂತಮ್ಮ ಭೂಮಿಗಳಲ್ಲಿ ತಮಗಾಗಿ ಮಿಗುವಷ್ಟು ಬೆಳೆದರೆ, ಇತರ ಪ್ರಜೆಗಳು ಇತರ ವೃತ್ತಿಗಳನ್ನು ಆಶ್ರಯಿಸಿ ಅವುಗಳಲ್ಲಿ ಅವರು ಉತ್ಪಾದನೆ ಮಾಡಿದ ಪದಾರ್ಥಗಳನ್ನು ಭೂಮಾಲೀಕರಿಗೆ ಕೊಟ್ಟು ಹಾಗೆ ಮಿಕ್ಕಧಾನ್ಯವನ್ನು ಕೊಂಡುಕೊಳ್ಳುವರು. ಭೂಮಾಲೀಕರಲ್ಲದ ಇತರರು ಭೂಮಾಲೀಕರಿಗೆ ಇತರ ಸುಖಸಾಧನ ಪದಾರ್ಥದ ವಿನಿಮಯದಿಂದ, ಅಥವಾ ಸೇವೆಯಿಂದ ಸಹಾಯಮಾಡಲಿ ಮಾಡದೆ ಇರಲಿ, ಅಂತಹ ಇತರರು ಕಾಯದಾರ್ಢ್ಯವುಳ್ಳ ಸೋಮಾರಿಗಳೇ ಆಗಿರಲಿ, ಬಾಲ್ಯ ವೃದ್ಧಾಪ್ಯ ಸ್ತ್ರೀತ್ವಗಳಿಂದ ಅಸಮರ್ಥರೇ ಆಗಿರಲಿ, ಅವರೆಲ್ಲರನ್ನೂ ಒಂದು ವಿಧದಲ್ಲಿಲ್ಲದಿದ್ದರೆ ಮತ್ತೊಂದು ವಿಧದಲ್ಲಿ ಕಾಪಾಡುವ ಕೆಲಸವು ಭೂಮಾಲೀಕರಿಗೇ ಸೇರಿದುದು. ಇಂಗ್ಲಾಂಡಿನಲ್ಲಿ ಇಂತಹ ಸೋಮಾರಿ ಅಶಕ್ತರುಗಳಿಗೆ ಜೀವಿಕೆಯನ್ನು ಸರ್ಕಾರದವರೇ (ಭೂಮಾಲೀಕರ ವೆಚ್ಚದಿಂದಲೇ) ಕಲ್ಪಿಸಿದ್ದಾರೆ. ಸೋಮಾರಿಗಳನ್ನು ವರ್ಕ್‌ಹೌಸ್ ಎಂಬ ಕಾರ್ಯಗೃಹಗಳಿಗೆ ಕೂಡಿ ಕೆಲಸಮಾಡಿಸುವರು, ಅಶಕ್ತರಿಗೆ ಓಲ್ಡ್ ಏಜ್ ಪೆನ್‌ಷನ್ ಎಂಬ ವೃದ್ಧಾಪ್ಯದ ಭತ್ಯವನ್ನು ಕೊಟ್ಟು ಅವರನ್ನು ಸಂರಕ್ಷಿಸುವರು. ನಮ್ಮ ಇಂಡಿಯಾದಲ್ಲಾದರೋ ಈ ಎರಡು ಕಾರ್ಯಗಳನ್ನು ಪ್ರಜೆಗಳೇ ಇಟ್ಟುಕೊಂಡಿದ್ದಾರೆ. ಹೀಗೆ ಸರ್ವಜನಾಶ್ರಯವಾದ ಸ್ಥಿರಸೊತ್ತುಗಳನ್ನು ಈ ಮಾಲೀಕರೇ ಇತರರಿಗಿಲ್ಲದಂತೆ ಅನುಭವಿಸುತ್ತಿರುವುದರಿಂದ ಅವರ ಯೋಗಕ್ಷೇಮವನ್ನೆಲ್ಲಾ ನೋಡಿಕೊಳ್ಳುವ ಬದ್ಧತೆಯು ಇವರಿಗೆ ಅಂಟುತ್ತದೆ. ಇವರಿಂದ ಈ ಸೊತ್ತನ್ನು ಇತರರು ಬಲಾತ್ಕಾರದಿಂದ ತೆಗೆದುಕೊಳ್ಳುವುದನ್ನು ಸರ್ಕಾರದವರು ತಪ್ಪಿಸಿ, ಆ ನಿಕ್ಷೇಪವನ್ನು ಇವರಲ್ಲಿಯೇ ಇಟ್ಟಿ

ರುವುದರಿಂದ ಸರ್ವರಿಗೂ ಹಿತವಾಗುವಂತೆ ಆ ನಿಕ್ಷೇಪವನ್ನು ಇವರು ಉಪಯೋಗಿಸುವ ಹಾಗೆ ಇವರನ್ನು ನಿರ್ಬಂಧಿಸುವ ಕೆಲಸವು ಸರ್ಕಾರಕ್ಕೆ ಸೇರಿದುದು. ಆದಕಾರಣವೇ ಮನುವು ಹೇಳುತ್ತಾನೆ :—

ವೈಶ್ಯಶೂದ್ರೌ ಪ್ರಯತ್ನೇನ ಸ್ವಾನಿಕರ್ಮಾಣಿಕಾರಯೇತ್।
ತೌಹಿಚ್ಯುತೌ ಸ್ವಕರ್ಮೇಭ್ಯಃ ಕ್ಷೋಭಯೇತಾಮಿದಂಜಗತ್॥

ಬೇಸಾಯಗಾರರು ಬೇಸಾಯವನ್ನು ಮಾಡದಿದ್ದರೆ ಇವನು ಹೇಳುವ ಮೇರೆ ಲೋಕವು ತಲ್ಲಣಿಸುವುದೇನೋ ನಿಶ್ಚಯ. ಆದರೆ ಬಲಾತ್ಕಾರವಾಗಿ ಬೇಸಾಯಗಾರರಿಂದ ಕೆಲಸಮಾಡಿಸುವ ವಿಧಿಯು ಆ ಕಾಲದ ರಾಜರ ಆಳ್ವಿಕೆಯಲ್ಲಿ ಸರಿಹೋಗುತಿತ್ತೇ ಹೊರತು ಈ ಕಾಲಕ್ಕೆ ಸಲ್ಲದು. ಈಗ ಆಳುವವರು ಈ ಪ್ರಬಂಧದ ರೂಲುಗಳಂತೆ ಬೇಸಾಯಗಾರರಿಗೆ ಪ್ರೋತ್ಸಾಹಕೊಡುವರು.

ಮನುಷ್ಯನ ಉಪಭುಜ್ಯಪದಾರ್ಥಗಳು ಪ್ರಾಣಸಾಧಕ, ಸುಖಸಾಧಕವೆಂಬ ಎರಡು ವಿಧದುವುಗಳಾಗಿ ವಿಭಾಗಿಸಲ್ಪಟ್ಟಿವೆ. ಕೇವಲ ಪ್ರಾಣಧಾರಣೆಗವಶ್ಯಕವಾದ ಆಹಾರಪದಾರ್ಥಗಳು ಪ್ರಾಣಸಾಧಕವಾದುವುಗಳು. ವಸನವೊದಲಾದ ಇತರ ಉಪಭುಜ್ಯಪದಾರ್ಥಗಳೆಲ್ಲವೂ ಸುಖಸಾಧಕ ಪದಾರ್ಥಗಳಾಗಿವೆ.

ಮೇಲೆ ವಿವರಿಸಿರುವ ಎರಡು ವಿಧದ ಸಾಧನಗಳ ಉತ್ಪತ್ತಿಗೂ ಭೂಮಿ, ಉದ್ಯೋಗ, ದ್ರವ್ಯ ಈ ಮೂರು ಉಪಕರಣಗಳು ಬೇಕು. ಭೂಮಿ, ಉದ್ಯೋಗ ಇವುಗಳ ಅವಶ್ಯಕತೆಯು ಗೊತ್ತೇ ಇದೆ. ದ್ರವ್ಯವು ಅದೇ ಪ್ರಕಾರ ಅವಶ್ಯಕ. ಏಕೆಂದರೆ ಒಂದು ಪದಾರ್ಥವನ್ನು ಉತ್ಪತ್ತಿಮಾಡಲು ಮನುಷ್ಯನು ಕೆಲಸಮಾಡಬೇಕಾಗುತ್ತದೆಯಲ್ಲವೆ? ಉದ್ಯೋಗಮಾಡುವವನು ಮೊದಲು ಅನ್ನ ಮೊದಲಾದ ಅವಶ್ಯಕತೆಗಳನ್ನು ಒದಗಿಸಿಕೊಳ್ಳದೆ ಉದ್ಯೋಗಮಾಡಲಿಕ್ಕಾಗದು. ಆ ಅವಶ್ಯಕತೆಗಳ ಪ್ರತಿನಿಧಿಯು ದ್ರವ್ಯವಾಗಿರುವುದರಿಂದ ದ್ರವ್ಯವು ಪದಾರ್ಥದ ಎಂದರೆ ಮೇಲೆ ವಿವರಿಸಿರುವ ಸಾಧನಗಳ ಉತ್ಪಾದನೆಗೆ ಮೂರನೆಯ ಉಪಕರಣವಾಗಿದೆ.

ಭೂಮಿಯ ಮೇಲೆ ಜನಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಇವರು ಹೆಚ್ಚಿದ ಹಾಗೆಲ್ಲಾ ಭೂಮಿಯನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸುವುದೂ, ಹೆಚ್ಚು ಹೆಚ್ಚಾಗಿ ಉದ್ಯೋಗವನ್ನು ಮಾಡುವುದೂ, ಅದರಿಂದ ಹೆಚ್ಚು ಹೆಚ್ಚಾಗಿ ದ್ರವ್ಯವನ್ನು ಗಳಿಸುವುದೂ, ಈ ಪರಿಣಾಮಗಳು ಉಂಟಾಗುತ್ತವೆ. ಮತ್ತೂ ಈ ಪರಿಣಾಮಗಳು ಹೆಚ್ಚಿದ ಹಾಗೆಲ್ಲಾ ಮೇಲೆ ವಿವರಿಸಿದ ಸಾಧನಸಂಪತ್ತಿಯೂ ಹೆಚ್ಚುತ್ತದೆ. ಈ ಮೂರು ಉಪಕರಣಗಳು ಹೆಚ್ಚುವುದರಿಂದ ಆ ಎರಡು ಸಾಧನಗಳ ಉತ್ಪತ್ತಿಯು ಸಹ ಹೆಚ್ಚುವುದಾದರೂ ಅವೆರಡರ ವೃದ್ಧ್ಯಂಶದಲ್ಲಿ ಬಹಳ ತಾರತಮ್ಯವಿದೆ ಸುಖಸಾಧನಗಳು ಉಪಕರಣಗಳ ಅಂಶಾನುಸಾರವಾಗಿ ಹೆಚ್ಚುವುವು. ಜೀವಿತಸಾಧನ ಎಂದರೆ ಧಾನ್ಯ ಮೊದಲಾದ ಸಸ್ಯೋತ್ಪತ್ತಿಯಾಧಿಕ್ಯವಾದರೋ ಉದ್ಯೋಗ ದ್ರವ್ಯ ಮೊದಲಾದ ಉಪಕರಣಗಳ ಆಧಿಕ್ಯದೊಡನೆಯೇ ಹೋಗುವುದಿಲ್ಲ ; ಹಿಂದೆ ಬೀಳುತ್ತದೆ. ಹೇಗೆಂದರೆ ಒಂದಾನೊಂದು ಭೂಮಿಗೆ

50 ರೂ. ನ ಬೆಲೆಯ ಗೊಬ್ಬರ ಕಾಮಗಾರಿ ಮೊದಲಾದ ಉಪಕರಣಗಳನ್ನು ಪಯೋಗಿಸಿದರೆ 150 ರೂ. ನ ಬೆಲೆಯ ಧಾನ್ಯವಾಗುತ್ತದೆಂದು ಊಹಿಸುವ. ಈಗ ಅದೇ ಭೂಮಿಗೆ 100 ರೂ. ನ ಉಪಕರಣವನ್ನು ಪಯೋಗಿಸಿದರೆ ತದಂಶಾನುಸಾರವಾಗಿ 300 ರೂ. ನ ಧಾನ್ಯವು ಉತ್ಪತ್ತಿಯಾಗುವುದಿಲ್ಲ. ಬಹುಶಃ 200 ರೂ. ವರೆಗಿನಷ್ಟು ಆಗಬಹುದು. 200 ರೂ. ನ ಉಪಕರಣವನ್ನು ಪ್ರಯೋಗಿಸಿದರೆ ಮೊದಲನೆಯ ದರದಂತೆ ತ್ರಿಗುಣವಾಗಿ 450 ರೂ. ನಷ್ಟೂ ಅಥವಾ ಎರಡನೆಯ ದರದ ಮೇರೆ ದ್ವಿಗುಣವಾಗಿ 400 ರೂ. ನಷ್ಟೂ ಆಗುವುದಿಲ್ಲ. ಇದು ಭೂಮಿಗಿರುವ ಮೊದಲನೆಯ ವಿಷಮಾವಸ್ಥೆ. ಎರಡನೆಯದಾವುದೆಂದರೆ, ಭೂಖಂಡಗಳ ಮೇಲಿನ ಕೆಲಭಾಗಮಾತ್ರ ಫಲವತ್ತಾದ ಭೂಮಿಯಾಗಿರುತ್ತದೆ. ವ್ಯವಸಾಯಕ್ಕಾಗಿ ಪಡುವ ಶ್ರಮ ಮುಟ್ಟಿಸುವ ದ್ರವ್ಯ ಇವುಗಳಿಗಿಂತಲೂ ಹೆಚ್ಚಾದ ಅಥವಾ ಇವುಗಳಿಗೆ ಸಮಾನವಾದರೂ ಅದ ಉತ್ಪತ್ತಿಯು ಯಾವ ಭೂಮಿಯ ವ್ಯವಸಾಯದಿಂದ ಆಗುತ್ತದೋ ಆ ಭೂಮಿಯು ಮಾತ್ರ ಫಲವತ್ತಾದುದೆಂದು ಹೆಸರು. ಮಿಕ್ಕ ಭೂಭಾಗದೊಳಗೆ ಕೆಲಭೂಮಿಗಳಲ್ಲಿ ಅಲ್ಪಸ್ವಲ್ಪ ಉತ್ಪತ್ತಿಯಾದರೂ ಆ ಉತ್ಪತ್ತಿಯು ವ್ಯವಸಾಯಕ್ಕಾಗಿ ತಗಲುವ ಉದ್ಯೋಗ ವ್ಯಯಗಳಿಗಿಂತ ಕಡಮೆಯಾಗುವುದರಿಂದ ಆ ಭೂಮಿಗಳನ್ನು ಯಾರೂ ವ್ಯವಸಾಯಮಾಡಲಿಕ್ಕೆ ಸಾಧ್ಯವಲ್ಲ. ಹೇಗೆಂದರೆ, ಒಬ್ಬನು ಒಂದು ದಿವಸ ಒಂದು ಕೆಲಸ ಮಾಡಿದರೆ 3 ಆಣೆ ಕೂಲಿ ದೊರೆಯುತ್ತದೆಂತಲೂ, ಆ ಮೂರಾಣೆಯಿಂದ ಅವನಿಗೆ ದಿವಸಕ್ಕೆ ಬೇಕಾದ ಆಹಾರವು ದೊರೆಯುತ್ತದೆಂತಲೂ ಊಹಿಸುವ. ಆ ಕೆಲಸದಿಂದ ಯಾವಾಗಲೂ ಇಷ್ಟೇ ಕೂಲಿಯು ದೊರೆಯುತ್ತಿದ್ದರೆ ಅವನು ಆ ಕೆಲಸವನ್ನೇ ಮಾಡುತ್ತಿರುವುದು ಸಾಧ್ಯ. ಹಾಗಲ್ಲದೆ ದೊರೆಯುವ ಕೂಲಿಯು 3 ಆಣೆಗಿಂತ ಕಡಮೆಯಾದರೆ, ಆ ಕೆಲಸವನ್ನು ಮಾಡಲು ಅವನಿಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅದರಿಂದ ಅವನಿಗೆ ಪೂರ್ತಿ ಆಹಾರವು ದೊರೆಯುವುದಿಲ್ಲವಾಗಿ ಕೆಲಸಮಾಡಲು ತಕ್ಕ ದೇಹಶಕ್ತಿಯು ಅವನಿಗಿರುವುದಿಲ್ಲ. ಅದುಕಾರಣ ಆ ಕೆಲಸವನ್ನು ಅವನು ಬಿಟ್ಟೇ ಬಿಟ್ಟು ಲಾಭಕರವಾದ ಮತ್ತೊಂದು ಕೆಲಸವನ್ನು ಅವಲಂಬಿಸಲೇ ಬೇಕು ; ಅಂತಹ ಕೆಲಸವು ದೊರೆಯದಿದ್ದರೆ ಅವನು ಅನ್ನದ ಅಭಾವದಿಂದ ಸಾಯಬೇಕಾಗುತ್ತದೆ. ಅದುಕಾರಣ ಲೋಕದ ಜನರೆಲ್ಲ ಫಲವತ್ತೆಂದೆನಿಸುವ ನಿಯತವಾದಿಷ್ಟು ಭೂಮಿಯ ಉತ್ಪತ್ತಿಯ ಮೇಲೆ ಅಧೀನರಾಗಿರಬೇಕು. ಜನವಾದರೋ ದಿನೇ ದಿನೇ ಹೆಚ್ಚುತ್ತಿದ್ದಾರೆ. ಭೂಮಿಯು ಹೆಚ್ಚುವುದಕ್ಕೆ ಅವಕಾಶವಿಲ್ಲ. ಜನಸಂಖ್ಯೆ ಹೆಚ್ಚಿದಂತೆ ಉದ್ಯೋಗ ಗೊಬ್ಬರ ಮೊದಲಾದ ವ್ಯವಸಾಯೋಪಕರಣವೇನೊ ಹೆಚ್ಚಾಗುವುದು. ಆದರೆ ಆ ಉಪಕರಣಕ್ಕೆ ತಕ್ಕಾಗಿ ಮೇಲೆ ಸೂಚಿಸಿರುವ ಮೇರೆ ಧಾನ್ಯೋತ್ಪತ್ತಿಯು ಹೆಚ್ಚುವುದಿಲ್ಲ. ಈ ಸ್ಥಿತಿಗಳು ಪರ್ಯವಸಾನವು ಹೇಗಾಗಬಹುದೆಂದರೆ ಜನಸಂಖ್ಯೆಯು ಅವಿಚ್ಛಿನ್ನವಾಗಿ ಹೆಚ್ಚುತ್ತಲೇ ಹೋದರೆ, ಮುಂದೆ ಒಂದಾನೊಂದು ಕಾಲ ಸಂಘಟಿಸುವುದು. ಆ ಕಾಲದಲ್ಲಿ ಜನಗಳಿಗೆ ಆವಶ್ಯಕತೆಗಳು ಮಾತ್ರ ದೊರೆಯುವುವು. ಆ ಬಳಿಕ ಆ ಆವಶ್ಯಕತೆಗಳಿಗೂ ಕುಂದಕವುಂಟಾಗುವುದು. ಆಗ ಜನಸಂಖ್ಯೆ ಹೆಚ್ಚುವುದು ನಿಂತುಹೋಗುವುದು. ಆದರೆ ಇಂತಹ ದುರವಸ್ಥೆಯುಂಟಾಗಲು

ಇನ್ನೂ ಬಹಳ ಕಾಲ ಬೇಕು. ಜನಸಂಖ್ಯೆ ಹೆಚ್ಚುವುದಾದರೂ ಭೂಮಿಯು ಹೆಚ್ಚದೆ ನಿಯತವಾಗಿದ್ದರೂ ಜನಸಂಖ್ಯೆಗೆ ಬೇಕಾಗುವಷ್ಟಕ್ಕಿಂತ ಕಡಮೆಯಲ್ಲದಷ್ಟು ಆಹಾರ ವನ್ನು ಉತ್ಪತ್ತಿಮಾಡಿಕೊಡುವ ಈ ಕೆಳಗೆ ವಿವರಿಸಲ್ಪಡುವ ಕಾರಣಗಳಿವೆ.

ವಿಶೇಷ ಫಲದಾಯಕವಾದ ಭೂಮಿಗಳು ಇನ್ನೂ ಎಷ್ಟೋ ಉಳಿದಿವೆ. ಅನೇಕ ಜೌಗುಭೂಮಿ, ಜವಳುಭೂಮಿ, ಬೆಟ್ಟಗಳ ತೊಪ್ಪಲ ಭೂಮಿಗಳು ಇವುಗಳನ್ನು ವ್ಯವ ಸಾಯಮಾಡಿದರೆ ಕೋಟ್ಯಾಂತರ ಜನಗಳಿಗೆ ಆಹಾರ ಒದಗುತ್ತದೆ. ಮನುಷ್ಯನ ಶಕ್ತಿ ಸಾಹಸ ಬುದ್ಧ್ಯುಪಾಯಗಳಿಂದ ಆ ಭೂಮಿಗಳಲ್ಲಿರುವ ನೀರನ್ನು ಹೊರಕ್ಕೆ ಹೊರಡಿಸು ವುದು, ಜಂಗ್ಲಿ ಗಿಡಗಳನ್ನು ಕಡಿದುಹಾಕುವುದು, ಆ ಸ್ಥಳಗಳಲ್ಲಿ ವ್ಯಾಪಿಸುವ ಶೀತಜ್ವ ರವನ್ನು ನಿವಾರಣೆಮಾಡುವುದು ಇಂತಹ ಕಾರ್ಯಗಳನ್ನು ಮಾಡಿದರೆ ಆ ಭೂಮಿಗಳು ಅತ್ಯಂತ ಫಲಕಾರಿಯಾದ ಬೇಸಾಯಕ್ಕೂ, ಆರೋಗ್ಯವಾಸಕ್ಕೂ ಅನುಕೂಲವಾಗುತ್ತವೆ. ಮತ್ತೂ ಮಳೆಯು ತಕ್ಕಷ್ಟು ಬೀಳದ ವಿಸ್ತಾರವಾದ ಭೂಭಾಗಗಳು ಕೃಷಿಗೆ ಯೋಗ್ಯ ವಲ್ಲದುವುಗಳಾಗಿವೆ. ಭೂಮಿಯ ಮೇಲೆ ಬೀಳುವ ಮಳೆಯ ನೀರಿನೊಳಗೆ ಬಹು ಭಾಗವು ವ್ಯರ್ಥವಾಗಿ ಸಮುದ್ರಕ್ಕೆ ಹೋಗಿ ಬೀಳುತ್ತಿದೆ. ಈ ನೀರನ್ನೆಲ್ಲವನ್ನೂ ಆ ಮರುಭೂಮಿಗೆ ಸಾಗಿಸಿ ಆ ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡುವುದು ಆ ಧುನಿಕ ನಾಗರೀಕತೆಗೆ ಸಾಧ್ಯವಾಗಿರುತ್ತದೆ. ನದಿಗಳಿಗೆ ಅಡ್ಡಗಟ್ಟೆಗಳನ್ನು ಕಟ್ಟಿ ಸರ್ಕಾ ರದವರು ನದಿಯ ನೀರನ್ನು ಕೃಷಿಯುಪಯೋಗಕ್ಕೆ ತಂದುಕೊಳ್ಳುತ್ತಿದ್ದಾರೆ.

ಕೃಷ್ಯಭಿವೃದ್ಧ್ಯರ್ಥವಾದ ರಾಜ್ಯವ್ಯವಹರಣೆಯು.

ಭೂಮಿಯುತ್ಪತ್ತಿಯ ಹೆಚ್ಚುವಿಕೆಗೆ ಪ್ರಜೆಗಳ ಬುದ್ಧಿಶಕ್ತ್ಯುಪಾಯಗಳು ಹೇಗೆ ಕಾರಣಗಳಾಗುತ್ತವೋ, ಸರ್ಕಾರದವರ ಅನುಕೂಲವಾದ ಶಾಸನಗಳು[1] ಹಾಗೆ ಕಾರಣವಾಗುತ್ತವೆ. ವ್ಯವಸಾಯಾಭಿವೃದ್ಧ್ಯರ್ಥವಾಗಿ ಸರ್ಕಾರದವರು ದ್ರವ್ಯಸಹಾಯ ಮಾಡಲು ತಖಾವಿ ಕಾನೂನುಗಳನ್ನು ಏರ್ಪಡಿಸಿರುತ್ತಾರೆ. ಇದು ಸರ್ಕಾರದ ನೈಮಿತ್ತಿಕವಾದ ಸಹಾಯ. ಬೇಸಾಯವನ್ನು ಅಭಿವರ್ಧಿಸುವುದರಲ್ಲಿ ಭೂಮಾಲೀಕರು ಬೇಸಾಯಗಾರರು ಇವರ ಮನಸ್ಸಿನಲ್ಲೇ ಆಸಕ್ತಿ ಹುಟ್ಟುವಂತೆ ಮಾಡಲೋಸುಗ ಸರ್ಕಾರದವರು ಶಾಸಿಸುವ ಖಾನೂನುಗಳು ಮೇಲೆ ಸೂಚಿಸಿದ ಖಾನೂನುಗಳಿಗಿಂತ ಮುಖ್ಯವಾದುವುಗಳು. ಏಕೆಂದರೆ, ಸರ್ಕಾರದವರು ಪ್ರಜೆಗಳಿಗಿಲ್ಲದುದನ್ನು ಕೊಟ್ಟು ಸಹಾಯಮಾಡುವುದು ಸರ್ಕಾರದ ನೈಮಿತ್ತಿಕವಾದ ಕಾರ್ಯ. ಅವರು ತಂತಮ್ಮ ವೃತ್ತಿಗಳನ್ನು ತಮಗತ್ಯಂತ ಫಲಕಾರಿಯಾಗುವಂತೆ ಆಚರಿಸಿಕೊಳ್ಳಲು ಅವರಿಗಿರುವ ಆತಂಕಗಳನ್ನು ತಪ್ಪಿಸುವುದೇ ಸರ್ಕಾರದವರ ಮುಖ್ಯವೂ ನಿತ್ಯವೂ ಆದ ಕಾರ್ಯ. ತಾನು ಮಾಡುವ ಬೇಸಾಯದಿಂದ, ಅಥವಾ ತಾನು ಅದಕ್ಕಾಗಿ ಮುಟ್ಟಿಸುವ ದ್ರವ್ಯ

[1] ಕೃಷ್ಯಭಿವೃದ್ಧ್ಯರ್ಥವಾದ ಜನರ ಬುದ್ಧಿ ಶಕ್ತ್ಯುಪಾಯಗಳನ್ನು ವಿವರಿಸುವುದು ಕೃಷಿಶಾಸ್ತ್ರಕ್ಕೆ ಸೇರಿದುದು. ಕೃಷ್ಯಭಿವೃದ್ಧ್ಯರ್ಥವಾದ ರಾಜಶಾಸನಗಳನ್ನು ವಿವರಿಸುವುದು ಮಾತ್ರ ಈ ಪ್ರಬಂಧದ ಕಾರ್ಯವಾಗಿರುತ್ತದೆ.

ದಿಂದ ಆಗುವ ಉತ್ಪತ್ತಿಯು ತನ್ನೊಬ್ಬನಿಗೇ ಸೇರುತ್ತದೆಂಬ ದಾರ್ಢ್ಯವು ಬೇಸಾಯ ಗಾರನ ಅಥವಾ ಭೂಮಾಲೀಕನ ಮನಸ್ಸಿನಲ್ಲಿದ್ದರೆ ಬೇಸಾಯವು ತನಗೆ ತಾನೇ ಅಭಿವೃದ್ಧಿಯನ್ನು ಹೊಂದುತ್ತದೆ. ಹಾಗಲ್ಲದೆ ಅಂತಹ ಉತ್ಪತ್ತಿಗೆ ಇತರರೂ ಭಾಗಿಗಳಾಗುತ್ತಾರೆಂಬ ಭಯವಿದ್ದರೆ ಬೇಸಾಯವು ಹೀನಸ್ಥಿತಿಯನ್ನೈದುತ್ತದೆ. ಏಕೆಂದರೆ ಆಗ ಅವನ ಆದರವು ಕಡಮೆಯಾಗುತ್ತದೆ. ಸ್ವೇಚ್ಛೆಯಿಂದಲೇ ಬೇಸಾಯ ಗಾರರೂ, ಭೂಮಾಲೀಕರೂ, ಧನಿಗಳೂ, ಎಲ್ಲರೂ ಒಟ್ಟಿಗೆ ಸೇರಿ ಬೇಸಾಯದ ಕಾರ್ಯಗಳ ನಡೆಯಿಸುವುದರಲ್ಲಿ ಇಂತಹ ಅನಾದರಣೆ ಉಂಟಾಗಲು ಕಾರಣವಿಲ್ಲ. ಆದರೆ ಇಂತಹ ಒಗ್ಗಟ್ಟಾಗುವಿಕೆಯು ಸ್ವೇಚ್ಛೆಯಿಂದಲ್ಲದೆ, ಹೊರಗಣ ಪ್ರತಿಬಂಧ ದಿಂದುಂಟಾದರೆ ಮಾತ್ರ ಅನಾದರಣೆಹುಟ್ಟುವುದಕ್ಕೆ ಕಾರಣವಾಗುತ್ತದೆ. ಇದೊಂದು ಬೇಸಾಯಾಭಿವೃದ್ಧಿಗಿರುವ ಆತಂಕ. ಬೇಸಾಯಗಾರರು ಇತರರ ಭೂಮಿಗಳನ್ನು ಬೇಸಾಯಮಾಡುವುದರಲ್ಲಿ ಭೂಮಾಲೀಕರೊಡನೆ ಸೇರುವುದೂ ಸಹ ಹೊರಗಣ ನಿರ್ಬಂಧದಿಂದಲೇ. ಏಕೆಂದರೆ ಅಂತಹ ಮತ್ತೊಂದು ಭೂಮಿಯು ತನಗೆ ದೊರೆಯ ದಿರುವುದಕ್ಕಾಗಿ ಮಾತ್ರ ಇವನು ಅನಿರ್ವಾಹದ ದೆಸೆಯಿಂದ ಇತರರ ಜಮೀನನ್ನು ಬೇಸಾಯಮಾಡುತ್ತಾನೆ. ಸರ್ಕಾರದವರು ತಪ್ಪಿಸಬಹುದಾದ ಆತಂಕಗಳಲ್ಲಿ ಮೇಲಿನವು ಉದಾಹರಣೆಗಳಾಗಿವೆ. ಪೂರ್ವದಲ್ಲಿ ಬೇಸಾಯಗಾರರು ಸಾಧಾರಣವಾಗಿ ಗುತ್ತಿಗೆ ಗಾಗಿ, ವಾರಕ್ಕಾಗಿ, ಅಥವಾ ಆಳುಗಳಾಗಿ ಭೂವ್ಯವಸಾಯಮಾಡುತ್ತಿದ್ದರೇ ಹೊರತು ಖಾಯಂ ಹಿಡುವಳಿದಾರರಾಗಿ ಎಂದರೆ ಭೂಮಾಲೀಕರಾಗಿರಲಿಲ್ಲ. ರಾಜರು ಗಳು ರಾಜ್ಯದ ಭೂಮಿಗಳ ಬಹು ಭಾಗವನ್ನು ಧರ್ಮಾರ್ಥವಾಗಾದರೂ ಸರ್ಕಾರಿ ಕೆಲಸಮಾಡಲು ವೇತನರೂಪವಾಗಾದರೂ ತಂತಮ್ಮ ಪ್ರೀತಿಪಾತ್ರರಿಗೆ ಕೊಟ್ಟು ಬಿಡುತ್ತಿದ್ದರೂ; ಮತ್ತು ಗ್ರಾಮಗ್ರಾಮಗಳನ್ನೇ ತಾಲ್ಲೂಕುತಾಲ್ಲೂಕುಗಳನ್ನೇ ಈಗ ಟೋಲ್ ಗೇಟು ತೆರಿಗೆಯನ್ನು ಹೇಗೆ ಗುತ್ತಿಗಗೆ ಕೊಡುತ್ತಾರೋ ಹಾಗೆ ಕಂದಾಯದ ಗುತ್ತಿಗೆಗಾಗಿ ಕೊಡುತ್ತಿದ್ದರು. ಈ ಪ್ರಕಾರ ಭೂದಾನವನ್ನು ಹೊಂದಿರು ವವರ ಸ್ವಾಧೀನದಲ್ಲಿ ಈಗ ಇಂಡಿಯ ದೇಶದ ಅನೇಕ ಭೂಮಿಗಳು ಇರುತ್ತವೆ. ಇನಾಂದಾರರು, ಜಹಗೀರ್‌ದಾರರು, ಜಮೀನ್‌ದಾರರು, ಚೌಧರಿ, ದೇಶಾಯಿ, ದೇಶ ಪಾಂಡೇ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಈಗಿನ ಭೂಮಾಲೀಕರೆಲ್ಲರೂ ಆ ಪ್ರಕಾರ ಭೂಮಿಯನ್ನು ಸಂಪಾದನೆಮಾಡಿಕೊಂಡಿರತಕ್ಕವರು. ಆಂಗ್ಲೇಯರ ರಾಜ್ಯಸ್ಥಾಪನೆಯಾದ ಬಳಿಕ ಭೂಮಿಗಳನ್ನು ದಾನವಾಗಿ ಕೊಡುವ ಪದ್ಧತಿಯು ಪ್ರಾಯಃ ನಿಂತುಹೋಯಿತು. ಆದರೆ ಇವರೂ ಸಹ ಮೊದಲುಮೊದಲು ಅನೇಕ ಗ್ರಾಮಗಳನ್ನೂ ತಾಲ್ಲೂಕುಗಳನ್ನೂ ಲಾಭಸಂಪಾದನೆಯನ್ನು ಮಾಡುವವರಿಗೆ ಕಂದಾಯದ ಖಾಯಂಗುತ್ತಿಗೆಗಾಗಿ ಕೊಟ್ಟುಬಿಟ್ಟರು. ಮದ್ರಾಸ್ ದೇಶದ ಉತ್ತರಕಡೆ ಇರುವ ಮತ್ತು ಬಂಗಾಳದಲ್ಲಿರುವ ಅನೇಕ ದೊಡ್ಡ ಜಮೀನ್‌ದಾರರೆಲ್ಲರೂ ಪ್ರಾಯಃ ಈ ಪ್ರಕಾರ ಭೂಮಿಯನ್ನು ಸಂಪಾದನೆಮಾಡಿದವರು. ದೇಶದ ಸಮುದಾಯಹಿತದಲ್ಲಿ ಸರ್ಕಾರಕ್ಕೆ ಆದರವಿರುತ್ತದೆಯೇ ಹೊರತು ಖಾಸ್ಗಿ ಜನರಿಗೆ ಇರುವುದಿಲ್ಲ. ಖಾಸ್ಗಿ

ಜನರೆಲ್ಲರೂ ಸ್ವಹಿತಕ್ಕೆ ದೃಷ್ಟಿಕೊಡತಕ್ಕವರಾಗಿದ್ದಾರೆ. ಭೂಮಿಯಾದರೋ ಪ್ರಜಾಸಾಮಾನ್ಯದ ಪ್ರಾಣಧಾರಣೆಗೆ ಆವಶ್ಯಕವಾದುದು. ಇಂತಹ ಪದಾರ್ಥವನ್ನು ಯಾವ ರೀತಿಯಲ್ಲಿ ಉಪಯೋಗಿಸಿದರೆ ಸರ್ವ ಜನರಿಗೂ ಹಿತವೋ ಆ ರೀತಿ ಇದನ್ನು ಉಪಯೋಗಿಸಬೇಕು. ಪ್ರತಿ ಭೂಮಿಯಲ್ಲೂ ಎಷ್ಟು ಹೆಚ್ಚಿನ ಸಸ್ಯೋತ್ಪತ್ತಿಮಾಡಲು ಸಾಧ್ಯವೋ ಅಷ್ಟುಮಟ್ಟಿನ ಉತ್ಪತ್ತಿಮಾಡುವುದೇ ಜನಸಾಮಾನ್ಯಕ್ಕೆ ಹಿತಕರವಾದ ರೀತಿ. ಈ ರೀತಿ ಹೋಗುವುದು ಸ್ವಪ್ರಯೋಜನಕ್ಕನುಕೂಲಿಸದಿದ್ದಲ್ಲಿ ಹಾಗೆ ಹೋಗಲು ಪೃಥಕ್ ಪ್ರಜೆಗಳಾರಿಗೂ ಆಸಕ್ತಿಯಿರುವುದಿಲ್ಲ. ಭೂಮಾಲೀಕರಾದ ಖಾಸ್ಗಿ ಜನರಿಗಾದರೊ ಪ್ರಜಾಹಿತದ ಆಸಕ್ತಿಯು ಇರಬೇಕಾದ ಆವಶ್ಯಕತೆಯೂ ಇಲ್ಲ; ಹಾಗೆ ಇಲ್ಲೂ ಇಲ್ಲ. ಆದುಕಾರಣ ಅವರು ತಮ್ಮ ಸ್ವಹಿತಕ್ಕೆ ಭೂಮಿಯು ಯಾವ ತರದ ವಿನಿಯೋಗವು ಹಿತವೋ ಆ ತರದಲ್ಲಿ ಅದನ್ನು ಉಪಯೋಗಿಸುತ್ತಿದ್ದರು; ಮತ್ತೂ ಈಗಲೂ ಹಾಗೆಯೇ ವಿನಿಯೋಗಿಸುತ್ತಿದ್ದಾರೆ. ಹೇಗೆಂದರೆ, ಭೂಮಿಯಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಸಸ್ಯೋತ್ಪತ್ತಿಮಾಡಬೇಕಾದರೆ, ಹೊರುವಿಗೆ ಆವಶ್ಯಕವಾದ ಗೊಬ್ಬರ ನೀರು ಮೊದಲಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳಲು ತಕ್ಕಮಟ್ಟಿಗೆ ದ್ರವ್ಯ ವ್ಯಯವೂ ಮತ್ತೂ ಒಳ್ಳೆಯ ಬೇಸಾಯವೂ ಬೇಕು. ಬೇಸಾಯಗಾರರೇ ಭೂಮಾಲೀಕರಾಗಿಲ್ಲದ ಸಂದರ್ಭದಲ್ಲಿ ಹಣದ ವೆಚ್ಚವನ್ನು ಒಳ್ಳೆಯ ಬೇಸಾಯವನ್ನು ಮಾಡಲು ಭೂಮಾಲೀಕರಿಗೆ ಆಸಕ್ತಿಯಿದೆಯೇ? ಅಥವಾ ಬೇಸಾಯಗಾರರಿಗೆ ಇದೆಯೇ? ತಾವೇ ಭೂಮಾಲೀಕರಲ್ಲದಿದ್ದರೆ ಬೇಸಾಯಗಾರರು ಬೇಸಾಯಕ್ಕಾಗಿ ಹಣವನ್ನು ವೆಚ್ಚಮಾಡದಿರುವುದೊಂದಲ್ಲದೆ, ಬೇಸಾಯವನ್ನೂ ಚೆನ್ನಾಗಿ ಮಾಡುವುದಿಲ್ಲ. ಏಕೆಂದರೆ ಸಸ್ಯೋತ್ಪತ್ತಿಯ ಪೈಕಿ ಮುಖ್ಯ ಭಾಗವು ಭೂಮಾಲೀಕರಿಗೆ ಹೋಗುತ್ತದೆ. ಅದೆಲ್ಲವೂ ತಮಗೇ ಸೇರುವುದಿಲ್ಲ. ಆದ ಪ್ರಯುಕ್ತ ಇವರಿಗೆ ಅಂತಹ ಆಸಕ್ತಿಯಿರುವುದಿಲ್ಲ. ಈ ಕಾರಣಕ್ಕಾಗಿಯೇ, ಎಂದರೆ, ಸಸ್ಯೋತ್ಪತ್ತಿಯ ಪೈಕಿ ಬಹುಭಾಗವು ಬೇಸಾಯಗಾರರಿಗೆ ಸೇರಿಹೋಗುತ್ತದೆಯಾಗಿ, ಹಣವನ್ನು ವೆಚ್ಚಮಾಡಲು ಭೂಮಾಲೀಕರಿಗೆ ಆಸಕ್ತಿಯಿರುವುದಿಲ್ಲ. ಅನ್ಯಾಕ್ರಾಂತವಾದ (ಖಾಸ್ಗಿ ಜನರಿಗೆ ಸರ್ಕಾರದಿಂದ ಕೊಡಲ್ಪಟ್ಟಿರುವ ಗ್ರಾಮಗಳಲ್ಲಿ ಕೆರೆ ಕಾಲ್ವೆ ಮೊದಲಾದ ಜಲಾಶಯಗಳನ್ನು ಕಟ್ಟಿಸುವುದು, ರೈತರಿಗೆ ತಖಾವಿಸಾಲದ ಸಹಾಯವನ್ನು ಮಾಡುವುದು, ಇಂತಹ ವ್ಯವಸಾಯಾಭಿವೃದ್ಧಿಕಾರ್ಯಗಳನ್ನು ಅಂತಹ ಭೂಮಾಲೀಕರು ಮಾಡುವುದು ಬಹಳ ಅಪರೂಪ. ಮತ್ತೂ ಇಂತಹ ಇನಾಮು ಮೊದಲಾದ ಗ್ರಾಮಗಳಲ್ಲಿ ಜೀರ್ಣವಾದ ಪೂರ್ವದ ಜಲಾಶಯಗಳನ್ನು ಉದ್ಧಾರಮಾಡುವುದೇ ದುರ್ಲಭವಾಗಿದೆ. ಇಂತಹ ಗ್ರಾಮಗಳಲ್ಲಿನ ಬೇಸಾಯಗಾರರಿಗೆ ಭೂಮಿಯ ಖಾಯಂ ಹಿಡುವಳಿಯ ಹಕ್ಕನ್ನಾದರೂ ಕೊಟ್ಟರೆ, ಭೂಮಿಗೆ ಅವರ ಕೈಲಾದ ಮಟ್ಟಿಗೆ ವೆಚ್ಚಮಾಡಲು, ಚೆನ್ನಾಗಿ ವ್ಯವಸಾಯಮಾಡಲೂ ಬೇಸಾಯಗಾರರಿಗೆ ಆಸಕ್ತಿ ಉಂಟಾದೀತು. ಆದರೆ ಇನಾಮು ಜಹಗೀರು ಗ್ರಾಮಗಳಲ್ಲಿನ ಅನೇಕ ಬೇಸಾಯಗಾರರಿಗೆ ಭೂಮಿಯ ಮೇಲೆ ಹಿಡುವಳಿಯ ಹಕ್ಕಿಲ್ಲ. ಇನಾಂದಾರರು, ಜಹಗೀರ್‌ದಾರರು, ಬೇಸಾಯಗಾರರ ಅನ್ಯೋನ್ಯ

ಪೋಟಾಪೋಟಿಯ ಉಪಯೋಗದಿಂದ ಹೆಚ್ಚು ಲಾಭವನ್ನು ಸಂಪಾದನೆಮಾಡಿಕೊಳ್ಳು ವುದಕ್ಕಾಗಿ ರೈತರಿಗೆ ಭೂಮಿಯನ್ನು ಒಂದೆರಡು ವರ್ಷದಂತಹ ಹಂಗಾಮಿಯ ಕಾಲ್ಗದ ಸಾಗುವಳಿಗೆ ಕೊಡುತ್ತಾರೆಯೇ ಹೊರತು ಖಾಯಂ ಸಾಗುವಳಿಗೆ ಕೊಡುವುದಿಲ್ಲ. ಜನಸಂಖ್ಯೆಯು ಹೆಚ್ಚಿದುದರಿಂದ ಇಂತಹ ಪೋಟಾಪೋಟಿಯು ಹೆಚ್ಚುತ್ತಿದೆ. ಇನಾಂ ದಾರರು ಜಮೀನನ್ನು ತಮ್ಮಿಂದ ಯಾವಾಗ ಕಿತ್ತುಕೊಳ್ಳುವರೋ ಎಂಬ ಭಯದಿಂದ ಬೇಸಾಯಗಾರರು ಜಮೀನಿಗೆ ಗೊಬ್ಬರ ಕಾಂಗಾರಿ ಮೊದಲಾದ ಫಲವತ್ತತೆಯ ಕಾರ್ಯಗಳನ್ನು ಮಾಡಲೊಲ್ಲರು. ರೈತಪೋಟಾಪೋಟಿಯಿಂದ ಜಮೀನುದಾರರೂ, ಜಮೀನ್‌ದಾರರಿಗೆ ಮೋಸಮಾಡಿ ಅಷ್ಟಿಷ್ಟು ಉಳಿಸಿಕೊಳ್ಳುವುದರಿಂದ ರೈತರೂ ಹೆಚ್ಚು ಲಾಭ ಸಂಪಾದನೆಮಾಡಬಹುದೆಂದು ತಿಳಿದುಕೊಂಡಿದ್ದಾರೆ. ಸರ್ವೆಯಾದರೆ ಸರ್ಕಾರಿ ರೈತರ ಅಧಿಕಾರಬದ್ಧತೆಗಳೆಲ್ಲವೂ ರೈತರಿಗೆ ಬರುತ್ತವೆ ಎಂಬ ಭಯದಿಂದ ತಂತಮ್ಮ ಗ್ರಾಮದ ಸರ್ವೆ ಸೆಟಲ್‌ಮೆಂಟಿಗೆ ಈ ಎರಡು ಪಕ್ಷದವರಿಗೂ ವೈಮನಸ್ಯವೇ ಇದೆ. ಈ ಸ್ಥಿತಿಯು ಜನಸಮುದಾಯಕ್ಕೆ ಅಹಿತವಾಗಿ ಪರಿಣಮಿಸುತ್ತದೆ. ಹೇಗೆಂದರೆ, ಲೋಕದಲ್ಲಿ ಬೇಸಾಯಗಾರರೂ ಅಥವಾ ಜಮೀನುದಾರರೂ ಅಲ್ಲದ ಇತರ ವೃತ್ತಿ ಗಳನ್ನು ಅನುಸರಿಸಿರುವ ಪ್ರಜೆಗಳು ಬಹುವಾಗಿರುತ್ತಾರೆ. ಇವರೆಲ್ಲರೂ ಕೊಂಡುಣ್ಣ ಬೇಕು. ದೇಶದ ಮೇಲೆ ಹೆಚ್ಚಾಗಿ ಬೆಳೆಯಾದರೆ ಧಾನ್ಯವು ಅಗ್ಗವಾಗಿರುತ್ತದೆ. ಬೆಳೆ ಯಾಗದಿದ್ದರೆ ಧಾನ್ಯವು ಬಹಳ ತಗ್ಗಾಗಿ ಭೂಸಂಬಂಧವಿಲ್ಲದಿರುವವರೆಲ್ಲರೂ ಜೀವಿಸು ವುದೇ ದುಸ್ತರವಾಗುತ್ತದೆ. ದೇಶದಲ್ಲಿ ಚೆನ್ನಾಗಿ ಬೆಳೆಯಾಗದಿದ್ದರೆ ಭೂಸಂಬಂಧ ವಿಲ್ಲದಿರುವವರಿಗೆ ಉಂಟಾಗುವಷ್ಟು ದುಃಖವು ಭೂಸಂಬಂಧವಿರುವ ಭೂಮಾಲೀಕರಿ ಗಾಗಲಿ, ಬೇಸಾಯಗಾರರಿಗಾಗಲಿ ಉಂಟಾಗುವುದಿಲ್ಲ. ಏಕೆಂದರೆ, ಭೂಸಂಬಂಧ ವಿರುವವರು ಯತ್ಕಿಂಚಿತ್ ತಾವು ಬೆಳೆದುದನ್ನೆಲ್ಲಾ ತಾವೇ ಇಟ್ಟುಕೊಂಡು ಅದರಿಂದ ಅವರು ಪ್ರಾಣವನ್ನು ಉಳಿಸಿಕೊಳ್ಳಬಹುದು. ಭೂಸಂಬಂಧವಿಲ್ಲದಿರುವವರೇ ಸ್ವತಃ ಉತ್ಪಾದನೆಮಾಡುವ ಪದಾರ್ಥಗಳು ಅವರಿಗೆ ತಿನ್ನುವುದಕ್ಕೆ ಬರಲೊಲ್ಲವಾಗಿಯೂ,ತಿನ್ನು ವ ಪದಾರ್ಥಗಳು ಸುಲಭವಾಗಿ ಸಿಕ್ಕುವುದಿಲ್ಲವಾಗಿಯೂ ಇವರಿಗೆ ಪ್ರಾಣವನ್ನು ಉಳಿಸಿ ಕೊಳ್ಳುವುದೇ ಕಠಿಣವಾಗುತ್ತದೆ. ಅದುಕಾರಣ ಪ್ರಜಾ ಸಾಮಾನ್ಯದ ಹಿತಕ್ಕೋಸ್ಕರ ಮಾತ್ರವಿರುವ ಸರ್ಕಾರವು ಪ್ರಜೆಗಳ ಹೊಟ್ಟೆಗೆ ಸಾಕಾಗುವಷ್ಟು ಧಾನ್ಯವು ದೇಶ ದಲ್ಲಿ ಬೆಳೆಯುವಂತೆ ಮಾಡಲು ಯಾವ ಪ್ರಕಾರವಾಗಿ ದೇಶದ ಭೂಮಿಗಳನ್ನು ವಿನಿಯೋಗಿಸಬೇಕೋ ಆ ಪ್ರಕಾರ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಭೂಮಿಯಲ್ಲಿ ಸಾಧ್ಯವಾದ ಮಟ್ಟಿಗೂ ಹೆಚ್ಚಿನ ಬೆಳೆ ಮಾಡುವುದು ಭೂಸಂಬಂಧವಿರು ವವರ ಸ್ವಪ್ರಯೋಜನಕ್ಕೆ ವಿರುದ್ಧವಾಗಕೂಡದು. ಇದು ನಾಗರಿಕರಾದ ಸರ್ಕಾರ ಗಳೆಲ್ಲವೂ ಅಭಿನಂದಿಸುವ ರೀತಿಯಾಗಿದೆ. ಎಂದರೆ ಭೂಮಿಯಲ್ಲಿ ಬೆಳೆಯುವ ಬೆಳೆ ಯೊಳಗೆ ಸರ್ಕಾರದ ಕಂದಾಯ ಕಳೆದು ಉಳಿಯುವುದೆಲ್ಲವೂ ಬೆಳೆಮಾಡಿದವರಿಗೆ ಸೇರುವ ಹಾಗೆ ಮಾಡುವ ಉಪಾಯದಿಂದಮಾತ್ರ ಭೂಸಂಬಂಧವಿರುವವರ ಸ್ವಪ್ರ ಯೋಜನವನ್ನೂ ಭೂಮಿಯಲ್ಲಿ ಹೆಚ್ಚಾಗಿ ಬೆಳೆಯುವುದನ್ನೂ ಒಟ್ಟುಗೂಡಿಸಬಹುದು.

ಬೆಳೆಯನ್ನು ಮಾಡುವವರಿಗೆ ಅದೆಲ್ಲವು ಸೇರುವಹಾಗೆ, ಅಥವಾ ವ್ಯವಸಾಯಾಭಿವೃದ್ಧ್ಯರ್ಥವಾಗಿ ಹಣ ವೆಚ್ಚಮಾಡಿದವರಿಗೇ, ಆ ಹಣವೆಚ್ಚಮಾಡುವುದರಿಂದ ಆದ ಹೆಚ್ಚು ಉತ್ಪತ್ತಿಯು ಸೇರುವಹಾಗೆ ಮಾಡುವುದೇ ಇದಕ್ಕೆ ಉಪಾಯ. ಮದ್ರಾಸಿನ ಎಸ್ಟೇಟ್ಸ್ ಲ್ಯಾಂಡ್ ಆಕ್ಟ್ (ಭೂಸೊತ್ತಿನ ಆಕ್ಟ್) ಎಂಬ ಖಾನೂನು ಈ ಉದ್ದೇಶಗಳಿಗೆ ಹುಟ್ಟಿರುತ್ತದೆ. ಇದರ ಮುಖ್ಯಾಂಶಗಳು ಮುಂದಕ್ಕೆ ವಿವರಿಸಲ್ಪಡುತ್ತವೆ.

ಪೂರ್ವದ ರಾಜರಿಂದ ದಾನವಾಗಾಗಲಿ, ಖಾಯಂ ಕಂದಾಯದ ಗುತ್ತಿಗೆಗಾಗಲಿ, ಬ್ರಿಟಿಷ್ ಸರ್ಕಾರದಿಂದ ಕಂದಾಯದ ಖಾಯಂ ಗುತ್ತಿಗೆಗಾಗಲಿ ಕೊಡಲ್ಪಟ್ಟ ಭೂಮಿಗಳ ಸಂದರ್ಭಗಳು ಮೇಲೆ ವಿವರಿಸಲ್ಪಟ್ಟುವು. ಬೇಸಾಯಗಾರರಲ್ಲದ ಜನರು ಭೂಮಿಗಳನ್ನು ಸರ್ಕಾರದಿಂದ ಕಂದಾಯಕ್ಕಾಗಿ ಹರಾಜಿನಲ್ಲಾದರೂ ಖುಷ್ ಖರೀದಿಗಾದರೂ ಅಥವಾ ಹಾಗೆಯೇ ದರಖಾಸ್ತಿನ ಮೇಲಾದರೂ ಪಡೆಯುತ್ತಾರೆ. ಬೇಸಾಯಗಾರರಲ್ಲದವರು[1] ಭೂಸ್ವಾಮಿಗಳಾಗಿದ್ದರೆ ಭೂಮಿಯ ಉತ್ಪತ್ತಿಯು ಕಡಮೆಯಾಗಿ ದೇಶಕ್ಕೆ ಬಹಳ ಹಾನಿಕರವಾಗಿ ಪರಿಣಮಿಸುತ್ತದೆಂಬುದೇ ಲೋಕಹಿತೈಷಿಗಳ ಅಭಿಪ್ರಾಯವಾಗಿದೆ. ಆದರೂ, ಭೂಮಿಯೇ ಸರ್ವರ ಪ್ರಾಣಧಾರಣೆಗೆ ಆಧಾರವಾಗಿರುತ್ತದೆಯಾಗಿ ಸರ್ಕಾರದವರು ಯಾವ ಪ್ರಜೆಗೂ ಭೂಮಿಯನ್ನು ತಿರಸ್ಕರಿಸುವುದಕ್ಕಾಗುವುದಿಲ್ಲ. ಬೇಸಾಯಗಾರರಲ್ಲದಿರುವವರು ಭೂಸ್ವಾಮಿಗಳಾಗದಂತೆ ಮಾಡಲು ಎರಡು ಉಪಾಯಗಳಿವೆ. ಯಾವುವೆಂದರೆ—(1) ಸ್ವಹಸ್ತದಿಂದ ಬೇಸಾಯಮಾಡುವವರೆಲ್ಲರಿಗೂ ಅವರವರ ಜೀವನಕ್ಕೆ ತಕ್ಕಷ್ಟು ಭೂಮಿಯನ್ನು ಖಾಯಂ ಹಿಡುವಳಿಗೆ ದೊರಕಿಸಿಕೊಡುವುದು ಬಹಳ ಕಾರ್ಯಸಾಧಕವಾದ ಮೊದಲನೆಯ ಉಪಾಯ. ಹೀಗೆ ಮಾಡಿದರೆ ಬೇಸಾಯಗಾರರಲ್ಲದಿರುವವರು ಭೂಸ್ವಾಮಿಗಳಾಗಿರುವುದು ಅಸಾಧ್ಯವಾಗುತ್ತದೆ. ಏಕೆಂದರೆ, ಈ ಭೂಸ್ವಾಮಿಗಳು ಭೂವ್ಯವಸಾಯವನ್ನು ಗುತ್ತಿಗೆ, ಯಾ, ವಾರ ಇಂತಹ ವ್ಯವಹಾರಗಳ ಮೇಲೆ ಬೇಸಾಯಗಾರರಿಂದಲೇ ಮಾಡಿಸಬೇಕಾಗಿ, ಬೇಸಾಯಗಾರರಿಗೆಲ್ಲರಿಗೂ ಸ್ವಂತ ಭೂಮಿಗಳಿರುವುದರಿಂದ ಮೇಲೆ ಕಂಡವರ ಭೂಮಿಗಳನ್ನು ಬೇಸಾಯಮಾಡಲು ಇವರು ಇಚ್ಛಿಸುವುದಿಲ್ಲ. ಇದರಿಂದ ಬೇಸಾಯಗಾರರಲ್ಲದವರಾರೂ, ಭೂಮಿಯನ್ನು ಸಂಪಾದನೆಮಾಡುವುದನ್ನು ಬಿಟ್ಟುಬಿಟ್ಟು ತಮ್ಮ ದ್ರವ್ಯವನ್ನು ದೇಶಕ್ಕೂ ತಮಗೂ ಹಿತಕರವಾದ ಕೈಗಾರಿಕೆ ಮೊದಲಾದ ಮತ್ತಾವ ವೃತ್ತಿಯಲ್ಲಾದರೂ ವಿನಿಯೋಗಮಾಡುವರು. (2) ತನ್ನ ಮತ್ತು ತನ್ನ ಕುಟುಂಬದವರ ಜೀವನಕ್ಕೆ ಎಷ್ಟು ಬೇಕೋ ಅಷ್ಟು ಭೂಮಿಯನ್ನು ಸರ್ಕಾರದಿಂದ ಹೊಂದಲು ಪ್ರತಿಯೊಬ್ಬನಿಗೆ ಹಕ್ಕಿದೆಯೇ ಹೊರತು ಅದಕ್ಕಿಂತ ಹೆಚ್ಚಾಗಿ ಪಡೆಯಲು ಯಾವನಿಗೂ

1. ಬೇಸಾಯಗಾರರೆಂಬ ಈ ಪದವು ಭೂಮಿಯನ್ನು ಉಳುವುದು, ಹರಗುವುದು ಮೊದಲಾದ ಬೇಸಾಯಗೆಲಸವನ್ನು ಸ್ವಹಸ್ತದಿಂದ ಮಾಡುವವರಿಗೂ, ಮತ್ತೂ ಭೂಮಿಯಿರುವ ಸ್ಥಳದಲ್ಲೇ ವಾಸಮಾಡಿಕೊಂಡು, ವ್ಯವಸಾಯವನ್ನೇ ಮುಖ್ಯ ಜೀವನೋಪಾಯವಾಗಿಟ್ಟುಕೊಂಡು ವ್ಯವಸಾಯದ ಮೇಲ್ವಿಚಾರಣೆನೋಡುತ್ತ ವ್ಯವಸಾಯವನ್ನು ಆಳುಗಳಿಂದ ಮಾಡಿಸಿ, ವ್ಯವಸಾಯದ ಫಲವನ್ನೆಲ್ಲಾ ಪೂರ್ಣವಾಗಿ ಪಡೆಯುವ ಎಲ್ಲಾ ಜಾತಿಯ ಜನರಿಗೂ ಅನ್ವಯಿಸುತ್ತದೆ.

ಹಕ್ಕಿಲ್ಲ. ಆದುಕಾರಣ ಆ ಪ್ರಮಾಣಕ್ಕಿಂತಲೂ ಹೆಚ್ಚು ಭೂಮಿಯನ್ನು ಕೊಡಲು ಸರ್ಕಾರದವರು ತಿರಸ್ಕರಿಸಿಬಿಡಬಹುದು. ಹೀಗೆ ತಿರಸ್ಕರಿಸುವುದು ಆಧುನಿಕರಾಜ್ಯ ಪದ್ಧತಿಗೆ ಅನುಸಾರವಾಗಿಯೇ ಇದೆ. ಪ್ರಜೆಗಳೊಳಗೆ ಬೇಸಾಯಗಾರರ ಭೂಮಿಗಳು ಬೇಸಾಯಗಾರರಲ್ಲದಿರುವವರ ಹಸ್ತಗತವಾಗುವುದನ್ನು ತಪ್ಪಿಸಲು ಸರ್ಕಾರದವರು ಖಾನೂನುಗಳನ್ನು ಏರ್ಪಡಿಸಿರುತ್ತಾರೆ. ಭೂಮಿಗಳು ಬೇಸಾಯದ ವೃತ್ತಿಯುಳ್ಳ ಜಾತಿಯವರ ಕೈತಪ್ಪಿಹೋಗದಂತೆ ಮಾಡಲು ಪಂಜಾಬಿನಲ್ಲಿ 1900 ನೇ ಇಸವಿ 17 ನೇ ನಂಬರು ಆಕ್ಟು ಏರ್ಪಟ್ಟಿದೆ. ಆ ಜಾತಿಯವರೊಳಗೆ ಒಬ್ಬರಿಂದ ಮತ್ತೊಬ್ಬರಿಗೆ ಭೂಮಿಗಳು ಕ್ರಯ ಭೋಗ್ಯಾದಿಗಳಿಂದ ಹೋಗಲು ಯಾವ ಅಡ್ಡಿಯೂ ಇಲ್ಲ. ಆದರೆ ಆ ಬೇಸಾಯದ ಜಾತಿಯವರು ತಮ್ಮ ಭೂಮಿಗಳನ್ನು ಬೇಸಾಯಜಾತಿಯಲ್ಲದವರಿಗೆ ಕಲೆಕ್ಟರ ಅಪ್ಪಣೆಯಿಲ್ಲದೆ ಕ್ರಯ ಭೋಗ್ಯಾದಿಗಳನ್ನು ಮಾಡಕೂಡದು. ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿ ಜಾರಿಯಲ್ಲಿರುವ ಡೆಕನ್ ಅಗ್ರಿಕಲ್ಚರಿಸ್ಟ್ ರಿಲೀಫ್ ಆಕ್ಟ್ (ದಕ್ಷಿಣ ಬೇಸಾಯಗಾರರ ಪರಿಹಾರದ ಆಕ್ಟ್) ಎಂಬ ಖಾನೂನಿನಿಂದ ಬೇಸಾಯಗಾರರಿಗೆ ಈ ಅನುಕೂಲವು ಕಲ್ಪಿಸಿಕೊಡಲ್ಪಟ್ಟಿದೆ:—ಬೇಸಾಯಗಾರರು ಋಣಕ್ಕೆ ಬಿದ್ದು ತಮ್ಮ ಜಮೀನನ್ನು ಕಳೆದುಕೊಳ್ಳದ ಹಾಗೆ ಮಾಡಲು ಅನೇಕ ಉಪಾಯಗಳು ಕಲ್ಪಿಸಲ್ಪಟ್ಟಿವೆ. ಮತ್ತೂ ಬೇಸಾಯಗಾರರು ಹಣದ ಡಿಕ್ರಿಗಾಗಿ ದಸ್ತಗಿರಿ ಮಾಡಲ್ಪಟ್ಟು ಜೈಲಿನಲ್ಲಿರಿಸಲ್ಪಟ್ಟರೆ, ಭೂಮಿಯು ಬೇಸಾಯಮಾಡಲ್ಪಡದೆ ದೇಶದ ಧಾನ್ಯವು ಕಡಮೆಯಾಗಿ ದೇಶಕ್ಕೆ ಕೆಡಕಾಗುತ್ತದೆಂಬ ತಾತ್ಪರ್ಯದ ಮೇಲೆ ಹಣದ ಡಿಕ್ರಿಗಾಗಿ ಬೇಸಾಯಗಾರರನ್ನು ದಸ್ತಗಿರಿಯೂ ಮಾಡಕೂಡದು, ಸಿವಿಲ್ ಜೈಲಿನಲ್ಲೂ ಇರಿಸಕೂಡದೆಂದು ವಿಧಿ ಏರ್ಪಡಿಸಲ್ಪಟ್ಟಿದೆ. ಈ ಪ್ರಕಾರ ಸರ್ಕಾರದವರು ಬೇಸಾಯಗಾರರನ್ನೇ ಭೂಮಾಲೀಕರನ್ನಾಗಿ ಮಾಡಲು ಖಾನೂನುಗಳ ಮೂಲಕ ತೊಡಗಿರುತ್ತಾರೆ. ಆದುಕಾರಣ ಬೇಸಾಯಗಾರರೆಲ್ಲರಿಗೂ ಆಗುವಷ್ಟು ಒಳ್ಳೆಯ ಭೂಮಿಗಳು ಹೇರಳವಾಗಿಲ್ಲದಿದ್ದಲ್ಲಿ ತನ್ನ ಸಂಸಾರಕ್ಕೆ ಅವಶ್ಯಕವಾಗಿ ಬೇಕಾಗುವುದಕ್ಕಿಂತ ಹೆಚ್ಚಿನ ಭೂಮಿಯನ್ನು ಯಾವನಿಗೂ ಕೊಡದೆ ಸರ್ಕಾರದವರು ನ್ಯಾಯವಾಗಿ ತಿರಸ್ಕರಿಸಿಬಿಡಬಹುದು. ಮುಫತ್ತಾಗಿಯೂ, ಮತ್ತೂ ಹರಾಜು ಅಥವಾ ಖುಷ್ ಖರೀದಿಗಳ ಮೂಲಕವಾಗಿಯೂ ಈ ಎರಡು ವಿಧವಾಗಿ ಸರ್ಕಾರದವರು 'ಏ' ಮತ್ತೂ 'ಬಿ' ಎಂಬ ಪಟ್ಟಿಗಳ ಪ್ರಕಾರ ಭೂಮಿಗಳನ್ನು ಸಾಗುವಳಿಗೆ ಕೊಡುತ್ತಾರೆ. ಮುಫತ್ತಾಗಿ ಸಾಗುವಳಿಗೆ ಕೊಡತಕ್ಕ ಭೂಮಿಗಳೆಲ್ಲವೂ ಕೃಷಿಗೆ ಹದವಾಗದಿರುವ ಬಂಜರುಭೂಮಿಗಳಾಗಿರುತ್ತವೆ. ಕ್ರಯಕ್ಕೆ ಕೊಡತಕ್ಕವುಗಳು ಫಲವತ್ತಾದ ಭೂಮಿಗಳಾಗಿವೆ. ಈ ಭೂಮಿಗಳು ಸರ್ಕಾರದವರು ಹೊಸದಾಗಿ ಕಟ್ಟಿಸಿದ ಜಲಾಶಯಗಳ ನೀರಿನಿಂದ ತರೀ ಸಾಗುವಳಿಗೆ ತರಲ್ಪಟ್ಟವುಗಳಾದರೆ ಇವುಗಳನ್ನು ಸಣ್ಣ ಕ್ಷೇತ್ರಗಳನ್ನಾಗಿ ವಿಂಗಡಿಸಿ ಬೇಸಾಯಗಾರರಿಗೆ ಖುಷ್ ಖರೀದಿಗೆ ಕೊಡುವುದುಂಟು. ಹಾಗಲ್ಲದೆ ಹರಾಜನ್ನು ಮಾಡುವುದಾದರೆ ಪೋಟಾಪೋಟಿಯ ಮೇಲೆ ಇವುಗಳು ಐಶ್ವರ್ಯವಂತರಿಗೆ ಸೇರಿಹೋಗುತ್ತವೆಯೇ ಹೊರತು ಬಡವೈತರಿಗೆ ಸೇರುವ ಸಂಭವವೇ ಇರುವುದಿಲ್ಲ. ಹೊಸದಾಗಿ

ತರೀ ಸಾಗುವಳಿಗೆ ತರಲ್ಪಟ್ಟ ಜಮೀನುಗಳನ್ನು ಸರ್ಕಾರದವರು ವಿನಿಯೋಗಮಾಡು ತ್ತಾರೆಂಬ ವಾರ್ತೆಯುಂಟಾದುದನ್ನು ಕೇಳುವ ಸುತ್ತುಮುತ್ತಿನ ಬೇಸಾಯಗಾರರು ಸರ್ಕಾರಕ್ಕೆ ಈ ಪ್ರಕಾರ ಅರ್ಜಿಯನ್ನು ಬರೆದುಕೊಳ್ಳಬಹುದು:—

"ಮಧುರೆಯ ಡಿಸ್ಟ್ರಿಕ್ಟಿನ ಮಾನನೀಯರಾದ ಕಲೆಕ್ಟರವರ (ಡೆಪ್ಯುಟಿ ಕಮಿಷನರವರ) ಸನ್ನಿಧಾನಂಗಳಿಗೆ.

ಮಧುರೆಯ ತಾಲ್ಲೂಕಿನ . . . . . . ಗ್ರಾಮಗಳ ಕೆಳಗೆ ರುಜೂ ಮಾಡಿರುವ ರೈತರ ವಿನಯಪೂರ್ವಕವಾದ ಪ್ರಾರ್ಥನೆಯೇನೆಂದರೆ:—

ಇದೇ ತಾಲ್ಲೂಕಿನಲ್ಲಿ ಸರ್ಕಾರದವರು ಹೊಸದಾಗಿ ಕಟ್ಟಿಸಿರುವ ಹೆಸರಿನ ಕೆರೆ (ಕಾಲ್ವೆ) ಯ ನೀರಿನಿಂದ ತರೀ ಸಾಗುವಳಿಯಾಗತಕ್ಕ ಭೂಮಿಗಳನ್ನು ಸರ್ಕಾರದವರು ಸಾಗುವಳಿಗೆ ವಿನಿಯೋಗಮಾಡುತ್ತಾರೆಂಬುದು ಪ್ರಾರ್ಥಕರಿಗೆ ತಿಳಿದು ಬಂದಿದೆ. ಪ್ರಾರ್ಥಕರಾದರೋ ಆ ಭೂಮಿಗಳ ಅಜೂಬಾಜುಗಳ ಗ್ರಾಮಗಳಲ್ಲಿರುವ ಬೇಸಾಯಗಾರರಾಗಿರುತ್ತಾರೆ. ಇವರು ಸುಮಾರು . . . . . ಕುಟುಂಬಗಳಿಗೆ ಸೇರಿದವರಾಗಿರುತ್ತಾರೆ. ಈ ಕುಟುಂಬಗಳೊಳಗೆ ಶೇಕಡ . . . . . ಕುಟುಂಬಗಳಿಗೆ ಸ್ವಂತ ಜಮೀನುಗಳಿಲ್ಲದೆ ಇತರರ ಜಮೀನುಗಳನ್ನು ಗೇಣಿದಾರರಂತೆ ಸಾಗುವಳಿಯನ್ನು ಮಾಡತಕ್ಕವರಾಗಿದ್ದಾರೆ. ಮತ್ತೂ ಈ ಒಟ್ಟು ಕುಟುಂಬದವರೊಳಗೆ ಬಹು ಅಲ್ಪ ಸಂಖ್ಯೆಯವರಿಗೆ ಮಾತ್ರ ತರೀ ಜಮೀನುಗಳಿರುತ್ತವೆ. ಅದುಕಾರಣ ಈಗ ಹೊಸದಾಗಿ ವಿನಿಯೋಗವಾಗುವ ಜಮೀನುಗಳೊಳಗೆ ತಂತಮ್ಮ ಸಂಸಾರದ ಜೀವನಕ್ಕೂ, ಸಾಗುವಳಿಮಾಡಲು ತಮಗಿರುವ ಶಕ್ತಿಗೂ ತಕ್ಕಷ್ಟು ಭೂಮಿಗಳನ್ನು ಖಾಯಂ ಹಿಡುವಳಿಗಾಗಿ ಸಂಪಾದಿಸಿಕೊಳ್ಳಬೇಕಾದುದು ಸದರಿ ರೈತರಿಗೆ ಅವಶ್ಯಕವಾಗಿದೆ. ಈ ಭೂಮಿಗಳನ್ನು ಹರಾಜಿನಲ್ಲಿ ಕೊಂಡುಕೊಳ್ಳಲು ಅನೇಕ ಶ್ರೀಮಂತರು ಹಣವನ್ನು ಒದಗಿಸಿಕೊಂಡು ಸಿದ್ಧರಾಗಿದ್ದಾರೆ. ಈ ಭೂಮಿಗಳನ್ನು ಸರ್ಕಾರದವರು ಹರಾಜನ್ನು ಮಾಡುವುದಾದರೆ ಪ್ರಾರ್ಥಕರಾದ ಬಡ ರೈತರಿಗೆ ಆ ಶ್ರೀಮಂತರೊಡನೆ ಸ್ಪರ್ಧಿಸಲು ಸುತರಾಂ ಶಕ್ತಿ ಇಲ್ಲವಾಗಿ ಆ ಜಮೀನುಗಳು ಆ ಶ್ರೀಮಂತರಿಗೆ ಸೇರಿಹೋಗುತ್ತವೆ; ಬೇಸಾಯಗಾರರಿಗೆ ಸೇರುವ ಸಂಭವವು ಸ್ವಲ್ಪವೂ ಇಲ್ಲ. ಮತ್ತೂ ಆ ಶ್ರೀಮಂತರಾದರೋ ಜಮೀನಿರುವ ಸ್ಥಳಗಳಲ್ಲಿ ವಾಸಮಾಡುವವರಲ್ಲ; ಭೂವ್ಯವಸಾಯವು ಅವರ ಮುಖ್ಯ ಜೀವನೋಪಾಯವೂ ಅಲ್ಲ. ಅವರೆಲ್ಲರೂ ಪಟ್ಟಣಗಳಲ್ಲಿ ವಾಸಮಾಡಿಕೊಂಡು ವ್ಯಾಪಾರ, ಸರ್ಕಾರಿ ಕೆಲಸ ಮೊದಲಾದ ಇತರ ವೃತ್ತಿಗಳಲ್ಲಿ ಇರತಕ್ಕವರಾಗಿದ್ದಾರೆ. ಅವರಿಗೆ ಜಮೀನುಗಳು ಸೇರಿದರೂ ಸಹ ಅವರು ಅವುಗಳನ್ನು ಪ್ರಾರ್ಥಕರಿಂದಲೇ ವ್ಯವಸಾಯಮಾಡಿಸಬೇಕು; ಖಾಯಂ ಹಿಡುವಳಿಗೆ ಕೊಡತಕ್ಕವರಾಗಿಲ್ಲ. ವಾರ, ಗುತ್ತಿಗೆ, ಗೇಣಿ ಮೊದಲಾದ ವ್ಯವಹಾರಗಳ ಮೇಲೆ ರೈತರ ಮೇಲಾಟದ ಮೂಲಕ ಅವರಿಂದ ವ್ಯವಸಾಯಮಾಡಿಸಿ ಲಾಭವನ್ನು ಪಡೆಯತಕ್ಕವರಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಭೂಮಿಯ ಬೆಳುವಳಿಗೆ ಹೆಚ್ಚಾಗದೆ ದೇಶಕ್ಕೆ ಅಹಿತವುಂಟಾಗುತ್ತೆಂಬುದು ಸರ್ಕಾರಕ್ಕೆ ವೇದ್ಯವೇ ಆಗಿರುತ್ತದೆ. ಅದುಕಾರಣ ಸರ್ಕಾರವನ್ನು ಪ್ರಾರ್ಥಕರು ಬೇಡಿಕೊಳ್ಳುವುದೇನೆಂದರೆ:—ಸರ್ಕಾರದವ

ರು ಈಗ ವಿನಿಯೋಗಮಾಡಬೇಕೆಂದಿರುವ ಪ್ರದೇಶವನ್ನು ಬೇಸಾಯಗಾರರ ಪ್ರತಿ ಕುಟುಂಬವು ಸಾಗುವಳಿ ಮಾಡಶಕ್ಯವಾದ, 1 ರಿಂದ 5 ಯಕರೆಯ ಪರಿಮಾಣದ ಸಣ್ಣ ಸಣ್ಣ ಕ್ಷೇತ್ರಗಳನ್ನಾಗಿ ವಿಭಾಗಿಸಿ, ಆ ಕ್ಷೇತ್ರಗಳನ್ನು ಸದರಿ ಬೇಸಾಯಗಾರರಲ್ಲಿ ಸುಲಭವಾದ ಖುಷ್ ಖರೀದಿಗೆ ದಯಮಾಡಿ ಹಂಚಿಕೊಡಬೇಕಲ್ಲದೆ, ಕ್ರಯದ ಮೊಬಲಗನ್ನು ಕಂತುಗಳಲ್ಲಿ ವಸೂಲಿ ಮಾಡಿಕೊಳ್ಳುವುದೂ, ಮೊದಲಿನ ಹತ್ತು ವರ್ಷ ಸುಲಭವಾದ ಕಂದಾಯವನ್ನು ಹಾಕುವುದೂ ಈ ಸೌಕರ್ಯಗಳನ್ನೂ ಸಹ ಕಲ್ಪಿಸಿಕೊಟ್ಟು ಪ್ರಾರ್ಥಕರಾದ ಬೇಸಾಯಗಾರರನ್ನು ಉದ್ಧಾರಮಾಡಬೇಕೆಂದು ಕೆಳಗೆ ರುಜೂ ಮಾಡಿರುವವರು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತಾರೆ.

ಸಿದ್ದೇಗೌಡನ ರುಜು,

ತಾ|| ರಾಮೇಗೌಡನ ರುಜು,

"

* * * *

ಆದರೆ ಬೇಸಾಯಗಾರರಲ್ಲದವರು ಭೂಮಾಲೀಕರಾಗಿದ್ದರೆ, ಅಥವಾ ಅವರವರ ಸಂಸಾರದ ಜೀವನಕ್ಕೆ ತಕ್ಕಷ್ಟಕ್ಕಿಂತಲೂ ಹೆಚ್ಚಾಗಿ ಭೂಮಿಯನ್ನು ಜನರಿಗೆ ಕೊಟ್ಟರೆ, ಭೂವ್ಯವಸಾಯವು ಯಾವಾಗಲೂ ಅಭಿವೃದ್ಧಿಯಾಗುವುದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ನಾಗರಿಕ ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಇದಕ್ಕೆ ವಿಪರ್ಯಸ್ತವಾದ ಹೇಳಿಕೆಯೇ ಸತ್ಯವಾದುದಾಗಿರುತ್ತದೆ. ಆ ಸ್ಥಳಗಳಲ್ಲಿ ಭೂಮಿಗಳು ಬೇಸಾಯಗಾರರಲ್ಲದ ಇತರರಿಗೆ ಸೇರಿರುವುದು, ಭೂಮಾಲೀಕರಲ್ಲಿ ತಮ್ಮ ಸ್ವಂತ ಜೀವನಕ್ಕೆ ಬೇಕಾಗುವಷ್ಟಕ್ಕಿಂತ ಅತ್ಯಧಿಕವಾದ ಭೂಮಿಯಿರುವುದು ಈ ಸಂದರ್ಭಗಳು ಅಧಿಕ ಫಲೋತ್ಪಾದಕವಾದ ಭೂವ್ಯವಸಾಯಕ್ಕೂ, ಅಧಿಕ ಫಲೋತ್ಪತ್ತಿಗೂ ಕಾರಣವಾಗಿ ಪರಿಣಮಿಸಿವೆ. ಹೇಗೆಂದರೆ, ನಮ್ಮ ದೇಶದ ಬೇಸಾಯಗಾರರ ಸಾಧಾರಣ ವ್ಯವಸಾಯರೀತ್ಯಾ ಉತ್ಕೃಷ್ಟವಾದ ಭೂಮಿಯಿಂದಲೂ ಅವರು ಹೆಚ್ಚಾಗಿ ಬೆಳೆಯಲಾರರು. ಫಲಹೀನವಾದ ಭೂಮಿಗಳಲ್ಲಾದರೋ ಅಂತಹ ಬೇಸಾಯದಿಂದಾಗುವ ಫಲವು ಅತ್ಯಲ್ಪವಾಗಿರಲೇಬೇಕು. ಫಲದಾಯಕವಾದ ಸಾಮಗ್ರಿಗಳಾದ ಗೊಬ್ಬರ, ನೀರು ಮೊದಲಾದುವುಗಳನ್ನು ಭೂಮಿಗೆ ಸೇರಿಸುವುದು, ಫಲಪ್ರದವಾದ ರೀತಿಯಲ್ಲಿ ಉಳುವ, ಬಿತ್ತುವ, ಹರಗುವ ಯಂತ್ರಗಳಿಂದ ಭೂವ್ಯವಸಾಯವನ್ನು ಮಾಡುವುದು ಈ ಉಪಾಯಗಳಿಂದ ಸಮಸ್ತವಿಧದ ಭೂಮಿಗಳನ್ನು ವಿಶೇಷ ಫಲವತ್ತಾಗಿ ಮಾಡಿಕೊಂಡು, ಅವುಗಳಿಂದ ದಶಗುಣವಾಗಿ ಬೆಳೆಯನ್ನು ಬೆಳೆಯ ಬಹುದು. ಗೊಬ್ಬರ ನೀರು ಮೊದಲಾದ ಸಾಮಗ್ರಿಗಳನ್ನು ಭೂಮಿಗೆ ಬಹುದೂರದಿಂದ ತರಬೇಕಾಗುತ್ತದೆ. ಅದಕ್ಕಾಗಿ ರಸ್ತೆಗಳನ್ನೂ ರೈಲುಗಳನ್ನೂ ಮಾಡಬೇಕಾಗುತ್ತದೆ. ಯಂತ್ರ ಮೊದಲಾದ ಸಾಧನಗಳಾದರೋ, ಬಹುಮೂಲ್ಯವತ್ತಾದುವುಗಳು. ಇವುಗಳಿಗಾಗಿ ದ್ರವ್ಯ ವ್ಯಯಮಾಡಬೇಕಾದರೆ, ಶ್ರೀಮಂತರಿಗೆ ಸಾಧ್ಯವೇ ಹೊರತು ಬೇಸಾಯಗಾರರು ಮಾತ್ರದವರಿಗೆ ಎಂದಿಗೂ ಸಾಧ್ಯವಲ್ಲ. ಇಂತಹ ಸಾಧನಗಳಿಂದ ಭೂವ್ಯವಸಾಯವನ್ನು ಮಾಡಬೇಕಾದರೆ ಐನೂರು ಸಾವಿರ ಯಕರೆ ಪರಿಮಾಣದಂತಷ್ಟು ವಿಸ್ತಾರದ ಭೂಮಿಯು ಅವಶ್ಯಕವು.

ಸಣ್ಣ ಸಣ್ಣ ಜಮೀನುಗಳಿಗೆ ಆ ಸಾಧನಗಳನ್ನು ಪಯೋಗಿಸಿದರೆ ಅವುಗಳಿಗೆ ತಗಲಿರುವ ವೆಚ್ಚವೂ ಸಹ ಆ ಜಮೀನಿನ ಉತ್ಪತ್ತಿಯಿಂದ ಏಳುವುದಿಲ್ಲ. ಇಷ್ಟು ದೊಡ್ಡದೊಡ್ಡ ವಿಸ್ತಾರವಾದ ಜಮೀನುಗಳಿಂದ ಎಷ್ಟೋ ಅಧಿಕಗುಣವಾಗಿ ಬೆಳೆಯಾಗಲು ಆ ಸಾಧನಗಳು ಸಹಕಾರಿಯಾಗುತ್ತವಲ್ಲದೆ, ಮತ್ತೊಂದೀಗುಣವು ಸ್ಥೂಲಪರಿಮಾಣದ ವ್ಯವಸಾಯದಲ್ಲಿ ಇರುತ್ತದೆ. ಹೇಗೆಂದರೆ, ಕಾರ್ಯದ ವಿಭಾಗ, ಪ್ರವಿಭಾಗ, ಪ್ರಪ್ರವಿಭಾಗಗಳ ದೆಶೆಯಿಂದ ಶತ ಸಹಸ್ರ ಗುಣವಾಗಿ ಫಲೋತ್ಪಾದನೆಯಾಗುತ್ತದೆಂಬುದು ಅರ್ಥಶಾಸ್ತ್ರದಿಂದ ನಿರ್ಧರಿತವಾದ ವಿಷಯವಾಗಿದೆ. ಉದಾಹರಣೆ :—ಐವತ್ತು ಜನರೊಳಗೆ ಪ್ರತಿಯೊಬ್ಬನೂ ಒಂದೊಂದು ಪೆಟ್ಟಿಗೆಯನ್ನು ಒಬ್ಬನ ಸಹಾಯವು ಮತ್ತೊಬ್ಬನಿಗಿಲ್ಲದೆ ಮಾಡತೊಡಗುವನು. ಹೀಗೆ ಮಾಡುವುದರಿಂದ ಅವರು 5 ದಿವಸದಲ್ಲಿ ತಲೆಗೊಂದು ಪೆಟ್ಟಿಗೆಯಂತೆ 50 ಪೆಟ್ಟಿಗೆಗಳನ್ನು ಮಾಡಿ ಪೂರಯಿಸುತ್ತಾರೆ. ಪೆಟ್ಟಿಗೆಯ ಕೆಲಸದಲ್ಲಿ ವಿಧವಿಧವಾದ ಅನೇಕ ಕೆಲಸಗಳು ಅಂತರ್ವರ್ತಿಯಾಗಿವೆ. ಮರವನ್ನು ಕೊಯ್ಯುವುದು, ಕತ್ತರಿಸುವುದು, ಹತ್ತರಿ ಹಿಡಿಯುವುದು, ಅಂಚುಕಟ್ಟುವುದು, ಕಾಲುಗಳನ್ನು ಮಾಡುವುದು. ತಳವನ್ನೂ ಪಕ್ಕಗಳನ್ನೂ ಮುಚ್ಚಳವನ್ನೂ ಮಾಡುವುದು ಇವುಗಳನ್ನೆಲ್ಲಾ ಒಟ್ಟುಗೂಡಿ ಪೆಟ್ಟಿಗೆಯನ್ನು ನಿರ್ಮಾಣಮಾಡುವುದು. ಈ ಪ್ರಕಾರ ಎಷ್ಟೋ ವಿಧದ ಕೆಲಸಗಳಿವೆ. ಇವು 50 ವಿಧದ ಕೆಲಸಗಳೆಂದು ಇಟ್ಟುಕೊಳ್ಳುವ. ಆ 50 ಜನ ಪ್ರತಿಯೊಬ್ಬರೂ ಮೊದಲಿನಂತೆ ಈ 50 ವಿಧದ ಕೆಲಸಗಳನ್ನೆಲ್ಲಾ ಮಾಡತೊಡಗದೆ ಆ 50 ಕೆಲಸಗಳ ಪೈಕಿ ಒಂದೊಂದೇ ಕೆಲಸವನ್ನು ಒಬ್ಬೊಬ್ಬನು ಮಾಡಹತ್ತಿದರೆ, ಅವರು 5 ದಿವಸದಲ್ಲಿ ಬಹುಶಃ 200 ಪೆಟ್ಟಿಗೆಗಳನ್ನು ಮಾಡಬಲ್ಲರು ಅಥವಾ 50 ಪೆಟ್ಟಿಗೆಗಳನ್ನೆಲ್ಲಾ ಅವರು 1 ದಿವಸದಲ್ಲೇ ಮಾಡಿ ಪೂರಯಿಸುವರು. ಹೀಗೆ ವಿಭಾಗಿತ ಕಾರ್ಯಗಳನ್ನು ಮಾಡಲು ಅನೇಕರು ತೊಡಗಬೇಕಾದ ಕಾರ್ಯವಾದರೊ ಬಹಳ ದೊಡ್ಡದಾಗಿರಬೇಕು. ಒಂದೇ ಒಂದು ಪೆಟ್ಟಿಗೆಯು ಮಾತ್ರ ಬೇಕಾಗಿ ಅದನ್ನು 50 ಜನರು ಮಾಡ ಹತ್ತಿದರೆ, ಆಪ್ಟೊ ಅಷ್ಟು ನಷ್ಟವೇ ಹೊರತು ಆದಾಯವಿಲ್ಲ. ಇಂತಹ ವಿಭಾಗಿತಕಾರ್ಯಸಾಧನದ ಫಲದಾಯಕತ್ವವು ಬೇಸಾಯದ ಕಾರ್ಯದಲ್ಲೂ ಇದೇ ಮೇರೆ ಉಂಟಾಗುತ್ತದೆ. ನೂರು ಜನ ರೈತರು ಪ್ರತಿಯೊಬ್ಬರೂ ಒಂದೊಂದು ಯಕರೆಯಲ್ಲಿ ವ್ಯವಸಾಯಸಂಬಂಧವಾದ ಪ್ರತಿವಿಧದ ಕೆಲಸಗಳನ್ನೂ ಒಬ್ಬೊಬ್ಬನೇ ಮೊದಲಿಂದ ಕೊನೆಯವರೆಗೂ ಮಾಡಿ, ಅವರು ತಲಾ ಒಂದೊಂದು ಪಲ್ಲದಂತೆ 100 ಪಲ್ಲವನ್ನು ಬೆಳೆಯ ಬಹುದು. ಹೀಗಲ್ಲದೆ ಆ 100 ಯಕರೆಯನ್ನು ಒಟ್ಟು ಗೂಡಿಸಿ ಅವರೆಲ್ಲರೂ ಒಟ್ಟುಗೂಡಿ, ವ್ಯವಸಾಯ ಸಂಬಂಧವಾದ ಅನೇಕ ವಿಧದ ಕೆಲಸಗಳ ಪೈಕಿ ಒಂದೊಂದು ವಿಧದ ಕೆಲಸವನ್ನು ಒಬ್ಬೊಬ್ಬನೇ ಅಥವಾ, ಒಂದೊಂದನ್ನೇ ಎಲ್ಲರೂ ಒಟ್ಟಿಗೇ ಅಥವಾ, ಭೂವ್ಯವಸಾಯಕ್ಕೆ ತಕ್ಕ ಇತರ ಕಾಲವಿಭಾಗ ಕಾರ್ಯವಿಭಾಗಗಳನ್ನನುಸರಿಸಿ ಅನ್ಯೋನ್ಯ ಸಹಕಾರಿತೆಯಿಂದ ಕಾರ್ಯಮಾಡಿದರೆ ಬಹುಶಃ 500 ಪಲ್ಲಾ ಧಾನ್ಯವನ್ನು ಬೆಳೆಯಬಹುದು. ವಿಶೇಷ ವಿಸ್ತಾರದ ಭೂಮಿಯನ್ನು ವ್ಯವಸಾಯ ಮಾಡುವಲ್ಲಿ ಮಾತ್ರ ಈ ಕಾರ್ಯವಿಭಾಗಸಹಕಾರಿತೆಗಳು ಉಪಯೋಗಕ್ಕೆ ಬರುತ್ತವೆ.

ಮೇಲೆ ಏನು ಹೇಳಿದಂತಾಯಿತೆಂದರೆ:—ವ್ಯವಸಾಯಕ್ಕಾಗಿ ದ್ರವ್ಯವನ್ನು ವ್ರಯ ಮಾಡುವ ಶ್ರೀಮಂತರಲ್ಲಿ ಅವರ ಸ್ವಂತ ಜೀವನಕ್ಕೆ ಬೇಕಾಗುವಷ್ಟಕ್ಕಿಂತಲೂ ಅತ್ಯಧಿಕ ವಿಸ್ತಾರದ ಭೂಮಿಯು ಇದ್ದರೆ ಅವರು ಅದರಲ್ಲಿ ವಿಶೇಷ ಬೆಳೆಯನ್ನು ತೆಗೆಯುತ್ತಾರಾಗಿ ಅದು ದೇಶಕ್ಕೆ ಹಿತಕರವಾಗಿರುತ್ತದೆ. ಮತ್ತೂ ವಿಶೇಷ ದ್ರವ್ಯವ್ಯಯದಿಂದ ಕೂಡಿದ ಸಾಧನಸಾಮಗ್ರಿಗಳು ವ್ಯವಸಾಯಕ್ಕಾಗಿ ಸಾಧಕವಾಗಬೇಕಾದರೆ ವಿಶೇಷ ವಿಸ್ತಾರದ ಭೂಮಿಯು ಬೇಕಾಗುತ್ತದೆ. ಮತ್ತೂ ವಿಶೇಷ ವಿಸ್ತಾರದ ಭೂಮಿಯನ್ನು ವ್ಯವಸಾಯಮಾಡುವುದರಲ್ಲಿ ವಿಭಾಗಿತಕಾರ್ಯಕರಣದ ಫಲವೂ ಸಹ ಉಂಟಾಗುತ್ತದೆ. ಬೇಸಾಯಗಾರರು ಮಾತ್ರದವರು ನಿರ್ಧನಿಕರಾಗಿಯೂ, ಇತರ ವೃತ್ತಿಯವರು ಧನಿಕರಾಗಿಯೂ ಇರುವುದರಿಂದ ಬೇಸಾಯಗಾರರಲ್ಲದಿರುವವರಿಗೂ ಭೂಮಿಗಳನ್ನು ಕೊಡುವುದು, ಮತ್ತೂ, ಅತ್ಯಂತ ವಿಸ್ತಾರವಾದ ಭೂಮಿಯಲ್ಲಿ ಮಾತ್ರ ಅತ್ಯಂತ ಫಲದಾಯಕಗಳಾದ ಸಾಧನಸಾಮಗ್ರಿಗಳೂ, ಕಾರ್ಯವಿಭಾಗತೆಯೂ ಸಾಧಕವಾಗುವುದರಿಂದ ಧನಿಕರಿಗೆ ವಿಶೇಷ ಭೂಮಿಯನ್ನು ಕೊಡುವುದು ಸಹ ಮೇಲೆ ವಿವರಿಸಿರುವ ಸಂದರ್ಭಗಳಲ್ಲಿ ಭೂಮಿಯು ಹೆಚ್ಚಿನ ಉತ್ಪತ್ತಿಗೆ ಕಾರಣವಾಗಿರುತ್ತವೆಯಾಗಿ, ದೇಶಕ್ಕೆ ಹಿತಕರವಾದುವುಗಳಾಗಿರುತ್ತವೆ.

ಈ ಪ್ರಕಾರ ವ್ಯವಸಾಯಕ್ಕಾಗಿ ದ್ರವ್ಯವ್ಯಯಮಾಡಲು ಹಿಂದೆಗೆಯದಿದ್ದ ಶ್ರೀಮಂತರು ಭೂಸ್ವಾಮಿಗಳಾದರೆ, ದೇಶದ ಜನರಿಗೆಲ್ಲಾ ಸಾಕಾಗುವಷ್ಟು ಧಾನ್ಯ ಅತ್ಯಂತ ಫಲವತ್ತಾದ ಭೂಮಿಗಳಲ್ಲೇ ಬೆಳೆಯಬಹುದು ಪ್ರಜೆಗಳೊಳಗೆ ಸ್ವಲ್ಪ ಜನರು ಮಾತ್ರ ವ್ಯವಸಾಯದಲ್ಲಿ ಉದ್ಯುಕ್ತರಾದರೆ ಸಾಕು. ಕಾಡುಮೇಡು ಭೂಮಿಗಳ ವ್ಯವಸಾಯದಲ್ಲಿ ಉದ್ಯುಕ್ತರಾಗಿರುವ ಲಕ್ಷಾಂತರ ಜನರು ನಿಸ್ಸಾರವಾದ ಆ ವ್ಯವಸಾಯವನ್ನು ಬಿಟ್ಟು ಸುಖದಾಯಕವಾದ ಕೈಗಾರಿಕೆಯ ಕೆಲಸದಲ್ಲಿ ಉದ್ಯುಕ್ತರಾಗಬಹುದು. ಹಾಗೆ ಉದ್ಯುಕ್ತರಾಗಿ ದೇಶದ ಜನರಿಗೆ ಬೇಕಾಗುವಷ್ಟು ಬಟ್ಟೆ ಮೊದಲಾದ ಸುಖದಾಯಕ ಪದಾರ್ಥಗಳನ್ನು ದೇಶದಲ್ಲೇ ಮಾಡಬಹುದು. ದೇಶಕ್ಕಾಗಿ ಮಿಕ್ಕ ಆ ಪದಾರ್ಥಗಳನ್ನು ಧಾನ್ಯವು ವಿಶೇಷವಾಗಿ ಬೆಳೆಯುವ ಇತರ ದೇಶಗಳಿಗೆ ಸಾಗಿಸಿ ಅವುಗಳಿಗೆ ಬದಲಾಗಿ ಅಲ್ಲಿಂದ ಧಾನ್ಯವನ್ನು ತೆಗೆದುಕೊಂಡು ಬರಬಹುದು. ಇಂಗ್ಲೀಷರು ಆಚರಿಸುತ್ತಿರುವ ವಿಧಾನವು ಇದೇ ಆಗಿರುತ್ತದೆ. ಅವರು ಸುಖಸಾಧನಪದಾರ್ಥಗಳನ್ನು ನಿರ್ಮಿಸಿ, ಅವುಗಳನ್ನು ಇತರ ದೇಶದವರಿಗೆ ಕೊಟ್ಟು, ಆ ಇತರ ದೇಶದವರಿಂದ ಆಹಾರಪದಾರ್ಥಗಳನ್ನು ಕೊಸಿಕೊಳ್ಳುತ್ತಿದ್ದಾರೆ. ಈಗ ಇಂಡಿಯಾ ದೇಶೀಯರಾದ ನಾವು ಆಚರಿಸುತ್ತಿರುವುದು ಹೇಗೆಂದರೆ, ನಮ್ಮ ಉದರಪೂರ್ತಿಗೇ ಸಾಲದಷ್ಟು ನಾವು ಬೆಳೆಯುವ ಧಾನ್ಯದೊಳಗೇ ಕೆಲ ಭಾಗವನ್ನು ಇತರ ದೇಶೀಯರಿಗೆ ಮಾರಿ ಇತರ ದೇಶೀಯರಿಂದ ಸುಖಸಾಧನ ಪದಾರ್ಥಗಳಾದ ಬಟ್ಟೆ ಮೊದಲಾದುವುಗಳನ್ನು ಕೊಂಡುಕೊಳ್ಳುತ್ತಿದ್ದೇವೆ. ಸುಖಸಾಧನಪದಾರ್ಥಗಳ ಉತ್ಪಾದನೆಗೆ ಇಂಡಿಯ ದೇಶದಲ್ಲಿ ಸಾಧನಸಂಪತ್ತಿಗಳಿಲ್ಲದಿದ್ದಲ್ಲಿ, ಅವುಗಳ ಉತ್ಪಾದನೆಯನ್ನು ಇತರ ದೇಶೀಯರಿಗೇ ಬಿಟ್ಟು ಆಹಾರ ಬೆಳೆಯುವುದರಲ್ಲೇ ಇನ್ನೂ ಹೆಚ್ಚು ಜನ ಉದ್ಯುಕ್ತರಾಗಿ, ದೇಶ

ಕ್ಕೆಲ್ಲ ಸಾಗಿ ಮಿಗುವಷ್ಟು ಧಾನ್ಯವನ್ನೇ ಬೆಳೆದು ಮಿಕ್ಕುದನ್ನು ಇತರ ದೇಶೀಯರಿಗೆ ಕೊಟ್ಟು ಸುಖಸಾಧನ ಪದಾರ್ಥಗಳನ್ನು ವಿನಿಮಯವಾಗಿ ತೆಗೆದುಕೊಳ್ಳಲೂ ಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿನಂತೆ ಇಂಡಿಯ ದೇಶದಲ್ಲೂ, ಬೇಸಾಯಗಾರರಲ್ಲದ ಭೂಸ್ವಾಮಿಗಳು, ಅಥವಾ ಅವಶ್ಯಕತೆಗಿಂತಲೂ ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳುವವರು ವ್ಯವಸಾಯಕ್ಕಾಗಿ ದ್ರವ್ಯವ್ಯಯಮಾಡುತ್ತಾರೆಯೆ ಎಂಬುದನ್ನು ನಾವು ಇಲ್ಲಿ ವಿಚಾರಮಾಡಬೇಕು. ವಿಶೇಷವಾಗಿ ಭೂಮಿಯನ್ನು ಅಪೇಕ್ಷಿಸುವವರು ಸಾಧಾರಣವಾಗಿ ಉಪಪನ್ನರಾಗಿಯೇ ಇದ್ದಾರೆ. ಇಂತಹರು ವ್ಯವಸಾಯಾಭಿವೃದ್ಧಿಗಾಗಿ ಸಾಧಾರಣ ರೈತರಿಗಿಂತ ಹೆಚ್ಚು ಹಣವನ್ನು ವೆಚ್ಚಮಾಡುವುದಾಗಿದ್ದರೆ ಹೆಚ್ಚು ಭೂಮಿಯನ್ನು ಹೊಂದಲು ಅವರು ಅರ್ಹರೇ ಸರಿ; ಹಾಗಿಲ್ಲದಿದ್ದರೆ ಅರ್ಹರಲ್ಲ. ಆದರೆ ಅದಕ್ಕಾಗಿ ಹಣವನ್ನು ವೆಚ್ಚಮಾಡುವಂತೆ ಅವರನ್ನು ನಿರ್ಬಂಧಿಸುವುದೂ ಕಠಿಣ; ಮತ್ತು ಹಾಗೆ ವೆಚ್ಚಮಾಡದಿದ್ದರೆ ಅವರಿಂದ ಹೆಚ್ಚು ಭೂಮಿಗಳನ್ನು ವಾಪಸ್ಸು ತೆಗೆದುಕೊಳ್ಳುವುದೂ ಕಠಿಣ. ಹೆಚ್ಚು ಭೂಮಿಯನ್ನು ಇಟ್ಟುಕೊಂಡಿರುವವರು ಸಾಧಾರಣವಾದ ರೈತರಿಗಿಂತ ಹೆಚ್ಚು ಹಣವನ್ನು ವ್ಯವಸಾಯಕ್ಕಾಗಿ ಖರ್ಚುಮಾಡುವಂತೆ ಮಾಡಲು ನಿರ್ಬಂಧನೆಂದೆಣಿಸದ ಸಾಧಕವಾದ ಉಪಾಯವೊಂದಿದೆ; ಯಾವುದೆಂದರೆ:—“ಒಂದು ಸಂಸಾರದ ಜೀವನಕ್ಕೆ ಎಷ್ಟು ಭೂಮಿ ಬೇಕೋ ಆ ಭೂಮಿಗೆ ಬಹು ಸ್ವಲ್ಪ ಕಂದಾಯವನ್ನು ಹಾಕುವುದು, ಅದಕ್ಕಿಂತಲೂ ಹೆಚ್ಚಿನ ಭೂಮಿಗೆ ಅಧಿಕಾಧಿಕ ಕಂದಾಯವನ್ನು ಹಾಕುವುದು.” ಮಸಲ ಒಂದು ಸಂಸಾರಕ್ಕೆ 4 ಯಕರೆ ಬೇಕಾದರೆ, ಆ 4 ಯಕರೆಗೂ ಯಕರೆ 1ಕ್ಕೆ 4 ಆಣೆಯಂತೆ ಕಂದಾಯವನ್ನು ಹಾಕುವುದು. ಆ ಕುಟುಂಬದವನ ಬಳಿ ಇರುವ ಇನ್ನು 3 ಯಕರೆಗಳಿಗೆ 8 ಆಣೆಯ ಮೇರೆಯೂ, ಇನ್ನೂ 3 ಯಕರೆ ಇದ್ದರೆ ಅವುಗಳಿಗೆ 12 ಆಣೆಯ ಮೇರೆಯೂ ಕಂದಾಯವನ್ನು ಹಾಕುವುದು. ಈ ಪ್ರಕಾರದ ಕಂದಾಯದ ಠರಾವಣೆಯಿಂದ ಉಂಟಾಗುವ ಪರಿಣಾಮ ಯಾವುದೆಂದರೆ—ತನಗೆ ಅವಶ್ಯಕವಾಗಿ ಬೇಕಾಗುವಷ್ಟಕ್ಕಿಂತ ಹೆಚ್ಚು ಜಮಿಾನನ್ನು ಇಟ್ಟುಕೊಂಡಿರುವವನು ಆ ಜಮಿಾನಿನ ವ್ಯವಸಾಯಕ್ಕೆ ತಕ್ಕಷ್ಟು ಹಣ ವೆಚ್ಚಮಾಡಿ ಹೆಚ್ಚಾಗಿ ಬೆಳೆಯಲು ಪ್ರಯತ್ನಿಸುವನು. ಹಾಗಿಲ್ಲದಿದ್ದರೆ, ಜಮಿಾನನ್ನು ಇಟ್ಟುಕೊಳ್ಳುವುದರಿಂದ ಅವನಿಗೆ ನಷ್ಟವುಂಟಾಗುತ್ತದೆಯಾಗಿ ಅವನು ಜಮಿಾನನ್ನು ಸರ್ಕಾರಕ್ಕೆ ಒಪ್ಪಿಸಿಬಿಡುವನು; ಅಥವಾ ಚೆನ್ನಾಗಿ ವ್ಯವಸಾಯಮಾಡುವ ಇತರರಿಗೆ ಕೊಟ್ಟುಬಿಡುವನು. ಹೆಚ್ಚು ಹೆಚ್ಚು ಜಮಿಾನುಗಳಿಗೆ ಹೆಚ್ಚುಹೆಚ್ಚಾಗಿ ಕಂದಾಯ ಹಾಕಿದರೆ, ಜಮಿಾನಿನಿಂದ ಸರ್ಕಾರಕ್ಕೆ ಸಲ್ಲಬೇಕಾದ ಆಯವು ಈ ಪ್ರಕಾರ ವಸೂಲಾಗುವುದರಿಂದ, ಬಡ ರೈತರು ಅನುಭವಿಸುವ ಅತಿಮಿತವಾದ ಜಮಿಾನುಗಳ ಮೇಲಿನ ಕಂದಾಯವನ್ನು ಬಹು ಕಡಮೆ ಮಾಡಬಹುದು. ಮತ್ತೂ ಅದನ್ನು ಬಿಟ್ಟೇಬಿಡುವುದು ಸಹ ಸಾಧ್ಯವೂ, ಒಂದು ವಿಧ ನ್ಯಾಯವೂ ಆಗಿರುತ್ತದೆ; ಹೇಗೆಂದರೆ, ಆದಾಯದ ತೆರಿಗೆಯ ಲೆಕ್ಕದ ಮೇರೆ ಆದಾಯದ ಮೇಲೆ ವಸೂಲ್ಮಾಡುವ ತೆರಿಗೆಯನ್ನು ವರ್ಷಕ್ಕೆ 1,000 ರೂ. ಗಿಂತ ಕಡಮೆ ಉತ್ಪತ್ತಿ ಇರುವವನಿಗೆ ಮಾಫ್ ಮಾಡಿದ್ದಾರೆ. 5 (f). ಬಹು ಭಾಗದ ರೈತರ ವರ್ಷದ

ಉತ್ಪತ್ತಿಯು 1,000 ರೂ. ನ ಹತ್ತಿರಕ್ಕೂ ಬರುವುದಿಲ್ಲ. ಇತರ ವೃತ್ತಿಯಲ್ಲಿ ಜೀವನ ಮಾಡುವವರಿಗೆ ಮೇಲೆ ಕಂಡಂತೆ ತೋರಿಸಲ್ಪಟ್ಟಿರುವ ವಿತರಣೆಯನ್ನು ರೈತರಿಗೂ ತೋರಿಸಲ್ಪಡುವುದು ಈ ಆಲೋಚನೆಯ ಪ್ರಕಾರ ನ್ಯಾಯವಾಗಿದೆ. ಮತ್ತೂ ತಾವು ಇತರ ವೃತ್ತಿಗಳನ್ನು ಅನುಸರಿಸುವುದೇ ಸುಲಭವೆಂದೆಣಿಸಿ ರೈತರು ಬೇಸಾಯವನ್ನು ಬಿಟ್ಟು ಹೋಗದಂತೆ ಮಾಡಲು ಈ ತರದ ವಿತರಣೆಯು ಅವಶ್ಯಕವಾಗಿ ತೋರುತ್ತದೆ. ಇವರಿಗೆ ಈ ತರದ ವಿತರಣೆಯನ್ನು ತೋರಿಸದಿರುವುದಕ್ಕಿರುವ ಕಾರಣಗಳು ಇವೆಂದು ತೋರುತ್ತದೆ:—ಭೂಮಿಯ ಮಾಲೀಕತೆಯು ಯಾವಾಗಲೂ ಸರ್ವಗ್ರಹವಾಗಿರುತ್ತದೆ. ಸರ್ವಗ್ರಹವೆಂದರೆ ವಿಶಿಷ್ಟರೂ ಅನುಭವಿಸಬೇಕಾದ ಹಕ್ಕನ್ನೆಲ್ಲಾ ಒಬ್ಬನೇ ಅನುಭವಿಸುವುದು. ಭೂಮಿಯನ್ನು ಮತ್ತೂ ಅದರ ಫಲವತ್ತಾದ ಭಾಗವನ್ನೂ ಅನುಭವಿಸಲು ಸರ್ವರಿಗೂ ಸ್ವಾಭಾವಿಕವಾದ ಹಕ್ಕಿರುತ್ತದೆ. ಅಂತಹ ಭೂಮಿಯ ಭಾಗವನ್ನು ಒಬ್ಬನೇ ಅನುಭವಿಸಿದರೆ ಅದರ ಅನುಭವದ ಹಕ್ಕನ್ನು ಅವನು ಇತರರಿಗೆ ತಪ್ಪಿಸಿದಂತೆ ಆಗುವುದು.

ಉದಾಹರಣೆ:—ರಾಮನು ಒಂದಾನೊಂದು ಭೂಮಿಯನ್ನು ಅನುಭವಿಸುತ್ತಿದ್ದಾನೆ. ಬಂಜರಿನಲ್ಲಿರುವ, ದರಖಾಸ್ತಿನ ಮೇಲೆ ಸಿಗುವ ಭೂಮಿಗಳಾವಕ್ಕೂ ರಾಮನ ಭೂಮಿಯಷ್ಟು ಫಲವತ್ತತೆಯು ಪ್ರಾಯಶಃ ಇರುವುದಿಲ್ಲ. ಏಕೆಂದರೆ ಜನರು ಒಳ್ಳೆಯೊಳ್ಳೆಯ ಭೂಮಿಯನ್ನು ಮೊದಮೊದಲು ಹಿಡಿಯುತ್ತಾರೆ. ಭೂಮಿಯ ಗುಣವು ಸ್ಥಳದಿಂದ ಸ್ಥಳಕ್ಕೆ ಭೇದಿಸುತ್ತದೆ. ಅದುಕಾರಣ ರಾಮನ ಭೂಮಿಯ ಕೃಷಿಯೋಗ್ಯತೆಯ ಅಥವಾ ಅದಕ್ಕಿಂತ ಹೆಚ್ಚಿನ ಯೋಗ್ಯತೆಯ ಭೂಮಿಯು ಭೂಮಿಯಿಲ್ಲದವರಿಗೆಲ್ಲಕ್ಕೂ ಆಗುವಷ್ಟು ಬಹುಶಃ ದೊರೆಯುವುದಿಲ್ಲ. ಅದುಕಾರಣ ರಾಮನ ಅನುಭವದಲ್ಲಿರುವ ಭೂಮಿಯ ಅನುಭೋಗವನ್ನು ಅವನು ಇತರರಿಗೆ ತಪ್ಪಿಸಿದಂತಾಯಿತು.

ಅದುಕಾರಣ ಭೂವ್ಯವಸಾಯದಿಂದ ಜೀವಿಸತಕ್ಕವರು ಸರ್ವರಿಗೂ ಹಕ್ಕಿರುವ ಒಂದಾನೊಂದು ಪದಾರ್ಥದ ಸಹಾಯದಿಂದ ಜೀವನಮಾಡತಕ್ಕವರಾದರು. ಇತರ ವೃತ್ತಿಯಿಂದ ಜೀವಿಸುವವರು ಹೀಗಲ್ಲ. ಮಣ್ಣಿನಿಂದ ಮಡಕೆಗಳನ್ನು ಮಾಡುವ ಕುಂಬಾರನು ಇತರರು ಮಣ್ಣಿನಿಂದ ಮಡಕೆಮಾಡುವುದನ್ನು ತಪ್ಪಿಸುವುದಿಲ್ಲ. ಅವನಿಗೆ ಸಿಕ್ಕುವಂತಹ ಮಣ್ಣೇ ಇತರರಿಗೂ ಸಿಕ್ಕುವುದು. ಭೂಮಿಗಳಾದರೋ, ಒಬ್ಬನ ಅನುಭವದಲ್ಲಿರುವಂತಹ ಗುಣ ಮತ್ತು ಅನುಕೂಲದ ಭೂಮಿಯು ಬಹುಶಃ ಇತರರಿಗೆ ದೊರೆಯುವುದಿಲ್ಲ. ಅದುಕಾರಣ ಬೇಸಾಯಗಾರರು ಸರ್ವರಿಗೂ ಹಕ್ಕಿರುವ ಪದಾರ್ಥವನ್ನು ತಾವು ಮಾತ್ರ ಅನುಭವಿಸುತ, ಅದರ ಅನುಭವವನ್ನು ಇತರರಿಗೆ ತಪ್ಪಿಸಿರುವುದರಿಂದ ಇತರರಿಗೆ ಉಪಹತಿಯಿಲ್ಲದೆ ಸ್ವತಂತ್ರವಾಗಿ ಜೀವಿಸುವ ಇತರರಿಗೆ ಉಂಟುಮಾಡಿಕೊಟ್ಟಿರುವ ವಿತರಣೆಗಳು ಬೇಸಾಯಗಾರರಿಗೆ ಸಲ್ಲುವುದಿಲ್ಲ. ಮತ್ತೂ ಮತ್ತೊಂದು ಕಾರಣವಾವುದೆಂದರೆ, ಭೂಮಾಲೀಕರೆಲ್ಲರೂ ನಿಕ್ಷೇಪಧಾರಿಗಳು. ರಾಜ್ಯಕೋಶದ ಅಧ್ಯಕ್ಷರ ಬಧ್ಧತೆಗಳೇ, ಸ್ವಲ್ಪ ಹೆಚ್ಚುಕಡಮೆ, ಇವರಿಗೂ ಇರುತ್ತವೆ. ರಾಜ್ಯದ ನಾಣಕಧನವು ಕೋಶಾಧ್ಯಕ್ಷನಲ್ಲಿ ರಾಜ್ಯಹಿತಾರ್ಥವಾಗಿ ವಿನಿಯೋಗಿಸಲ್ಪಡಲು ನಿಕ್ಷೇಪಿಸಲ್ಪಟ್ಟಿದೆ. ರಾಜ್ಯದ ಭೂಧನವು ಭೂಮಾಲೀಕನಲ್ಲಿ ರಾಜ್ಯಹಿತಾರ್ಥವಾಗಿ ವಿನಿಯೋ

ಗಿಸಲ್ಪಡಲು ನಿಕ್ಷೇಪಿಸಲ್ಪಟ್ಟಿದೆ. ಭೂಮಾಲೀಕನು ಭೂಮಿಯಲ್ಲಿ ತಕ್ಕಷ್ಟು ಸಸ್ಯವನ್ನು ಬೆಳೆದರೆ, ಅವನು ಸರ್ವಸ್ವವಾದ ಭೂಧನವನ್ನು ಸರ್ವಹಿತಾರ್ಥವಾಗಿ ವಿನಿಯೋಗಿಸಿದಂತಾಯಿತು. ಹಾಗೆ ಮಾಡದಿದ್ದಲ್ಲಿ ಅದನ್ನು ದುರ್ವಿನಿಯೋಗ ಮಾಡಿದಂತಾಗುವುದು. ಖಜಾನೆಯ ಹಣದ ಮೇಲೆ ಖಜಾಂಚಿಗೆ ಹೇಗೆ ಅನನ್ಯಸಾಧಾರಣವೂ, ಶಾಶ್ವತವೂ ಆದ ಹಕ್ಕಿಲ್ಲವೋ ಹಾಗೆ ಭೂಮಾಲೀಕನಾಗುವವನಿಗೂ ಆ ವಿಧವಾದ ಹಕ್ಕಿಲ್ಲ. ಭೂಮಿಯ ನ್ಯಾಯವಾದ ವಿನಿಯೋಗವೆನ್ನಿಸುವ ವ್ಯವಸಾಯವನ್ನು ಭೂಮಾಲೀಕನು ಮಾಡದಿದ್ದರೆ ರಾಜರು ಆ ಭೂಮಿಯನ್ನು ಆ ಭೂಮಾಲೀಕನಿಂದ ಕಿತ್ತು ವ್ಯವಸಾಯ ಮಾಡುವ ಇತರರಿಗೆ ನ್ಯಾಯವಾಗಿ ಕೊಡಬಹುದು.

ಈ ಸಂದರ್ಭದಲ್ಲಿ ಪೂರ್ವರಾಜ್ಯದ ಪದ್ಧತಿಯು ಹೇಗಿತ್ತೆಂದರೆ:—ಭೂಮಾಲೀಕರು ತಮ್ಮ ಭೂಮಿಯನ್ನು ವ್ಯವಸಾಯಮಾಡದೆ ಹಾಳುಗೆಡವಿಕೊಂಡಿದ್ದರೆ, ಅದನ್ನು ಇತರರು ವ್ಯವಸಾಯಮಾಡಿಕೊಳ್ಳಬಹುದಾಗಿದ್ದಿತು.

ಅಶಕ್ತ ಪ್ರೇತನಷ್ಟೇಷು ಕ್ಷೇತ್ರಿಕೇಷು ನಿವಾರಿತಃ|
ಕ್ಷೇತ್ರಂಚೇದ್ವಿಕೃಷೇತ್ಕಶ್ಚಿ ದಶ್ನುವೀತಸತತ್ಫಲಂ||
ವಿಕೃಷ್ಯಮಾಣೇ ಕ್ಷೇತ್ರೇತು ಕ್ಷೇತ್ರಿಕಃಪುನರಾವ್ರಜೇತ್ |
ಖಿಲೋಪಚಾರಂ ತತ್ಸರ್ವಂ ದತ್ವಾಸ್ವಂಕ್ಷೇತ್ರಮಾಪ್ನುಯಾತ್||

(ಪ. ಮಾ. ನಾರದ.)

“ಭೂಮಾಲೀಕರು ಅಶಕ್ತರಾದುದರಿಂದಲಾದರೂ, ಸತ್ತುದರಿಂದಲಾದರೂ, ನಷ್ಟವಾದುದರಿಂದಲಾದರೂ ವ್ಯವಸಾಯವಿಲ್ಲದೆ ಬಿದ್ದಿರುವ ಅವರ ಭೂಮಿಯನ್ನು ಮತ್ತಾವನಾದರೂ ವ್ಯವಸಾಯಮಾಡಿದರೆ ಅದರ ಬೆಳೆಯನ್ನು ಅವನೇ ಹೊಂದಬಹುದು. ಅದನ್ನು ಅವನು ವ್ಯವಸಾಯಮಾಡಿದ ಬಳಿಕ ಭೂಮಾಲೀಕನು ಬಂದರೆ ವ್ಯವಸಾಯದ ವೆಚ್ಚವನ್ನು ಇವನು ವ್ಯವಸಾಯಮಾಡಿದವನಿಗೆ ಕೊಟ್ಟು ತನ್ನ ಭೂಮಿಯನ್ನು ತಾನು ತೆಗೆದುಕೊಳ್ಳಬಹುದು.”

ವ್ಯವಸಾಯ ಮಾಡದಿರುವವರಿಂದ ಭೂಮಿಗಳನ್ನು ಕಿತ್ತುಕೊಂಡು ಇತರರಿಗೆ ಕೊಡುವ ಪದ್ಧತಿಯೂ ಸಹ ಪೂರ್ವದಲ್ಲಿದ್ದಿತು.

ಅಕೃಷತಾ ಮಾಚ್ಛಿದ್ಯಾನ್ಯೇಭ್ಯಃ ಪ್ರಯಚ್ಛೇತ್ |

(ಚಾಣಿಕ್ಯನ ಅರ್ಥಶಾಸ್ತ್ರ.)

ಈಗಳಾದರೋ, ವ್ಯವಸಾಯ ಮಾಡಲಿಲ್ಲವೆಂಬ ಕಾರಣದ ಮೇಲೆ ಭೂಮಿಯನ್ನು ವ್ಯವಸಾಯ ಮಾಡಲಿಚ್ಛಿಸುವ ಮತ್ತೊಬ್ಬನು ತೆಗೆದುಕೊಳ್ಳಲಾಗುವುದೂ ಇಲ್ಲ; ಸರ್ಕಾರದವರು ಭೂಮಿಯನ್ನು ಅವನ ಕೈತಪ್ಪಿಸುವುದೂ ಇಲ್ಲ.

ಭೂಮಾಲೀಕರು ಭೂಮಿಯನ್ನು ಎಷ್ಟುಕಾಲ ಬೇಕಾದರೂ ಹಾಳುಗೆಡವಿಕೊಂಡಿರಬಹುದು. ಎದುವರೆಗೆ ಅವರು ಕಂದಾಯವನ್ನು ಕೊಡುತ್ತಿದ್ದಾರೋ ಅದುವರೆಗೆ

ಭೂಮಿಯನ್ನು ಅವರಿಂದ ಕಿತ್ತುಕೊಳ್ಳುವುದಿಲ್ಲ. ಆದರೆ ಪಾಳುಗಂದಾಯ ತೆರಲು ಯಾರೂ ಅಪೇಕ್ಷಿಸುವುದಿಲ್ಲ. ಅದುಕಾರಣ ಕಂದಾಯಕೊಡಬೇಕಾದ ನಿರ್ಬಂಧಕ್ಕಾ ದರೂ ಅವರು ಭೂಮಿಯನ್ನು ವ್ಯವಸಾಯಮಾಡುತ್ತಾರೆ. ಭೂಮಿಯ ವ್ಯವಸಾಯ ಮಾಡುವುದನ್ನು ಅವರು ಅಪೇಕ್ಷಿಸದಿದ್ದರೆ, ಅದನ್ನು ಸರ್ಕಾರಕ್ಕಾದರೂ ರಾಜೀನಾಮೆ ಕೊಟ್ಟುಬಿಡುವರು, ಅಥವಾ ಇತರರಿಗಾದರೂ ಮಾರಿಬಿಡುವರು. ಈ ಯಾವ ಕಾರ್ಯ ವನ್ನು ಮಾಡದೆಯೂ ಕಂದಾಯವನ್ನು ಕೊಡದೆಯೂ ಇದ್ದರೆ ಸರ್ಕಾರದವರು ಕಂದಾ ಯಕ್ಕಾಗಿ ಭೂಮಿಯನ್ನು ಹರಾಜುಮಾಡಿ, ವ್ಯವಸಾಯಮಾಡಲಪೇಕ್ಷಿಸುವ ಇತ ರರಿಗೆ ಅದನ್ನು ಕೊಟ್ಟುಬಿಡುತ್ತಾರೆ. ಒಂದು ರೈತರಿಗೆ ಕಂದಾಯವನ್ನು ಶಾಶ್ವತವಾಗಿ ಮಾಫ್‌ಮಾಡಿಬಿಟ್ಟರೆ ಉಂಟಾಗುವ ಹಾನಿಯನ್ನು ಯೋಚಿಸುವ. ಒಬ್ಬಾನೊಬ್ಬ ರೈತನು ತನ್ನ ಭೂಮಿಯನ್ನು ಬಿಟ್ಟು ದೇಶಾಂತರ ಹೊರಟುಹೋಗಬಹುದು. ಆಗ ಅವನ ಭೂಮಿಯನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಲಿಕ್ಕೆ ಲಾಯಿಲ್ಲ. ಅವನ ಹಕ್ಕಿಗೊಳಪಟ್ಟ ಭೂಮಿಯನ್ನು ಇತರರು ವ್ಯವಸಾಯಮಾಡುವುದು ಲಾಕ್ಕೆ ವಿರುದ್ಧ. ಇಂತಹ ಸಂದರ್ಭದಲ್ಲಿ ಆ ರೈತನ ಭೂಮಿಯು ಲೋಕಕ್ಕೆ ಯಾವ ಉಪ ಯೋಗಕ್ಕೂ ಬಾರದೆ ಹಾಳುಬಿದ್ದಿರಬೇಕಾಗುವುದು.

ಭೂಗಂದಾಯವನ್ನು ಮಾಫ್ ಮಾಡಿ ದಾನಮಾಡಿರುವ ಇನಾಂ ಜಹಗೀರು ಗ್ರಾಮಗಳಲ್ಲಿರುವ ಬಂಜರು ಭೂಮಿಗಳನ್ನು ಮತ್ತು ರೈತರು ಬಿಟ್ಟ ಜಮೀನುಗಳನ್ನು ಬೇಸಾಯಮಾಡಿಸದಿದ್ದರೆ ಸರ್ಕಾರಕ್ಕೆ ಬಿಟ್ಟುಬಿಡಬೇಕೆಂಬ ನಿರ್ಬಂಧವನ್ನು ಮಾತ್ರ ಸರ್ಕಾರದವರು ಕಲ್ಪಿಸಿಲ್ಲ. ಇಂತಹ ಭೂಮಾಲೀಕರು ಅಂತಹ ಜಮೀನುಗಳನ್ನು ವ್ಯವಸಾಯಕ್ಕೆ ಕೊಡದೆ ಇಟ್ಟುಕೊಂಡರೆ ಮನುಷ್ಯಪ್ರಾಣಧಾರಕವಾದ ಸಸ್ಯೋತ್ಪ ತ್ತಿಗಾಗಿ ಸೃಷ್ಟಿಸಲ್ಪಟ್ಟಿರುವ ಆ ಭೂಮಿಗಳು ಆ ಉದ್ದೇಶಕ್ಕೆ ಬಾರದೆಹೋಗುತ್ತವೆ ಯಲ್ಲವೆ? ಸಿಲ್‌ಶಿಲಾ ಬಂಜರು ಭೂಮಿಯನ್ನೂ ಮತ್ತು ರೈತರು ರಾಜೀನಾಮೆಯ ಮೇರೆ ಬಿಟ್ಟ ಭೂಮಿಯನ್ನೂ ಮೆಲ್‌ಹಿಡುವಳಿದಾರರು (ಇನಾಮುದಾರರು, ಜಹಗೀರು ದಾರರು) ತಮಗೆ ತೋಚಿದ ರೆಂಟಿನ ಮೇಲೆ ಪ್ರಾರ್ಥಕರಿಗೆ ಕೊಡಬಹುದು ಎಂಬ ಲಾವು ಮೈಸೂರಿನಲ್ಲಿದೆ. (ಲ್ಯಾ. ರೆ. ಕೊ. 85). ಬೊಂಬಾಯಿನಲ್ಲಿ ಈ ವಿಷಯದಲ್ಲಿ ಯಾವ ಲಾ ಇದೆಯೋ ವ್ಯಕ್ತವಾಗುವುದಿಲ್ಲ. ಇನಾಂದಾರರು, ವ್ಯವಸಾಯೇತರ ಉದ್ದೇಶಕ್ಕಾಗಿ ಉಪಯೋಗಿಸುವುದಕ್ಕಾದರೂ (ಮಸಲ—ಇಟ್ಟಿಗೆ ಸುಡುವುದು, ಈಚಲುಮರ ಬೆಳೆಯುವುದು), ಅಥವಾ ರೈತರ ಮೇಲಿನ ಆಗ್ರಹಕ್ಕಾದರೂ, ಅಥವಾ ಅತ್ಯಧಿಕವಾದ ಪ್ರತಿಫಲದಾಶೆಯಮೇಲಾದರೂ ಆ ಭೂಮಿಗಳನ್ನು ರೈತರಿಗೆ ವ್ಯವಸಾಯ ಕ್ಕೆ ಸುಲಭವಾಗಿ ಕೊಡದಿದ್ದರೆ, ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಯ ಗತಿಯೇನು?

ಮೇಲೆ ಹೇಳಿದ ಕಾರಣಗಳಿಂದ ಆದಾಯದ ತರಿಗೆಯನ್ನು ಅನುಪಪನ್ನರಿಗೆ ಮಾಫ್ ಮಾಡುವಂತೆ ಭೂಮಿಯ ಕಂದಾಯವನ್ನು ಅನುಪಪನ್ನರಿಗೆ ಮಾಫ್‌ಮಾಡ ಲಾಗದಿದ್ದರೂ, ಅದನ್ನು ಬಹುಮಟ್ಟಿಗೆ ಕಡಮೆಮಾಡಬಹುದು.

ಯಾವನೊಬ್ಬನ ಸಂಸಾರಕ್ಕೆ ಬೇಕಾಗುವಷ್ಟಕ್ಕಿಂತ ವಿಶೇಷವಾಗಿರುವ ಅವನ ಭೂಮಿಗೆ ಮೇಲೆ ಸೂಚಿಸಿದಂತೆ ಅಧಿಕಾಧಿಕ ಕಂದಾಯವನ್ನು ಹಾಕುವುದು ಈಗಣ ರಾಜ್ಯನ್ಯಾಯಕ್ಕೆ ಅನುಗುಣವಾಗಿಯೇ ಇದೆ. “ಮನುಷ್ಯನಿಗೆ ಯಾವ ಪದಾರ್ಥಗಳು ಅತ್ಯವಶ್ಯಕವಾದ ಅಪೇಕ್ಷ್ಯಗಳೋ ಅವುಗಳ ಮೇಲೆ ತೆರಿಗೆಯನ್ನು ಹಾಕಕೂಡದು. ಸುಖಸಾಧನಗಳಾದ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಬಹುದು. ಆದರೆ ಆ ತೆರಿಗೆಯು ಅಪೇಕ್ಷಿತಾರಿಕ್ತಪದಾರ್ಥಗಳ ಮೇಲೆ ಹಾಕುವ ತೆರಿಗೆಗಿಂತ ಕಡಮೆಯಾಗಿರಬೇಕು.” (ಪಬ್ಲಿಕ್ ಫೈನಾನ್ಸ್. ಪು. 289). ಇದರ ಅರ್ಥವನ್ನು ಉದಾಹರಣೆಯಿಂದ ಸ್ಪಷ್ಟಮಾಡುವ. ಒಂದು ಕುಟುಂಬದವರ ಆಹಾರಕ್ಕೆ 4 ಎಕರೆ ಭೂಮಿಯು ಆ ಕುಟುಂಬಕ್ಕೆ ಬೇಕಾಗಿರುತ್ತದೆ. ಆಹಾರವು ಮನುಷ್ಯನಿಗೆ ಅತ್ಯವಶ್ಯಕವಾದ ಅಪೇಕ್ಷ್ಯವು. ಅದುಕಾರಣ ಈ 4 ಎಕರೆಯ ಮೇಲೆ ತೆರಿಗೆಯನ್ನು ಹಾಕಬಾರದು. (ಭೂಮಿ ವಿಷಯದಲ್ಲಿ ತೆರಿಗೆ ಮಾಫ್ ಮಾಡುವುದು ಮೇಲೆ ವಿವರಿಸಿರುವ ಕಾರಣಗಳಿಗಾಗಿ ಪದ್ಧತಿಯಾಗಿಲ್ಲವಾಗಿ ಈ ನಿಯಮವು ಭೂಮಿಯ ವಿಷಯದಲ್ಲಿ ಅನ್ವಯಿಸುವುದಿಲ್ಲ.) ಆ ಕುಟುಂಬದವರ ಬಟ್ಟೆ, ವಾಸ, ಇವುಗಳ ಸಂಪಾದನೆಗಾಗಿ ಮತ್ತೆ 4 ಎಕರೆಯು ಆ ಕುಟುಂಬಕ್ಕೆ ಬೇಕಾಗುತ್ತದೆ. ಈ ಅಪೇಕ್ಷ್ಯಗಳು ಸುಖಸಾಧನವಾದುವುಗಳಾಗಿ ಈ 4 ಎಕರೆಯ ಮೇಲೆ ತೆರಿಗೆಯನ್ನು ಹಾಕಬಹುದು. ಆ ಕುಟುಂಬದವರ ಹೂವು, ಗಂಧ, ಆಭರಣಗಳ ಸಂಪಾದನೆಗಾಗಿ ಮತ್ತೂ 4 ಎಕರೆಯ ಭೂಮಿಯು ಬೇಕಾಗುತ್ತದೆ. ಈ ಪದಾರ್ಥಗಳು ಅನವಶ್ಯಕವಾದುವುಗಳಾಗಿ ಎರಡನೆಯ 4 ಎಕರೆಯ ಮೇಲೆ ಹಾಕಿದ ಕಂದಾಯಕ್ಕಿಂತ ಹೆಚ್ಚಿನ ಕಂದಾಯವನ್ನು ಈ ಮೂರನೆಯ 4 ಎಕರೆಯ ಮೇಲೆ ಹಾಕುವುದು ನ್ಯಾಯವಾಗಿದೆ. ಆದಾಯದ ತೆರಿಗೆಯು ಆಕ್ಟಿನ ಮೇರೆ ಹಾಕಿರುವ ಆದಾಯದ ತೆರಿಗೆಯು ಈ ನ್ಯಾಯದ ಮೇರೆ ಹೆಚ್ಚು ಹೆಚ್ಚಿನ ಆದಾಯಕ್ಕೆ ಹೆಚ್ಚು ಹೆಚ್ಚಿನ ದರವು ಬೀಳುತ್ತದೆ. ಸಾಧಾರಣವಾಗಿ 2,000 ರೂ. ವರೆಗಿನ ಆದಾಯಕ್ಕೆ ರೂ. 1 ಕ್ಕೆ 4 ಕಾಸಿನಂತೆಯೂ, ಆ ಮೇಲೆ 5 ಕಾಸಿನಂತೆಯೂ ಬೀಳುತ್ತದೆ. ಇಂಥಹ ಹೆಚ್ಚಿನ ತೆರಿಗೆಯಿಂದ ಉಂಟಾಗುವ ಪ್ರಯೋಜನಗಳು ಯಾವುವೆಂದರೆ—(1) ಈ ವಿಧದಲ್ಲಿ ಸರ್ಕಾರದ ವೆಚ್ಚಕ್ಕೆ ಬೇಕಾದ ಆದಾಯದ ಪೈಕಿ ಒಂದಷ್ಟು ಹೆಚ್ಚಾಗಿ ಉತ್ಪತ್ತಿಯಾಗುವುದರಿಂದ, ಬಡಬಗ್ಗರಾದ ರೈತರು ಕೊಡಬೇಕಾದ ಕಂದಾಯದಲ್ಲಿ ಅಷ್ಟಂಶದ ಭಾಗವನ್ನು ಕಡಮೆಮಾಡಬಹುದು. (2) ಅಧಿಕವಾದ ದರದ ಕಂದಾಯವನ್ನು ಕೊಟ್ಟು ಅಧಿಕ ಭೂಮಿಯನ್ನು ಇಟ್ಟುಕೊಳ್ಳುವ ಭೂಮಾಲೀಕರು ಆ ಭೂಮಿಯಲ್ಲಿ ಅಧಿಕವಾಗಿ ಬೆಳೆಯಬೇಕು, ಹಾಗಿಲ್ಲದಿದ್ದರೆ, ಆ ಭೂಮಿಯನ್ನು ಬಿಟ್ಟುಬಿಡಬೇಕು; ಅಥವಾ ಮಾರಿಬಿಡಬೇಕು. ಈ ಎರಡು ಪಕ್ಷಗಳಲ್ಲಿ ಯಾವುದುಂಟಾದರೂ ದೇಶಕ್ಕೂ ಭೂಮಾಲೀಕರಿಗೂ ಉಭಯರಿಗೂ ಲಾಭಕರ. ಹೆಚ್ಚಾಗಿ ಬೆಳೆದರೆ ಆ ಪ್ರಕಾರ ಲಾಭಕರವೆಂಬುದು ಸ್ಪಷ್ಟವೇ ಆಗಿದೆ. ಭೂಮಿಯನ್ನು ಬಿಟ್ಟುಬಿಟ್ಟರೆ, ಸ್ವಂತ ಭೂಮಿಯಿಲ್ಲದ ರೈತರು ಅದನ್ನು ತೆಗೆದುಕೊಂಡು ತನ್ನ ಭೂಮಿ ಎಂಬುವ ಅಭಿಮಾನದ ಮೇಲೆ ಸಸ್ಯಾಭಿವೃದ್ಧಿಯ ಅನುಕೂಲಗಳನ್ನೆಲ್ಲವನ್ನು ಒದಗಿಸಿಕೊಂಡು ಬೆಳೆಯನ್ನು

ಪೇಚಾಗಿ ಬೆಳೆಯಲು ಪ್ರಯತ್ನಿಸುವರು. ಭೂಮಿಯನ್ನು ಬಿಟ್ಟವರಾದರೋ, ಆ ಭೂಮಿಗಾಗಿ ಅವರು ವೆಚ್ಚಮಾಡಿದ್ದ ಹಣವನ್ನು ಕೈಗೆ ತೆಗೆದುಕೊಂಡು ಅದನ್ನು ವಿಶೇಷ ಲಾಭಕರವಾದ ಕೈಗಾರಿಕೆ ವ್ಯಾಪಾರ ಮೊದಲಾದ ಕಾರ್ಯಗಳಲ್ಲಿ ವಿನಿಯೋಗಿಸುತ್ತಾರೆ. ಇದರಿಂದ ಅವರ ಧನವೂ ದೇಶದ ಧನವೂ ವೃದ್ಧಿಯಾಗಲಿಕ್ಕೆ ಕಾರಣವಾಗುವುದು. ಬೇಸಾಯಗಾರರಲ್ಲದವರು ಭೂಮಿಯನ್ನು ಇಟ್ಟುಕೊಂಡು, ಅದರ ಬೇಸಾಯಕ್ಕಾಗಿ ಯಾವ ಶ್ರಮವನ್ನೂ ತೆಗೆದುಕೊಳ್ಳದೆಯೂ, ದ್ರವ್ಯವನ್ನೂ ವೆಚ್ಚಮಾಡದೆಯೂ ಇರುವುದು, ಅವರಿಗೂ ದೇಶಕ್ಕೂ ಬಹು ನಷ್ಟಕರವೆಂಬುದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು ಭೂಸ್ವಾಮ್ಯವನ್ನು ಹೊಂದಬೇಕೆಂಬ ನಮ್ಮ ಇಂಡಿಯದವರ ದುರಾಶೆಗೆ ಇದೀಗ ಕಾರಣ. ಅತ್ಯಂತ ಬಲಹೀನವೂ, ಅವ್ಯವಸ್ಥಿತವೂ ಆದ ಪೂರ್ವದ ರಾಜ್ಯಭಾರಗಳಲ್ಲಿ ಸ್ವತ್ವಸಂರಕ್ಷಿತತೆಯು ಸ್ವಲ್ಪವೂ ಇರಲಿಲ್ಲ. ಐಶ್ವರ್ಯವಂತರು ತಮ್ಮ ಐಶ್ವರ್ಯವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲು ಈಗಿನಂತೆ ಸೇವಿಂಗ್ಸ್ ಬ್ಯಾಂಕು ಸರ್ಕಾರಿ ಪತ್ರಗಳು ಮೊದಲಾದ ಸಾಧನಗಳು ಇರಲಿಲ್ಲ. ನಗನಾಣ್ಯ ಮೊದಲಾದ ಪದಾರ್ಥಗಳು ಬಹು ಅಸ್ಥಿರವಾಗಿದ್ದುವು. ಕೊಳ್ಳೆಗಾರರು, ಕಳ್ಳರು, ರಾಜಕದ ಪೆಂಡಾರರು, ಇಂತಹವರ ಅಪಹಾರಕ್ಕೆ ಸಿಕ್ಕಲೀಸದೆ ಅವುಗಳನ್ನು ಕಾಪಾಡುವುದು ಅಸಾಧ್ಯವೇ ಆಗಿದ್ದಿತು. ಭೂಧನ ಒಂದು ಮಾತ್ರ ಸ್ಥಿರಸೊತ್ತಾಗಿದ್ದಿತು. ಮತ್ತೆಲ್ಲವೂ ಅಸ್ಥಿರವಾಗಿ ಚಂಚಲಪ್ರಾಯವಾಗಿದ್ದುವು. ಅದುಕಾರಣ ಪೂರ್ವದ ಐಶ್ವರ್ಯವಂತರು ತಮ್ಮ ಐಶ್ವರ್ಯವನ್ನೆಲ್ಲಾ ಭೂಮಿಯ ರೂಪದಲ್ಲಿಟ್ಟುಕೊಳ್ಳಲು ಅಪೇಕ್ಷಿಸಿ, ಹಾಗೆ ಮಾಡುತ್ತಿದ್ದರು. ಅಲ್ಲದೆ ಧನವನ್ನು ವೃದ್ಧಿಗೊಳಿಸಲಪೇಕ್ಷೆ ಇದ್ದವರಿಗೆ, ಭೂಸ್ವತ್ವ ಮಾತ್ರ ಸಾಧಕವಾಗಿದ್ದಿತು. ವಿಶೇಷ ಲಾಭದಾಯಕಗಳಾದ ವ್ಯಾಪಾರ, ಕೈಗಾರಿಕೆಯ ಕಾರ್ಯ ಮೊದಲಾದ ಯಾವ ಸಾಧನಗಳೂ ಪೂರ್ವದಲ್ಲಿ ಇರಲಿಲ್ಲ. ಮತ್ತೂ ಭೂಧನವು ಸ್ಥಿರಸ್ವತ್ವವೆನ್ನಿಸಿಕೊಳ್ಳಲು ಮತ್ತೊಂದು ದೊಡ್ಡ ಕಾರಣವು ಇದ್ದಿತು. ಭೂಮಿಯನ್ನು ಸಂಪಾದನೆಮಾಡುವುದೇ ಕಠಿಣ. ಸಂಪಾದನೆಮಾಡಿದ ಮೇಲೆ ಅದನ್ನು ಹೋಗಲಾಡಿಸುವುದು ಮತ್ತೂ ಕಠಿಣವಾಗಿದ್ದಿತು. ತಾನು ಸಂಪಾದನೆಮಾಡಿದ ದ್ರವ್ಯವನ್ನು ಅತಿ ಮುಕ್ತಹಸ್ತರಾದ ತನ್ನ ಸಂತತಿಯವರು ಹೋಗಲಾಡಿಸಿಕೊಂಡಾರೆಂಬ ಭಯವುಳ್ಳ ದ್ರವ್ಯಸಂಪಾದಕರೆಲ್ಲರೂ ಆ ದ್ರವ್ಯವನ್ನೆಲ್ಲಾ ಭೂಧನದ ರೂಪದಲ್ಲಿ ಇಡುತ್ತಿದ್ದರು. ಕ್ರಯ ದಾನ ಭೋಗ್ಯಾಧಾರ ಮೊದಲಾದ ವ್ಯವಹಾರಗಳು ಈಗಿನಂತೆ ಬಹು ಸುಲಭವಾಗಿ ನಡೆಯಲು ಪೂರ್ವದಲ್ಲಿ ವಿಶೇಷ ಆತಂಕಗಳಿದ್ದುದರಿಂದ, ಒಂದು ಕುಟುಂಬಕ್ಕೆ ಒಂದು ಕಾಲದಲ್ಲಿ ಸೇರಿದ ಭೂಮಿಯು ಅನೇಕ ಸಂತತಿಯ ವರೆಗೂ ಆ ಕುಟುಂಬದಲ್ಲೇ ಉಳಿಯುತ್ತಿದ್ದಿತು. ಈ ಮೇಲಿನ ಕಾರಣಗಳಿಂದ, ಐಶ್ವರ್ಯವಂತರೆಲ್ಲರಲ್ಲಿಯೂ ಭೂಧನಸಂಪಾದನೆಯ ಆಶೆಯು ಪೂರ್ವದಲ್ಲಿ ಅತಿ ದೃಢತರವಾಗಿ ಬೇರೂರಿದ್ದಿತು. ಈ ಪ್ರಕಾರ ಪೂರ್ವದಲ್ಲಿ ರೂಢವಾಗಿದ್ದ ಈ ಅಭಿಲಾಷೆಯೇ ಈಗಿನವರಲ್ಲಿಯೂ ಉಳಿದಿದೆ. ಆದರೆ ಪೂರ್ವದವರಲ್ಲಿ ಅಂತಹ ಅಭಿಲಾಷೆಯು ಸಕಾರಣವಾಗಿದ್ದಿತು. ಈಗಿನವರಲ್ಲಿ ಅದು ಇರಲು ಯತ್ಕಿಂಚಿತ್ಕಾರಣವೂ ಇಲ್ಲ. ಈಗಣ ನಡವಳಿಕೆ

ಗಳೆಲ್ಲ ವಿಪರ್ಯಸ್ತವಾಗಿವೆ. ಎಷ್ಟು ಹಣವನ್ನಾದರೂ ಗೌವರ್ನಮೆಂಟಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ನಮ್ಮ ಮನೆಗಿಂತಲೂ ಸುರಕ್ಷಿತವಾಗಿ ಇಡಬಹುದು. ಹಣವನ್ನು ಭೂಮಿಯಲ್ಲಿ ವಿನಿಯೋಗಿಸಿದರೆ ಸೇಕಡ 4 ಆಣೆಯಂತೆ ಲಾಭವು ಗೀಟುವುದೇ ದುರ್ಲಭ. ಅದನ್ನು ವ್ಯಾಪಾರ ಕೈಗಾರಿಕೆಗಳಲ್ಲಿ ಹಾಕಿದರೆ, ಸ್ವಲ್ಪ ಕಾಲದಲ್ಲಿಯೇ ಮೂಲ್ಯವು ದ್ವಿಗುಣ ತ್ರಿಗುಣವಾಗುವುದು. ಚರಸ್ವತ್ತನ್ನು ವಿಲೇಮಾಡುವುದಕ್ಕಿಂತ ಸ್ಥಿರಸೊತ್ತನ್ನು ವಿಲೇಮಾಡುವುದು ಈಗ ಬಹಳ ಸುಲಭ. ತಂದೆಯು ಕಷ್ಟಾರ್ಜಿತವಾದ ಭೂಮಿಯನ್ನೆಲ್ಲಾ ಅವನು ಸತ್ತ ಮಾರನೆಯ ದಿವಸವೇ ದುರ್ವ್ಯಯಿಯಾದ ಮಗನು ಮೂರಕ್ಷರ ಬರೆಯುವುದರಿಂದ ಕಳೆದುಕೊಳ್ಳಲಾಪನು. ಆಧುನಿಕ ಸ್ಥಿತಿಗಳು ಹೀಗಿರಲಿಕ್ಕಾಗಿ, ಈಗಣ ಐಶ್ವರ್ಯವಂತರು ಭೂಸಂಪಾದನೆಯನ್ನು ಇಚ್ಛಿಸುವುದು ತಮಗಾದರೂ ಲಾಭವೇ? ಇದು ಹೇಗಾದರೂ ಆಗಲಿ. ಇದರಿಂದ ದೇಶಕ್ಕೆ ಉಂಟಾಗುವ ಉಪಪತ್ತಿಯನ್ನು ವಿಚಾರಮಾಡುವುದು ನಮ್ಮ ಕೆಲಸ. ಬೇಸಾಯದ ಅಭಿವೃಧ್ಯರ್ಥವಾಗಿ ಯತ್ಕಿಂಚಿತ್ ಶಕ್ತಿ ಬುದ್ಧಿ ದ್ರವ್ಯವನ್ನು ವೆಚ್ಚಮಾಡದೆ, ಭೂಮಿಯಿರುವ ಸ್ಥಳದಲ್ಲಿ ವಾಸವೂ ಮಾಡದೆ, ಪಟ್ಟಣಗಳಲ್ಲಿ ನಿಶ್ಚಿಂತರಾಗಿ ವಾಸಮಾಡುವ ಐಶ್ವರ್ಯವಂತರಿಗೆ ಬಹು ಫಲವತ್ತಾದ, 50–100 ಯಕರೆಯ ವಿಸ್ತೀರ್ಣ ಭೂಮಿಯು ಸೇರಿರುತ್ತದೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಬೇಸಾಯಗಾರರಿಗೆ ಶಕ್ತಿಯು ಮೊದಲೇ ಇಲ್ಲ; ಅಥವಾ ಇದ್ದರೂ ಮಾಲೀಕನ ಲಾಭಕ್ಕಾಗಿ ಹೆಚ್ಚು ಮೆಹನತ್ತನ್ನು ಮಾಡಲೂ, ಹಣ ವೆಚ್ಚಮಾಡಲೂ ಬೇಸಾಯಗಾರರು ಎಂದಿಗೂ ಮನಸ್ಸುಮಾಡುವುದಿಲ್ಲ. ಈ ಸ್ಥಿತಿಗಳ ಪರ್ಯವಸಾನವೇನೆಂದರೆ, ಕಾರ್ಯಸಾಧಕವಾದ ವ್ಯವಸಾಯದಿಂದ 100 ಜನದ ಆಹಾರಕ್ಕೆ ತಕ್ಕಷ್ಟು ಆಗುತ್ತಿದ್ದ ಬೆಳೆಗೆ ಬದಲಾಗಿ ಅದರಲ್ಲಿ ಇಂತಹ ನಿರಾದರವಾದ ವ್ಯವಸಾಯದಿಂದ 25 ಜನದ ಹೊಟ್ಟೆಗಾಗುವಷ್ಟು ಬೆಳೆಯುವುದೇ ದುರ್ಲಭವಾಗುತ್ತದೆ. ಬಹುಶಃ ಭೂಮಾಲೀಕರು ಮತ್ತು ಬೇಸಾಯಗಾರರು ಇವರಿಬ್ಬರ ಆಹಾರಕ್ಕೆ ಪೂರ್ತಿಯಾಗುವಷ್ಟಕ್ಕಿಂತ ಹೆಚ್ಚಾಗಿ ಬೆಳೆಯುವುದಿಲ್ಲ. ಬೇಸಾಯಗಾರರು ಇತರ ಸುಖಸಾಧನಪದಾರ್ಥಗಳನ್ನು ಸಂಪಾದಿಸಿಕೊಳ್ಳಬೇಕಾದರೆ ಬೇರೆ ವೃತ್ತಿಯನ್ನು ಅನುಸರಿಸಲೇಬೇಕು. ಅದುಕಾರಣವೇ ಅನೇಕ ಬೇಸಾಯಗಾರರು ಅದನ್ನು ಬಿಟ್ಟು ಕಾಫಿ ತೋಟ, ಕಾರ್ಖಾನೆಗಳ ಕೆಲಸಕ್ಕೆ ಓಡಿಹೋಗುತ್ತಿದ್ದಾರೆ. ಮಾಲೀಕರಿಗೂ ಸಹ ವಿಶೇಷ ಭೂಮಿ ಇಲ್ಲದಿದ್ದರೆ ಇದೇ ಸ್ಥಿತಿಯುಂಟಾಗಿ, ಅವರು ಇತರ ವೃತ್ತಿಗಳನ್ನು ಅನುಸರಿಸಬೇಕಾಗುವುದು. ಈ ಭೂಮಾಲೀಕರು ಭೂಮಿಯಲ್ಲಿ ತನ್ನ ಧನವನ್ನು ವಿನಿಯೋಗಿಸುವುದಕ್ಕೆ ಪ್ರತಿಯಾಗಿ ಅದನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟರೆ, ಬೇಸಾಯಗಾರರೊಡನೆ ಹೊಡೆದಾಡಬೇಕಾದ ಚಿಂತೆಯು ತಪ್ಪಿ, ಭೂಮಿಯ ಉತ್ಪತ್ತಿಗಿಂತಲೂ ಅತಿ ಕಡಮೆಯಿಲ್ಲದ ಆದಾಯವನ್ನು ನಿಶ್ಚಿಂತರಾಗಿ ಹೊಂದಬಹುದು. ಮತ್ತೂ, ಇದರಿಂದ ದೇಶಕ್ಕೂ ಹಿತಕರವಾಗಿ ಪರಿಣಮಿಸುವುದು. ಹೇಗೆಂದರೆ, ಸರ್ಕಾರದ ನಿಯತವಾದ ವೆಚ್ಚಕ್ಕಿಂತಲೂ ಹೆಚ್ಚಾಗಿ ಖಜಾನೆಯಲ್ಲಿ ಉಳಿಯುವ ಹಣವನ್ನು ಸರ್ಕಾರದವರು ತಖಾವಿ ಸಾಲಗಳಂತೆ ದೇಶಕ್ಕೆ ಹಿತಕರವಾಗಿ ವಿನಿಯೋಗಿಸುವರು.

ಸ್ವತಃ ವ್ಯವಸಾಯಮಾಡದೆ ಅಥವಾ ಆಳುಗಳಿಂದ ಮಾಡಿಸದೆ ಇತರರಿಂದ ವ್ಯವಸಾಯಮಾಡಿಸಬೇಕೆಂದಿರುವ ಭೂಮಾಲೀಕರು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದೇನೆಂದರೆ—ವ್ಯವಸಾಯಾಭಿವೃದ್ಧಿಗೆ ವಿಶೇಷ ಧನವೂ ಬುದ್ಧಿಯೂ ಬೇಕಾಗುತ್ತವೆ. ಇವೆರಡೂ ಬೇಸಾಯಗಾರರಲ್ಲಿ ಇಲ್ಲ. ಅವರಲ್ಲಿ ದೇಹಶ್ರಮ ಮಾತ್ರವಿರುತ್ತದೆ. ಇವುಗಳು ಐಶ್ವರ್ಯವಂತರಲ್ಲೂ, ಬೇಸಾಯದ ಜಾತಿಯಲ್ಲದ ಇತರ ಜಾತಿಯವರಲ್ಲೂ ಮಾತ್ರ ಇರುತ್ತವೆ ಆದುಕಾರಣ ಬೇಸಾಯಗಾರರಲ್ಲದ ಇತರರು ಭೂಮಾಲೀಕರಾಗಿರಬೇಕಾದರೆ, ವ್ಯವಸಾಯಕ್ಕಾಗಿ ಬುದ್ಧಿಯುಪಯೋಗವನ್ನೂ ಧನವ್ಯಯವನ್ನೂ ಮಾಡಬೇಕು. ಹಾಗೆ ಮಾಡಿದರೆ ಇವರ ಮೇಲೆ ಬೇಸಾಯಗಾರರು ಸ್ಪರ್ಧಿಸಲಾರರಾಗಿ ಭೂಮಿಯನ್ನು ಉಳಿಯಿಸಿಕೊಳ್ಳಬಹುದು. ಇದಕ್ಕೆ ದೃಷ್ಟಾಂತವಾವುದೆಂದರೆ—ಬಟ್ಟೆ ಹೊಲಿಯುವ ಕೆಲಸದಲ್ಲಿ ದರ್ಜಿಯವರೊಡನೆ ಇತರ ಜಾತಿಯವರಾರೂ ಸ್ಪರ್ಧಿಸಲು ಆಗುತ್ತಿರಲಿಲ್ಲ. ಈಗಲಾದರೋ ಇತರ ಜಾತಿಯವರೊಳಗನೇಕರು ಧನದ ಪ್ರಭಾವದಿಂದ "ಮಾಸ್ಟರ್ ಟೇಲರ್" ಎನ್ನಿಸಿಕೊಂಡು ದರ್ಜಿಯವರನ್ನು ಕೂಲಿಗಳನ್ನಾಗಿಟ್ಟು ಕೆಲಸಮಾಡಿಸಿ ವಿಶೇಷ ಲಾಭ ಸಂಪಾದನೆಮಾಡುತ್ತಿದ್ದಾರೆ. ಜೋಡು ಹೊಲಿಯುವ ಕಸಬಿನಲ್ಲಿ ಮೋಚಿಯವರೊಡನೆ ಉತ್ಕೃಷ್ಟವಾದ ಜಾತಿಯವರಿಗೆ ಇಂಡಿಯಾ ದೇಶದಲ್ಲಿ ಯಾವಾಗಳಾದರು ಸ್ಪರ್ಧೆ ಇದ್ದಿತೇ? ದ್ವಿಜರಿಗೆ ಉಕ್ತವಾದ ಕೃಷಿಯನ್ನೇ ನೀಚವೆಂದೆಣಿಸಿ ಅದರಲ್ಲಿ ಉದ್ಯುಕ್ತರಾಗದವರು ಜೋಡು ಹೊಲಿಯುವ ವೃತ್ತಿಗೆ ಹೋಗುವುದಕ್ಕೆ ಮನಸ್ಸು ಬಂದೀತೇ? ಈಗಿನ ಸ್ಥಿತಿಯು ಹೇಗಿದೆಯೆಂದರೆ—ಅತ್ಯುತ್ಕೃಷ್ಟವಾದ ಜಾತಿಯವರೇ ಹಣದ ಪ್ರಭಾವದಿಂದ ಮೋಚಿ ಕಸಬನ್ನು ಅವಲಂಬಿಸಿ, ಲಾಭವನ್ನು ಸಂಪಾದಿಸುತ್ತಿದ್ದಾರೆ. ಇವರ ಜಾತಿ ಗೌರವವಾದರೊ ಸ್ವಲ್ಪವೂ ಕಡಮೆಯಾಗಿಲ್ಲ. ಏಕೆಂದರೆ, ಸಾರಥಿ ಹೇಗೆ ತನ್ನ ಶಕ್ತಿ ಬುದ್ಧ್ಯುಪಾಯಗಳ ಮೂಲಕ ಕುದುರೆಗಳಿಂದ ಗಾಡಿಯನ್ನು ಎಳೆಯಿಸುವನೋ ಹಾಗೆ ಇವರು ತಮ್ಮ ಬುದ್ಧಿ ಶಕ್ತಿ ಧನಗಳ ಪ್ರಭಾವದಿಂದ ಆ ಕೆಲಸವನ್ನು ಮೋಚಿಯವರಿಂದಲೇ ಮಾಡಿಸಿ ಲಾಭ ಸಂಪಾದನೆಮಾಡುತ್ತಿದ್ದಾರೆ. ಅಸ್ವಾರಹಿತವಾಗಿ ಮಾಡುವ ಕೆಲಸವು ನೀಚವೆಂದೆಣಿಸಲ್ಪಡುವುದು. ವಿಶೇಷವಾದ ಬುದ್ಧಿ ಶಕ್ತಿ ಸಾಹಸ ಧನವ್ಯಯಗಳಿಂದ ಮಾಡಲ್ಪಡುವ ಯಾವ ಕೆಲಸವೂ ನೀಚವೆಂದೆಣಿಸಲ್ಪಡುವುದಿಲ್ಲ. ಈಗ—ಮೇಲೆ ಉದಹರಿಸಲ್ಪಟ್ಟ "ಮಾಸ್ಟರ್ ದರ್ಜಿ" ಯಾಗಲಿ, "ಮಾಸ್ಟರ್ ಚರ್ಮವೃತ್ತಿಯವ" ನಾಗಲಿ ವಿಶೇಷವಾದ ಬುದ್ಧಿ, ಶಕ್ತಿ, ಧನ ಇವುಗಳ ಪ್ರಯೋಗದಿಂದ ಎಷ್ಟು ಹೆಚ್ಚಾಗಿ ಸಂಪಾದನೆಮಾಡುತ್ತಾನೆಯೋ ವಿಚಾರಮಾಡುವ. ತಾನು ಪ್ರಯೋಗಿಸುವ ಬುದ್ಧಿ ಶಕ್ತಿ ಶ್ರಮಕ್ಕೂ, ತಾನು ವೆಚ್ಚಿಸುವ ಹಣದ ಬಡ್ಡಿಗೂ ಆಗುವಷ್ಟೂ, ಮತ್ತೂ ತಾನು ಕೆಲಸಕ್ಕೆ ಇಟ್ಟುಕೊಳ್ಳುವ ದರ್ಜಿಯವರಾಗಲಿ, ಮೋಚಿಯವರಾಗಲಿ, ಅವರು ಸ್ವತಂತ್ರವಾಗಿ ಕೆಲಸಮಾಡುತ್ತಿದ್ದರೆ ಎಷ್ಟು ಸಂಪಾದನೆಮಾಡುತ್ತಿದ್ದರೊ ಅದಕ್ಕಿಂತ ಹೆಚ್ಚಾಗಿ ಅವರಿಗೆ ಕೊಡಲಾಗುವಷ್ಟೂ ಸಹ ಸಂಪಾದನೆಮಾಡುತ್ತಾನೆ. ಇಷ್ಟು ಹೆಚ್ಚಾಗಿ ಅವನು ಸಂಪಾದನೆಮಾಡಲೇಬೇಕು. ಅಲ್ಲದಿದ್ದರೆ, ಆ ಕೆಲಸಗಾರರು ಸ್ವತಂ

ತ್ರವಾಗಿ ಕೆಲಸಮಾಡುವುದನ್ನು ಬಿಟ್ಟು ಈ ಮಾಸ್ಟರುಗಳಲ್ಲಿ ಕೆಲಸಮಾಡುತ್ತಲೇ ಇರಲಿಲ್ಲ. ಈ ಮಾಸ್ಟರುಗಳು ಆ ವೃತ್ತಿಗಳ ಶಿಕ್ಷಣವನ್ನು ವಿಶೇಷವಾಗಿ ಹೊಂದಿ ಕಸಬುದಾರರಿಗಿಂತ ಹೆಚ್ಚಾದ ಕೌಶಲವನ್ನು ಪಡೆಯದೆಯೂ, ಕಾರ್ಯಕ್ಕೆ ಬೇಕಾದ ಬಹು ಮೊಲ್ಯ ಬಾಳುವ ಯಂತ್ರಗಳನ್ನು ಒದಗಿಸಿಕೊಡದೆಯೂ ಇದ್ದರೆ, ಇವರು 'ಮಾಸ್ಟರು' ಆಗುತ್ತಿರಲೂ ಇಲ್ಲ; ಆ ಕಸಬುದಾರರು ಇವರ ಬಳಿ ಕೆಲಸಕ್ಕೆ ಸೇರುತ್ತಲೂ ಇರಲಿಲ್ಲ; ಆ ಕಸಬುದಾರರೊಡನೆ ಸ್ಪರ್ಧಿಸಲು ಸಹ ಇವರಿಗೆ ಆಗುತ್ತಿರಲಿಲ್ಲ. ಇದೇ ಮೇರೆ, ಭೂಮಾಲೀಕರು ಸಹ ವಿಶೇಷ ದ್ರವ್ಯವ್ಯಯದಿಂದ ಕೃಷಿಸಂಬಂಧವಾದ ಶಿಕ್ಷಣವನ್ನು ತಾವೇ ಹೊಂದಿ, ಅಥವಾ ಹಾಗೆ ಶಿಕ್ಷಣಹೊಂದಿರುವವರನ್ನು ಇಟ್ಟು ಕೊಂಡು, ವಿಶೇಷ ಫಲೋತ್ಪಾದನಕ್ಕೆ ಸಾಧಕವಾದ, ನೀರು ಗೊಬ್ಬರ ವ್ಯವಸಾಯದ ಯಂತ್ರ ಇವುಗಳನ್ನು ಒದಗಿಸಿಕೊಂಡು ಭೂವ್ಯವಸಾಯವನ್ನು ಮಾಡಿದರೆ ಇವರ ಮೇಲೆ ಸ್ಪರ್ಧಿಸಲು ಬೇಸಾಯಗಾರಮಾತ್ರದವರಿಗೆ ಯಾರಿಗೂ ಸಾಧ್ಯವಾಗುವುದಿಲ್ಲ. ಮತ್ತೂ ಬೇಸಾಯಗಾರರು ತಂತಮ್ಮ ಸ್ವಂತ ಜಮೀನುಗಳನ್ನೂ ಬಿಟ್ಟು ಈ ಭೂಮಾಲೀಕರಲ್ಲಿ ವ್ಯವಸಾಯದ ಕೆಲಸಕ್ಕೆ ಸೇರಿಕೊಳ್ಳುವರು. ಏಕೆಂದರೆ, ತಮ್ಮ ಸ್ವಂತ ಜಮೀನಿನ ಉತ್ಪತ್ತಿಯಿಂದ ತಮಗೆ ಎಷ್ಟು ಆದಾಯ ಬರುತ್ತಿದ್ದಿತೋ ಅದಕ್ಕಿಂತ ಹೆಚ್ಚಾದ ಆದಾಯವು ಇಂತಹ ಭೂಮಾಲೀಕರಿಂದ ದೊರೆಯುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಹೀಗೆಯೇ ನಡೆಯುತ್ತದೆ. ಧನಿಕನಾದ ಭೂಮಾಲೀಕನ ಭೃತ್ಯತ್ವದಲ್ಲಿ ವ್ಯವಸಾಯಮಾಡದೆ, ಸ್ವಂತ ಜಮೀನನ್ನು ವ್ಯವಸಾಯಮಾಡುವುದು ಆ ದೇಶಗಳಲ್ಲಿ ಸ್ವಲ್ಪವೂ ಲಾಭಕರವಲ್ಲ. ಏಕೆಂದರೆ, ಧನಿಕನಾದ ಭೂಮಾಲೀಕನಾದರೋ, ತನ್ನ ಧನದ ಸಹಾಯದಿಂದ ಸಾಧನಸಂಪತ್ತಿಗಳೊಡನೆ ವ್ಯವಸಾಯವನ್ನು ಮಾಡಿ ಒಂದಕ್ಕೆ ಹತ್ತರಷ್ಟು ಬೆಳೆಯುತ್ತಾನೆ. ಬೇಸಾಯಗಾರರು ತಮ್ಮ ಸ್ವಂತ ಜಮೀನಿನಲ್ಲಿ ವರ್ಷವೂ ಗೇದು ಮಾಡಿಕೊಳ್ಳುವಷ್ಟು ಉತ್ಪತ್ತಿಯು ಅವನಲ್ಲಿ 3 ತಿಂಗಳು ಕೆಲಸಮಾಡಿದರೆ ದೊರೆಯುತ್ತದೆ. ಇಂತಹ ಸಂದರ್ಭದಲ್ಲಿ ಸಣ್ಣ ಬೇಸಾಯಗಾರರು ತಂತಮ್ಮ ಸ್ವಂತ ಜಮೀನಿನನ್ನೇ ವ್ಯವಸಾಯಮಾಡಿದರೆ ಇವರಿಗೆ ಉಂಟಾಗುವ ನಷ್ಟವು ಈ ಉದಾಹರಣೆಯಿಂದ ಗೊತ್ತಾಗುತ್ತದೆ:—ಇವರು ಬೆಳೆದುದನ್ನು ಹೊಟ್ಟೆಗುಳಿಸಿಕೊಂಡು ಮಿಕ್ಕುದನ್ನು ಬಟ್ಟೆಗಾಗಿ ಪಲ್ಲ 1 ಕ್ಕೆ 5 ರೂ. ಮೇರೆ ಮಾರಲು ಪ್ರಯತ್ನಿಸುತ್ತಾರೆ. ಆದರೆ ಯಾರೂ ಇವರ ಧಾನ್ಯವನ್ನು ಇಷ್ಟು ಕ್ರಯಕ್ಕೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ಭೂಮಾಲೀಕನಾದ ಧನಿಕನು ಪಲ್ಲ 1 ಕ್ಕೆ 2 ½ ರೂ. ನ ಮೇರೆ ಮಾರಲು ಸಿದ್ಧವಾಗಿದ್ದಾನೆ. ಅದುಕಾರಣ ಅಲ್ಲಿ ವ್ಯವಸಾಯಗಾರರು ತಂತಮ್ಮ ಸಣ್ಣ ಹೊಲಗಳ ವ್ಯವಸಾಯವನ್ನು ಬಿಟ್ಟೇ ಬಿಟ್ಟು, ಕೆಲರು ಈ ಧನಿಕರ ಬಳಿ ಭೂವ್ಯವಸಾಯಕ್ಕೂ ಇತರರು ಇತರ ವೃತ್ತಿಗಳಿಗೂ ಸೇರಿಕೊಂಡು ಅದರಲ್ಲಿ ಸಂಪಾದಿಸುವ ಹಣದಿಂದ ಅಗ್ಗವಾಗಿ ದೊರೆಯುವ ಧಾನ್ಯವನ್ನು ತಿಂದು ಜೀವಿಸುತ್ತಿದ್ದಾರೆ. ಇದೀಗ ಧನಿಕರಾದ ಭೂಮಾಲೀಕರು ಬೇಸಾಯಗಾರರಿಂದ ಬೇಸಾಯದ ಕೆಲಸವನ್ನು ಮಾಡಿಸಿಕೊಳ್ಳುವ ರೀತಿ; ಮತ್ತೂ ಭೂಸ್ವಾಮ್ಯವನ್ನು ಉಳಿಸಿಕೊಳ್ಳುವ ವಿಧಾನ. ಹಾಗಲ್ಲದೆ ಭೂಸ್ವತ್ವವು

ತಮ್ಮಲ್ಲಿದೆ ಎಂಬ ಅಹಂಕಾರದಿಂದ ಒಣ ಭೂಮಿಯನ್ನು ರೈತರಿಂದ ಕೆರೆಯಿಸಿಕೊಳ್ಳುತ್ತೇವೆಂದರೆ ಇವರು ಜಯಶೀಲರಾಗಿ ಎಂದಿಗೂ ಆಗುವುದಿಲ್ಲ. ಈಗ ಉಂಟಾಗಿರುವ ಪರಿಣಾಮಗಳನ್ನು ನೋಡುವ:—ಸಾಧಾರಣವಾಗಿ ಖುಷ್ಕಿ ಜಮೀನುಗಳನ್ನು ಬೇಸಾಯಗಾರರಲ್ಲದೆ ಇತರರು ಇಟ್ಟುಕೊಳ್ಳುವುದು ವ್ಯರ್ಥ. ಅದುಕಾರಣ ಬೇಸಾಯಗಾರರಲ್ಲದಿರುವವರು ಒಳ್ಳೊಳ್ಳೆಯ ತರೀ ಜಮೀನುಗಳನ್ನೇ ಅಪೇಕ್ಷಿಸುತ್ತಾರೆ. ರೈತಾಬಾದು ಇಲ್ಲದಿರುವ ಸ್ಥಳಗಳಲ್ಲಿ ಈ ತರೀ ಜಮೀನುಗಳೂ ಖುಷ್ಕಿ ಜಮೀನುಗಳಂತೆಯೇ ವ್ಯರ್ಥವಾಗುವುವು. ರೈತರು ವಿಶೇಷವಾಗಿರುವ ಸ್ಥಳಗಳಲ್ಲಿ ಮಾತ್ರ ಏನಾದರೂ ಪ್ರಯೋಜನ. ರೈತರು ಭೂಮಿಗಳನ್ನು ವಾರಕ್ಕೆ ಹೆಚ್ಚಾಗಿ ಅಪೇಕ್ಷಿಸುವರು. ಏಕೆಂದರೆ, 10 ಖಂಡಿ ಬೆಳೆದರೆ 5 ಖಂಡಿ ಎಂದು ಮೋಸಮಾಡಲು ಅವರಿಗೆ ಅವಕಾಶದೊರೆಯುತ್ತದೆ. ಗುತ್ತಿಗೆಗಾದರೆ ಮೊದಗಡವನ್ನು ಅಪೇಕ್ಷಿಸುವರು. ವರ್ಷ ವರ್ಷ ಗುತ್ತಿಗೆಯ ದರವನ್ನು ಇಳಿಸುತ್ತಾ ಬರುವರು. ಗುತ್ತಿಗೆಯನ್ನು ಸಲೀಸಾಗಿ ಕೊಡಲೊಲ್ಲರು. ದಾವಾ ಮಾಡಿ ಡಿಕ್ರಿ ಪಡೆದುಕೊಂಡರೆ ಅವರನ್ನು ಸಿವಿಲ್ ಜೈಲಿನಲ್ಲಿ ಸಾಕಬೇಕಾಗುತ್ತದೆ. ಅಂತೂ ಇಂತೂ ಭೂಮಾಲೀಕರು ತಮ್ಮ ತಮ್ಮ ಜಮೀನುಗಳನ್ನು ಆರಕ್ಕೆ ಮೂರಾಗಿ ಸುಟ್ಟುಬಿಡುವಹಾಗೆ ಮಾಡಲು ಏನುಮಾಡಬೇಕೋ ಎಲ್ಲವನ್ನೂ ಮಾಡುತ್ತಾರೆ. ಸ್ವಂತವಾಗಿ ಆಳುಗಳಿಂದ ಮಾಡಿಸುತ್ತೇವೆಂದರೆ, ಆಳುಗಳು ದೊರೆಯುವುದಿಲ್ಲ. ದೊರೆತರೂ 100, 200 ರೂ. ನ್ನು ಅಡ್ವಾನ್ಸಾಗಿ ಕೇಳುತ್ತಾರೆ. ಕೊಟ್ಟರೂ, ಅಡ್ವಾನ್ಸನ್ನು ತೆಗೆದುಕೊಂಡು ಕಾಫಿ ತೋಟ ಕಾರ್ಖಾನೆಗಳಿಗೆ ಓಡಿಹೋಗುತ್ತಾರೆ. ಸ್ವತಃ ಬೇಸಾಯಮಾಡದ ಭೂಮಾಲೀಕರು ಎರಡು ವಿಧದ ಜನಗಳೊಂದಿಗೆ ಸ್ಪರ್ಧಿಸಬೇಕಾಗುತ್ತದೆ. ಸ್ವಂತ ಜಮೀನುಳ್ಳ ಬೇಸಾಯಗಾರರು, ಮತ್ತೂ ಕೈಗಾರಿಕೆ ಕೆಲಸದ ಕಾರ್ಖಾನೆ ಮೊದಲಾದುವುಗಳ ಮಾಲೀಕರು. ಬೇಸಾಯಗಾರರಿಗೆ ಹೀನಭೂಮಿಗಳು ಸುಲಭವಾಗಿ ದೊರೆಯುತ್ತವೆ. ಮತ್ತೂ ಸರ್ಕಾರದವರು ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿಸಿ ಕಾಡುಮೇಡು ಭೂಮಿಗಳನ್ನೆಲ್ಲಾ ನೀರಾವರಿಯಾದ ಫಲವತ್ತಾದ ಭೂಮಿಗೆ ತಿರುಗಿಸುತ್ತ, ಅವನ್ನು ರೈತರಿಗೆ ಕೊಡುತ್ತಿದ್ದಾರೆ. ಈ ಪ್ರಕಾರ ಸ್ವತಃ ಭೂಮಿಗಳನ್ನು ಸಂಪಾದನೆಮಾಡುವ ರೈತರು ತಮ್ಮ ವ್ಯವಸಾಯವನ್ನು ಬಿಟ್ಟು ಆ ಭೂಮಾಲೀಕರ ಜಮೀನನ್ನು ಸಾಗುವಳಿ ಮಾಡಬೇಕಾದರೆ, ಅವರಿಗೆ ಹೆಚ್ಚು ಲಾಭ ಕಂಡುಬರಬೇಕು. ಹಾಗೆ ಹೆಚ್ಚು ಲಾಭವನ್ನು ಅವರಿಗೆ ದೊರಕಿಸಿಕೊಡಬೇಕಾದರೆ, ಈ ದೇಶದ ಭೂಮಾಲೀಕರು, ಪಾಶ್ಚಿಮಾತ್ಯ ಭೂಮಾಲೀಕರಂತೆ ತನುಮನ ಧನಗಳನ್ನು ಬೇಸಾಯಕ್ಕೆ ಒತ್ತೆ ಕೊಡವೆ, ಈಗ ಇರುವಹಾಗೆ ಅವರಿಗೆ ಎಂದಿಗೂ ಸಾಧ್ಯವಲ್ಲ. ಸ್ವಂತ ಭೂಮಿಯಿಲ್ಲದ ಬೇಸಾಯಗಾರರಿಂದ ಕೆಲಸಮಾಡಿಸಬಹುದೆಂದರೆ ಅಲ್ಲಿಯೂ ಮಾರ್ಗ ನಿಷ್ಕಂಟಕವಾಗಿಲ್ಲ. ಪಾಶ್ಚಿಮಾತ್ಯರು ಈ ದೇಶದಲ್ಲಿ ವಿಶೇಷ ಸಾಧನಸಂಪತ್ತಿಗಳಿಂದ ಕಾಫಿ, ಸಿಂಕೋನ, ರಬ್ಬರ್ ಮೊದಲಾದ ತೋಟಗಳನ್ನು ಮಾಡಿರುತ್ತಾರೆ; ಮತ್ತೂ ಕಾರ್ಖಾನೆಗಳಾದರೋ ದಿನೇ ದಿನೇ ಅಭಿವೃದ್ಧಿಯಾಗುತ್ತಿವೆ. ಇವುಗಳಲ್ಲಿ ಹೆಂಗಸರೂ ಮಕ್ಕಳೂ ಸಹ ಕ್ರಮಗಾಗಿ ಮಿಗುವಷ್ಟನ್ನು ಸಂಪಾದನೆ ಮಾಡಿಕೊಳ್ಳಬಹುದು. ಇಷ್ಟು

ಸೌಕರ್ಯಗಳು ಇಲ್ಲಿ ದೊರೆಯುತ್ತಿರಲು, ಯಾರು ತಾನೆ ಈ ಭೂಮಾಲೀಕರು ಭೂಮಿಗಳನ್ನು ಹೊಟ್ಟೆಗಾದರೆ ಬಟ್ಟೆಗಾಗದ, ಬಟ್ಟೆಗಾದರೆ ಹೊಟ್ಟೆಗಾಗದ ಪ್ರತಿಫಲಕ್ಕೆ ಕೆಲಸ ಮಾಡುತ್ತಾರೆ? ಅದುಕಾರಣ ನಮ್ಮ ದೇಶಗಳ ಬೇಸಾಯಗಾರರಲ್ಲದ ಜಮೀನ್‌ದಾರರು ಪಾಶ್ಚಿಮಾತ್ಯರಂತೆ ತಮ್ಮ ಸರ್ವಸ್ವವನ್ನೂ ಸರ್ವ ಶಕ್ತಿಯನ್ನೂ, ಸರ್ವ ಬುದ್ಧಿಯನ್ನೂ ಬೇಸಾಯಕ್ಕಾಗಿ ಕೊಡದಿದ್ದರೆ, ಅವರು ಭೂಮಾಲೀಕತೆಯನ್ನು ಬಹಳ ದಿವಸ ಉಳಿಸಿಕೊಳ್ಳಲಾರರು. ಇನಾಂದಾರರು, ಜಹಗೀರುದಾರರಾದರೋ—ಇವರೂ ಸಹ ಎಚ್ಚರಗೊಳ್ಳದಿದ್ದರೆ ಇವರ ಗತಿಯು ಹಾಗೆಯೇ ಆಗುವುದು. ರೈತರಿಗೆ ಖಾಯಂ ಹಿಡುವಳಿಹಕ್ಕನ್ನು ಕೊಡದೆ ಜಮೀನನ್ನು ಒಬ್ಬರಿಂದ ಕಿತ್ತು ಮತ್ತೊಬ್ಬರಿಗೆ ಕೊಟ್ಟು ರೈತರ ಅನ್ಯೋನ್ಯಸ್ಪರ್ಧತೆಯಿಂದ ಲಾಭವನ್ನು ಪಡೆದುಕೊಳ್ಳುತ್ತಿದ್ದುದು ಇನ್ನು ಮೇಲೆ ಅನುಕೂಲಿಸುವುದಿಲ್ಲ. ಸರ್ಕಾರಿ ಗ್ರಾಮದ ರೈತರುಗಳಿಗಿರುವಂತೆ ಖಾಯಂ ಹಿಡುವಳಿ ಹಕ್ಕನ್ನು ಈನಾಂ ಗ್ರಾಮದ ರೈತರಿಗೂ ಕೊಡಿಸುವುದರಲ್ಲಿ ಸರ್ಕಾರದವರು ಮುಂದರಿಯುತ್ತಿದ್ದಾರೆ. ಇನಾಂದಾರರಿಗೆ ಇನಾಂ ಗ್ರಾಮಗಳಿಂದ ಉಂಟಾಗುವ ಉತ್ಪತ್ತಿಯು ಪೇಷ್ಕಷ್ ಆಗಿದ್ದರೆ ಹೇಗೋ ಹಾಗೆ ನಿಯತವಾಗುತ್ತದೆ. ಸರ್ಕಾರದವರೂ ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿಸುತ್ತ ಭೂಮಿಗಳನ್ನು ನೀರಾವರಿಗೆ ತರುತ್ತಿದ್ದಾರೆ. ಇನಾಂದಾರರೂ ಅದರಂತೆ ಭೂಮಿಯನ್ನು ಅಬಾದುಮಾಡದಿದ್ದರೆ ಆ ಗ್ರಾಮಗಳ ಮಧ್ಯ ತರದ ಭೂಮಿಗಳನ್ನು ವ್ಯವಸಾಯಮಾಡುವ ರೈತರು ಅವನ್ನು ಬಿಟ್ಟು ಒಳ್ಳೆಯ ಭೂಮಿಗಳು ಸಿಕ್ಕುವ ಸ್ಥಳಗಳಿಗೆ ಹೋಗಿಬಿಡುವರು. ಅದುಕಾರಣ ಇನಾಂದಾರರು ಆಧುನಿಕವ್ಯವಸಾಯಸಾಧನಗಳನ್ನೆಲ್ಲ ರೈತರಿಗೆ ಒದಗಿಸಿಕೊಡುವುದು ಅವರ ಸ್ವಾರ್ಥಕ್ಕೇ ಬಹಳ ಅವಶ್ಯಕವಾಗಿದೆ.

ಬೇಸಾಯಗಾರರಲ್ಲದಿರುವವರು ಭೂಮಿಗಳನ್ನು ಸಂಪಾದನೆಮಾಡುವ ವಿಧಾನವು ಮತ್ತೊಂದು:—ಬೇಸಾಯಗಾರರಿಗೆ ಸಾಲವನ್ನು ಕೊಟ್ಟು ಆ ಬಳಿಕ ಸಾಲಕ್ಕಾಗಿ ಕೋರ್ಟಿನ ಮೂಲಕವಾಗಲಿ, ಹೊರಗೇ ಆಗಲಿ ಆ ಜಮೀನನ್ನು ಸೇರಿಸಿಕೊಳ್ಳುವುದು. ಋಣದಾತರು ಎಂದರೆ, ಲೇವಾದೇವಿಯಿಂದ ಜೀವಿಸುವವರು ಯಾವಾಗಲೂ ದೇಶಕ್ಕೆ ಮಿತ್ರರು. ಇವರು ಎಷ್ಟು ಹೆಚ್ಚಿನ ದರದ ಬಡ್ಡಿಯನ್ನಾದರೂ ತೆಗೆದುಕೊಳ್ಳಲಿ, ಚೌಕಬಡ್ಡಿಯನ್ನಾದರೂ ಸಂಪಾದಿಸಲಿ, ಇವರಿಂದ ದೇಶಕ್ಕೆ ಲಾಭವೇ ಹೊರತು ನಷ್ಟವಿಲ್ಲ. ನ್ಯಾಯವಾದ ಮಾರ್ಗಗಳಲ್ಲಿ ಧನಸಂಪಾದನೆಮಾಡಲು ಯಾರಿಗೆ ಹೆಚ್ಚು ಹೆಚ್ಚಿನ ಆಶೆ ಇರುವುದೋ ಅವರು ದೇಶಕ್ಕೆ ಹೆಚ್ಚು ಹೆಚ್ಚಿನ ಮಿತ್ರರಾಗಿರುತ್ತಾರೆ. ಧನವನ್ನು ಬೆಳೆಯಿಸಬೇಕೆಂಬ ಅಭಿಲಾಷೆಯಿಲ್ಲದೆ ಅದನ್ನು ಬಚ್ಚಿಡುವವರೂ, ನಿಷ್ಪ್ರಯೋಜಕವಾದ ಸ್ರಕ್‌ಚಂದನ ವಿಷಯಾದಿಗಳು, ಆಭರಣ ಮೊದಲಾದ ಡಾಂಭಿಕ ಪದಾರ್ಥಗಳು, ಮದ್ದು ಬಿರುಸು, ವಾದ್ಯ, ತಾಳ, ಮೇಳ ಮೊದಲಾದ ದುಂದುಗಾರಿಕೆಯ ಕೆಲಸ, ಇವುಗಳಲ್ಲಿ ವಿನಿಯೋಗಿಸುವವರೂ ಮಾತ್ರ ದೇಶದ ಶತ್ರುಗಳಾಗಿರುತ್ತಾರೆ. ಕಾಸನ್ನು ಕೈಬಿಡದೆ ಗಂಟುಹಾಕತಕ್ಕವರು ಜೇನರು. ಹಣವನ್ನು ನಿಷ್ಪ್ರಯೋಜನವಾಗಿ ತಮ್ಮ ಬಳಿ ಒಂದು ದಿವಸವೂ ಇಟ್ಟುಕೊಳ್ಳದ ಋಣದಾತರು ಉದಾರಿಗಳೇ ಆಗಿರು

ತ್ತಾರೆ. ಸೇಕಡ ೫-೬ ಆಣೆಯಷ್ಟು ಪ್ರಯೋಜನವಾಗುವ ಭೂಮಿಯುತ್ಪತ್ತಿಯಲ್ಲಿ ತೃಪ್ತಿಪಡುವ ಭೂಮಾಲೀಕರಿಗಿಂತ ಋಣಜೀವಿಗಳು ಎಷ್ಟೋ ಉತ್ತಮರು. ವಿಶೇಷ ಬಡ್ಡಿಯ ದರಕ್ಕೆ ಇವರು ಜವಾಬ್ದಾರರಲ್ಲ. ಧಾನ್ಯದ ತಗ್ಗಿಗೆ ಧಾನ್ಯಮಾರುವ ವರ್ತಕರ ದೋಷವಾವುದೂ ಇಲ್ಲ; ಧಾನ್ಯವನ್ನು ತಿನ್ನುವವರ ಸಂಖ್ಯೆಗೆ ತಕ್ಕಷ್ಟು ಧಾನ್ಯವು ದೇಶದಲ್ಲಿಲ್ಲದಿರುವುದೇ ಅದು ತಗ್ಗಾಗಲಿಕ್ಕೆ ಕಾರಣವಾಗುವುದು. ಹಾಗೆಯೇ ಮನುಷ್ಯನ ಅಪೇಕ್ಷ್ಯಗಳು ಹೆಚ್ಚಿ, ಅಷ್ಟೊಂದು ಅಪೇಕ್ಷ್ಯಗಳನ್ನು ಕೊಳ್ಳಲಿಕ್ಕೆ ದೇಶದಲ್ಲಿ ಹಣವಿಲ್ಲದಿರುವುದೇ ಬಡ್ಡಿಯ ದರ ಏರುವುದಕ್ಕೆ ಕಾರಣ. ಹಣವಿರುವವರನೇಕರು ಆ ಹಣವನ್ನು ಸಾಲವಾಗಾದರೂ ಅಥವಾ ಫಲಪ್ರಯೋಜಕವಾದ ಕಾರ್ಯಗಳಲ್ಲಾದರೂ ವಿನಿಯೋಗಿಸದೆ ತಪ್ಪುವುದರಿಂದ ಸಾಲಕೊಡುವವರಲ್ಲಿ ಪೋಟಾಪೋಟಿಯಿಲ್ಲದುದಕ್ಕಾಗಿ ಸಾಲಕೊಡಲಿಚ್ಛಿಸುವ ಸ್ವಲ್ಪ ಜನರು ಬಡ್ಡಿಯನ್ನು ಏರಿಸುವುದು ಸ್ವಭಾವವೇ ಆಗಿದೆ. ಲೇವಾದೇವಿ ಎಂದರೆ ಹಣದ ವ್ಯಾಪಾರ. ಇತರ ಪದಾರ್ಥದ ವ್ಯಾಪಾರವಿರುವುದು ದೇಶದ ಹಿತಕ್ಕೆ ಹೇಗೆ ಅವಶ್ಯಕವೋ ಹಾಗೆ ಹಣದ ವ್ಯಾಪಾರವೂ ಅವಶ್ಯಕ. ಹಣದ ವ್ಯಾಪಾರದಿಂದ ಇತರ ವ್ಯಾಪಾರಗಳೂ, ಕೈಗಾರಿಕೆಯ ಕೆಲಸಗಳೂ ಎಲ್ಲವೂ ವೃದ್ಧಿಯಾಗುತ್ತವೆ. ಆಂಗ್ಲೇಯ ಋಣದಾತರು ಈ ದೇಶದಲ್ಲಿ ಹಣವನ್ನು ತಂದು ಚೆಲ್ಲದಿದ್ದಲ್ಲಿ ಈ ದೇಶದಲ್ಲಿ ರೈಲುಗಳೇ ಇರುತ್ತಿರಲಿಲ್ಲ. ಬೇಸಾಯಕ್ಕೂ ಹಾಗೆ ಹಣವು ಬೇಕು. ಬೇಸಾಯಕ್ಕಾಗಿ ವೆಚ್ಚಮಾಡಲು ಬೇಸಾಯಗಾರರಿಗೆ ಹಣವಿಲ್ಲ. ಬೇಸಾಯಗಾರರಲ್ಲದ ಭೂಮಾಲೀಕರಿಗೆ ಮನಸ್ಸಿಲ್ಲ. ಹೆಚ್ಚು ಬಡ್ಡಿಯನ್ನಾದರೂ ತೆಗೆದುಕೊಂಡು ಸಾಲಕೊಡುವವರಿಲ್ಲದಿದ್ದರೆ ಅವರಿಗೆ ಗತಿಯೇನು? ಅದುಕಾರಣ ಋಣದಾತರು ಯಾವಾಗಲೂ ದೇಶದ ಹಿತಕ್ಕೆ ಅವಶ್ಯಕ. ಆದರೆ ಇವರ ಉಪಯೋಗ ಎದುವರೆಗೆ ಎಂದರೆ ಬೇಸಾಯಗಾರರಾದ ಋಣಿಗಳಿಂದ ಬಡ್ಡಿಯನ್ನು ಮಾತ್ರ ಇವರು ಹೊಂದುತ್ತಿರುವವರೆಗೇ; ಸಾಲಕ್ಕಾಗಿ ಬೇಸಾಯಗಾರರ ಭೂಮಿಗಳನ್ನು ಇವರು ಕಟ್ಟಿಕೊಂಡರು ಎಂದರೆ ಸ್ವಂತಕ್ಕೂ ದೇಶಕ್ಕೂ ಅಹಿತಕಾರಿಗಳಾಗಿ ಪರಿಣಮಿಸುತ್ತಾರೆ. ಸ್ವಂತಕ್ಕೆ—ಏಕೆಂದರೆ—ಶೇಕಡ ೧೨ ಆಣೆಯಿಂದ ರೂ. ೧-೪-೦ ವರೆಗೂ ಬರುತ್ತಿದ್ದ ಬಡ್ಡಿಯು ತಟಕ್ಕನೆ 4-5 ಆಣೆಗೆ ಇಳಿದುಹೋಗುತ್ತದೆ. ಜಮೀನಿನೊಡನೆ ಕೆಲವುಕಾಲ ಹಾಗೆ ಹೀಗೆ ಆಡುತ್ತಿದ್ದು ಕೊನೆಗೆ ಅಸಲಿಗೋ ಅಥವಾ ಅದಕ್ಕೂ ಕಡಮೆಗೋ ಅದನ್ನು ಮಾರಬೇಕಾಗಿ ಬರುತ್ತದೆ. ಅಸಲಿಗೆ ಸಮನಾಗಿ ಏರಿಸಿದ್ದ ಬಡ್ಡಿಯು ಬಹುಶಃ ಉತ್ಪತ್ತಿಯಾಗುವುದಿಲ್ಲ. ಬೇಸಾಯಗಾರರಲ್ಲದ ಭೂಮಾಲೀಕರ ವಿಷಯದಲ್ಲಿ ಹಿಂದೆ ವಿವರಿಸಲ್ಪಟ್ಟ ಉಪಹತಿಗಳೆಲ್ಲವೂ ಇವರಿಗೂ ಉಂಟಾಗುತ್ತವೆ. ದೇಶಕ್ಕೆ—ಏಕೆಂದರೆ, ಬೇಸಾಯಗಾರನ ಸ್ವಾಮ್ಯವು ಭೂಮಿಗೆ ತಪ್ಪಿಹೋದಂದಿನಿಂದ ಅದು ಗೊಬ್ಬರಪಾಶಿಯನ್ನು ಬಿಟ್ಟುಬಿಡಬೇಕು. ಭೂಮಿಯ ಉತ್ಪತ್ತಿಯು ಕಡಮೆಯಾಗುತ್ತೆಂದು ಹೇಳಬೇಕಾದ ಅವಶ್ಯಕವೇ ಇಲ್ಲ. ಈ ಪ್ರಕಾರ ದೇಶಕ್ಕೂ ಅಹಿತವಾಗಿ ಪರಿಣಮಿಸುತ್ತದೆ. ಅದುಕಾರಣವೇ ಬೇಸಾಯಗಾರರಿಂದ ಭೂಮಿಯು ಇತರರಿಗೆ ಹೋಗುವುದರಲ್ಲಿ ಪಂಜಾಬು ಮೊದಲಾದ ದೇಶಗಳಲ್ಲೂ, ಋಣದಾತರಿಗೆ ಹೋಗುವುದರಲ್ಲಿ ಬೊಂಬಾಯಿ

ಆಧಿಪತ್ಯದಲ್ಲೂ ಅನೇಕ ಆತಂಕಗಳನ್ನು ಕಾನೂನುಗಳ ಮೂಲಕ ಕಲ್ಪಿಸಿದ್ದಾರೆ. ನಮ್ಮ ದೇಶದಲ್ಲಿ ವ್ಯವಹಾರಕ್ಕೆ ಬೇಕಾದಷ್ಟು ಹಣವು ದೊರೆಯುವುದಿಲ್ಲ. ಇದಕ್ಕೆ ಕಾರಣ ಅನಾಗರಿಕತೆಯೇ ಹೊರತು ಹಣದ ಅಭಾವವಲ್ಲ. ಪ್ರತಿ ದೇಶದಲ್ಲೂ ಆ ಆ ದೇಶದಲ್ಲಿ ದೊರೆಯುವ ಉಪಭುಜ್ಯಪದಾರ್ಥಗಳ ಆಧಿಕ್ಯಕ್ಕೆ ತಕ್ಕಷ್ಟು ಹಣವಿದ್ದೇ ಇರಬೇಕು. ಹಣವು ಉಪಭುಜ್ಯಪದಾರ್ಥವಲ್ಲ; ಉಪಭುಜ್ಯಪದಾರ್ಥದ ಒಂದು ಚಿಹ್ನೆ. ಉಪಭುಜ್ಯಪದಾರ್ಥವೆಂದರೆ, ಅಕ್ಕಿ, ಬೇಳೆ, ವಸ್ತ್ರ ಮೊದಲಾದ ಉಪಭೋಗಕ್ಕೆ ಬರತಕ್ಕ ಪದಾರ್ಥ. ಸಾಧಾರಣವಾದ ಒಂದು ಕಬ್ಬಿಣದ ಮೊಳೆಯಲ್ಲಿರುವ ಉಪ ಭುಜ್ಯತ್ವವು ನೂರು ವರಹಗಳಲ್ಲೂ ಇಲ್ಲದಿರಬಹುದು. ಏಕೆಂದರೆ, ವರಹಗಳ ಪದಾರ್ಥ ವಾದ ಚಿನ್ನದಲ್ಲಿ ಸ್ವಭಾವಜ ಉಪಭುಜ್ಯತ್ವವು ಅಷ್ಟೇ ತೂಕದ ಕಬ್ಬಿಣದಲ್ಲಿರುವುದ ಕ್ಕಿಂತ ಕಡಮೆಯಾಗಿರಬಹುದು. ಹಣವು ಉಪಭುಜ್ಯಪದಾರ್ಥದ ಚಿಹ್ನೆಯಾಗಿಮಾತ್ರ ವಿರುತ್ತದೆ. ರಾಜನ ರಾಯಭಾರಿಗೆ ಸಲ್ಲುವ ಮರ್ಯಾದೆಗಳು ರಾಜನಿಗಲ್ಲದೆ ರಾಯ ಭಾರಿಗಲ್ಲ. ನಾಣ್ಯವು ರಾಯಭಾರಿಯಂತೆ. ಅದಕ್ಕೆ ಮೂಲವಾದ ಉಪಭುಜ್ಯ ಪದಾರ್ಥವು ರಾಜನಂತೆ. ರಾಯಭಾರಿಯು ಎಷ್ಟು ಅನಾಮಧೇಯ ಮನುಷ್ಯನಾಗಿ ದ್ದರೂ ಇರಬಹುದು. ಹಾಗೆ ನಾಣ್ಯದ ಪದಾರ್ಥವು ಎಷ್ಟು ತುಚ್ಛವಾಗಿದ್ದರೂ ಇರ ಬಹುದು. 100 ರೂ. ನ ನೋಟಿನಲ್ಲಿರುವ ಪದಾರ್ಥದ ಎಂದರೆ ಕಾಗದದ ಬೆಲೆಯು ಬಹುಶಃ ಮೂರು ಕಾಸಿಗಿಂತಲೂ ಕಡಮೆ 100 ರೂಪಾಯಿಗಳಲ್ಲಿರುವ ಅಚ್ಚ ಬೆಳ್ಳಿಯು ಬಹುಶಃ 60–70 ರೂಪಾಯಿ ತೂಕದೊಳಗೇ ಇರಬಹುದು ಐಶ್ವರ್ಯವಂತರು ಚಿನ್ನ ವನ್ನು ಆಭರಣಗಳ ರೂಪವಾಗಿ ಮೈಮೇಲೆ ಧರಿಸಿಕೊಳ್ಳುವ ಸಂದರ್ಭದಲ್ಲೂ ಸಹ ಆ ಚಿನ್ನದಲ್ಲಿ ಸ್ವಭಾವಜನ್ಯವಾದ ಉಪಭುಜ್ಯತ್ವವಿಲ್ಲ. ಕಾಡುಜನರು ಒಬ್ಬರಿಗಿಂತ ಮತ್ತೊಬ್ಬರು ಹೆಚ್ಚಾಗಿ ಹೊಳೆಯಲು ಗಾಜುಗಳನ್ನೂ ಆನೆ ಮೊದಲಾದ ಪ್ರಾಣಿಗಳ ಮೂಳೆಗಳನ್ನೂ ಹೇಗೆ ಮೈಮೇಲೆ ಧರಿಸಿಕೊಳ್ಳುತ್ತಾರೋ ಹಾಗೆಯೇ ಅರ್ಧನಾಗರಿಕ ರಾದ ಹಿಂದೂಜನರು ಚಿನ್ನ ಬೆಳ್ಳಿಗಳನ್ನು ಮೈಮೇಲೆ ಇಟ್ಟುಕೊಂಡು ಹೊಳೆಯಬೇ ಕೆಂದು ಪ್ರಯತ್ನಿಸುತ್ತಾರೆ. ನಮಗಿಂತಲೂ ಹೆಚ್ಚು ನಾಗರಿಕರಾದ ಪಾಶ್ಚಿಮಾತ್ಯರು ಚಿನ್ನ ಬೆಳ್ಳಿಯನ್ನು ಮೈಮೇಲೆ ಧರಿಸಿಕೊಳ್ಳುವುದು ತುಚ್ಛವೆಂದೆಣಿಸಿ ರತ್ನಗಳನ್ನು ಮಾತ್ರ ಆ ಉದ್ದೇಶಕ್ಕೆ ಉಪಯೋಗಿಸುತ್ತಾರೆ. ಐಶ್ವರ್ಯವಂತರು ಇಂತಹ ಪದಾರ್ಥ ಗಳನ್ನು ಆಭರಣವಾಗಿ ಉಪಯೋಗಿಸುವುದು ಹೊಳೆಯಬೇಕೆಂಬ ಉದ್ದೇಶಕ್ಕೇ ಅಲ್ಲ. ಹಾಗಿದ್ದರೆ ಕಾಗೆಬ್ಬಂಗ, ಕನ್ನಡಿ ಮೊದಲಾದ ಹೆಚ್ಚಾಗಿ ಹೊಳೆಯುವ ಪದಾರ್ಥಗಳ ನ್ನು ಉಪಯೋಗಿಸುತ್ತಿದ್ದರು. ತಮಗಿಂತ ಕೀಳಾಗಿರುವವರು ತಮ್ಮನ್ನು ಐಶ್ವರ್ಯವಂತ ರೆಂದು ತಿಳಿದುಕೊಂಡು ಕೊಂಡಾಡಲಿ, ಗೌರವಿಸಲಿ ಎಂಬ ಉದ್ದೇಶದಿಂದ ಈ ಆಭರಣ ಗಳನ್ನು ಮೈಮೇಲೆ ಹೊತ್ತಿಕೊಳ್ಳುತ್ತಾರೆ. ಈ ಚಿನ್ನ ಬೆಳ್ಳಿ ರತ್ನ ಮೊದಲಾದ ಪದಾ ರ್ಥಗಳಲ್ಲಿ ನಿಜವಾದ ಉಪಭುಜ್ಯತ್ವವಿಲ್ಲನೆಂಬುದು ಇದರಿಂದ ವ್ಯಕ್ತವಾಗುತ್ತದೆ. ಕ್ಷಾಮಕಾಲದಲ್ಲಿ ಆಹಾರವು ದೊರೆಯದಿರುವಾಗ್ಗೆ 100 ರೂಪಾಯಿನ ಆಭರಣದ ಬೆಲೆಯು ಒಂದು ಸೇರಿನ ಅಕ್ಕಿಗಿಂತ ಕಡಮೆಯಾಗುತ್ತದೆ. ಅನಾಗರಿಕರಾದ ಹಿಂದು

ಗಳು ಚಲಾವಣೆಯಲ್ಲಿರಬೇಕಾದ ಚಿನ್ನ ಬೆಳ್ಳಿಯನ್ನು ಆಭರಣರೂಪವಾಗಿ ಮಾಡಿಕೊಂಡು ಅದರ ನ್ಯಾಯವೃತ್ತಿಯಾದ ಚಲಾವಣೆಯನ್ನು ಅದಕ್ಕೆ ತಪ್ಪಿಸಿ, ಸಾಧನಮಾತ್ರವನ್ನು ಫಲವನ್ನಾಗಿ ತಿಳಿದುಕೊಂಡಿರುವುದರಿಂದ ಇಂಡಿಯಾದೇಶದಲ್ಲಿ ಹಣಕ್ಕೆ ಅಭಾವವುಂಟಾಗಿದೆ. ಎಲ್ಲಾ ಉಪಭುಜ್ಯಪದಾರ್ಥಗಳನ್ನು ಪ್ರತಿ ಒಬ್ಬನೂ ಉತ್ಪಾದನೆ ಮಾಡುವುದಾದರೆ ಹಣದ ಅವಶ್ಯಕತೆಯೇ ಇರಲಿಲ್ಲ. ವ್ಯವಸಾಯಮಾಡುವವನು ಬಟ್ಟೆಯನ್ನು ಮಾಡುವುದಿಲ್ಲ. ಬಟ್ಟೆಮಾಡುವವನು ವ್ಯವಸಾಯಮಾಡುವುದಿಲ್ಲ. ವ್ಯವಸಾಯಮಾಡುವವನಿಗೆ ಬಟ್ಟೆ ಬೇಕಾದರೆ ತಾನು ಉತ್ಪಾದನೆಮಾಡುವ ಧಾನ್ಯವನ್ನು ನೈಯುಗೆಯುವನಿಗೆ ಕೊಟ್ಟು ಅವನಿಂದ ಬಟ್ಟೆಯನ್ನು ಈಸಿಕೊಳ್ಳಬಹುದು. ಅದೇ ಮೇರೆ ನೈಯಿಗೆಯುವನು ವ್ಯವಸಾಯಮಾಡುವವನಿಗೆ ಬಟ್ಟೆಯನ್ನು ಕೊಟ್ಟು ಧಾನ್ಯವನ್ನು ಈಸಿಕೊಳ್ಳಬಹುದು. ಹೀಗೆ ಇತರ ಉಪಭುಜ್ಯಪದಾರ್ಥಗಳನ್ನು ಮಾಡತಕ್ಕವರು ಸಹ ತಂತಮಗೆ ಬೇಕಾದ ಉಪಭುಜ್ಯಪದಾರ್ಥಗಳನ್ನು ವಿನಿಮಯಮಾಡಿಕೊಳ್ಳಬಹುದು. ಹಣವು ಒಬ್ಬ ವರ್ತಕನಂತೆ ಮಾತ್ರ ಉಪಯೋಗಕ್ಕೆ ಬರುತ್ತದೆ. ಅಕ್ಕಿ, ಬೇಳೆ, ಉಪ್ಪು, ಹುಳಿ ಮೊದಲಾದ ಸಮಸ್ತ ಪದಾರ್ಥಗಳನ್ನು ವರ್ತಕನು ಜಮಾಯಿಸಿ ಇಟ್ಟುಕೊಂಡಿರುತ್ತಾನೆ. ಯಾರಿಗೆ ಯಾವ ಪದಾರ್ಥ ಬೇಕಾದರೂ ಅವನಲ್ಲಿ ಹೋಗಿ ತೆಗದುಕೊಳ್ಳಬಹುದು. ಅವನಿಲ್ಲದಿದ್ದರೆ ಈ ಪದಾರ್ಥಗಳೊಂದೊಂದನ್ನು ಇಟ್ಟುಕೊಂಡಿರುವವರನ್ನು ವಿಚಾರಿಸಿಕೊಂಡು ಅವರ ಬಳಿಗೆ ಹೋಗಬೇಕಾಗಿದ್ದಿತು. ಆದುಕಾರಣ ವರ್ತಕನು ಯಾವ ಪದಾರ್ಥವನ್ನೂ ಉತ್ಪಾದನೆಮಾಡುವವನಲ್ಲವಾದರೂ ಇಂತಹ ಉಪಯೋಗಕ್ಕೆ ಬರುತ್ತಾನೆ. ಹಾಗೆಯೇ ಹಣದ ಉದ್ದೇಶವೂ ಇರುವುದು. ಜನರು ಹಣವನ್ನು ಚಲಾವಣೆಗೆ ತಾರದೆ ಇರುವುದಕ್ಕೂ, ಹಾಗೆ ತಂದ ಕೆಲರು ಹೆಚ್ಚು ಬಡ್ಡಿಯನ್ನು ಕೇಳುವುದಕ್ಕೂ ಜನರಲ್ಲಿ ಅನ್ಯೋನ್ಯವಾಗಿರುವ ಅಪನಂಬಿಕೆಯು ಮತ್ತೊಂದುಕಾರಣ. ಅಲ್ಪಸ್ವಲ್ಪ ಹಣವನ್ನಿಟ್ಟುಕೊಂಡಿರುವವರು ಅದನ್ನು ಸಾಲ ಕೊಟ್ಟರೆ, ಅದು ಹಿಂದಕ್ಕೆ ಬರುತ್ತದೆಂಬ ದಾರ್ಢ್ಯವಿಲ್ಲ. ಬೇಸಾಯಗಾರರು ಪ್ರಮಾಣೀಕರಾಗಿದ್ದರೆ ಸುಲಭವಾದ ಬಡ್ಡಿ ಮೇಲೆ ಯಥೇಚ್ಛವಾಗಿ ಅವರಿಗೆ ಸಾಲವು ದೊರೆಯುವುದು. ಸ್ಥಿರಸೊತ್ತಿನ ಆಧಾರ ಭೋಗ್ಯದ ಮೇಲಲ್ಲದೆ ಹೆಚ್ಚು ಬಡ್ಡಿಗಲ್ಲದೆ ಅವರಿಗೆ ಯಾರೂ ಸಾಲವನ್ನು ಕೊಡದಿರುವುದಕ್ಕೆ ಬೇಸಾಯಗಾರರ ಅಪ್ರಮಾಣೀಕತೆಯೇ ಕಾರಣವಾಗಿರುತ್ತದೆ. ಆದರೂ ಉಪಾಯವಿಲ್ಲ. ಬೇಸಾಯವನ್ನು ಫಲಕಾರಿಯಾಗಿ ಮಾಡಬೇಕಾದುದು ಲೋಕದ ಸೌಖ್ಯಕ್ಕೆ ಅವಶ್ಯಕವಾಗಿರುತ್ತದೆ. ದೇಶದ ಜನರೆಲ್ಲರೂ ಬೇಸಾಯಮಾಡಲು ಸಿದ್ಧರಾಗುವುದಾದರೆ ಹೊರತು ಇಲ್ಲದಿದ್ದರೆ, ಬೇಸಾಯಮಾಡದಿರುವವರು ಬೇಸಾಯದಲ್ಲಿ ಉದ್ಯುಕ್ತರಾಗಿರುವವರಿಂದ ಹೇಗಾದರೂ ಮಾಡಿ ಭೂಮಿಯನ್ನು ಚೆನ್ನಾಗಿ ಬೇಸಾಯಮಾಡಿಸಬೇಕು. ಹಣವಿಲ್ಲದಕ್ಕಾದರೂ ಅಥವಾ ಸೋಮಾರಿತನದಿಂದಲಾದರೂ ಅಥವಾ ಮತ್ತಾವಕಾರಣದ ಮೇಲಾದರೂ ಬೇಸಾಯಗಾರರು ದೇಶದ ಭೂಮಿಯಲ್ಲಿ ಹೆಚ್ಚಾಗಿ ಬೆಳೆಯದಿದ್ದರೆ ಆ ದೇಶದ ಜನರಿಗೆಲ್ಲರಿಗೂ ಅನ್ನಕ್ಕೆ ಅಭಾವವುಂಟಾಗುವುದು. ಇತರ ವೃತ್ತಿಗಳಲ್ಲಿ ಹಾಗಲ್ಲ. ಬಟ್ಟೆ

ಯನ್ನು ನಮ್ಮ ದೇಶದ ಸ್ವೈಯಿಗೆಯವರು ಮಾಡದಿದ್ದರೆ ಅವನ್ನು ಮತ್ತೊಂದು ದೇಶದಿಂದ ಅತಿ ವಿಶೇಷ ವೆಚ್ಚವಿಲ್ಲದೆ ಹೊಂದಬಹುದು; ಈಗಿರುವ ಸ್ಥಿತಿಯ ಮೇಲೆ ಮತ್ತೂ ಅಗ್ಗವಾಗಿ ಹೊಂದಬಹುದು. ಆಹಾರಪದಾರ್ಥವಲ್ಲದ ಇತರ ಯಾವ ಪದಾರ್ಥಗಳನ್ನೂ ಹೀಗೆಯೇ ಹೊಂದಬಹುದು. ಆಹಾರಪದಾರ್ಥವಾದರೋ ಹಾಗಲ್ಲ. ಆ ಆ ದೇಶಕ್ಕಾಗುವಷ್ಟು ಆ ಆ ದೇಶದಲ್ಲೇ, ಆ ಆ ಡಿಸ್ಟ್ರಿಕ್ಟಿಗೆ ಆಗುವಷ್ಟು ಆ ಆ ಡಿಸ್ಟ್ರಿಕ್ಟಿನಲ್ಲೇ, ಆ ಆ ತಾಲ್ಲೂಕಿಗೆ ಆಗುವಷ್ಟು ಆ ಆ ತಾಲ್ಲೂಕಿನಲ್ಲೇ, ಆ ಆ ಗ್ರಾಮಕ್ಕೆ ಆಗುವಷ್ಟು ಆ ಆ ಗ್ರಾಮದಲ್ಲೇ ಬೆಳೆಯುವುದು ಆ ಆ ಸ್ಥಳದವರ ಸೌಖ್ಯಕ್ಕೆ ಅತ್ಯವಶ್ಯಕ. ಅದುಕಾರಣ ಬೇಸಾಯಗಾರರಲ್ಲದವರು ಸ್ವಾರ್ಥಕ್ಕಾಗಿಯೇ ಬೇಸಾಯಕ್ಕೆ ಪ್ರೋತ್ಸಾಹಕೊಡಬೇಕಾಗುತ್ತದೆ. ಆದರೆ ಅನ್ಯೋನ್ಯಸಹಾಯದಿಂದ ಅನ್ಯೋನ್ಯಪ್ರಯೋಜನವನ್ನು ಉಂಟುಮಾಡಿಕೊಳ್ಳಲು ಪ್ರಜೆಗಳಿಗೆ ಬುದ್ಧಿಯಿದ್ದರೆ ಸರ್ಕಾರವಿರಬೇಕಾದ ಅವಶ್ಯಕತೆಯೇ ಇರಲಿಲ್ಲ. ಜನರು (ಬಹುಭಾಗದವರು) ಸ್ವಾರ್ಥಪರರಾಗಿರುವುದೂ ಪರಾರ್ಥಕ್ಕೆ ವಿಮುಖರಾಗಿರುವುದೂ ಇವುಗಳಿಗೆ ಸರ್ಕಾರದ ಇರುವಿಕೆಯೇ ದೃಷ್ಟಾಂತವಾಗಿದೆ. ಜನರೆಲ್ಲರೂ ಸತ್ಯಸಂಧರಾಗಿದ್ದರೆ ಪೋಲೀಸರು, ಮ್ಯಾಜಿಸ್ಟ್ರೇಟರು, ಕೋರ್ಟುಗಳು, ಸೇನೆಯು ಇವುಗಳು ಇರಬೇಕಾದುದೇ ಇಲ್ಲ. ಅದುಕಾರಣ ಪ್ರಜಾಸಾಮಾನ್ಯದ ಪ್ರಾಣಧಾರಣೆಗೆ ಅವಶ್ಯಕವಾದ ಭೂವ್ಯವಸಾಯದ ಪ್ರೋತ್ಸಾಹವನ್ನು ಸರ್ಕಾರದವರು ಪ್ರಜೆಗಳಿಗೇ ಒಪ್ಪಿಸಿಬಿಡಲಿಕ್ಕಾಗುವುದಿಲ್ಲ. ಕೋರ್ಟುಗಳು, ಪೋಲೀಸ್, ಸೇನೆ, ಟೆಲಿಗ್ರಾಫ್, ಪೋಸ್ಟ್, ರೈಲು ಈ ಮೊದಲಾದ ಕಾರ್ಯಗಳನ್ನು ಪ್ರಜೆಗಳಿಗೆ ಒಪ್ಪಿಸಿಬಿಟ್ಟರೆ ಅವುಗಳು ಸುಸೂತ್ರದಲ್ಲಿ ಹೇಗೆ ನಡೆಯುವುದಿಲ್ಲವೋ ಹಾಗೆ ಆ ಆ ರಾಷ್ಟ್ರದ ಜನಗಳಿಗಾಗುವಷ್ಟು ಧಾನ್ಯವು ಆ ಆ ದೇಶದಲ್ಲೇ ಬೆಳೆಯುವಹಾಗೆ ಮಾಡಬೇಕಾದ ಕೆಲಸವನ್ನು ಪ್ರಜೆಗಳಿಗೇ ಬಿಟ್ಟುಬಿಟ್ಟರೆ ಅದು ಸುಸೂತ್ರವಾಗಿ ನಡೆಯುವುದಿಲ್ಲ. ಪರಸಹಾಯವನ್ನು ಅಪೇಕ್ಷಿಸದೆ ಮೃಗಗಳು ತಂತಮ್ಮ ಆಹಾರವನ್ನು ಸಂಪಾದನೆಮಾಡಿಕೊಳ್ಳಲು ಶಕ್ತಗಳಾಗಿರುವಲ್ಲಿ ಪರಸಹಾಯವನ್ನು ಮನುಷ್ಯರು ಏತಕ್ಕೆ ಅಪೇಕ್ಷಿಸಬೇಕೆಂದು ಪ್ರಶ್ನೆಮಾಡಬಹುದು. ಮನುಷ್ಯರಲ್ಲಿ ಸರ್ಕಾರದ ಕಟ್ಟಿಲ್ಲದಿದ್ದರೆ ಇವರು ಸಹ ಮೃಗಗಳ ರೀತಿಯಲ್ಲಿ ತಂತಮ್ಮ ಆಹಾರವನ್ನು ಹುಟ್ಟಿಸಿಕೊಳ್ಳುತ್ತಿದ್ದರು. ಮೃಗಗಳು ಆಹಾರವನ್ನು ಸಂಪಾದಿಸಿಕೊಳ್ಳುವ ರೀತಿ ಯಾವುದೆಂದರೆ, ಬಲಿಷ್ಠವಾದುವುಗಳು ದುರ್ಬಲವಾದುವುಗಳನ್ನೇ ಆಹಾರವನ್ನಾಗಿ ಉಪಯೋಗಿಸುವುದು. ಅದುಕಾರಣವೇ

> ದುರ್ಬಲಸ್ಯ ಬಲಂರಾಜಾ.
> ರಾಜಾಪಿತಾಚಮಾತಾಚ ರಾಜಾಚಪರಮೋವಿಭುಃ।
> ರಾಜಾಚಸರ್ವಭೂತಾನಾಂ ಪರಿತ್ರಾತಾಗುರುರ್ಮತಃ ॥

ಈ ಶಂಖಲಿಖಿತನ ವಚನದಂತೆ ಸರ್ಕಾರವು ಏರ್ಪಟ್ಟಿತು. ನಾಟಕ ಇಸ್ಪೀಟುಗಳಿಗೆ ವೆಚ್ಚಮಾಡುವ ಹಣವನ್ನು ನಿರ್ಗತಿಕರಿಗೆ ಕೊಟ್ಟುಬಿಡಲು ಯಾವ ಶ್ರೀಮಂತನೂ

ಒಪ್ಪುವುದಿಲ್ಲ. ಅದುಕಾರಣ ದುರ್ಬಲರ ಕಾಪಾಡುವ ಭಾರವನ್ನು ಸರ್ಕಾರದವರು ವಹಿಸಿಕೊಳ್ಳಲೇ ಬೇಕು. ಬಲವಂತರು ದುರ್ಬಲರು ಎಂದರೆ ಶರೀರದಾರ್ಢ್ಯವುಳ್ಳವರು, ದಾರ್ಢ್ಯವಿಲ್ಲದವರು ಎಂಬ ಅರ್ಥವೇ ಅಲ್ಲ; ಆಸ್ತಿಯುಳ್ಳವರು, ಆಸ್ತಿಯಿಲ್ಲದವರು ಸಹ ಆ ಅರ್ಥದಲ್ಲಿ ಬರುತ್ತಾರೆ ಅತ್ಯಂತ ನಾಗರಿಕತೆಹೊಂದಿರುವ ಈ ಕಾಲದಲ್ಲಿ ಶರೀರ ಬಲಕ್ಕೆ ಯಾವ ಪ್ರಾಮುಖ್ಯತೆಯೂ ಇಲ್ಲ; ಐಶ್ವರ್ಯಬಲವೇ ಬಲ. ನಿರ್ಗತಿಕತ್ವವೇ ಬಲಹೀನತೆ. ಈ ಕಾಲದ ಪ್ರಗತಿಗನುಸಾರವಾಗಿ ಐಶ್ವರ್ಯವಂತರೇ ಮತ್ತಷ್ಟು ಐಶ್ವರ್ಯವಂತರಾಗುತ್ತಲೂ, ನಿರ್ಗತಿಕರು ಮತ್ತಷ್ಟು ನಿರ್ಗತಿಕರಾಗುತ್ತಲೂ ಬರುತ್ತಾರೆ. ಐಶ್ವರ್ಯವಂತರು ತಮ್ಮ ಐಶ್ವರ್ಯವನ್ನು ಸ್ವಲ್ಪವೂ ಕಳೆದುಕೊಳ್ಳದಂತೆ ಸರ್ಕಾರದವರು ಅವರನ್ನು ಪರಿಪಾಲಿಸುತ್ತಿರುವುದೇ ಈ ಪ್ರಗತಿಗೆ ಕಾರಣ. ಅದುಕಾರಣ ನಿರ್ಗತಿಕರನ್ನು ಕಾಪಾಡುವ ಭಾರವು ಪೂರ್ವದ ರಾಜರಿಗಿಂತ ಈಗಿನ ರಾಜರಿಗೆ ಹೆಚ್ಚಾಗಿದೆ. ನಮ್ಮ ಪ್ರಕೃತವಿಷಯವಾದ ಭೂವ್ಯವಸಾಯದ ವಿಷಯದಲ್ಲಾದರೋ, ಒಳ್ಳೊಳ್ಳೆಯ ಭೂಮಿಗಳು, ತಂತಮ್ಮ ಕುಟುಂಬದವರ ಜೀವನಕ್ಕೆ ಅವಶ್ಯಕವಾದುದಕ್ಕಿಂತ ಹೆಚ್ಚು ಹೆಚ್ಚಾಗಿ ಇತರರಿಗೆ ಸೇರಿಹೋಗಿವೆ. ಉಳಿದ ಭೂಮಿಗಳು ಫಲಹೀನವಾದುವುಗಳು; ವಿಶೇಷವಾದ ದೇಹಶ್ರಮ ಧನವ್ಯಯವಿಲ್ಲದೆ ಅವು ಫಲಕೊಡಲೊಲ್ಲವು. ಮನುಷ್ಯನ ಪ್ರಾಣಧಾರಣೆಗೂ ಇತರ ಸುಖಸಾಧನೆಗೂ ಭೂಮಿಯ ಉತ್ಪತ್ತಿಯೇ ಮೂಲಕಾರಣ. ಆ ಆ ರಾಷ್ಟ್ರಕ್ಕೆ ಬೇಕಾದಷ್ಟು ಆಹಾರವನ್ನು ಒದಗಿಸಬೇಕಾದರೆ, ಆ ಒಳ್ಳೆಯ ಭೂಮಿಗಳಲ್ಲಿ ಎಷ್ಟು ಬೆಳೆಯಲು ಸಾಧ್ಯವೋ ಅಷ್ಟನ್ನು ಬೆಳೆಯಬೇಕಾಗುತ್ತದೆ; ಮತ್ತೂ ಅದರಲ್ಲಿ ಆಗುವ ಬೆಳೆಯು ಆ ಉದ್ದೇಶಕ್ಕೆ ಸಾಕಾಗದಿದ್ದರೆ, ಹೀನತರವಾದ ಭೂಮಿಗಳನ್ನು ಹಿಡಿದು, ಅದರಲ್ಲಿ ಹೆಚ್ಚಾಗಿ ಬೇಕಾದ ಆಹಾರವು ಬೆಳೆಯುವಷ್ಟು ದೇಹಶ್ರಮವನ್ನೂ ದ್ರವ್ಯವ್ಯಯವನ್ನೂ ಮಾಡಬೇಕಾಗುತ್ತದೆ ; ಇದಲ್ಲದಿದ್ದರೆ ಕೈಗಾರಿಕೆಯ ಕಾರ್ಯಗಳಲ್ಲಿ ಪ್ರವೇಶಮಾಡಿ, ಸುಖಸಾಧನಪದಾರ್ಥಗಳನ್ನು ಉತ್ಪಾದನೆ ಮಾಡಿ ಅವುಗಳನ್ನು ಇತರ ದೇಶೀಯರಿಗೆ ಮಾರಿ ಇತರ ದೇಶದ ಧಾನ್ಯವನ್ನು ಹೆಚ್ಚಿನ ಕ್ರಯಕ್ಕೆ ಕೊಂಡುಕೊಳ್ಳಬೇಕಾಗುವುದು ; ಈ ಎರಡನೆಯ ಜೀವಿಕೆಯು ಸಾಧಕವಾಗಬೇಕಾದರೆ, ಇತರ ಸಾಂಸರ್ಗಿಕ ದೇಶಗಳಲ್ಲಿ ಬೆಳೆಯಾಗಬೇಕು. ಮತ್ತೂ ಅಲ್ಲಿ ಉತ್ಪಾದನೆಯಾಗುವ ಸುಖಸಾಧನಪದಾರ್ಥಗಳಿಗಿಂತಲೂ ಉತ್ತಮವೂ ಅಗ್ಗವೂ ಆದ ಪದಾರ್ಥಗಳನ್ನು ನಮ್ಮ ರಾಷ್ಟ್ರದವರು ಉತ್ಪಾದನೆ ಮಾಡಬೇಕು. ಇಂತಹ ಸಾಮುದಾಯಕ ಹಿತಾಹಿತಗಳಿಗೆ ದೃಷ್ಟಿಕೊಟ್ಟು ಪೃಥಕ್ ಮನುಷ್ಯನಾವನೂ ತನ್ನ ಕಾರ್ಯವನ್ನು ಮಾಡುವುದಿಲ್ಲ. ಕ್ಷಾಮಗಾಲದಲ್ಲಿ ನೈಯಿಗೆಯವನ ಒಟ್ಟಿಗೆ ತನ್ನ ಧಾನ್ಯವನ್ನು ವಿನಿಮಯ ಮಾಡಬೇಕಾಗುತ್ತದೆಂಬ ಅಭಿಪ್ರಾಯದ ಮೇಲೆ ಯಾವ ಭೂಮಾಲೀಕನೂ ಹೆಚ್ಚು ಬೆಳೆಯನ್ನು ಬೆಳೆಯಲು ಪ್ರಯತ್ನಿಸುವುದಿಲ್ಲ. ಕ್ಷಾಮದಲ್ಲಿ ನೈಯಿಗೆಯವರ ಕಸಬು ಪ್ರಯೋಜನಕ್ಕೆ ಬಾರದಾಗಿ, ಅವರು ಅನ್ನಕ್ಕಾಗಿ ಸರ್ಕಾರದ ಸಂರಕ್ಷಣೆಯನ್ನೇ ಕೇಳಬೇಕಾಗುತ್ತದೆ. ಒಳ್ಳೊಳ್ಳೆಯ ಭೂಮಿಗಳನ್ನು ಸರ್ಕಾರದವರು ಪ್ರಜೆಗಳ ಕೆಲರಲ್ಲಿ ಮಾತ್ರ ಬಿಟ್ಟು ಅವರಿಂದ ಇತರರು ಅವನ್ನು ತೆಗೆದುಕೊಳ್ಳದಂತೆ (ಎಂದರೆ, ಭೂಮಾಲೀ

ಕನ ಅನುಮತಿಯಿಲ್ಲದೆ) ಅಡ್ಡಿ ಮಾಡಿರುವುದರಿಂದ ಇತರರ ಕಾರ್ಯವು ಉಪಯೋಗಕ್ಕೆ ಬಾರದೆ ಇದ್ದ ಕಾಲದಲ್ಲಿ ಅವರ ಕ್ಷಾಮನಿವಾರಣೆಮಾಡುವ ಕಾರ್ಯವು ಸರ್ಕಾರ ವನ್ನೇ ಹೊಂದಿರುತ್ತದೆ. ರಾಜನೀತಿ ಅರ್ಥನೀತಿಗಳ ದೊಡ್ಡ ವಿಚಾರಗಳಲ್ಲಿ ಅನ್ನಕ್ಕೂ ಬಟ್ಟೆ ಮೊದಲಾದ ಮನುಷ್ಯನ ಇತರ ಅಪೇಕ್ಷ್ಯಗಳಿಗೂ ಇರುವ ವ್ಯತ್ಯಾಸವನ್ನು ಪಂಡಿತರು ಸಹ ಮರೆತುಬಿಡುತ್ತಾರೆ. ಅದುಕಾರಣ ಈ ವ್ಯತ್ಯಾಸಕ್ಕೆ ವಾಚಕರ ದೃಷ್ಟಿಯನ್ನು ಎಳೆಯಬೇಕಾಗಿದೆ. ಅನ್ನ, ಬಟ್ಟೆ, ವಾಸ, ಸ್ವಾತಂತ್ರ್ಯ ಮೊದಲಾದುವು ಗಳೆಲ್ಲವೂ ಮನುಷ್ಯನ ಅಪೇಕ್ಷ್ಯಗಳಾಗಿದ್ದರೂ ಅನ್ನಕ್ಕೂ ಇತರ ಅಪೇಕ್ಷ್ಯಗಳಿಗೂ ಮಹತ್ತಾದ ಭೇದವಿದೆ. ಅನ್ನವು ಪ್ರಾಣಸಾಧಕವಾದುದು. ಅನ್ನವೇ ಪ್ರಾಣವೆಂತಲೂ ಹೇಳಬಹುದು. ಮನುಷ್ಯಾಪೇಕ್ಷ್ಯಗಳಾದ ಇತರ ಪದಾರ್ಥಗಳೂ ಮನೋವಾಕ್ಕಾ ಯಗಳ ಸಂಬಂಧವಾದ ಸ್ವಾತಂತ್ರ್ಯಗಳೂ ಸುಖಸಾಧಕವಾದುವುಗಳು. ಪ್ರಾಣವನ್ನು ಳಿಸಿಕೊಳ್ಳುವುದು ಮೊದಲನೆಯ ಕೆಲಸ. ಬಳಿಕ ಸುಖಸಾಧನಗಳನ್ನಪೇಕ್ಷಿಸುವುದು. ಸುಖಸಾಧನಗಳ ಸಾಧಿಸಿಕೊಳ್ಳುವುದರಲ್ಲಿ ನ್ಯಾಯ, ಅನ್ಯಾಯ, ನೀತಿ, ಅನೀತಿ, ಮಿತ, ಅಮಿತಗಳೆಂಬ ವಿಚಾರಗಳು ಹುಟ್ಟುತ್ತವೆ. ಸುಖಸಾಧನೆಯಲ್ಲಿ ರಾಜ್ಯದ ಕಟ್ಟು, ಸಮಾ ಜದ ಕಟ್ಟು, ಮತದ ಕಟ್ಟು, ಇವುಗಳಿಂದ ಎಷ್ಟು ಕೊರತೆಯುಂಟಾದರೂ ಆ ಕೊರತೆಗೆ ಪ್ರತಿಯೊಬ್ಬನೂ ಒಳಗಾಗಬೇಕು. ಉದಾ.—ಪ್ಲೇಗು ಹೊಕ್ಕಿರುವ ಊರನ್ನೇ ಸುಟ್ಟು ಬಿಡುವುದುಚಿತವೆಂದು ಸರ್ಕಾರದವರಿಗೆ ತೋರಿದರೆ, ಆ ಊರಿನ ಪ್ಲೇಗ್ ಸೋಂಕಿಲ್ಲದ ಮನೆಗಳನ್ನೂ ಪ್ರತಿಫಲಕೊಡದೆಯೇ ನ್ಯಾಯ್ಯವಾಗಿ ಸುಟ್ಟುಬಿಡಬಹುದು. ಪ್ರಾಣ ಕ್ಕಾದರೋ ಈ ನ್ಯಾಯವು ಅನ್ವಯಿಸುವುದಿಲ್ಲ. ಒಂದು ಕೋಟಿ ಜನರ ಪ್ರಾಣಗಳ ಸಂರಕ್ಷಣೆಗಾಗಿ ಒಬ್ಬಾನೊಬ್ಬನ (ಅವನು ಎಷ್ಟು ಅನಾಮಧೇಯನಾಗಿದ್ದರೂ ಇರಲಿ) ಪ್ರಾಣವನ್ನು ಅನ್ಯಾಯವಾಗಿ ಕಳೆಯಲು ಸರ್ಕಾರ, ಸಮಾಜ, ಮತ, ಈ ಯಾವು ದಕ್ಕೂ ಅಧಿಕಾರವಿಲ್ಲ. ಭೂಮಿಯ ಮೇಲೆ ಜೀವಿಸಲು ಪ್ರತಿಯೊಬ್ಬನಿಗೂ ಎಷ್ಟು ಅಧಿಕಾರವಿದೆಯೋ ಜೀವಧಾರಣೆಗವಶ್ಯಕವಾದ ಅನ್ನವನ್ನು ತಿನ್ನಲೂ, ಅನ್ನವನ್ನು ಹುಟ್ಟಿಸಿಕೊಳ್ಳಲಿಕ್ಕವಶ್ಯಕವಾದ ಭೂಮಿಯನ್ನು ಹೊಂದಲೂ ಸಹ ಅಷ್ಟು ಅಧಿಕಾರ ವಿದೆ. ಜೀವಧಾರಣೆಗೆ ಬೇಕಾದ ಅನ್ನಪ್ರಾಪ್ತಿಯ ಸೌಕರ್ಯಸೌಲಭ್ಯಗಳಿಗೂ ಸಮಸ್ತರೂ ಹಕ್ಕುದಾರರಾಗಿದ್ದಾರೆ. ಅನ್ನದ ವಿಷಯದಲ್ಲಿ ಬಡವರಿಗೂ ಐಶ್ವರ್ಯವಂತರಿಗೂ ಯಾವ ಭೇದವೂ ಇರಕೂಡದೆಂಬುದು ಸೃಷ್ಟಿಕರ್ತನ ನಿಯಾಮಕವೇ ಆಗಿದೆ. ಹೇಗೆಂ ದರೆ, ಕೋಟ್ಯಾಧೀಶ್ವರನಿಗೂ ಬಡವನಿಗೂ ಸುಖಸಾಧಕವಿಷಯಗಳಲ್ಲಿ ಬೆಟ್ಟದಷ್ಟು ತಾರತಮ್ಯವಿದ್ದರೂ ಅವರಿಬ್ಬರೂ ತಿನ್ನುವ ಅನ್ನದ ಪರಿಮಾಣ ಸಮನಾಗಿದೆ. ಒಂದು ಬೇಲದ ಕಾಯಿನ ದಪ್ಪದ ರತ್ನವನ್ನು ಒಬ್ಬ ಸಾಹುಕಾರನು ಒಂದು ದೇಶಕ್ಕೆ ತೆಗೆದು ಕೊಂಡು ಬಂದರೆ ಆ ದೇಶದ ರಾಜನೂ ರಾಜಬಂಧುಗಳೂ ಶ್ರೀಮಂತರೂ ಇವ ರಾರಾದರೂ ಅದನ್ನು ಹೊಂದುವುದಕ್ಕೆ ಯೋಗ್ಯರೂ ಮತ್ತೂ ಅಧಿಕಾರಿಗಳೂ ಆಗಿ ರುತ್ತಾರೆಯೇ ಹೊರತು ಅದರ ಗೋಜಿಗೆಹೋಗಲು ಬಡಬಗ್ಗರಿಗೆ ಸುತರಾಂ ಸಲ್ಲದು. ಆದರೆ ರತ್ನಕ್ಕೆ ಬದಲಾಗಿ ಆ ವರ್ತಕನು ಧಾನ್ಯವನ್ನು ಕ್ಷಾಮಪೀಡಿತವಾದ ದೇಶಕ್ಕೆ

ತೆಗೆದುಕೊಂಡು ಒಂದರೆ, ಅದನ್ನು ಬಡವರು ಶ್ರೀಮಂತರೆಲ್ಲರೂ ಸಮಸಾಗಿ ಹೊಂದ ಬಹುದೇ ಹೊರತು ಬಡವರಿಗಿಂತ ಶ್ರೀಮಂತರು ಒಂದು ಕಾಳನ್ನೂ ಹೆಚ್ಚಾಗಿ ತೆಗೆದುಕೊಳ್ಳಲಾಗುವುದಿಲ್ಲ. ಆಹಾರವು ಚೆನ್ನಾಗಿ ಬೆಳೆಯುವ ಭೂಮಿಯಾದರೋ, ಗಾಳಿಯಂತೆ ಅಪಾರವಾಗಿಲ್ಲ; ಅದು ಬಹು ಪರಿಮಿತವಾಗಿರುತ್ತದೆ. ಅಂತಹ ಒಳ್ಳೆಯ ಭೂಮಿಯ ಮಾಲೀಕರು ಪೂರ್ವಭುಕ್ತಿಯು ಕಾರಣದಮೇಲೆ ಅದರ ಭುಕ್ತಿಯನ್ನು ಇತರರಿಗೆ ತಪ್ಪಿಸಲು ನ್ಯಾಯ್ಯಕರಣವಾವುದೂ ಇಲ್ಲ. “ಭೂಮಿಯೂ ಮತ್ತೂ ಅದರಲ್ಲಿರುವ ಪದಾರ್ಥಗಳೂ ಸೃಷ್ಟಿಕರ್ತನ ಪ್ರತ್ಯಕ್ಷಪ್ರಸಾದಗಳಾಗಿ ಸಮಸ್ತರಿಗೂ ಸಮಾನವಾದ ಸ್ವತ್ವಗಳಾಗಿವೆ” ಎಂದು ಆಂಗ್ಲೇಯ ಪ್ರಸಿದ್ಧನ್ಯಾಯಾಧೀಶ ಬ್ಲಾಕ್‌ಸ್ಟನನು ಹೇಳುತ್ತಾನೆ. ಜನಸಂಖ್ಯೆಯು ಅತಿ ವಿರಳವಾಗಿದ್ದ ಬಹು ಪೂರ್ವಕಾಲದಲ್ಲಾದರೋ ಕೃಷಿಯೋಗ್ಯವಾದ ಭೂಮಿಗಳು ಯಥೇಚ್ಛವಾಗಿ ದೊರೆಯುತ್ತಿದ್ದುವು. ಕೃತಭೂಮಿಗೆ ಎಂದರೆ ಭೂಮಿಯ ಮೇಲೆ ಬೆಳೆದಿರುವ ಮರಗಳನ್ನು ಕಡಿದು, ಹಳ್ಳತಿಟ್ಟುಗಳನ್ನು ಸಮಮಾಡಿಕೊಂಡು ಕೃಷಿಗೆ ಸಿದ್ಧಪಡಿಸಿಕೊಂಡ ಭೂಮಿಗಳಿಗೆ ಮಾತ್ರ ಬೆಲೆಯು ಮತ್ತೂ ನನ್ನದು ತನ್ನದು ಎಂಬ ವ್ಯವಹಾರವು ಇದ್ದುವೇ ಹೊರತು ಮಿಕ್ಕ ಭೂಮಿಗಳಿಗಿರಲಿಲ್ಲ. ಒಬ್ಬನು ಸಿದ್ಧಪಡಿಸಿಕೊಂಡ ಭೂಮಿಯ ಹತ್ತರವೇ ಮತ್ತೊಬ್ಬನು ನೆರೆಯ ಆಸೆಗಾಗಿ ಮತ್ತಷ್ಟು ಭೂಮಿಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದನು. ಈ ಪ್ರಕಾರ ಅಲ್ಲಲ್ಲೇ ಗ್ರಾಮಗಳು ಹುಟ್ಟಿದುವು. ಇತರ ಕಡೆ ಫಲವತ್ತಾದ ಭೂಮಿಗಳಿದ್ದರೂ ಕೂಡ ಗ್ರಾಮದ ಭೂಮಿಗಳಿಗೇ ಅತ್ಯಂತ ಪ್ರಾಮುಖ್ಯತೆಯನ್ನು ಕೊಟ್ಟು ಅವುಗಳನ್ನೇ ತಂತಮ್ಮ ಅವಶ್ಯಕತೆಗೆ ತಕ್ಕಾಗಿ ಹಂಚಿಕೊಂಡು ಅನುಭವಿಸುತ್ತಿದ್ದರು. ಅವನವನ ಜೇಬಿನಲ್ಲಿರುವ ದುಡ್ಡಿನ ಮೇಲೆ ಪ್ರತಿಯೊಬ್ಬನಿಗೂ ಯಾವ ಅಧಿಕಾರವಿದೆಯೋ ಅಂತಹ ಅಧಿಕಾರವು ಅವನನುಭವಿಸುವ ಭೂಮಿಯ ಮೇಲೂ ಇದೆಯೆಂಬ ಆಧುನಿಕಭಾವವು ಪೂರ್ವದಲ್ಲಿ ಇರಲಿಲ್ಲ. ಭೂದೇವತೆಯು ಮನುಷ್ಯರೆಲ್ಲರಿಗೂ ತಾಯಿ, ಅವಳಿಂದ ಸಾಕಿಸಿಕೊಳ್ಳಲು ಸಮಸ್ತರಿಗೂ ಅಧಿಕಾರವಿದೆ ಎಂಬ ಭಾವವು ಪೂರ್ವದಲ್ಲಿ ರೂಢವಾಗಿ ವ್ಯಾಪಿಸಿದ್ದಿತು. ಕೆಲಕಡೆ ಗ್ರಾಮಸ್ಥರೆಲ್ಲರೂ ಒಟ್ಟಿಗೆ ಬೇಸಾಯಮಾಡಿ, ಆದ ಬೆಳೆಯನ್ನು ಬೇರೆ ಬೇರೆ ಕುಟುಂಬಕ್ಕೆ ತಕ್ಕಷ್ಟು ಹಂಚಿಕೊಳ್ಳುತ್ತಿದ್ದರು. ಭೂಮಿಯನ್ನೇ ಬೇರ್ಪಡಿಸಿಕೊಂಡು ಬೇರೆಬೇರೆ ವ್ಯವಸಾಯಮಾಡುವ ಸಂದರ್ಭದಲ್ಲಿ ಕೆಲಕಾಲದ ಬಳಿಕ ಕೆಲವು ಕುಟುಂಬಗಳಲ್ಲಿ ಜನರು ಹೆಚ್ಚುವುದು, ಕೆಲವುಗಳಲ್ಲಿ ಕಡಮೆಯಾಗುವುದು, ಇಂತಹ ಕುಟುಂಬಗಳ ಅವಶ್ಯಕತೆಗಳ ಆಧಿಕ್ಯನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಪುನಃಪುನಃ ಭೂಮಿಗಳನ್ನು ಹಂಚಿಕೊಳ್ಳುತ್ತಿದ್ದರು (ಮೇನರ ಏಕ್‌ಷಂಟ್ ಲಾದ 8 ನೇ ಅಧ್ಯಾಯ). ಆ ಆ ಸ್ಥಳದ ಭೂಮಿಗಳಿಗೆ ಆ ಆ ಸ್ಥಳದವರು ಮಾತ್ರ ಮಾಲೀಕರಾಗಿದ್ದರೆಂಬುದೂ, ಗ್ರಾಮದ ಭೂಮಿಗಳನ್ನು ಪಟ್ಟಣ ನಗರಗಳಲ್ಲಿ ವಾಸಮಾಡಿಕೊಂಡಿರುವವರು ಸಂಪಾದನೆಮಾಡುವುದಕ್ಕೆ ಅವಕಾಶವಿರಲಿಲ್ಲವೆಂಬುದೂ ಧರ್ಮಶಾಸ್ತ್ರಪಂಙ್ತಿಗಳಿಂದ ವ್ಯಕ್ತವಾಗುತ್ತದೆ.

ಯೇಜಾತಾಯೇಽಪ್ಯಜಾತಾಶ್ಚ ಯೇಚಗರ್ಭೇವ್ಯವಸ್ಥಿತಾಃ |
ವೃತ್ತಿಂಚತೇಽಭಿಕಾಂಕ್ಷಂತೆ ನದಾನಂ ನಚವಿಕ್ರಯಃ || (ಮನು.)

ಹುಟ್ಟಿರುವವರು, ಹುಟ್ಟದಿರುವವರು, ಗರ್ಭಗತರಾಗಿರುವವರು, ಎಲ್ಲರೂ ಜೀವನವನ್ನು ಮಾಡಬೇಕಾಗುತ್ತದೆ. ಅದುಕಾರಣ (ಭೂಮಿಯ) ದಾನವೂ ಕ್ರಯವೂ ಸಲ್ಲವು.

ವಿಭಕ್ತಾ ವಾವಿಭಕ್ತಾ ವಾ ಸಪಿಂಡಾಸ್ಥಾವರೇ ಸಮಾಃ ।
ಏಕೋಹ್ಯನೀಶಸ್ಸರ್ವತ್ರ ದಾನಾಧಮನವಿಕ್ರಯಃ ॥ (ಮನು)

ಸಪಿಂಡರು ವಿಭಕ್ತರಾಗಲಿ, ಅವಿಭಕ್ತರಾಗಲಿ, ಎಲ್ಲರೂ ಸ್ಥಾವರದಲ್ಲಿ ಸಮಾನರೇ. ಒಂದು ಸ್ಥಾವರಕ್ಕೆ ಯಾವನೊಬ್ಬನೂ ಯಾವ ಸಂದರ್ಭದಲ್ಲೂ ಅಧಿಕಾರಿಯಾಗುವುದಿಲ್ಲ. ಅದುಕಾರಣ ಕ್ರಯ ಸಲ್ಲದೇಸಲ್ಲದು. ದಾನವು ಸಹ ಅಧಮವೇ.

ಬ್ರಾಹ್ಮಣಪಕ್ಷಪಾತದಿಂದ ದಾನಕ್ಕೆ ಮಾತ್ರ ಸ್ವಲ್ಪ ಅವಕಾಶಕೊಟ್ಟಿದ್ದರೂ ಅದಕ್ಕೂ ಅನೇಕ ಕಟ್ಟುಗಳಿದ್ದುವು.

ಸ್ವಗ್ರಾಮಜ್ಞಾತಿಸಾಮಂತ ದಾಯಾದಾನುಮತೇನಚ ।
ಹಿರಣ್ಯೋದಕದಾನೇನ ಷಡ್ಭಿರ್ಗಚ್ಛತಿಮೇದಿನೀ ॥

ಭೂಮಿಯು ಮಾಲೀಕನ ಕೈಬಿಟ್ಟು ಹೋಗಬೇಕಾದರೆ ಗ್ರಾಮಸ್ಥರ ಅನುಮತಿ, ಜ್ಞಾತಿಗಳ ಅನುಮತಿ, ನೆರೆಯುವರ ಅನುಮತಿ, ದಾಯಾದರ ಅನುಮತಿ, ಹಿರಣ್ಯೋದಕದಾನ, ಈ ಆರು ಆವಶ್ಯಕ.

ಅನೇಕ ಚದುರಮೈಲಿ ವಿಸ್ತಾರದ ಭೂಮಿಗಳಿಗೆ ಅನನ್ಯಸಾಧರಣವಾದ ಅಧಿಕಾರವು ಖಾಸ್ಗಿ ಜನರಿಗೀಗಿರುವಂತೆ ಪೂರ್ವದಲ್ಲಿಲ್ಲದಿದ್ದರೂ, ಪಟ್ಟಣ ನಗರಗಳಲ್ಲಿ ಇತರ ವೃತ್ತಿಯಲ್ಲಿರುವವರು ಗ್ರಾಮದ ಭೂಮಿಗಳಿಗೆ ಮಾಲೀಕರಾಗಿರಲು ಈಗಿರುವ ಅವಕಾಶಗಳು ಪೂರ್ವದಲ್ಲಿಲ್ಲದಿದ್ದರೂ ಬೇಸಾಯಗಾರರೇ ಭೂಮಾಲೀಕರಾಗಿದ್ದರೆಂದು ಹೇಳಲಿಕ್ಕಾಗುವುದಿಲ್ಲ. ಇದಕ್ಕೆ ವಿಪರ್ಯಸ್ತವಾಗಿದ್ದಿತೆಂದು ಹೇಳಿದರೂ ಹೇಳಬಹುದು. ಇದರಿಂದ ದೇಶದಲ್ಲಿ ಬೆಳೆಯುವ ಒಟ್ಟುಬೆಳೆಗೆ ನ್ಯೂನತೆಯುಂಟಾಗದಂತೆ ಆಗಿನ ರಾಜ್ಯದವರು ನೋಡಿಕೊಳ್ಳುತ್ತಿದ್ದರು. ಏಕೆಂದರೆ ಆಗ ಭೂಕಂದಾಯಕ್ಕಾಗಿ ಬೆಳೆಯ ರೂಪದಲ್ಲೇ ಅದರ ಆರರಲ್ಲೊಂದುಭಾಗವು ಸಲ್ಲುತ್ತಿದ್ದಿತು. ಬೆಳೆಯು ಕಡಮೆಯಾದರೆ ರಾಜಪಾಲು ಕಡಮೆಯಾದೀತೆಂಬ ಭಯದಿಂದ, ಅಧಿಕಾರಿಗಳೇ ನಿಂತು ರೈತರಿಂದ ಬೆಳೆಯನ್ನು ಮಾಡಿಸುತ್ತಿದ್ದರು. ಕೃಷಿಯಲ್ಲಿ ಸರ್ಕಾರದವರ ಆಸಕ್ತತೆಯನ್ನುಂಟುಮಾಡಲು ಮತ್ತೊಂದು ಕಾರಣವಿದ್ದಿತು.[1] ತಮ್ಮ ದೇಶದಲ್ಲಿ ಬೆಳೆಯಾಗದಿದ್ದರೆ ಮತ್ತೊಂದು

1. ನೆರೆಯ ದೇಶಗಳಿಂದ ತಂದುಣ್ಣಬಹುದೆಂಬ ಧೈರ್ಯವು ಒಂದಾನೊಂದು ದೇಶಕ್ಕಿರಬೇಕಾದರೆ ಈ ಸ್ಥಿತಿಗಳಿರಬೇಕು:—ಆ ನೆರೆಯ ದೇಶಗಳಲ್ಲಿ ಬೆಳೆಯು ಸಂತುಷ್ಟಿಯಾಗಿ ಬಳೆದಿರಬೇಕು. ಆ ದೇಶಕ್ಕೂ ಆ ನೆರೆಯ ದೇಶಗಳಿಗೂ ರೈಲು, ನಾವೆ, ಮೊದಲಾದ ವಾಹಕಾನುಕೂಲ್ಯಗಳೂ ಸ್ನೇಹಸಂಬಂಧವೂ ಇರಬೇಕು. ಧಾನ್ಯವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಕ್ಕೆ ವಿಶೇಷ ವೆಚ್ಚ ಮುಟ್ಟುವುದರಿಂದ ಅದನ್ನು ವಿಶೇಷಬೆಲೆಗೆ ಮಾರಬೇಕಾಗುತ್ತದೆ. ಇಷ್ಟು ತಗ್ಗಾದ ಧಾನ್ಯವನ್ನು ಕೊಂಡುಕೊಳ್ಳಲು ಒಂದಾನೊಂದು ದೇಶದವರು ಶಕ್ತರಾಗಬೇಕಾದರೆ ಆ ದೇಶದವರು ಆ ನೆರೆಯ ದೇಶದವರಪೇಕ್ಷಿಸಬಹುದಾದ ಕೈಗಾರಿಕೆಯ ಪದಾರ್ಥಗಳ ಉತ್ಪಾದನೆಯಲ್ಲಿ ನಿಸ್ಸೀಮರಾಗಿರಬೇಕು.

ದೇಶದಿಂದ ಧಾನ್ಯವು ಬರುತ್ತದೆಂಬ ಈಗಣ ಸರ್ಕಾರದವರಿಗಿರುವ ಧೈರ್ಯವು ಪೂರ್ವದಲ್ಲಿರಲಿಲ್ಲ. ಅದುಕಾರಣ ತಂತಮ್ಮ ದೇಶದಲ್ಲೇ ಬೆಳೆಯಿಸಬೇಕೆಂಬ ಕುತೂಹಲವು ಆಗಣ ರಾಜರುಗಳಿಗಿದ್ದಿತು. ರಾಜ್ಯದ ಮುಖ್ಯಕರ್ತವ್ಯವಾದ ದುಷ್ಟಶಿಕ್ಷಣದ ಕೆಲಸದಂತೆಯೇ ಕೃಷಿಯೂ ಸಹ ರಾಜ್ಯದ ಮುಖ್ಯಕರ್ತವ್ಯವೆಂದೆಣಿಸಿ ಈ ಕಾರ್ಯವನ್ನು ದ್ವಿಜರೇ ವಹಿಸಿಕೊಂಡರು.

ಪೂರ್ವದಲ್ಲಿ ಭೂವ್ಯವಸಾಯಕ್ಕೆ ರಾಜರು ಎಷ್ಟು ದೃಷ್ಟಿಯನ್ನು ಕೊಟ್ಟಿದ್ದರೆಂಬುದು ಚಾಣಕ್ಯನ ಅರ್ಥಶಾಸ್ತ್ರದಿಂದ[1] ಗೊತ್ತಾಗುತ್ತದೆ. ಕೃಷಿದರ್ಶನಕ್ಕಾಗಿಯೇ ಕೃಷಿಶಾಖೆಯ ಅಧ್ಯಕ್ಷಾಧಿಕಾರಿಯಿದ್ದನು. ರಾಜ್ಯಾಧಿಕಾರಿಗಳೇ ಸಾಧಾರಣ ವಿದ್ಯೆಗಳಲ್ಲಿ ಸಂಸ್ಕೃತರಾದ ವಿದ್ಯಾರ್ಥಿಗಳಿಗೆ ಕೃಷಿಪಾಶುಪಾಲ್ಯವಾಣಿಜ್ಯಗಳನ್ನು ಕಲಿಸುತ್ತಿದ್ದರು.

ಕೃಷಿಪಾಶುಪಾಲ್ಯೆವಣಿಜ್ಯಾಚವಾರ್ತಾ|

[ಕೃಷಿಪಾಶುಪಾಲ್ಯವಾಣಿಜ್ಯಗಳಿಗೆ ವಾರ್ತಾ ಎಂದು ಹೆಸರು.]

ವೃತ್ತ ಚೌಲಕರ್ಮಾಲಿಪಿಂ ಸಂಖ್ಯಾನಂ ಚೋಪಯುಂಜೀತ|
ವೃತ್ತೋಪನಯನಃ ತ್ರಯೀಮಾನ್ವೀಕ್ಷಕೀಂಚಶಿಷ್ಟೇಭ್ಯಃ|
ವಾರ್ತಾಮಧ್ಯಕ್ಷೇಭ್ಯಃ, ದಂಡನೀತಿವಕ್ತೃಪ್ರಯೋಕ್ತೃಭ್ಯಃ ||

ಈ ಸ್ಥಿತಿಗಳನ್ನು ಅನನ್ಯಸಾಧಾರಣವಾಗಿ ಇಂಗ್ಲಾಂಡಿನ ದೇಶವು ಹೊಂದಿದ್ದರೂ, ಮತ್ತು ಅಲ್ಲಿಯೂ ದೇಶದ ಅರ್ಧ ಜನಗಳಿಗಾಗುವಷ್ಟು ಧಾನ್ಯವನ್ನು ಬೆಳೆದರೂ, ಆ ದೇಶದ ಹಿತೈಷಿಗಳು ಪರದೇಶಗಳಿಂದ ಧಾನ್ಯವನ್ನು ತಂದುಣ್ಣಬೇಕಾದ ಸ್ಥಿತಿಗೆ ಭಯಪಡುತ್ತಿದ್ದಾರೆ. ಈ ಭಯಕ್ಕೆ ಮುಖ್ಯ ಕಾರಣವೇನೆಂದರೆ—ಕೈಗಾರಿಕೆಯ ಕಾರ್ಯದಲ್ಲಿ ಇತರ ದೇಶದವರೂ ಉತ್ಕರ್ಷತೆಯನ್ನು ಹೊಂದುತ್ತಿರುವುದರಿಂದ ಮುಂದುಮುಂದಕ್ಕೆ ಕೈಗಾರಿಕೆಯ ಕಾರ್ಯದಲ್ಲಿ ಆಂಗ್ಲೇಯರಿಗಿರುವ ಅಸಮವಾದ ನೈಪುಣ್ಯದ ಸಾಧಕತೆ ತಪ್ಪಿ ಹೋಗಬಹುದು. ಎಂದರೆ, ಅಂತಹ ಕೈಗಾರಿಕೆಯ ಪದಾರ್ಥಗಳನ್ನು ಇತರರು ಮಾಡುವುದಕ್ಕೆ ಪ್ರಾರಂಭಿಸಿದರೆ ಆಂಗ್ಲೇಯರ ಪದಾರ್ಥಗಳನ್ನು ಇತರರು ಕೊಂಡುಕೊಳ್ಳುವುದಿಲ್ಲ. ಇಂತಹ ಸಂದರ್ಭ ಉಂಟಾದರೆ ಇತರ ದೇಶದ ಧಾನ್ಯವನ್ನು ಕೊಂಡುಣ್ಣಲು ಸಾಧ್ಯವೇ ಎಂದು ಅವರು ಭಯಪಡುತ್ತಿದ್ದಾರೆ. ಇಂಗ್ಲಾಂಡಿಗಿರುವ ಈ ಅನುಕೂಲ್ಯವು ಪ್ರಪಂಚದಲ್ಲಿ ಮತ್ತಾವ ದೇಶಕ್ಕೂ ಇಲ್ಲ. ಅದು ಕಾರಣ ಇತರ ನಾಗರಿಕ ರಾಜ್ಯಗಳೆಲ್ಲಾ ತಮ್ಮ ದೇಶದ ಜನಗಳಿಗೆ ಬೇಕಾಗುವಷ್ಟು ಧಾನ್ಯವನ್ನು ತಮ್ಮ ದೇಶದಲ್ಲೇ ಬೆಳೆಯುವಹಾಗೆ ಮಾಡಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಇತರ ದೇಶದುವುಗಳೊಡನೆ ಸ್ಪರ್ಧಿಸಲ್ಪಡಬಹುದಾದ, ಮತ್ತೂ ಇತರ ದೇಶಗಳಿಗೆ "ರಫ್ತು" ಮಾಡಲ್ಪಡುವಂತಹ ಕೈಗಾರಿಕೆಯ ಪದಾರ್ಥಗಳ ಉತ್ಪಾದನೆಮಾಡುವ ಸಂಭವವು ಇಂಡಿಯಾದಲ್ಲಿ ಇಲ್ಲ. ಕ್ಷಾಮಕಾಲಗಳಲ್ಲಿ ಇತರ ದೇಶಗಳಿಂದ ಈ ದೇಶಗಳಿಗೆ ಧಾನ್ಯವು ಹೇರಳವಾಗಿ ಬಂದು ಅಂಗಡಿಗಳಲ್ಲಿ ಗುಡ್ಡೆಗುಡ್ಡೆಗಳಾಗಿ ಸುರಿದಿದ್ದರೂ ಅದನ್ನು ಕೊಂಡುಕೊಳ್ಳಲು ಬಹುಭಾಗದ ಜನರಿಗೆ ಶಕ್ತಿಯಿಲ್ಲದೆ ಇರುವುದೂ, ಅವರೆಲ್ಲರೂ ಸರ್ಕಾರದ ಅನ್ನದಾನದ ಮೇಲೆ ಅವಲಂಬನೆಮಾಡುವುದೂ ಸಹ ಇದಕ್ಕೆ ದೃಷ್ಟಾಂತಗಳಾಗಿವೆ. ಅದು ಕಾರಣ ಇತರ ವೃತ್ತಿಗಳು ಅಭಿವೃದ್ಧಿಸ್ಥಿತಿಯಲ್ಲಿರಲಿ, ಇಲ್ಲದೆ ಇರಲಿ, ಭೂವ್ಯವಸಾಯವನ್ನು ಉತ್ಕೃಷ್ಟಸ್ಥಿತಿಯಲ್ಲಿಟ್ಟುಕೊಳ್ಳುವುದು ಪ್ರತಿ ದೇಶಕ್ಕೂ ಅತ್ಯಂತ ಆವಶ್ಯಕ.

1. ಈ ಅರ್ಥಶಾಸ್ತ್ರವನ್ನು ಶ್ರೀ. ಆರ್. ಶಾಮಶಾಸ್ತ್ರಿಗಳು. ಬಿ. ಯೆ., ಇವರು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ.

ಚೌಲಕರ್ಮವಾದ ಬಳಿಕ ವಿದ್ಯಾರ್ಥಿಯು ಅಕ್ಷರವನ್ನೂ ಲೆಕ್ಕವನ್ನೂ ಕಲಿಯ ಬೇಕು. ಬಳಿಕ ಉಪನೀತನಾಗಿ ವೇದಗಳನ್ನೂ ಅನ್ವೀಕ್ಷಿಕಿಯನ್ನೂ ಶಿಷ್ಟರಿಂದಲೂ, ವಾರ್ತೆಯನ್ನು (ಕೃಷಿಪಾಶುಪಾಲ್ಯವಾಣಿಜ್ಯಗಳನ್ನು) ಅಧ್ಯಕ್ಷರಿಂದಲೂ ಕಲಿಯಬೇಕು.

ಇತರ ವಿದ್ಯೆಗಳ ಕಲಿಸುವ ಕಾರ್ಯವನ್ನು ಪ್ರಜೆಗಳಿಗೆ ಬಿಟ್ಟು ಕೃಷಿಶಿಕ್ಷಣವನ್ನು ಸರ್ಕಾರದವರೇ ವಹಿಸಿಕೊಂಡಿರುವ ವಿಷಯ ದೃಷ್ಟಿಸಲ್ಪಡತಕ್ಕದಾಗಿದೆ.

ಜನಸಿಬಿಡವಾದ ಸ್ಥಳಗಳಲ್ಲಿ ಜನರಿಗೆ ವಸತಿಗಳನ್ನು ಕಲ್ಪಿಸುವ, ಜನವಿರಳಸ್ಥಳ ಗಳಿಗೆ ಜನಗಳನ್ನು ಸೇರಿಸುವ ಏರ್ಪಾಟುಗಳು ರಾಜ್ಯದ ಮುಖ್ಯ ಕರ್ತವ್ಯಗಳಾಗಿದ್ದುವು.

ಭೂತಪೂರ್ವಮಭೂತಪೂರ್ವಂ ವಾ ಜನಪದಂ ಪರದೇಶಾಪ್ರವಾಹನೇನ
ಸ್ವದೇಶಾಭಿಷ್ಯಂದವಮನೇನವಾ ನಿವೇಶಯೇತ್ ।

ಪರದೇಶದ ಜನರನ್ನು ಕರೆಯಿಸ್ಯಾದರೂ ಅಥವಾ ಜನರಿಂದ ನಿಬಿಡವಾದ ಸ್ವದೇಶ ಸ್ಥಾನಗಳಿಂದ ಜನರನ್ನು ಹೊರಕ್ಕೆ ಹೊರಡಿಸ್ಯಾದರೂ ಪೂರ್ವದಲ್ಲಿದ್ದ ಅಥವಾ ಪೂರ್ವ ದಲಿಲ್ಲದೆ ಹೊಸದಾಗಿ ಕಟ್ಟಿದ ಗ್ರಾಮಗಳಲ್ಲಿ ಜನರನ್ನು ನಿಲ್ಲಿಸಬೇಕು.

ಮಾರಿಕಣವೆಕೆರೆ ಮುಂತಾದ ದೊಡ್ಡ ಜಲಾಶಯಗಳನ್ನು ವಿಶೇಷದ್ರವ್ಯವ್ಯಯ ದಿಂದ ಸರ್ಕಾರದವರು ಕಟ್ಟಿಸಿ ವಿಸ್ತಾರದ ಭೂಮಿಯನ್ನು ತರಿಗೆ ತಂದರೂ ರೈತರನ್ನು ಅಲ್ಲಿ ನಿಲ್ಲಿಸದಿದ್ದರೆ ಅವು ಸಾರ್ಥಕವಾಗುವುದಿಲ್ಲವಾಗಿಯೂ, ಈಗಿರುವ ಅನೇಕ ಗ್ರಾಮಗಳಲ್ಲಿ ಫಲವತ್ತಾದ ಭೂಮಿಗಳು ದುರ್ಲಭವಾಗಿವೆಯಾಗಿ, ಉತ್ಸಾಹಹೀನರಾದ ರೈತರನ್ನು ಸರ್ಕಾರದವರು ಯಾವ ಉಪಾಯದಿಂದಲಾದರೂ ಆ ಹೊಸ ಸ್ಥಳಗಳಲ್ಲಿ ನೆಲಸಿಸುವುದು ಅತ್ಯವಶ್ಯಕವಾಗಿದೆ.

ಕರದೇಭ್ಯಃ ಕೃತಕ್ಷೇತ್ರಾಣ್ಯೈಕಪುರುಷಿಕಾಣಿ ಪ್ರಯಚ್ಛೇತ್ ।

ವ್ಯವಸಾಯಸಿದ್ಧವಾಗಿರುವ ಭೂಮಿಗಳನ್ನು ಕಂದಾಯಕ್ಕಾಗಿ ಜನರಿಗೆ ಅವ ರವರ ಜೀವಮಾನದವರೆಗೆ ಮಾತ್ರ ಕೊಡಬೇಕು.

ಭೂಮಿಯ ಮೇಲೆ ಯಾವನೊಬ್ಬನಿಗೂ ಅನನ್ಯಸಾಧಾರಣವಾದ ಅಧಿಕಾರ ವಿಲ್ಲವಾಗಿ ಭೂಮಿಯನ್ನು ಸಂಪಾದನೆಮಾಡಿದವನ ಮರಣಾನಂತರ ಅದು ಸರ್ಕಾ ರಕ್ಕೆ ಸೇರಿಹೋಗಬೇಕೆಂಬ ಈಗಣ ಸಾಮಾಜಿಕ ಧರ್ಮಪ್ರವರ್ತಕರ ಅಭಿಪ್ರಾಯವೂ, ಮೇಲಿನ ಪೂರ್ವದವರ ಅಭಿಪ್ರಾಯವೂ ಒಂದೇ ಆಗಿರುವ ವಿಷಯವು ಆಲೋಚಿಸಲ್ಪಡ ತಕ್ಕದಾಗಿದೆ.

ಅಕೃತಾನಿಕತೃಭ್ಯೋನಾಹರೇಯಾತ್ ।

ಬಂಜರ್ ಭೂಮಿಯನ್ನು ಕೃಷಿಗೆ ಸರಿಪಡಿಸಿಕೊಳ್ಳುತ್ತಿರುವವರಿಂದ ಕಿತ್ತುಕೊಳ್ಳ ಕೂಡದು.

ಸರ್ಕಾರದ ಬಂಜರು ಭೂಮಿಗಳನ್ನು ಸರ್ಕಾರದವರ ಅಪ್ಪಣೆಯಿಲ್ಲದೆ ರೈತರು ಸಾಗುವಳಿಮಾಡುವ ಪಕ್ಷದಲ್ಲಿ ಆ ಭೂಮಿಗಳು ವಿಶೇಷತರದವುಗಳಾಗಿಲ್ಲದಿದ್ದಲ್ಲಿ ಅವು

ಗಳನ್ನು ಕಿತ್ತುಕೊಳ್ಳಕೂಡದೆಂಬ ವಿಧಿಯು ಈಗಲೂ ರೆವಿನ್ಯೂ ಲಾದಲ್ಲಿ ಇದೆ. ಹೀಗಾಂ ಜಹನೇಃ ಗ್ರಾಮಗಳಿಗೆ ಸೇರಿರುವ ಬಂಜರ್ ಭೂಮಿಗಳು ರೈತರಿಗೆ ಸುಲಭವಾಗಿ ದೊರೆಯುವವಿಷಯದಲ್ಲಿ ಮಾತ್ರ ಯಾವವಿಧಿಯೂ ಇರುವಂತೆ ಕಾಣುವುದಿಲ್ಲ.

ಈಗ ಸರ್ಕಾರದವರು ಧಾನ್ಯೋತ್ಪತ್ತಿಗಾಗಿಯೇ ಭೂಮಿಗಳನ್ನು ವ್ಯವಸಾಯ ಮಾಡಿಸುವುದಿಲ್ಲ; ಎಂದರೆ ಬೇಸಾಯದ ವಿಧಾನವನ್ನು ರೈತರಿಗೆ ತೋರಿಸಲು ಉದಾಹರಣೆಗಾಗಿ ಒಂದೆರಡೆಕರೆ ಭೂಮಿಗಳನ್ನು ಸರ್ಕಾರಿ ಅಧಿಕಾರಿಗಳಿಂದ ವ್ಯವಸಾಯ ಮಾಡಿಸುತ್ತಾರೆಯೇ ಹೊರತು ಧಾನ್ಯದ ವಾಸ್ತವಿಕವಾದ ಉತ್ಪತ್ತಿಗಾಗಿ ಹಾಗೆ ಮಾಡಿಸುವುದಿಲ್ಲ. ಪೂರ್ವದಲ್ಲಾದರೋ—

ಬಹುಹಲಪರಿಕೃಷ್ಟಾಯಾಂ ಸ್ವಭೂಮೌ ದಾಸಕರ್ಮಕರ
ದಂಡಪ್ರತಿಕರ್ತೃಭಿರ್ವಾಪಯೇತ್ ||

ಕೃಷಿಯಧಿಕಾರಿಯು ಸರ್ಕಾರದ ಭೂಮಿಗಳಲ್ಲಿ ಕೂಲಿಗಾರರಿಂದ ಬೇಸಾಯವನ್ನು ಮಾಡಿಸುತ್ತಿದ್ದನು. ಕೂಲಿಗಾರರಿಗೆ ಕೂಲಿಕೆಲಸವನ್ನು ಒದಗಿಸಿಕೊಡುವ ಧನಿಗಳೂ ಭೂಮಾಲೀಕರೂ ಈಗಿನ ಹಾಗೆ ಖಾಸ್ಗಿ ಜನಗಳಲ್ಲದೆ ಪೂರ್ವದಂತೆ ಸರ್ಕಾರದವರೇ ಆಗಿದ್ದರೆ ದೇಶಕ್ಕೆ ಬಹು ಹಿತಕರವಾಗಿರುತ್ತಿದ್ದಿತು. ಉದ್ಯೋಗದ ಲಾಭಕ್ಕೆಲ್ಲ ಕೂಲಿಗಾರರ ದೇಹಶ್ರಮವೇ ಮುಖ್ಯಕಾರಣವಾಗಿದ್ದರೂ ಆ ಲಾಭದ ಬಹುಭಾಗವನ್ನು ಧನಿಗಳು ಮತ್ತು ಭೂಮಾಲೀಕರು ತಾವೇ ಉಳಿಸಿಕೊಂಡು, ಅದರ ಕಿಂಚಿದ್ಭಾಗವನ್ನು ಮಾತ್ರ ಕೂಲಿಗಳಿಗೆ ಹಂಚುತ್ತಾರೆಂಬ ವಿವಾದವು ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳವಾಗಿ ವ್ಯಾಪಿಸಿ, ಸ್ಟ್ರೈಕ್ ಮೊದಲಾದ ಕಲಹಗಳು ಉಂಟಾಗುತ್ತಿವೆ. ಸರ್ಕಾರದವರೇ ಧನಿಗಳೂ ಭೂಮಾಲೀಕರೂ ಆಗಿ, ಕಾರ್ಖಾನೆ ಬೇಸಾಯ ಮೊದಲಾದ ಕಾರ್ಯಗಳನ್ನು ಸ್ಥಾಪಿಸಿ, ಅವುಗಳಲ್ಲಿ ಕೂಲಿಗಳು ಮೊದಲಾದ ಕರ್ಮಕಾರರಿಗೆ ಕೆಲಸವನ್ನು ಒದಗಿಸಿಕೊಡುವುದಾದರೆ ಇಂತಹ ಮನಸ್ತಾಪಗಳಿಗೆ ಕಾರಣವುಂಟಾಗುವುದಿಲ್ಲ. ಖಾಸ್ಗಿ ಜನರಂತೆ ಹೆಚ್ಚು ಲಾಭವನ್ನು ತಾವು ಉಳಿಸಿಕೊಂಡು ಕೆಲಸಗಾರರಿಗೆ ಕಿಂಚಿದಂಶವನ್ನು ಕೊಡಬೇಕಾದ ಅರ್ಥಸಂಬಂಧವು ಸರ್ಕಾರದವರಿಗೆ ಇರಲಿಕ್ಕಿಲ್ಲ. ಒಂದು ವೇಳೆ ಹಾಗೆ ಉಳಿಸಿಕೊಂಡರೂ ಪ್ರಜೆಗಳ ಹಿತವೇ ಸರ್ಕಾರದವರ ಹಿತವಾಗಿರುವುದರಿಂದ, ಉಳಿಸಿಕೊಂಡ ಹಣವನ್ನು ಪ್ರಜಾಹಿತಾರ್ಥವಾಗಿಯೇ ಉಪಯೋಗಿಸುವರು.

ಅಕೃಷತಾ ಮಾಚ್ಛಿದ್ಯಾನ್ಯೇಭ್ಯಃ ಪ್ರಯಚ್ಛೇತ್ ।

ಭೂಮಿಗಳನ್ನು ವ್ಯವಸಾಯಮಾಡದೆಯಿದ್ದವರಿಂದ ಅವನ್ನು ತೆಗೆದುಕೊಂಡು ಇತರರಿಗೆ ಕೊಡಬೇಕು.

ಈಗಣ ರಾಜ್ಯನೀತಿಯು ಮೇರೆ ಈ ನ್ಯಾಯವು ಈಗ ಪ್ರವರ್ತನೆಯಲ್ಲಿಲ್ಲ. ಕಂದಾಯವನ್ನು ಕೊಡುವವರು ಕಂದಾಯವನ್ನು ಕೊಟ್ಟುಕೊಂಡು ಭೂಮಿಗಳನ್ನು ಪಾಳುಗೆಡವಿಕೊಂಡಿರಬಹುದು. ಕಂದಾಯಕೊಡದಿರುವ ಇನಾಂದಾರರು ಸಹ ಹಾಗೆ

ಯೇ ಮಾಡಲು ಯಾವ ಆಕ್ಷೇಪಣೆಯೂ ಇಲ್ಲವಾಗಿ ತೋರುತ್ತದೆ. ಮೇಲಿನ ಶಾಸ್ತ್ರವಿಧಿಯು ಪ್ರಜೆಗಳ ಹಿತಕ್ಕೆ ಅವಶ್ಯಕವಾಗಿ ತೋರುತ್ತದೆ. ಇತರ ವೃತ್ತಿಗಳಂತೆ ವ್ಯವಸಾಯದ ವೃತ್ತಿಯು ಜನರ ವಿಚಾರ ಸಮೀಕ್ಷಣಗಳಿಗೇ ಬಿಡಲ್ಪಡತಕ್ಕದಲ್ಲ. ಹೇಗೆಂದರೆ, ನೈಯಿಗೆ ಕೆಲಸದ ಮೇಲ್ವಿಚಾರಣೆಯ ಗೋಜಿಗೆ ಸರ್ಕಾರದವರು ಹೋಗಬೇಕಾದುದಿಲ್ಲ. ಒಂದು ವೇಳೆ ನೈಯಿಗೆಯವರೆಲ್ಲ ಇತರ ವಿಶೇಷ ಲಾಭಕರವಾದ ವೃತ್ತಿಯನ್ನು ಅವಲಂಬಿಸಿ ನೈಯಿಗೆಕೆಲಸವನ್ನು ಬಿಟ್ಟರೂ ರಾಜ್ಯಕ್ಕೆ ಅಷ್ಟೇನೂ ಅನಾಹುತ ಉಂಟಾಗುವುದಿಲ್ಲ. ಜನರ ಸೌಖ್ಯಕ್ಕೆ ಸ್ವಲ್ಪ ಕೊರತೆಯುಂಟಾಗುತ್ತದೆಯೇ ಹೊರತು ಪ್ರಾಣಕ್ಕೆ ಭಯವೇನೂ ಉಂಟಾಗುವುದಿಲ್ಲ. ಭೂವ್ಯವಸಾಯವು ಹಾಗಲ್ಲ. ಇತರರಂತೆ ಭೂಮಾಲೀಕರು ಚಾಪಲ್ಯವುಳ್ಳವರು. ಸ್ವಪ್ರಯೋಜನಕ್ಕಾಗಲಿ, ಇತರರಿಗೆ ಕೆಡುಕು ಮಾಡುವುದಕ್ಕಾಗಲಿ ಬೇಸಾಯವನ್ನು ಮಾಡದಿದ್ದರೆ ದೇಶಕ್ಕೇ ಬಹಳ ಕೆಡುಕಾಗುತ್ತದೆ. ಮಸಲ—ಭೂಮಿಯು ನಮ್ಮದು ತಮ್ಮದು ಎಂಬುದಾಗಿ ವಿವಾದಮಾಡುತ್ತಾ ಕ್ರಿಮಿನಲ್ ಪ್ರೊಸೀಜರ್ ಕೋಡಿನ 145 ನೆಯ ಸೆಕ್ಷನ್ ಮೇರೆ ವ್ಯವಹಾರ ನಡೆಯಿಸುತ್ತಾ ಒಬ್ಬರೂ ಆ ಭೂಮಿಯನ್ನು ವ್ಯವಸಾಯಮಾಡದೆ ಇದ್ದರೆ, ದೇಶಕ್ಕೆ ಎಷ್ಟು ಅಹಿತವುಂಟಾಗುತ್ತದೆ ? ಜನರು ಭೂಮಿಯನ್ನು ವ್ಯವಸಾಯಮಾಡುತ್ತಿದ್ದರೆ ಮಾತ್ರ ಅದರ ಮೇಲೆ ಅವರಿಗೆ ಹಕ್ಕಿದೆ; ಇಲ್ಲದಿದ್ದರೆ ಅದರ ಮೇಲೆ ಹಕ್ಕಿಲ್ಲವೆಂಬ ಸಾರ್ವಲೌಕಿಕವಾದ ನ್ಯಾಯವನ್ನು ಸರ್ಕಾರದವರೂ ಜನರೂ ಮರೆತಿರುತ್ತಾರೆ. ಭೂಮಿಯು ಸಮುದ್ರದಂತೆ. ಒಬ್ಬನ ಹಡಗು ಸಮುದ್ರದ ಮೇಲೆ ಯಾನಮಾಡುತ್ತಿರುವಾಗ ಮಾತ್ರವೆ, ಅದು ಹೋಗುತ್ತಿರುವ ಸಮುದ್ರದ ಸ್ಥಳದ ಮೇಲೆ ಹಡಗಿನವನಿಗೆ ಹಕ್ಕಿರುವುದು. ಒಂದು ಸ್ಥಳದಿಂದ ಹಡಗು ಮುಂದಕ್ಕೆ ಜಾರಿತೆಂದರೆ ಆ ಸ್ಥಳಕ್ಕೆ ಅವನ ಹಕ್ಕು ತಪ್ಪಿಹೋಗುತ್ತದೆ.

ಪೂರ್ವದ ರಾಜ್ಯದವರು ಜಮೀನಿನ ಮೇಲಿನ ಪೂರ್ಣವಾದ ಹಕ್ಕನ್ನು ಬೇಸಾಯಗಾರರಿಗೆ ಕೊಡದೆ ಇದ್ದುದಕ್ಕೂ ಈಗಣ ಸರ್ಕಾರದವರು ಜಮೀನಿನ ಪೂರ್ಣವಾದ ಹಕ್ಕನ್ನು ಬೇಸಾಯಗಾರರಿಗೆ ವಹಿಸುವುದರಲ್ಲಿ ಉದ್ಯುಕ್ತರಾಗಿರುವುದಕ್ಕೂ ಉದ್ದೇಶವೊಂದೇವೆ ಭೂಮಿಯ ಉತ್ಪತ್ತಿಯನ್ನು ಹೆಚ್ಚಿಸಬೇಕೆಂಬುದೊಂದೇ ಉದ್ದೇಶ. ಒಂದಕ್ಕೊಂದಕ್ಕೆ ವಿರುದ್ಧವಾದ ಈ ಕಾರ್ಯಗಳಿಂದ ಒಂದೇ ಫಲವು ಹೇಗೆ ಉಂಟಾಗುತ್ತೆಂದರೆ: ಪೂರ್ವದಲ್ಲಿ ಜನರು ಅತಿ ವಿರಳವಾಗಿದ್ದುದರಿಂದ ಫಲವತ್ತಾದ ಭೂಮಿಗಳನ್ನೆಲ್ಲಾ ವ್ಯವಸಾಯ ಮಾಡುವಷ್ಟು ಜನ ಬೇಸಾಯಗಾರರಿರಲಿಲ್ಲ. ಆದುಕಾರಣ ಫಲವತ್ತಾದ ಭೂಮಿಗಳು ಹೇರಳವಾಗಿ ಸುಲಭವಾಗಿ ಸಿಕ್ಕುತ್ತಿದ್ದುವು. ಇಂತಹ ಭೂಮಿಗಳಿಗೆ ವಿಶೇಷ ಸಾಧಕವಾದ ಬೇಸಾಯವು ಬೇಕಾಗಿತ್ತಿಲ್ಲ. ಉದಾಸೀನವಾಗಿ ಆಳುಮಾತ್ರದವರು ಮಾಡುವ ವ್ಯವಸಾಯದಿಂದಲೂ ಬೆಳೆಯಾಗುತ್ತಿದ್ದಿತು. ಇಂತಹ ಭೂಮಿಯಲ್ಲಿ ಬೆಳೆದ ಬೆಳೆಯಾದರೋ ಎರಡು ಮೂರು ವರ್ಷಗಳಿಗಾಗುವಷ್ಟು ಬೇಸಾಯಗಾರರಲ್ಲೇ ಉಳಿಯುತ್ತಿದ್ದಿತು. ಏಕೆಂದರೆ, ಸರ್ಕಾರ ಮೊದಲಾದವರಿಗೆ ಬೆಳೆಯಲ್ಲೊಂದು ಪಾಲನ್ನು ಕೊಟ್ಟು ಮಿಕ್ಕುದನ್ನು ಉಳಿಸಿಕೊಳ್ಳುತ್ತಿದ್ದರು. ಹಣದಿಂದ ಕೊಂಡುಕೊಳ್ಳಬೇಕಾದ

ಅಪೇಕ್ಷ್ಯೆಗಳು ಅವರಿಗೆ ಹೆಚ್ಚಾಗಿ ಇರಲಿಲ್ಲ. ಆದುಕಾರಣ ವರ್ಷವರ್ಷ ಬೇಸಾಯ ಮಾಡುವುದನ್ನು ಉಪೇಕ್ಷಿಸಲಿಕ್ಕೆ ಅಗ ಕಾರಣಗಳಿದ್ದುವು. ಭೂಮಿಗಳನ್ನು ಬೇಸಾಯ ಗಾರರಿಗೆ ಖಾಯಂ ಸಾಗುವಳಿಗೆ ಕೊಟ್ಟುಬಿಟ್ಟರೆ ಅವರು ಭೂಮಿಗಳ ಬೇಸಾಯವನ್ನು ಉಪೇಕ್ಷೆಮಾಡ್ಯಾರು ಎಂಬ ಭಯದಿಂದ ಆಗಣ ರಾಜ್ಯದವರು ಭೂಮಿಯ ಮೇಲಿನ ಪೂರ್ಣವಾದ ಹಕ್ಕನ್ನು ಬೇಸಾಯಗಾರರಿಗೆ ಕೊಡದೆ ಮೇಲ್ವಿಚಾರಣೆಯಿಂದ ಬೇಸಾ ಯಮಾಡಿಸುತ್ತಿದ್ದರು. ಈಗಳಾದರೋ ಇದಕ್ಕೆ ವಿಪರೀತವಾದ ಸ್ಥಿತಿಯುಂಟಾಗಿದೆ. ಫಲವತ್ತಾದ ಭೂಮಿಗಳು ಪೂರ್ವದಲ್ಲಿ ಎಷ್ಟು ಇದ್ದುವೋ ಈಗಳೂ ಅಷ್ಟೇ ಇದ್ದರೂ ಬೇಸಾಯಗಾರರ ಸಂಖ್ಯೆಯು ಆ ಭೂಮಿಗಳು ಹಿಡಿಯುವಷ್ಟಕ್ಕಿಂತ 1 ಕ್ಕೆ 100 ರಂತೆ ಹೆಚ್ಚಿದೆ. ಈ ಹೆಚ್ಚಿನ ಜನರು ಫಲಹೀನವಾದ ಭೂಮಿಗಳನ್ನು ವ್ಯವಸಾಯಮಾಡ ಬೇಕಾಗಿ ಬರುತ್ತದೆ. ಇಂತಹ ಭೂಮಿಗಳಿಗೆ ಗೊಬ್ಬರ, ನೀರು, ಕಾಂಗಾರಿ, ಉಳುವುದು, ಈ ಮೊದಲಾದ ಉಪಕರಣಗಳು ವಿಶೇಷವಾದರೆ ಹೊರತು ಇಲ್ಲದಿದ್ದರೆ ಆ ಭೂಮಿಗ ಳಲ್ಲಿ ಬೆಳೆಯಾಗುವುದಿಲ್ಲ. ಈ ಉಪಕರಣಗಳನ್ನು ಪ್ರತಿ ರೈತನಿಗೂ ಪ್ರತಿ ಜಮಿಾನಿಗೂ ಒದಗಿಸಿಕೊಡುವುದು ಸರ್ಕಾರದವರಿಗೆ ಸಾಧ್ಯವಲ್ಲ. ಭೂಮಿಯು ತಮ್ಮ ಸ್ವಂತದು ದಾಗಿಲ್ಲವಿದ್ದಲ್ಲಿ ಬೇಸಾಯಗಾರರು ಈ ಉಪಕರಣಗಳನ್ನು ಒದಗಿಸಿಕೊಂಡು ಚೆನ್ನಾಗಿ ಬೇಸಾಯ ಮಾಡಲೊಲ್ಲರು. ಆದುಕಾರಣ ಚೆನ್ನಾಗಿ ಬೇಸಾಯ ಮಾಡುವುದರಲ್ಲೂ ಭೂಮಿಯ ಆಬಾದಿಗೆ ಹಣ ವೆಚ್ಚಮಾಡುವುದರಲ್ಲೂ ಬೇಸಾಯಗಾರರಿಗೆ ಆದರವ ನ್ನುಂಟುಮಾಡಲೋಸುಗ ಸರ್ಕಾರದವರು ಭೂಮಿಯ ಮೇಲಿನ ಹಿಡುವಳಿಯ ಹಕ್ಕನ್ನು ಬೇಸಾಯಗಾರರಿಗೆ ವಹಿಸಿಕೊಡುವುದೇ ಈಗಣ ಸರ್ಕಾರದ ಪ್ರಗತಿಯಾಗಿದೆ.

ಆದುಕಾರಣ ಭೂಮಿಯ ಮೇಲಿನ ಎಷ್ಟುಮಟ್ಟಿನ ಹಕ್ಕನ್ನು ಸರ್ಕಾರದವರು ಖಾಸ್ಗಿ ಜನರಿಗೆ ಕೊಡಬೇಕು ಎಂಬ ಪ್ರಶ್ನೆಯು, ಎಷ್ಟುಮಟ್ಟಿನ ಹಕ್ಕನ್ನು ಕೊಟ್ಟರೆ ದೇಶಕ್ಕೆ ಹಿತಕರವಾಗುತ್ತದೆ, ಎಂದರೆ, ಸಾಧ್ಯವಾದಷ್ಟು ಹೆಚ್ಚಿನ ಬೆಳೆಯಾಗುತ್ತದೆ ಎಂಬುವ ವಿಚಾರದ ಮೇಲೆ ಮಾತ್ರ ಅಧೀನವಾಗುತ್ತದೆ. ಭೂಮಿಯ ಹಕ್ಕು ಎಂದರೆ ಭೂಮಿಯಲ್ಲಿ ಸಸ್ಯೋತ್ಪತ್ತಿಮಾಡುವ ಹಕ್ಕು ಎಂತಲೇ ಅರ್ಥ.

ಕೃಷ್ಯಭಿವೃದ್ಧ್ಯರ್ಥವಾದ ಶಾಸನಗಳು.

ಧಾನ್ಯೋತ್ಪತ್ತಿಯ ಅಭಿವೃದ್ಧ್ಯರ್ಥವಾಗಿ ನಮ್ಮ ಸರ್ಕಾರದವರೂ ಪರರಾಜ್ಯದ ಸರ್ಕಾರದವರೂ ಮಾಡಿರುವ ಏರ್ಪಾಟುಗಳು ಮತ್ತೂ ಶಾಸಿಸಿರುವ ಖಾನೂನುಗಳು ಮುಂದೆ ವಿವರಿಸಲ್ಪಡುತ್ತವೆ.

ಈ ಉದ್ದೇಶಕ್ಕಾಗಿ ಪರರಾಜ್ಯದವರು ಮಾಡಿರುವ ಏರ್ಪಾಟುಗಳನ್ನೂ ಶಾಸಿ ಸಿರುವ ಖಾನೂನುಗಳನ್ನೂ ಬೊಂಬಾಯಿ ಹೈಕೋರ್ಟ್ ಜಡ್ಜರಾಗಿದ್ದ ಪ್ರಸಿದ್ಧರಾದ ರಾನಡೆ, ಸಿ. ಐ. ಇ., ಯವರು ಉಪನ್ಯಸಿಸಿದ್ದಾರೆ. ಆ ಉಪನ್ಯಾಸಗಳಿಂದ ಮುಖ್ಯ ಸಂಗತಿಗಳನ್ನು ಎತ್ತಿ ಕೆಳಗೆ ವಿವರಿಸುತ್ತೇವೆ.

ರಷ್ಯದೇಶದ ಬೇಸಾಯಗಾರರ ಉದ್ಧಾರವು.

ರಷ್ಯ ದೇಶದ 6 ಕೋಟಿ ಜನಸಂಖ್ಯೆಯೊಳಗೆ 4 ಕೋಟಿ, 80 ಲಕ್ಷ ಜನರು ಬೇಸಾಯಗಾರರಾಗಿರುತ್ತಾರೆ. 50 ವರ್ಷದ ಕೆಳಗೆ ಇವರು ದನಗಳಂತೆ ಯಾವ ಹಕ್ಕೂ ಬಾಧ್ಯತೆಗಳೂ ಇಲ್ಲದೆ ಅರ್ಧಜನವು ಸರ್ಕಾರಿ ಭೂಮಿಯನ್ನೂ ಮತ್ತರ್ಧಜನವು ಜಹಗೀರ್‌ದಾರರ ಭೂಮಿಗಳನ್ನೂ ವ್ಯವಸಾಯಮಾಡಿಕೊಂಡಿದ್ದರು. ತಮ್ಮ ಜಮೀನನ್ನು ಬೇಸಾಯಮಾಡಿಸಿಕೊಳ್ಳುವಸಲವಾಗಿಯೂ ಅಥವಾ ಕಂದಾಯಕ್ಕಾಗಿಯೂ, ಜಹಗೀರಿದಾರರು ತಮ್ಮ ಭೂಮಿಯೊಳಗೊಂದಷ್ಟನ್ನು ಈ ಬೇಸಾಯಗಾರರ ಸ್ವಂತ ಅನುಭವಕ್ಕೆ ಕೊಟ್ಟಿದ್ದರು. ಆದರೆ ಈ ಜಮೀನನ್ನು ಪರಭಾರೆಮಾಡಲು ಇವರಿಗೆ ಯಾವ ಹಕ್ಕೂ ಇರಲಿಲ್ಲ. ಮತ್ತೂ ಬಂಜರ ಜಮೀನನ್ನು ಕೊಂಡುಕೊಳ್ಳುವುದಕ್ಕಾದರೂ ಸ್ವಂತ ಹಕ್ಕಿನಲ್ಲಿ ಹಿಡಿಯುವುದಕ್ಕಾದರೂ ಇವರು ಅರ್ಹರಾಗಿರಲಿಲ್ಲ. ಬೇಸಾಯಗಾರರು ಈ ಸ್ಥಿತಿಯಲ್ಲಿರುವಾಗ್ಗೆ ರಷ್ಯದೇಶವು ಬಹಳ ಹೀನಸ್ಥಿತಿಯಲ್ಲಿದ್ದಿತು. ಈ ದುರವಸ್ಥೆಯ ನಿವಾರಣಾರ್ಥವಾಗಿ ಅಲೆಕ್ಸಾಂಡರ್ ಚಕ್ರವರ್ತಿಯವರು 1861 ನೆಯ ಇಸವಿಯಲ್ಲಿ ರಷ್ಯದ ಬೇಸಾಯಗಾರರ ಸ್ವಾತಂತ್ರ್ಯವಿಷಯಕವಾದ ಶಾಸನವನ್ನು ಶಾಸಿಸಿದರು. ಈ ಶಾಸನದ ಪ್ರಕಾರ ಜಹಗೀರ್‌ದಾರರು ರೈತರುಗಳಿಗೆ ಕುಟುಂಬ 1ಕ್ಕೆ 10 ಎಕರೆಯ ಮೇರೆ ಭೂಮಿಗಳನ್ನು ಖಾಯಂ ಸಾಗುವಳಿಗಾಗಲಿ, ಶುದ್ಧ ಕ್ರಯಕ್ಕಾಗಲಿ ಕೊಟ್ಟುಬಿಡಬೇಕಾಯಿತು. ಖಾಯಂ ಸಾಗುವಳಿಗೆ ಕೊಡಲು ಒಪ್ಪದಿದ್ದರೆ ಸರ್ಕಾರದವರು ಕಟ್ಟುವ ಕ್ರಯಕ್ಕೆ ಅದನ್ನು ಬೇಸಾಯಗಾರರಿಗೆ ಮಾರಬೇಕು. ನಿರ್ಗತಿಕರಾದ ಬೇಸಾಯಗಾರರು ಈ ಭೂಮಿಗಳನ್ನು ಕೊಂಡುಕೊಳ್ಳಲು ಹೇಗೆ ಶಕ್ತರಾದರು ಎಂದರೆ, ಸರ್ಕಾರದವರೇ ಕ್ರಯದ ಹಣವನ್ನು ಬೇಸಾಯಗಾರರಿಗೆ ಸಾಲವಾಗಿ ಕೊಟ್ಟರು. ಈ ಭೂಮಿಗಳನ್ನು ಜಹಗೀರಿದಾರರಿಂದ ಬೇಸಾಯಗಾರರು ಕೊಂಡುಕೊಳ್ಳಲು ಅವರಿಗೆ ಸರ್ಕಾರದವರು 5 ಕೋಟಿ ಪೌನುಗಳನ್ನು ಸಾಲವಾಗಿ ಕೊಟ್ಟರು. ಈ ಸಾಲವನ್ನು ರೈತರು ಸರ್ಕಾರಕ್ಕೆ ಸೇಕಡ 6 ರಂತೆಯಾಗುವ ಬಡ್ಡಿಯೊಡನೆ 49 ವರ್ಷದಲ್ಲಿ ವರ್ಷಕಂತುಗಳಲ್ಲಿ ತೀರಿಸಬೇಕು. ಇಷ್ಟೊಂದು ಹಣವು ಸರ್ಕಾರದ ಖಜಾನೆಯಲ್ಲಿದ್ದಿತೆ? ಒಂದೇ ಸಲ ಅಷ್ಟು ಹಣವನ್ನು ಕೊಡಲು ಸರ್ಕಾರದವರು ಹೇಗೆ ಶಕ್ತರಾದರು? ಎಂದರೆ ಆ ಹಣವು ಸರ್ಕಾರದವರ ಬಳಿ ಇರಲಿಲ್ಲ. ನಾಗರಿಕವಾದ ಯಾವ ಸರ್ಕಾರವೂ ಹೆಚ್ಚು ಹಣವನ್ನು ಖಜಾನೆಯಲ್ಲಿಟ್ಟುಕೊಳ್ಳುವುದಿಲ್ಲ. ರಾಜ್ಯದ ವೆಚ್ಚಕ್ಕೆ ಎಷ್ಟುಬೇಕೋ ಅಷ್ಟನ್ನು ಮಾತ್ರ ಕಂದಾಯ ತೆರಿಗೆಗಳಾಗಿ ಪ್ರಜೆಗಳಿಂದ ವಸೂಲ್ಮಾಡುತ್ತಾರೆ. ಖರ್ಚು ಕಳೆದು ಏನಾದರು ಉಳಿದರೆ ಅದನ್ನು ಇಟ್ಟುಕೊಳ್ಳದೆ ಪ್ರಜೆಗಳ ಹಿತಾರ್ಥವಾಗಿಯೇ ಉಪಯೋಗಿಸಿಬಿಡುತ್ತಾರೆ. ಮಧ್ಯೆ ಅನಿರೀಕ್ಷಿತವಾಗಿ ಹೆಚ್ಚು ಹಣ ವೆಚ್ಚಮಾಡುವಂತಹ ಯುದ್ಧ, ಕೆರೆಕಾಲ್ವೆರೈಲುಗಳನ್ನು ಕಟ್ಟಿಸುವ ಕಾರ್ಯ ಇಂತಹ ಸಂಭವಗಳುಂಟಾದರೆ ಹೇಗೆ ಎಂದರೆ, ಆ ಸಂಭವಗಳುಂಟಾಗುವಲ್ಲಿ ಸರ್ಕಾರದವರು ಸಾಲವನ್ನು ತೆಗೆದುಕೊಳ್ಳುತ್ತಾರೆ. ಎಷ್ಟುಬೇಕೋ ಅಷ್ಟನ್ನು ಸ್ವದೇಶದ ಧನಿಕರಿಂದಲೂ ಅವರಲ್ಲಿಲ್ಲದಿದ್ದರೆ ಪರದೇಶದ ಧನಿಕರಿಂದಲೂ

ತೆಗೆದುಕೊಳ್ಳುತ್ತಾರೆ. ಹೀಗೆ ಸಾಲಗಳನ್ನು ಕೊಟ್ಟು ಸರ್ಕಾರದಿಂದ ಬಡ್ಡಿಯನ್ನು ಪಡೆಯುವ ಸೌಕರ್ಯವು ಧನಿಕರಿಗೇ ಹೊರತು ಸಾಧಾರಣರಿಗಿಲ್ಲವೇ ಎಂದರೆ, ಎಲ್ಲರಿಗೂ ಉಂಟು. 50–100 ಈ ಪ್ರಕಾರ ಜನರು ಅವರವರ ಶಕ್ತ್ಯನುಸಾರ ಸಾಲಗಳನ್ನು ಕೊಡಬಹುದು. ಸರ್ಕಾರದವರು ಪತ್ರಗಳನ್ನು ಬರೆದುಕೊಡುತ್ತಾರೆ. ಆ ಪತ್ರಗಳನ್ನು ಹಣದಂತೆ ಪ್ರೊನೋಟಿನಂತೆ ಒಬ್ಬರು ಮತ್ತೊಬ್ಬರಿಗೆ ಮಾರಬಹುದು. ವಾಯಿದೆಯ ವರೆಗೂ ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದು ವಾಯಿದೆಯಲ್ಲಿ ಪತ್ರದ ಹಣವನ್ನು ತೆಗೆದು ಕೊಳ್ಳಬಹುದು. ಉದಾಹರಣೆ:—ಈಗ ಪ್ರಜಾಹಿತಾರ್ಥವಾದ ಕೆಲಸಕ್ಕಾಗಿ ಘ|| ಗೌರ್ನರ್ ಜನರಲ್‌ರವರು 250 ಲಕ್ಷ ರೂಪಾಯಿಗಳನ್ನು ಸಾಲತೆಗೆದುಕೊಳ್ಳುತ್ತಾರೆಂತಲೂ ಸಾಲಕೊಡಲಿಚ್ಛಿಸುವವರು 100 ರೂ. ನ್ನಾಗಲಿ ಅದರ ಗುಣಿತವನ್ನಾಗಲಿ ಕೊಡಬಹುದೆಂತಲೂ ಇದಕ್ಕಾಗಿ ಸೇಕಡ 3½ ರೂ. ಪ್ರಕಾರ ಆಗುವ ಬಡ್ಡಿಯನ್ನು 6 ತಿಂಗಳಿಗೊಂದಾವೃತ್ತಿ ಕೊಡುತ್ತಾರೆಂತಲೂ ಅಸಲನ್ನು 1920 ನೆಯ ಇಸವಿ ಡಿಸೆಂಬರು ಆದ ಬಳಿಕ ತೀರಿಸುತ್ತಾರೆಂತಲೂ ಸಹ ಇಂಡಿಯ ಗೆಜಿಟ್ಟಿನಲ್ಲಿ ಪ್ರಸಿದ್ಧಪತ್ರಿಕೆ ಹೊರಟಿರುತ್ತದೆ.

ಇದೇ ಪ್ರಕಾರ ರಷ್ಯಗೌರ್ನಮೆಂಟಿನವರು ಆ ಹಣವನ್ನು ಪಡೆದರು. ಸೇಕಡ 5–5½ ಬಡ್ಡಿಗೆ ಸಾಲವನ್ನು ತೆಗೆದುಕೊಂಡು, ರೈತರಿಗೆ ಸೇಕಡ 6 ರ ಮೇರೆ ಬಡ್ಡಿಗೆ ಕೊಟ್ಟರು. ರೈತರು 49 ವರ್ಷದಲ್ಲಿ ಆ ಅಸಲುಬಡ್ಡಿಗಾಗಿ ಹಿಂದಕ್ಕೆ ಕೊಟ್ಟ ಹಣದಿಂದ ಆ ಸಾಲವನ್ನು ತೀರಿಸಿದರು. ಈ ಪ್ರಕಾರ ಜಹಗೀರಿ ಭೂಮಿಗಳ ಬೇಸಾಯ ಮಾಡುತ್ತಿದ್ದ ರೈತರಿಗೆ ಸರ್ಕಾರದವರು ಭೂಮಿಗಳನ್ನು ಸಂಪಾದನೆಮಾಡಿಕೊಟ್ಟರು. ಸರ್ಕಾರಿ ಜಮೀನುಗಳನ್ನು ಮಾಡುತ್ತಿದ್ದ ರೈತರಿಗಾದರೋ ಅವರವರು ಮಾಡುತ್ತಿದ್ದ ಜಮೀನಿನ ಖಾಯಂ ಹಿಡುವಳಿಯ ಹಕ್ಕನ್ನು ಅವರಿಗೇ ಕೊಟ್ಟುಬಿಟ್ಟರು. ಈ ಪ್ರಕಾರ ಸರ್ಕಾರದವರು ರೈತರನ್ನು ಸ್ವಾತಂತ್ರ್ಯದ ಭೂಮಾಲೀಕರನ್ನಾಗಿ ಮಾಡಿದಂದಿನಿಂದ ರಷ್ಯದೇಶವು ಸಂಪತ್ಸಮೃದ್ಧಿಯನ್ನೈದುತ್ತಲೂ ಜನಸಾಮಾನ್ಯದ ಸುಖವು ಹೆಚ್ಚುತ್ತಲೂ ಬರುತ್ತಿದೆ. ನಮ್ಮ ದೇಶದಲ್ಲಿ ಜಹಗೀರ್ ಇನಾಮು ಗ್ರಾಮಗಳಲ್ಲಿ ಖಾಯಂ ಹಕ್ಕಿಲ್ಲದೆ ವರ್ಷವರ್ಷದ ಗೇಣಿಯ ಮೇಲಾಗಲಿ, ಕೂಲಿಗಳ ಹಾಗಾಗಲಿ ಬೇಸಾಯವನ್ನು ಮಾಡುತ್ತಿರುವ ರೈತರಿಗೆ ಮೇಲ್ಕಂಡ ಮೇರೆ ಸ್ವಂತ ಭೂಮಿಗಳನ್ನು ಸರ್ಕಾರದವರು ಸಂಪಾದನೆಮಾಡಿಕೊಡುವುದು ಉಚಿತವಾಗಿದೆ.

ಪ್ರುಸ್ಯದೇಶದ ಭೂಸ್ವಾಮ್ಯದ ಸುಧಾರಣೆಯು.

ರಷ್ಯದೇಶದ ಅವಸ್ಥೆಯೇ ಇಲ್ಲಿಯೂ ಇದ್ದಿತು. ಅಲ್ಲಿನಂತೆ ಸರ್ಕಾರದವರು ಬೇಸಾಯವನ್ನು ಅಭಿವೃದ್ಧಿಪಡಿಸಿದರು. ಇಲ್ಲಿನ ವಿಶೇಷಸುಧಾರಣೆ ಯಾವುದೆಂದರೆ—ನಮ್ಮ ದೇಶದ ಜಮೀನ್‌ದಾರಿ, ಇನಾಂ, ಜಹಗೀರಿ ಗ್ರಾಮಗಳಲ್ಲಿನಂತೆ, ಅಲ್ಲಿಯ ಜಮೀನುಗಳಿಗೂ ಒಬ್ಬಾನೊಬ್ಬ ಪೂರ್ಣವಾದ ಮಾಲೀಕನಿಲ್ಲದೆ, ಪ್ರತಿ ಜಮೀನಿಗೂ ಏಕಕಾಲದಲ್ಲಿ ಅನೇಕರು ಮಾಲೀಕರಾಗಿದ್ದರು. ಹೇಗೆಂದರೆ—ನಮ್ಮ ದೇಶದ ಉದಾಹರಣೆಯನ್ನು ತೆಗೆದುಕೊಳ್ಳುವ. ಒಂದು ಗ್ರಾಮಕ್ಕೆ ಪರಮ ಉಚ್ಚಾಧಿಕಾರಿಯು ಜಮ

ಗೀರ್‌ದಾರನು. ಇವನ ಕೈಕೆಳಗೆ ಕೆಲಕೆಲ ಜಮೀನುಗಳ ವೃತ್ತಿದಾರರು, ಅವರ ಕೈಕೆಳಗೆ ವ್ಯವಹಾರಚತುಷ್ಟಯಾಧಿಕಾರದ ಖದೀಂ ರೈತನು, ಯಾ, ಖಾಯಂ ಹಿಡುವಳಿ ರೈತನು, ಅವನ ಕೈಕೆಳಗೆ ವ್ಯವಹಾರಚತುಷ್ಟಯದ ಹಕ್ಕಿಲ್ಲದೆ ತಾನೂ ತನ್ನ ಪುತ್ರ ಪೌತ್ರರೂ ಅನುಭವಿಸುವ ಹಕ್ಕುದಾರನು, ಅವನ ಕೈಕೆಳಗೆ ವರ್ಷೆವರ್ಷೆ ಅಪ್ಪಣೆಪಡೆದು ವ್ಯವಸಾಯಮಾಡುವ ರೈತನು. ಭೂಮಿಯಲ್ಲಿ ಬೆಳೆದುದನ್ನು ಇಂತಿಷ್ಟರು ಅವರವರ ಅಧಿಕಾರಕ್ಕೆ ತಕ್ಕಹಾಗೆ ಹಂಚಿಕೊಳ್ಳುವರು ಜಮೀನಿಗೆ ಲಾಗುವಡು ಮುಟ್ಟಿಸಿ ಹೆಚ್ಚು ಬೆಳೆ ಮಾಡುವುದಕ್ಕೂ ಅಥವಾ ಕಬ್ಬು, ನೀಲಿ, ಕಾಫಿ ಮೊದಲಾದ ವಿಶೇಷ ತರದ ಬೆಳೆಮಾಡುವುದಕ್ಕೂ ಅವರ ಪೈಕಿ ಒಬ್ಬಾನೊಬ್ಬನಿಗೆ ಆಸಕ್ತಿಯಿರುವುದೂ ಇಲ್ಲ; ಮತ್ತೂ ಸ್ವಾತಂತ್ರ್ಯವೂ ಇರುವುದಿಲ್ಲ. ಆದುಕಾರಣ ಈ ಸ್ಥಿತಿಯು ಭೂಮಿಯಲ್ಲಿ ಚೆನ್ನಾಗಿ ಬೆಳೆಮಾಡುವುದಕ್ಕೆ ಬಹು ಆತಂಕವಾಗಿರುತ್ತದೆ. ಈ ಅವಸ್ಥೆಯು ಪ್ರಸ್ಯಾ ದೇಶದಲ್ಲಿದ್ದಿತು.

ಈ ದುರವಸ್ಥೆಯನ್ನು ಆ ಸರ್ಕಾರದವರು ತಪ್ಪಿಸಿದರು. ಆ ಸುಧಾರಣೆಯ ವಿಧಾನ ಹೇಗಿದ್ದಿತೆಂದರೆ, ಮೊದಲಿನ ಉದಾಹರಣೆಯನ್ನೇ ತೆಗೆದುಕೊಳ್ಳುವ. ಮೇಲಿನ 5 ತರದ ಜನರು 10 ಯಕರೆ ಭೂಮಿಗೆ ಅಧಿಕಾರಿಗಳಾಗಿದ್ದರೆಂದು ಊಹಿಸುವ. ಆ ಹತ್ತು ಎಕರೆಯ ಭೂಮಿಯ ಪ್ರತಿಭಾಗದ ಮೇಲೂ ಆ ಪ್ರತಿ ಒಬ್ಬರಿಗೂ ಹಕ್ಕಿದ್ದುದಕ್ಕೆ ಬದಲಾಗಿ, ಆ ಭೂಮಿಯ ಪೈಕಿ ಒಂದೊಂದು ಭಾಗವನ್ನು ಅವರವರ ಹಕ್ಕಿನ ಹೆಚ್ಚು ಕಡಮೆಗೆ ಸರಿಯಾಗಿ ಆ ಪ್ರತಿ ಒಬ್ಬರಿಗೂ ಕೊಟ್ಟು, ಅಥವಾ ಭೂಮಿಯ ಭಾಗಕ್ಕೆ ಬದಲಾಗಿ ಅದರ ಕ್ರಯವನ್ನು ಒಬ್ಬರಿಂದ ಮತ್ತೊಬ್ಬರಿಗೆ ಕೊಡಿಸಿ, ಅವರವರಿಗೆ ಬಂದ ಭಾಗದ ಮೇಲೆ ಪೂರ್ಣವಾದ ಹಕ್ಕಿರುವಹಾಗೂ, ಮಿಕ್ಕುದರ ಮೇಲೆ ಯಾವ ಹಕ್ಕಿಲ್ಲದಹಾಗೂ ಮಾಡಿದರು. ಮಸಲ—ಆ ಹತ್ತು ಯಕರೆಯೊಳಗೆ 3 ಯಕರೆಯನ್ನು ಜಹಗೀರ್‌ದಾರನಿಗೂ, 2 ಯಕರೆಯನ್ನು ವೃತ್ತಿದಾರನಿಗೂ, 2 ಯಕರೆಯನ್ನು ವ್ಯವಹಾರಚತುಷ್ಟಯದ ಹಕ್ಕಿನ ಖಾಯಂ ಹಿಡುವಳಿದಾರನಿಗೂ, ಮತ್ತೆರಡನ್ನು ಆ ಹಕ್ಕಿಲ್ಲದ ಖಾಯಂ ಹಿಡುವಳಿದಾರನಿಗೂ, ಉಳಿದ ಒಂದೆಕರೆಯನ್ನು ಬೇಸಾಯಗಾರನಿಗೂ, ಅಥವಾ ಬೇಸಾಯಗಾರನಿಂದ ಖಾಯಂ ಹಿಡುವಳಿದಾರನಿಗೆ ಎರಡೆಕರೆಯ ಕ್ರಯವನ್ನು ಕೊಡಿಸಿ, 3 ಯಕರೆಯನ್ನು ಬೇಸಾಯಗಾರನಿಗೇ ಕೊಡಿಸುವುದು, ಈ ಪ್ರಕಾರ ಮಾಡಿದರು. ಈ ಪ್ರಕಾರ ಪ್ರಸ್ಯಾ ದೇಶದವರು ಆ ದೇಶದ ಭೂಮಿಯ ಸಂಬಂಧವಿರುವವರೊಳಗೆ ಒಬ್ಬರಿಂದ ಮತ್ತೊಬ್ಬರಿಗಿದ್ದ ಆತಂಕಗಳನ್ನು ತಪ್ಪಿಸಿ, ಪ್ರತಿಯೊಬ್ಬನೂ ತನ್ನ ಭೂಮಿಯನ್ನು ಮತ್ತೊಬ್ಬನ ಆತಂಕವಿಲ್ಲದೆ ತನಗೂ ದೇಶಕ್ಕೂ ಹಿತವಾಗುವ ರೀತಿಯಲ್ಲಿ ಬೇಸಾಯ ಮಾಡಿಕೊಳ್ಳುವಂತೆ ಅನುಕೂಲಪಡಿಸಿಕೊಟ್ಟರು.

ಬಂಗಾಳಾದಲ್ಲೂ ಇದೇ ದುರವಸ್ಥೆ ಇದ್ದಿತು. ಇಲ್ಲಿನ ಭೂಸ್ವಾಮ್ಯದ ಸುಧಾರಣೆಗಾಗಿ ಸರ್ಕಾರದವರು ಬೆಂಗಾಲ್ ಟೆನೆನ್ಸಿ ಆಕ್ಟ್ ಎಂಬ ಖಾನೂನನ್ನು ಮಾಡಿದರು. ಆ ಖಾನೂನು ಮದ್ರಾಸ್ ಎಸ್ಟೇಟ್ಸ್ ಲ್ಯಾಂಡ್ ಆಕ್ಟಿನಂತೆಯೇ ಇದೆ. ಈ ಖಾನೂನು ಪ್ರಸ್ಯದಲ್ಲಿನಂತೆ ಒಬ್ಬರಿಂದ ಮತ್ತೊಬ್ಬರಿಗಿರುವ ಆತಂಕಗಳನ್ನು ತಪ್ಪಿಸದೆ ಅವರವರ

ಹಕ್ಕನ್ನು ಮಾತ್ರ ನಿರ್ಧರಿಸಿ ಅದರ ನಿರ್ಧರಣೆಗೆ ತತ್ಸಂಬಂಧಿಗಳು ಬಾರಿಬಾರಿಗೂ ಸರ್ಕಾರಕ್ಕೆ ಬರುವಂತೆ ಮಾಡಿರುತ್ತದೆ.

ಮದ್ರಾಸ್ ಲ್ಯಾಂಡ್ ಎಸ್ಟೇಟ್ಸ್ ಆಕ್ಟ್.

ಜಮೀನ್ದಾರಿ, ಇನಾಂ, ಜಹಗೀರಿ, ಪಾಳಯ, ಇಂತಹ ಆಸ್ತಿಗಳಿಗೂ ಮತ್ತೂ ಗ್ರಾಮಗಳಿಗೂ ಈ ಆಕ್ಟ್ ಅನ್ವಯಿಸುತ್ತದೆ. ಇಂತಹ ಆಸ್ತಿಗಳಿಗೂ ಗ್ರಾಮಗಳಿಗೂ ಈ ಆಕ್ಟ್‌ನಲ್ಲಿ "ಎಸ್ಟೇಟ್ ಯಾನೆ ಮೂಲಿ ಆಸ್ತಿ" [1] ಎಂದು ಹೆಸರು. ಈ ಆಸ್ತಿಗಳ ಮಾಲೀಕರಾದ ಇನಾಂದಾರರು ಜಮೀನ್ದಾರರು ಜಹಗೀರ್‌ದಾರರು ಇವರುಗಳಿಗೆ ಭೂಮಾಲೀಕರೆಂದು ಹೆಸರು. ಭೂಸಂಬಂಧವಿರುವವರಿಗೂ ಸರ್ಕಾರಕ್ಕೂ ಮಧ್ಯೆ ಇರುವ ಪರಸ್ಪರಸಂಬಂಧಗಳು ಈ ಆಕ್ಟಿನಲ್ಲಿ ನಿರ್ಧರಿಸಲ್ಪಡುವುದಿಲ್ಲ. ಈ ಸಂಬಂಧಗಳು "ರೆವಿನ್ಯೂ ರಿಕವರಿ ಆಕ್ಟ್." "ಪರ್ಮನೆಂಟ್ ಸೆಟಲ್‌ಮೆಂಟ್ ರೆಗ್ಯುಲೇಷನು." ಇವುಗಳಲ್ಲಿ ನಿರ್ಧರಿಸಲ್ಪಡುತ್ತವೆ. ಭೂಮಾಲೀಕರಿಗೂ ರೈತರಿಗೂ ಇರುವ ಪರಸ್ಪರ ಹಕ್ಕು ಬಾಧ್ಯತೆ ಸಂಬಂಧಗಳು ಮಾತ್ರ ಇಲ್ಲಿ ನಿರ್ಣಯಿಸಲ್ಪಡುತ್ತವೆ. ಮತ್ತೂ ಭೂಮಾಲೀಕರ ಖಾಸ್ಗಿ (ಸ್ವಂತ) ಜಮೀನುಗಳನ್ನೂ ರೈತರ ಜಮೀನುಗಳನ್ನೂ ವ್ಯವಸಾಯಮಾಡುವ,

---

1. ಎಸ್ಟೇಟ್ ಯಾನೆ ಮೂಲಿ ಆಸ್ತಿ, ಖಾಸ್ಗಿ ಜಮೀನು, ಹಳೆ ಬಂಜರು, ರೈತಿ ಜಮೀನು, ಭೂಮಾಲೀಕ, ಒಕ್ಕಲು, ರೈತ, ಭೋಗೋಟಿಹಕ್ಕುಳ್ಳ ರೈತ, ಗೇಣಿ, ಈ ಶಬ್ದಗಳಿಗೆ ಪಾರಿಭಾಷಿಕವಾದ ಅರ್ಥವು ಈ ಆಕ್ಟಿನಲ್ಲಿ ಕಲ್ಪಿಸಲ್ಪಟ್ಟಿದೆ. ಈ ಶಬ್ದಗಳೂ ಅವುಗಳ ಅರ್ಥಗಳೂ ಮೇಲಿನ ನಮ್ಮ ಸಂಕ್ಷಿಪ್ತ ವಿವರಣೆಯಲ್ಲೂ ಮುಂದಿರುವ ಸರ್ಕಾರಿ ಆಕ್ಟಿನ ಭಾಷೆಯಲ್ಲೂ ಕೊಡಲ್ಪಟ್ಟಿವೆ. ವಾಚಕರು ಈ ಶಬ್ದಗಳಿಗೆ ಇಲ್ಲಿ ಕೊಟ್ಟಿರುವ ಅರ್ಥಗಳನ್ನೇ ಮಾಡಿಕೊಳ್ಳತಕ್ಕದಾಗಿದೆ. ಬೊಂಬಾಯಿ ಮೈಸೂರು ಆಧಿಪತ್ಯಗಳಲ್ಲಿನವರು ಈ ಲಾವನ್ನು ಈ ವಿಷಯದಲ್ಲಿ ತಮ್ಮ ಆಧಿಪತ್ಯಗಳಲ್ಲಿರುವ ಲಾದೊಡನೆ ಹೋಲಿಸಿಕೊಳ್ಳುವುದುಪಯುಕ್ತವಾಗಿ ಅವರ ತಿಳಿವಿಕೆಗೋಸ್ಕರ ಈ ಶಬ್ದಗಳಿಗೆ ಆ ದೇಶಗಳ ಲಾದಲ್ಲಿ ಪ್ರಾಯಃ ಸಮನಾಗಿರುವ ಪದಗಳನ್ನು ಈ ಕೆಳಗೆ ಕೊಡುತ್ತೇವೆ.

ಮದ್ರಾಸ್		ಮೈಸೂರು		ಬೊಂಬಾಯಿ
ಎಸ್ಟೇಟ್ ಯಾನೆ ಮೂಲಿ ಆಸ್ತಿ	=	ಪರಭಾರೆ ಮಾಡಲ್ಪಟ್ಟ ಭೂಮಿ, ಯಾ, ಆಸ್ತಿ	=	ದುಮಾಲಿ ಭೂಮಿ
ಖಾಸ್ಗಿ ಜಮೀನು ...	=	ಅನಾದಿ ಬಂಜರು		
ಹಳೆ ಬಂಜರು ...	=	ಅನಾದಿ ಬಂಜರು		
ರೈತಿ ಜಮೀನು ...	=	ಖದೀಂ ರೈತನ ಜಮೀನು		
ಭೂಮಾಲೀಕ ...	=	ಜಮೀನಿನ ಯಜಮಾನ, ಯಾ, ಮೇಲ್ ಹಿಡುವಳಿದಾರ ...	=	ಜಮೀನ್‌ದಾರ
ರೈತ	=	ಕೀಳ್ ಹಿಡುವಳಿದಾರ, ಯಾ, ಸಿಕ್ಮಿದಾರ. ಭೋಗೋಟಿ ಹಕ್ಕುಳ್ಳ ರೈತನಿಗೆ ಖದೀಂ ರೈತನೆಂದು ಹೆಸರು	=	ಒಕ್ಕಲು
ಒಕ್ಕಲು	=			
ಭೋಗೋಟಿ ಹಕ್ಕುಳ್ಳ ರೈತ	=			
ಗೇಣಿ	=	ಗೇಣಿ	=	ಗೇಣಿ
ಶೀರ್ವೆ	=	ಕಂದಾಯ	=	ಮಹಸೂಲ್

ಈ ಆಕ್ಟಿನಲ್ಲಿ "ಒಕ್ಕಲು" ಎಂದು ಕರೆಯಲ್ಪಡುವ ಬೇಸಾಯಗಾರರ ಹಕ್ಕುಬಾಧ್ಯತೆಗಳೂ ಸಹ ವಿಶೇಷವಾಗಿ ಇಲ್ಲಿ ನಿರ್ಣಯಿಸಲ್ಪಡುವುದಿಲ್ಲ. ಇವರ ಹಕ್ಕುಬಾಧ್ಯತೆಗಳು ಭೂಮಾಲೀಕಹಿಡುವಳಿದಾರರೊಡನೆ ಇವರು ಮಾಡಿಕೊಳ್ಳುವ ಕರಾರು ಕಟ್ಟಡಕಗಳ ಮೇಲೆ ಅಲಂಬನೆಯಾಗಿ ಸಿವಿಲ್ ಲಾದಿಂದ ನಿರ್ಣೀತವಾಗುತ್ತವೆ.

ಈ ಆಕ್ಟಿನ ಮುಖ್ಯ ಉದ್ದೇಶಗಳು ಎರಡು:—(1) ಸರ್ಕಾರಿ ಭೂಮಿಗಳ ಹಿಡುವಳಿದಾರರಿಗೂ ಮತ್ತೂ ಬೇಸಾಯಕ್ಕಾಗಿ ಅವುಗಳನ್ನು ಹೊಸದಾಗಿ ಹಿಡಿಯುವವರಿಗೂ ಹೇಗೆ ಖಾಯಂ ಹಿಡುವಳಿ-ವಾರಿಸ್-ವ್ಯವಹಾರಚತುಷ್ಟಯಗಳ ಹಕ್ಕು ಇದೆಯೋ, ಹಾಗೆ, ಈ ಮೂಲಿ ಆಸ್ತಿಗಳಲ್ಲಿನ ಖಾಸ್ಗಿ ಜಮೀನು ಹೊರತು ಮಿಕ್ಕ ಕೃಷಿಯೋಗ್ಯವಾದ ಜಮೀನಿನಲ್ಲಿ ರೈತರಿಗೆ ಅಂತಹ ಹಕ್ಕುಗಳನ್ನುಂಟುಮಾಡಿಕೊಡುವುದೂ; (2) ಭೂಮಾಲೀಕರಿಗೂ ರೈತರಿಗೂ ಮಧ್ಯೆ ಪರಸ್ಪರವಾಗಿ ಅನಿರ್ದಿಷ್ಟವಾಗಿದ್ದ ಸಂಬಂಧಗಳನ್ನು ನಿರ್ಣಯಿಸಿಕೊಡುವುದೂ. ಈ ಉದ್ದೇಶಪೂರಣದ ವಿಧಾನಗಳನ್ನು ವಿವರಿಸುವುದಕ್ಕೆ ಮೊದಲು, ಈ ಮೂಲಿ ಆಸ್ತಿಗಳ ವಿಭಾಗಗಳನ್ನೂ ಅವುಗಳಿಗೆ ಸಂಬಂಧವಿರುವವರನ್ನೂ ಸ್ಪಷ್ಟತೆಗಾಗಿ ವೃಕ್ಷರೂಪದಲ್ಲಿ ತೋರಿಸುವೆವು.

ಮೂಲಿ ಆಸ್ತಿಗಳು = ಭೂಮಾಲೀಕರು

ಕೃಷಿಯೋಗ್ಯವಾದ ಭೂಮಿ | ಕೃಷಿಯೋಗ್ಯವಲ್ಲದ ಭೂಮಿ

ಖಾಸ್ಗಿ ಜಮೀನು = ಭೂಮಾಲೀಕರು | ರೈತಿ ಜಮೀನು = ರೈತರು | ಮಧ್ಯಕದ ಜಮೀನು (ಗೋಮಾಳ ಇತ್ಯಾದಿ) } ಸರ್ವರು

ಹಳೆ ಬಂಜರಲ್ಲದ ರೈತಿ ಜಮೀನು } = ಭೋಗೋಟಿ ಹಕ್ಕುಳ್ಳ ರೈತರು | ಹಳೆ ಬಂಜರು = ಭೋಗೋಟಿ ಹಕ್ಕು ಸ್ವಭಾವವಾಗಿಲ್ಲದ, ಆದರೆ ಅದನ್ನು ಪಡೆಯಬಹುದಾದ ರೈತರು

ಮೂಲಿ ಆಸ್ತಿಗಳಲ್ಲಿನ ಕೃಷಿಯೋಗ್ಯವಾದ ಭೂವಿಸ್ತೀರ್ಣವು ಖಾಸ್ಗಿ ಜಮೀನು, ರೈತಿ ಜಮೀನು ಎಂಬ ಎರಡು ವಿಧಗಳಾಗಿ ಮೊದಲು ವಿಭಾಗಿಸಲ್ಪಡುತ್ತದೆ. ಈ ಖಾಸ್ಗಿ ಜಮೀನುಗಳು (ಕೆಲಕಡೆ ಇವುಗಳಿಗೆ ಪಣ್ಯದ ಜಮೀನುಗಳೆಂದು ಹೇಳುತ್ತಾರೆ) ಭೂಮಾಲೀಕರ ಮನೆಗೆ ಸೇರಿದ ಅವರ ಸ್ವಂತ ಜಮೀನುಗಳು. ಈ ಜಮೀನುಗಳು ಹೆಚ್ಚು ಕಡಮೆ ಎಂಬ ಮುಂದೆ ಬರಬಹುದಾದ ವಿವಾದದ ನಿವಾರಣೆಗಾಗಿ ಗೌವರ್ನಮೆಂಟಿನವರು ತಾವೇ ಆಗಲಿ, ಭೂಮಾಲೀಕರು ಹಿಡುವಳಿದಾರರುಗಳ ಪ್ರಾರ್ಥನೆಯ ಮೇಲಾಗಲಿ, ಇವು ಇಷ್ಟೇ ಎಂಬುದನ್ನು ನಿರ್ಣಯಿಸಿ ರಿಕಾರ್ಡು ಮಾಡಿಸಬಹುದು.
182, 183. ಭೂಮಾಲೀಕರ ಸ್ವಾಧೀನದಲ್ಲಿರುವ ಇತರ ಜಮೀನುಗಳನ್ನು ಇವು

ಗಳೊಂದಿಗೆ ಮಿಶ್ರಮಾಡಕೂಡದು. ಈ ಖಾಸ್ಗಿ ಜಮೀನುಗಳನ್ನು ಭೂಮಾಲೀಕರು ಸ್ವತಃ ಆಗಲಿ ಒಕ್ಕಲುಗಳ ಮೂಲಕವಾಗಲಿ ಬೇಸಾಯಮಾಡಬಹುದು. ರೈತರಿಗೆ ಇವುಗಳ ಮೇಲೆ ಯಾವ ಹಕ್ಕೂ ಇಲ್ಲ. ಈ ಖಾಸ್ಗಿ ಜಮೀನುಗಳನ್ನು ಮಾಡುವ ಒಕ್ಕಲು ಗೇಣಿಯನ್ನು ಕೊಡದೆಯಿದ್ದು ಗೇಣಿಗಾಗುವಷ್ಟು ಚರಸೊತ್ತೂ ಅವರಲ್ಲಿಲ್ಲದಿದ್ದರೆ ಭೂಮಾಲೀಕರ ಪ್ರಾರ್ಥನೆಯ ಮೇರೆ ಭೂಮಿಯನ್ನು ಅವರ ಕೈತಪ್ಪಿಸಬಹುದು.

ರೈತಿ ಜಮೀನು=ಖಾಸ್ಗಿ ಭೂಮಿಯಲ್ಲದ ಇತರ ಕೃಷಿಯೋಗ್ಯವಾದ ಭೂಮಿ.

"ಹಳೆ ಬಂಜರು=ಇದರ ಅರ್ಥವನ್ನು ಆಕ್ಟಿನಲ್ಲಿರುವುದಕ್ಕಿಂತ ಸಂಕ್ಷಿಪ್ತವಾಗಿ ವಿವರಿಸಲಾಗುವುದಿಲ್ಲ. ಆಕ್ಟಿನ ವಿವರಣೆಯನ್ನೇ ಕೊಡುತ್ತೇವೆ.

ಹಳೆಬಂಜರು:—ಹಳೆಬಂಜರು ಎಂಬುದು ಒಂದು ಎಸ್ಟೇಟಿನಲ್ಲಿಯ ಖಾಸ್ಗಿ ಜಮೀನು ಅಲ್ಲದೆ ಇದ್ದು—

(1) ಅದನ್ನು ಭೂಮಾಲೀಕನು ಗೇಣಿಗೆ ಕೊಡುವ ಕಾಲದಲ್ಲಿ ಆತನದಾಗಿ ಆತನ ಸ್ವಾಧೀನದಲ್ಲಿ, ಯಾ, ಹಕ್ಕುದಾರನಾದ ಆತನ ಪೂರ್ವಜನ ಸ್ವಾಧೀನದಲ್ಲಿ ಸರಾಗವಾಗಿ ಕನಿಷ್ಟಪಕ್ಷ ಹತ್ತುವರ್ಷಗಳ ವರೆಗಾದರೂ ಇದ್ದಂಥಾದ್ದಾಗಿ ಆ ಕಾಲದಲ್ಲಿ ಎಂದೂ ಸಾಗುವಳಿಯಾಗದೆ ಇದ್ದ ಜಮೀನು, ಅಂಥಾ ವಾಯಿದೆಯು ಈ ಆಕ್ಟ್ ಮಂಜೂರಾದನಂತರದ್ದು, ಯಾ, ಸ್ವಲ್ಪ ಈ ಆಕ್ಟ್ ಮಂಜೂರಾಗುವ ಮೊದಲಿನದ್ದು, ವ, ಸ್ವಲ್ಪ ನಂತರದ್ದು ಆಗಿರಬಹುದು, ಅಥವಾ ಈ ಆಕ್ಟ್ ಮಂಜೂರಾಗುವ ಹಿಂದಿನ ಇಪ್ಪತ್ತು ವರ್ಷಗಳೊಳಗಾಗಿರತಕ್ಕದ್ದು, ಅಥವಾ,

(2) ಈ ಆಕ್ಟ್ ಮಂಜೂರಾದ ನಂತರ ಭೂಮಾಲೀಕನು ಯಾರಿಗಾದರೂ ಗೇಣಿಗೆ ಕಟ್ಟಿಕೊಡುವಾಗ ಯಾವದೊಂದು ಭೋಗೋಟಿ ಹಕ್ಕು ಇಲ್ಲದಂಥಾದ್ದಾಗಿ ಆ ಮೇರೆಗೆ ಕೊಡುವ ಮುಂಚೆ ಕನಿಷ್ಟಪಕ್ಷ ಹತ್ತು ವರ್ಷಗಳ ವರೆಗೆ ಸರಾಗವಾಗಿ ಅನುಭವದಲ್ಲಿದ್ದ ಜಮೀನು ಎಂದು ಅರ್ಥಕೊಡುವುದಲ್ಲದೆ ಅಂತಹ ಜಮೀನನ್ನು ಅಡಗಿಸಿಕೊಂಡಿರುತ್ತದೆ."

ಮತ್ತೂ ಭೂಮಾಲೀಕನು ಸದರಿ ಜಮೀನನ್ನು ಕುರಿತು ಈ ಆಕ್ಟ್ ಮಂಜೂರಾಗುವುದಕ್ಕಿಂತ ಮೊದಲು, ರೈತನಿಗೆ ಭೋಗೋಟಿ ಹಕ್ಕು ಇರುವುದಿಲ್ಲವೆಂದು ಸ್ಥಾಪಿಸತಕ್ಕ ಅಧಿಕಾರವಿರುವ ಒಂದು ಸಿವಿಲ್ ಕೋರ್ಟಿನವರ ಆಖೈರ್ ಡಿಕ್ರಿಯನ್ನು ಪಡೆದು ಇರುವ ಮತ್ತು ಅಂತಹ ಡಿಕ್ರಿಯು ತಾರೀಖಿನನಂತರ ಭೋಗೋಟಿ ಹಕ್ಕು ಪಡೆಯದೆ ಇರುವ ರೈತಿ ಜಮೀನನ್ನು ಸಹ ಅಡಗಿಸಿಕೊಳ್ಳುತ್ತದೆ."

ಈ ಆಕ್ಟ್ ಜಾರಿಗೆ ಬಂದಾಗ ಎಂದರೆ 1908 ನೆಯ ಇಸವಿ ಜುಲೈ 1 ನೆ ತಾರೀಖಿನ ದಿವಸ ಹಳೆ ಬಂಜರಲ್ಲದ ರೈತಿ ಭೂಮಿಯನ್ನು ಅನುಭೋಗಿಸುತ್ತಿದ್ದ ರೈತರೆಲ್ಲರಿಗೂ ಸದರಿ ಭೂಮಿಯ ಮೇಲೆ ಭೋಗೋಟಿ ಹಕ್ಕು ಉಂಟಾಯಿತು. ಭೋಗೋಟಿ ಹಕ್ಕುಳ್ಳ ರೈತನು ಬಿಟ್ಟ ಭೂಮಿಯು, ಭೂಮಾಲೀಕನ ಸ್ವಾಧೀನಕ್ಕೆ ಬಂದು, ಸ್ವಾಧೀನಬಂದು ಹತ್ತುವರ್ಷದೊಳಗೆ ಅದನ್ನು ಭೂಮಾಲೀಕನು ರೈತನಿಗೆ ಸಾಗುವಳಿಗೆ ಕೊಟ್ಟರೆ, ಆ ರೈತ

ನಿಗೆ ಭೋಗೋಟಿ ಹಕ್ಕುಂಟಾಗುವುದು. ರೈತಿ ಭೂಮಿಯನ್ನು ಭೂಮಾಲೀಕನ ಅಪ್ಪಣೆ ಇಲ್ಲದೆ ಹಿಡಿದುಕೊಂಡು ಸಾಗುವಳಿಮಾಡುವ ರೈತನಿಂದ ಭೂಮಾಲೀಕನು ಗೇಣಿ ಯನ್ನು ತೆಗೆದುಕೊಂಡರೂ ಅವನಿಗೆ ಭೋಗೋಟಿ ಹಕ್ಕನ್ನು ಕೊಟ್ಟಂತಾಗುವುದು. ಭೋಗೋಟಿ ಹಕ್ಕಿಲ್ಲದ ರೈತನು ಭೂಮಾಲೀಕನಿಗೆ ಗೇಣಿಯ 2½ ಷ್ಟು ನೊಬಲಗನ್ನೂ ಮತ್ತು ಹಕ್ಕಿನ ಪತ್ರ ಬರೆದುಕೊಡುವ ವೆಚ್ಚವನ್ನೂ ಕೊಟ್ಟರೆ, ಭೂಮಾಲೀಕನು ರೈತನಿಗೆ ಭೋಗೋಟಿ ಹಕ್ಕನ್ನು ಕೊಟ್ಟೇ ಕೊಡಬೇಕು ಭೋಗೋಟಿ ಹಕ್ಕನ್ನು ಹೊಂದದಂತೆ ಮಾಡಲು ಭೂಮಾಲೀಕನು ಅತಿ ಹೆಚ್ಚಾಗಿ ಗೇಣಿಯನ್ನು ಹಾಕಿದ್ದರೆ ಕಲೆಕ್ಟರರು ಉಚಿತವಾದಷ್ಟು ಗೇಣಿಯನ್ನು ಗೊತ್ತುಮಾಡಿ ಭೋಗೋಟಿ ಹಕ್ಕನ್ನು ಕೊಡಿಸುವರು. 6, 45, 46.

ಆದರೆ ಈ ಎರಡು ಸಂದರ್ಭಗಳಲ್ಲಿ ಮಾತ್ರ ಇಷ್ಟುಕಾಲ ಭೋಗೋಟಿ ಹಕ್ಕನ್ನು ತಪ್ಪಿಸಬಹುದು:—(1) ಭೂಮಾಲೀಕನು ಹಳೇ ಬಂಜರನ್ನು ಸ್ವಂತ ವೆಚ್ಚದಿಂದ ಹಸಣ ಮಾಡಿದರೆ ಅದರ ಮೇಲೆ ರೈತನಿಗೆ ಭೋಗೋಟಿ ಹಕ್ಕು 30 ವರ್ಷದವರೆಗೆ ಉಂಟಾಗ ದಂತೆ ತಪ್ಪಿಸಬಹುದು. (2) ಈ ಆಕ್ಟು ಹುಟ್ಟುವುದಕ್ಕಿಂತ ಮುಂಚೆ ರೈತನ ಹಿಡುವ ಳಿಯ ಹಕ್ಕು ಭೂಮಾಲೀಕನಿಗೆ ವಾರಿಸ್ ಹಕ್ಕಿನ ಮೂಲಕವಾಗಾದರೂ ಅಥವಾ ಗೇಣಿಯ ವಸೂಲಿಗಾಗಿ ಮಾಡಿದ ಹರಾಜಿನಲ್ಲಲ್ಲದೆ, ತಕ್ಕ ಪ್ರತಿಫಲದಿಂದ ಕೂಡಿದ ಇತರ ವ್ಯವಹಾರಗಳ ಮೂಲಕವಾಗಾದರೂ ಬಂದರೆ, ಅಥವಾ ಈ ಆಕ್ಟ್ ಜಾರಿಗೆ ಬಂದ ಬಳಿಕ ವಾರಿಸ್ ಹಕ್ಕಿನ ಮೂಲಕ ಬಂದರೆ, ಆಗ ಭೋಗೋಟಿ ಹಕ್ಕನ್ನು 12 ವರ್ಷ ರೈತನಿಗುಂಟಾದಂತೆ ಅಡ್ಡಿಮಾಡಬಹುದು. 6 (5), 8 (4).

ಭೋಗೋಟಿ ಹಕ್ಕು ಎಂದರೆ ಪುತ್ರಪೌತ್ರಪಾರಂಪರ್ಯದ, ಶಾಶ್ವತಹಿಡುವ ಳಿಯ, ವ್ಯವಹಾರಚತುಷ್ಟಯದ ಹಕ್ಕು. ಭೋಗೋಟಿ ಹಕ್ಕುಳ್ಳ ರೈತನ ಹಕ್ಕುಗಳು ಪ್ರಾಯಃ ರೈತವಾರಿಭೂಮಿಯ ಸರ್ಕಾರಿ ರೈತನ ಹಕ್ಕಿನಂತೆಯೇ ಆಗಿರುತ್ತವೆ. ಇನಾಮು, ಯಾ, ಮೂಲಿ ಆಸ್ತಿ ಎಂದರೆ, ಜಮೀನ್‌ದಾರಿ ಇಂತಹ ಗ್ರಾಮಗಳ ಕೃಷಿ ಯೋಗ್ಯವಾದ ಖಾಸ್ಗಿಯಲ್ಲದ ಭೂಮಿಯಲ್ಲಿ ರೈತರಿಗೆ ಸರ್ಕಾರಿ ರೈತರ ಹಕ್ಕುಗಳ ನ್ನುಂಟುಮಾಡಿಕೊಡಲು ಈ ಆಕ್ಟಿನ ವಿಧಿಗಳ ನಿರ್ಬಂಧವು ಹೇಗಿರುತ್ತದೆಯೆಂದರೆ— ಭೂಮಾಲೀಕರು ಸಾಗುವಳಿಯಲ್ಲಿಲ್ಲದಿರುವ ಜಮೀನನ್ನು ಇತರರಿಗೆ ಯಾವ ವಿಧವಾಗಿ ಯೂ ಸಾಗುವಳಿಗೆ ಕೊಡದೆ ತಮ್ಮಲ್ಲಿಯೇ ಇಟ್ಟುಕೊಂಡಿದ್ದರೆ ಹೊರತು ಇಲ್ಲದಿದ್ದರೆ ಎಂದರೆ, ರೈತರಿಗೆ ಸಾಗುವಳಿಗೆ ಕೊಟ್ಟಿತೆಂದರೆ ರೈತರು ಭೋಗೋಟಿ ಹಕ್ಕನ್ನು ಸಂಪಾ ದಿಸಿಕೊಳ್ಳದಂತೆ ಮಾಡುವುದು ಅಸಾಧ್ಯ. ಹೇಗೆಂದರೆ—ಹಳೆ ಬಂಜರಲ್ಲದ ರೈತಿಭೂಮಿ ಯನ್ನು ಸಾಗುವಳಿಮಾಡುವವರಿಗಂತು ಭೋಗೋಟಿ ಹಕ್ಕು ಲಾದಿಂದಲೇ ಉಂಟಾಗು ತ್ತದೆ. ಅಂತಹ ಭೂಮಿಯು ರೈತನಿಂದ ಭೂಮಾಲೀಕನಿಗೆ ವಾಪಸ್ಸುಬಂದರೆ ಅದನ್ನು ಭೂಮಾಲೀಕನು 10 ವರ್ಷದಲ್ಲಿ ಸಾಗುವಳಿಗೆ ಕೊಟ್ಟಲ್ಲಿ ರೈತನಿಗೆ ಭೋಗೋಟಿ ಹಕ್ಕು ಸಲ್ಲೇಸಲ್ಲುತ್ತದೆ. ಹಾಗೆ ಕೊಡದೆ 10 ವರ್ಷದ ವರೆಗೂ ಭೂಮಾಲೀಕನು ಅದನ್ನು ತನ್ನಲ್ಲಿಯೇ ಇಟ್ಟುಕೊಂಡಿದ್ದರೇನೋ ಅದು ಹಳೆ ಬಂಜರಾಗುವುದು. ಹಳೆ

ಬಂಜರನ್ನು ಭೂಮಾಲೀಕನು ತನ್ನ ಮನಸ್ಸಿಗೆಬಂದಂತೆ ಎಷ್ಟು ಹೆಚ್ಚಿನ ಗೇಣಿಗಾದರೂ ಸಾಗುವಳಿಗೆ ಕೊಡಬಹುದು. ಆದರೆ ಹಾಗೆ ಸಾಗುವಳಿಗೆ ಪಡೆದ ರೈತನು ಕೂಡಲೆ ಮೇಲೆ ಸೂಚಿಸಿದ ಮೇರೆ ಭೋಗೋಟಿ ಹಕ್ಕನ್ನು ಪಡೆಯಲೂಬಹುದು ; ಮತ್ತೂ ವಿಶೇಷ ಹೆಚ್ಚಾಗಿದ್ದ ಗೇಣಿಯ ದರವನ್ನು ಕಡಮೆಮಾಡಿಸಿಕೊಳ್ಳಲೂಬಹುದು. ಭೂಮಿಯನ್ನು ಹತ್ತುವರ್ಷ ಸಾಗುವಳಿಗೆ ಕೊಡದೆ ಇಟ್ಟುಕೊಳ್ಳುವ ಭೂಮಾಲೀಕನು 10 ವರ್ಷದ ಗೇಣಿಯನ್ನು ಕಳೆದುಕೊಳ್ಳುವುದರಿಂದಲೂ, ಹೆಚ್ಚಿನ ಗೇಣಿಗಾಗಿ 10 ವರ್ಷವಾದ ಬಳಿಕ ಇವನು ಕೊಡುವ ಸಾಗುವಳಿಯು ಭೋಗೋಟಿ ಹಕ್ಕಿಲ್ಲದೆ ಬಹಳ ದಿವಸ ನಡೆಯುವುದಿಲ್ಲವಾದುದರಿಂದಲೂ ಹಳೇ ಬಂಜರನ್ನಾಗಲಿ ಅಥವಾ ರೈತನಿಂದ ತನಗೆ ಬಂದ ರೈತೀ ಭೂಮಿಯನ್ನಾಗಲಿ ತಕ್ಕ ಮೊದಗಡ ಮೊದಲಾದ ಪ್ರತಿಫಲವನ್ನು ತೆಗೆದುಕೊಂಡು ಖಾಯಂಸಾಗುವಳಿಗಾಗಿಯೇ ರೈತನಿಗೆ ಕೊಡುವುದು ಭೂಮಾಲೀಕನಿಗೆ ಲಾಭಕರವಾಗಿರುವುದು. ಹೀಗೆ ಭೂಮಿಯ ಮೇಲಿನ ಖಾಯಂ ಹಿಡುವಳಿಯ ಹಕ್ಕನ್ನು ಲಾವು ರೈತನಿಗೆ ಕಲ್ಪಿಸಿಕೊಟ್ಟು ರೈತರು ತಂತಮ್ಮ ಭೂಮಿಗಳನ್ನು ಸ್ವಪ್ರಯೋಜನಾರ್ಥವಾಗಿ ಹೆಚ್ಚಾಗಿ ಫಲಕೊಡುವಂತೆ ಬೇಸಾಯಮಾಡಿಕೊಳ್ಳಲು ಅನುಕೂಲವನ್ನು ಕಲ್ಪಿಸಿಕೊಟ್ಟಿರುತ್ತದೆ. ಮತ್ತೂ ಭೂಮಿಗೆ ರೂಪಿತವನ್ನು (ಆಬಾದನ್ನು) ಮಾಡುವ ವಿಷಯದಲ್ಲಾದರೊ--ಭೂಮಾಲೀಕರಿಗೂ ರೈತರಿಗೂ ಉಭಯರಿಗೂ ಆಸಕ್ತಿ ಹುಟ್ಟುವಂತೆ ಮಾಡಿದೆ. ಹೇಗೆಂದರೆ—ಭೂಮಾಲೀಕನಾಗಲಿ ರೈತನಾಗಲಿ ಭೂಮಿಗೆ ರೂಪಿತ (ಆಬಾದ್) ಮಾಡಲೊಬ್ಬನಪೇಕ್ಷಿಸಿದರೆ ಮತ್ತೊಬ್ಬನು ತಡೆಮಾಡಲಾಗುವುದಿಲ್ಲ. ನಾನು ಮಾಡಬೇಕು ತಾನು ಮಾಡಬೇಕು ಎಂಬುದಾಗಿ ಇವರಿಬ್ಬರು ಸ್ಪರ್ಧಿಸುವುದಾದರೆ ಅದನ್ನು ಮಾಡಲು ರೈತನಿಗೇ ಹೆಚ್ಚು ಹಕ್ಕಿದೆ. ರೈತನೇ ಆಬಾದುಮಾಡಿ ಅದರಿಂದ ಹೆಚ್ಚು ಬೆಳೆಯನ್ನು ಮಾಡಿಕೊಂಡರೆ ಈ ಕಾರಣದ ಮೇಲೆ ಅವನು ಕೊಡುತ್ತಿದ್ದ ಗೇಣಿಯನ್ನು ಹೆಚ್ಚಿಸಲಿಕ್ಕಾಗುವುದಿಲ್ಲ. 13. ರೂಪಿತದಿಂದ, ಅಂತಹ ರೈತನ ಜಮಿೂನಿಗಲ್ಲದೆ ಇತರರ ಜಮಿೂನಿಗೂ ಪ್ರಯೋಜನವಾಗುವುದಾದರೆ ರೂಪಿತಮಾಡಲು ಭೂಮಾಲೀಕನಿಗೇ ಹೆಚ್ಚು ಹಕ್ಕು. ಯಾವ ಕಾರಣದ ಮೇಲಾದರೂ ಭೂಮಾಲೀಕನೇ ರೂಪಿತಮಾಡಿದರೆ ಅದಕ್ಕೆ ತಕ್ಕಂತೆ ಗೇಣಿಯನ್ನು ಹೆಚ್ಚಿಸಲು ಅವನಿಗೆ ಅಧಿಕಾರವಿದೆ. 13, 30 III. ಭೋಗೋಟಿ ಹಕ್ಕಿಲ್ಲದ ರೈತನು ಸಹ ವ್ಯವಸಾಯಕ್ಕವಶ್ಯಕವಾದ ರೂಪಿತವನ್ನು ಮಾಡಬಹುದು. ಈ ರೂಪಿತವನ್ನು ಮಾಡಿದ ಅವನ ಸ್ವಾಧೀನದಿಂದ ಭೂಮಿಯನ್ನು ಭೂಮಾಲೀಕನು ತೆಗೆದುಕೊಳ್ಳಬೇಕಾದರೆ ಆ ರೂಪಿತದ ವೆಚ್ಚವನ್ನು ರೈತನಿಗೆ ಕೊಡಬೇಕು. 14, 154. ರೂಪಿತಮಾಡಿದ ವಿಷಯದಲ್ಲಿ ಬರಬಹುದಾದ ತಕರಾರಿನ ನಿವಾರಣೆಗಾಗಿ ರೂಪಿತಮಾಡಿದುದನ್ನು ಸರ್ಕಾರದಲ್ಲಿ ರಿಕಾರ್ಡು ಮಾಡಿಸಬಹುದು. 16, 17. ತರೀ ಸಾಗುವಳಿಗೆ ಆಶ್ರಯವಾದ ಜಲಾಶಯಗಳನ್ನು ಭೂಮಾಲೀಕರು ಜೀರ್ಣೋದ್ಧಾರಮಾಡದಿದ್ದರೆ, ಅದರ ಅಯಕಟ್ಟಿನ ಭೂಮಿಗಳೊಳಗೆ ಕಾಲುಪಾಲಿಗಿಂತ ಕಡಮೆಯಿಲ್ಲದಷ್ಟು ಭೂಮಿಗಳ ಹಿಡುವಳಿದಾರರು, ಅಥವಾ, ಆ ಒಟ್ಟು ಭೂಮಿಗಳ ಗೇಣಿಯ ಪೈಕಿ ಕಾಲುಪಾಲಿಗಿಂತಲೂ ಕಡಮೆಯಿಲ್ಲದಷ್ಟು ಗೇಣಿಯನ್ನು

ಕೊಡತಕ್ಕ ರೈತರು ಕಲೆಕ್ಟರನ್ನು ಪ್ರಾರ್ಥಿಸಿಕೊಂಡರೆ ಅವರು ಅವನ್ನು ಜೀರ್ಣೋದ್ಧಾರ ಮಾಡಲು ಭೂಮಾಲೀಕರಿಗೆ ಹುಕುಂ ಮಾಡುವರು. ಹಾಗೆ ಮಾಡಲು ಭೂಮಾಲೀಕರು ತಪ್ಪಿದರೆ ರೈತರೇ ಜೀರ್ಣೋದ್ಧಾರವಾಡಿಕೊಳ್ಳಬಹುದೆಂದು ರೈತರಿಗೆ ಅನುಜ್ಞೆ ಕೊಡುವರು. ಆ ಪ್ರಕಾರ ಅವರು ಜೀರ್ಣೋದ್ಧಾರವಾಡಿದರೆ, ಅದರ ವೆಚ್ಚವನ್ನು ಇತರ ರೈತರಿಂದ ವಸೂಲ್ಮಾಡಿಸಿಕೊಡುವರು. ಮತ್ತೂ ಗೇಣಿಗಾಗಿ ಭೂಮಾಲೀಕನಿಗೆ ಕೊಡುವ ಮೊಬಲಗಿನಲ್ಲಿ ತರೀ ದರವನ್ನು ಹಿಡಿದುಕೊಂಡು ಖುಷ್ಕೀ ದರವನ್ನು ಮಾತ್ರ ಕೊಡುವಂತೆ ರೈತರಿಗೆ ಅನುಜ್ಞೆಕೊಡುವರು. 135, 141. ಜಲಾಶಯಗಳನ್ನು ಜೀರ್ಣೋದ್ಧಾರವಾಡದಿಲ್ಲದರಿಂದ ಉಪಹತಿಹೊಂದಿದ ರೈತರು ಗೇಣಿಯನ್ನು ಕಡಮೆ ಮಾಡಿಕೊಳ್ಳಲೂ ಬಹುದು. 38 (ಬಿ).

ಭೂಮಾಲೀಕರಿಗೂ ರೈತರಿಗೂ ಪರಸ್ಪರವಿರುವ ಇತರ ಮುಖ್ಯವಾದ ಹಕ್ಕು ಬಾಧ್ಯತೆಗಳನ್ನು ಕೆಳಗೆ ಸೂಚಿಸುವೆವು.

1. ರೈತ್ರೀ ಭೂಮಿಯ ಗೇಣಿಯು ಭೂಮಿಯ ಮೇಲೆ ಮೊದಲಿನ ಈಡಾಗಿದೆ. 5 (1).

2. ಒಂದು ಭೂಮಿಯ ಗೇಣಿಯು ನ್ಯಾಯವಾದ ದರವು ಯಾವುದೆಂದರೆ, ಆ ಭೂಮಿಯ ಸುತ್ತುಮುತ್ತು ಇರುವ ಭೂಮಿಗಳಿಗೆ ಯಾವ ದರವೋ ಆ ದರವು; ಅಥವಾ ಕಲೆಕ್ಟರು ನ್ಯಾಯವೆಂದು ತೀರ್ಮಾನಿಸುವ ದರವು. ಭೋಗೋಟಿ ಹಕ್ಕಿನ ರೈತನಿಗೆ ಈ ದರಕ್ಕಿಂತಲೂ ಹೆಚ್ಚು ಹಾಕಲಿಕ್ಕಾಗದು. ಆ ಹಕ್ಕಿಲ್ಲದ ರೈತನಿಗೆ ಕೊಡುವಾಗಲೆ ಹೆಚ್ಚು ದರದ ಮೇಲೆ ಕೊಡಲೇಹೋ ಬಹುದು. ಆದರೆ ಆ ರೈತನು ಕಲೆಕ್ಟರಲ್ಲಿ ಭೋಗೋಟಿ ಹಕ್ಕನ್ನು ಪಡೆದುಕೊಳ್ಳಬಹುದಲ್ಲದೆ ಹೆಚ್ಚು ದರವನ್ನು ನ್ಯಾಯವಾದ ದರಕ್ಕೆ ಇಳಿಸಿಕೊಳ್ಳಲೂ ಬಹುದು. 25–46.

3. ಭೋಗೋಟಿ ಹಕ್ಕುಳ್ಳ ರೈತನು ಗೇಣಿಯನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಭೂಮಿಯನ್ನು ಕಿತ್ತುಕೊಳ್ಳಲಾಗುವುದಿಲ್ಲ. ದಾವಾ ಮಾಡಿ ಡಿಕ್ರೀ ಪಡೆದು ಅವನ ಚರಸೊತ್ತನ್ನಾಗಲಿ, ಹಿಡುವಳಿಯನ್ನಾಗಲಿ ಹರಾಜನ್ನೇ ಮಾಡಿಸಬೇಕು.

4. ಭೋಗೋಟಿ ಹಕ್ಕಿಲ್ಲದ ರೈತನ ವಿಷಯದಲ್ಲಾದರೋ–ಗೇಣಿಯ ಬಾಕಿಗೆ ಡಿಕ್ರೀ ಪಡೆದು, ಆ ಡಿಕ್ರಿಯನ್ನು ರೈತನು ಸಮಾಧಾನವಾಡದಿದ್ದಲ್ಲಿ ಮಾತ್ರ ಭೂಮಿಯನ್ನು ಅವನ ಅಧೀನದಿಂದ ಬಿಡಿಸಿಕೊಳ್ಳಬಹುದು. 153 (ಬಿ).

5. ಧಾನ್ಯಗಳ ಕ್ರಯವು ಹೆಚ್ಚು ಕಡಮೆಯಾದುದರ ಮೇಲೂ ಪ್ರವಾಹದೊಳಗಿದ್ದ ಭೂಮಿಯು ಕೃಷಿಯೋಗ್ಯವಾಗುವುದು, ಪ್ರವಾಹವು ಭೂಮಿಯನ್ನಾವರಿಸಿ ಅದನ್ನು ಕೃಷಿಗಾಗದ ಹಾಗೆ ಮಾಡುವುದು, ಈ ಕಾರಣಗಳ ಮೇಲೂ, ಸರ್ಕಾರಿಯ ಭೂಮಿಯಂತೆ ಗೇಣಿಯನ್ನು ಹೆಚ್ಚಿಸಲೂ ತಗ್ಗಿಸಲೂ ಸಾಧ್ಯ.

6. ಗೇಣಿಯನ್ನು ಫಸಲಿನ ರೂಪದಿಂದ ಹಣದ ರೂಪಕ್ಕೆ ತಿರಿಗಿಸಿಕೊಳ್ಳಬಹುದು. ಮತ್ತು ಸರ್ಕಾರದಿಂದ ಅನೇಕ ಸಹಾಯಗಳನ್ನು ಪಡೆಯಲಿಕ್ಕೆ ಹೀಗೆ ಮಾಡಿಕೊಳ್ಳುವುದು ಆವಶ್ಯಕ.

7. ರೈತೀ ಭೂಮಿಯನ್ನು ಭೂಮಾಲೀಕನ ಅಪ್ಪಣೆಯಿಲ್ಲದೆ ಆಕ್ರಮಿಸುವ ರೈತನಿಂದ ಸಿವಿಲ್ ಕೋರ್ಟಿನ ದಾವಾ ಮೂಲಕ ಭೂಮಿಯನ್ನು ಬಿಡಿಸಿಕೊಳ್ಳಬಹುದು.

ಭೂಮಾಲೀಕ ಮತ್ತು ರೈತರುಗಳ ಮಧ್ಯೆ ಪರಸ್ಪರವಿರುವ ಹಕ್ಕು ಬಾಧ್ಯತೆಗಳನ್ನು ತತ್ಸಂಬಂಧಿಗಳು ಸರ್ಕಾರದಲ್ಲೇ ಸಾಧಿಸಿಕೊಳ್ಳಬೇಕು.

ಈ ಆಕ್ಟಿನಂತೆಯೇ ಇರುವ "ಬಂಗಾಳಾ ಟೆನೆನ್ಸಿ ಆಕ್ಟಿನ" ವಿಷಯದಲ್ಲಿ ನ್ಯಾಯಾಧೀಶ ರಾನಡೆಯವರು ಮಾಡಿದ ಅಸಮ್ಮತಿಗಳೊಳಗೆ ಇಲ್ಲಿ ನಮಗೆ ಪ್ರಕೃತವಾದುವುಗಳು ಇವು:—"ಭೂಸಂಬಂಧವಿರುವವರಿಗೆ ಭೂಮಿಯ ಮೇಲೆ ಅನನ್ಯಾಧೀನವಾದ ಸ್ವತಂತ್ರದ ಹಕ್ಕನ್ನು ಕಲ್ಪಿಸಿಕೊಡಬೇಕಾದುದು ಭೂವ್ಯವಸಾಯ, ಬೇಸಾಯಗಾರರುಗಳ ವಿಷಯದಲ್ಲಿ ಮಾಡಬೇಕಾದ ಸುಧಾರಣೆಯಾಗಿರುತ್ತದೆ. ಈ ಖಾನೂನುಗಳು ಹಾಗೆ ಮಾಡುವುದಿಲ್ಲ. ಇವುಗಳ ಪ್ರಕಾರ ಭೂವ್ಯವಹಾರಗಳ ವಿಷಯದಲ್ಲಿ ಒಬ್ಬನ ಕೈಕೆಳಗೆ ಮತ್ತೊಬ್ಬನು ಸಿಕ್ಕಿಕೊಂಡಿದ್ದಾನೆ. ಸ್ವಪ್ರಯೋಜನವನ್ನು ಹೆಚ್ಚಿಸಿಕೊಳ್ಳುವ ರೀತಿಯಲ್ಲಿ ಭೂವ್ಯವಹಾರಗಳನ್ನು ನಡೆಯಿಸಿಕೊಳ್ಳಲು ಯಾವನಿಗೂ ಅನನ್ಯಾಧೀನವಾದ ಸ್ವಾತಂತ್ರ್ಯವೂ ಆಸಕ್ತಿಯೂ ಇಲ್ಲ. ಹೀಗೆ ಮಾಡುವುದಕ್ಕೆ ಬದಲಾಗಿ ಪರ್ಷ್ಯಾ ದೇಶದಲ್ಲಿ ಮಾಡಿದಂತೆ ಭೂಮಾಲೀಕರ ರೈತರ ಹಕ್ಕುಗಳನ್ನು ವಿವೇಚಿಸಿ ಆ ಹಕ್ಕುಗಳಿಗೆ ತಕ್ಕಂತೆ ಸ್ವತಂತ್ರಾಧಿಕಾರದ ಭೂಮಿಯನ್ನು ಅವರಿಗೆ ಹಂಚಿಕೊಟ್ಟುಬಿಟ್ಟಿದ್ದರೆ ಉತ್ತಮವಾಗಿದ್ದಿತು. ಹೇಗೆಂದರೆ:—ರೈತಿ ಭೂಮಿಯಲ್ಲಿ ಮುಕ್ಕಾಲು ಭಾಗವನ್ನು ಪೂರ್ಣಾಧಿಕಾರದೊಡನೆ ರೈತರಿಗೆ ಕೊಡಿಸಿಬಿಡುವುದು, ಮಿಕ್ಕ ಕಾಲು ಭಾಗವನ್ನು ಭೂಮಾಲೀಕರಿಗೆ ಕೊಡಿಸಿಬಿಡುವುದು. ಹಳೆ ಬಂಜರಿನಲ್ಲಿ ಅರ್ಧವನ್ನು ಭೂಮಾಲೀಕರಿಗೂ ಮತ್ತರ್ಧವನ್ನು ರೈತರಿಗೂ ಪೂರ್ಣಾಧಿಕಾರದೊಡನೆ ಕೊಡಿಸಿಬಿಡುವುದು. ಹೀಗೆ ಮಾಡಿದ್ದರೆ ಭೂಮಿಗೆ ಪೂರ್ಣಾಧಿಕಾರಿಗಳಾದ ಭೂಮಾಲೀಕರು, ರೈತರು, ಎಲ್ಲರು ತಂತಮಗೆ ಲಾಭವುಂಟಾಗುವ ರೀತಿಯಲ್ಲಿ ಒಬ್ಬರು ಮತ್ತೊಬ್ಬರ ಗೋಜಿಲ್ಲದೆ ರೂಪಿತ (ಆಬಾದ್) ವ್ಯವಸಾಯಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತಿದ್ದಿತು. ಹೀಗೆ ಮಾಡುವುದರಿಂದ ಭೂಮಿಗಳ ಬಹು ಹೆಚ್ಚಿನ ಭಾಗವು ಜಮೀನ್ದಾರ ಇನಾಂದಾರರು ಇಂತಹರಲ್ಲೇ ಉಳಿದು ರೈತರಿಗೆ ಸಾಕಾಗುವಷ್ಟು ಸಿಕ್ಕದಿರುವುದಾದರೆ, ಭೂಮಾಲೀಕರ ಭೂಮಿಗೆ ಸರ್ಕಾರದವರೇ ಕ್ರಯಕಟ್ಟಿ ಆ ಕ್ರಯಕ್ಕೆ ಅವುಗಳನ್ನು ರೈತರಿಗೆ ನಿರ್ಬಂಧದಿಂದ ಮಾರಿಸಬಹುದಾಗಿದ್ದಿತು. ಅವುಗಳನ್ನು ಕೊಳ್ಳಲು ರೈತರಿಗೆ ಶಕ್ತಿಯಿಲ್ಲದಿದ್ದಲ್ಲಿ ಸರ್ಕಾರದವರು ಸರ್ಕಾರದ ಹಣದಿಂದ ಅವುಗಳನ್ನು ರೈತರಿಗೆ ಕೊಂಡುಕೊಟ್ಟು ಆ ಹಣವನ್ನು ರೈತರಿಂದ ಕಿಸ್ತುವಾರು ಸ್ವಲ್ಪಸ್ವಲ್ಪವಾಗಿ ಹಿಂದಣಿಂದ ವಸೂಲಿ ಮಾಡಿಕೊಳ್ಳಬಹುದಾಗಿದ್ದಿತು. ಒಬ್ಬರನ್ನೊಬ್ಬರು ತಪ್ಪಿಕೊಂಡು ನಡೆಯಬೇಕಾಗಿರುವುದಲ್ಲದೆ ಪ್ರತಿ ಹೆಜ್ಜೆಯಿಡಲೂ ಸರ್ಕಾರದ ಊರೆಯನ್ನು ಅಪೇಕ್ಷಿಸಬೇಕಾಗುತ್ತದೆ." ಈ ಪ್ರಕಾರದ ಅಭಿಪ್ರಾಯಗಳನ್ನು ಈ ಪಂಡಿತರು ಹೊರಪಡಿಸಿದ್ದಾರೆ.

ಮೈಸೂರು ಮತ್ತು ಬೊಂಬಾಯಿ ದೇಶಗಳಲ್ಲಿ ಇನಾಂದಾರರು ಜಹಗೀರ್ ದಾರರು ಇಂತಹರಿಗೂ ರೈತರಿಗೂ ಅನ್ಯೋನ್ಯವಾಗಿರುವ ಹಕ್ಕು ಬಾಧ್ಯತೆಗಳು ಲಾ ದಿಂದ ನಿರ್ಣಯಿಸಲ್ಪಡದೆ ವಿವಾದಿಸುವವರ ಬುದ್ಧಿಚಮತ್ಕಾರಗಳಿಗನುಸಾರವಾಗಿ ರುಜುವಾತಿನಿಂದ ಸಿವಲ್ ಕೋರ್ಟಿನಲ್ಲಿ ಸಾಧಿಸಿಕೊಳ್ಳಲ್ಪಡತಕ್ಕವುಗಳಾಗಿವೆ. ಇಂತಹ ಗ್ರಾಮಗಳಲ್ಲಿ ಸರ್ವೇ ಸೆಟಲ್ ಮೆಂಟಾದರೆಮಾತ್ರ ಗ್ರಾಮದ ರೈತರಿಗೆಲ್ಲ ಸರ್ಕಾರಿ ರೈತರಿಗಿರುವ ಹಕ್ಕುಬಾಧ್ಯತೆಗಳೇ ಉಂಟಾಗುತ್ತವೆ. ಆದರೆ ಇಂತಹ ಗ್ರಾಮಗಳ ಸರ್ವೆಯನ್ನು ಇನಾಂದಾರ ಇಂತಹ ಗ್ರಾಮದ ಮಾಲೀಕರು ಕೇಳಿಕೊಂಡರೆಮಾತ್ರ ಸರ್ಕಾರದವರು ಮಾಡುವರು. ರೈತರ ಕೋರಿಕೆಯ ಮೇಲಾಗಲಿ, ರೈತರ ಹಿತಚಿಂತನೆಯಿಂದ ಸರ್ಕಾರದವರೇ ಸ್ವೇಚ್ಛೆಯಿಂದಾಗಲಿ ಮಾಡಲು ಲಾ ಇಲ್ಲ. ಮೈ. ಲ್ಯಾ. ರೆ. ಕೊ. 236, 237. ; ಬೊ. ಲ್ಯಾ. ರೆ ಕೊ. 216, 217. ಸರ್ಕಾರಿ ಗ್ರಾಮಗಳ ರೈತರು ಹೇಗೆ ಸರ್ಕಾರದ ಪ್ರಜೆಗಳೋ, ಇನಾಂ ಇಂತಹ ಗ್ರಾಮಗಳ ರೈತರೂ ಸರ್ಕಾರದ ಪ್ರಜೆಗಳೇ ಆಗಿರುತ್ತಾರೆ. ಮತ್ತೂ ಹುಟ್ಟಿರುವ, ಮುಂದೆ ಹುಟ್ಟುವ ಪ್ರಾಣಿಗಳೆಲ್ಲರ ಜೀವನಕ್ಕೆ ಆಧಾರವಾದ ಭೂಮಿಗಳನ್ನು ಸರ್ಕಾರದವರು ಖಾಸ್ಗಿ ಜನರಿಗೆ ಕೊಟ್ಟುಬಿಟ್ಟದಕ್ಕೆ ಪ್ರಜೆಗಳು ಜವಾಬ್ದಾರರಲ್ಲ. ಆದುಕಾರಣ ಸರ್ಕಾರೀ ಗ್ರಾಮಗಳ ರೈತರಿಗೂ, ಆ ಗ್ರಾಮಗಳಲ್ಲಿ ಹೊಸದಾಗಿ ರೈತರಾಗುವವರಿಗೂ ಇರುವ ಹಕ್ಕುಗಳೆಲ್ಲವನ್ನು ತಮಗೂ ಅನುಗ್ರಹಿಸಬೇಕೆಂದು ಇನಾಂ ಇತ್ಯಾದಿ ಗ್ರಾಮಗಳ ನಿವಾಸಿಗಳು ಸರ್ಕಾರವನ್ನು ನ್ಯಾಯ್ಯವಾಗಿ ಪ್ರಾರ್ಥಿಸಿಕೊಳ್ಳಬಹುದು.

ಭೂಸ್ವತ್ವವಿವಾದ ವಿಮರ್ಶನದ ಅಕ್ಟುಗಳು.

ರೈತರಿಗೆ ಸಹಜವಾದ ವಿಪತ್ತುಗಳೆರಡು: ಒಂದನೆಯದು ಕ್ಷಾಮ, ಎರಡನೆಯದು ಕೋರ್ಟು ಕಚೇರಿಯ ದುರ್ವ್ಯಾಜ್ಯ. ಒಂದನೆಯದು ನೈಮಿತ್ತಿಕವಾದುದು. ಎರಡನೆಯದಾದರೊ ನಿತ್ಯವಾದುದು. ಭೂಸಂಬಂಧದ ಹಕ್ಕುಬಾಧ್ಯತೆಗಳ ಪೂರ್ಣನಿದರ್ಶಕವಾದ, ಪ್ರಬಲವಾದ ಲೇಖನಪ್ರಮಾಣಗಳು ಅಂತಹ ಹಕ್ಕುಬಾಧ್ಯತೆಯುಳ್ಳವರಲ್ಲಿಯೂ, ಮತ್ತೂ ಅಂತಹ ಭೂಮಿಗಳ ವರಿಷ್ಠಾಧಿಕಾರಿಗಳೂ, ನ್ಯಾಯಾಧೀಶರೂ ಆದ ಸರ್ಕಾರದವರಲ್ಲಿಯೂ ಇಲ್ಲದಿರುವುದರಿಂದ ರೈತರಿಗೆ ಎರಡನೆಯ ವಿಪತ್ತು ಬಾರಿ ಬಾರಿಗೂ ಒದಗುತ್ತದೆ. ಆದುಕಾರಣ ಕೃಷ್ಯಭಿವೃದ್ಧ್ಯರ್ಥವಾದ ಲಾ ವಿಷಯಕವಾದ ನಮ್ಮ ಈ ಪ್ರಬಂಧಕ್ಕೆ ಮೇಲಿನ ವಿಷಯವು ಸಂಗತವಾಗಿದೆ.

ಜಂಗಮಸೊತ್ತುಗಳೂ ಕಟ್ಟಡಗಳೂ ಸಾರ್ವದಾ ಯಾವನಾದರೊಬ್ಬನ ಅಧೀನದಲ್ಲಾದರೂ ಭೋಗದಲ್ಲಾದರೂ ಎಲ್ಲರ ದೃಷ್ಟಿಗೂ ಗೋಚರವಾಗುವಂತೆ ಯಾವಾಗಲೂ ಇರುತ್ತವೆಯಾಗಿ, ಆ ಸೊತ್ತುಗಳ ಮೇಲಿನ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಅಧೀನಭೋಗಗಳ ನಿದರ್ಶನವು ಸುಲಭವಾಗಿ ದೊರೆಯುತ್ತದಲ್ಲದೆ, ಅದು ಸಮರ್ಪಕವಾದ ರುಜುವಾತೂ ಆಗಿರುತ್ತದೆ ಜಮೀನಾದರೋ ಆ ಸೊತ್ತುಗಳಂತೆ ಮನುಷ್ಯ ಶಾರೀರಕಾಧೀನತೆಯಲ್ಲಿ ಬಹುಶಃ ಇರುವುದಿಲ್ಲ. ಮತ್ತು ಮನುಷ್ಯನು ಜಮೀ

ನಿನ ಉತ್ಪತ್ತಿಯನ್ನು ಅನುಭೋಗಿಸುತ್ತಾನೆಯೇ ಹೊರತು ಜಮಿನಾನನ್ನೇ ಅನುಭೋಗಿಸುವುದಿಲ್ಲ, ಮತ್ತೂ ಬೇಸಾಯಮಾಡುವುದು ಒಂದು ಕರ್ಮವೇ ಹೊರತು ಅನುಭೋಗವಲ್ಲ. ಬೇಸಾಯಮಾಡುವವರಾದರೋ, ಕೇವಲ ಭೃತ್ಯರಾಗಿರಬಹುದು; ಅಥವಾ, ವರ್ಷೇ ವರ್ಷೇ ಅನುಜ್ಞೆಯ ಮೇಲೆ ಸಾಗುವಳಿ ಮಾಡುವವರಾಗಿರಬಹುದು; ಅಥವಾ, ಜಮಿನಾನಿನ ಹತ್ತಾರು ತರದ ಮಾಲೀಕರೊಳಗೆ ಒಂದು ತರದ ಮಾಲೀಕರಾಗಿರಬಹುದು. ಅದುಕಾರಣ ಜಮಿನಾನನ್ನು ಇಂತಹರು ವ್ಯವಸಾಯಮಾಡಿದರೆಂಬುದು ಅದರ ಹಕ್ಕುದಾರಿಯ ವಿಮರ್ಶೆಗೆ ಅಷ್ಟು ಉಪಯುಕ್ತವಾದ ರುಜುವಾತಲ್ಲ. ಮತ್ತೂ ಬೇಸಾಯಗಾರರು ಜಮಿನಾನಿನ ಮೇಲೇ ಸಾರ್ವದಾ ವಾಸಮಾಡುವುದೂ ಇಲ್ಲ. ಅದುಕಾರಣ ಜಮಿನಾನಿನ ಅಧೀನತೆಭೋಗಗಳು ಜನರ ದೃಷ್ಟಿಗೆ ಬೀಳತಕ್ಕವುಗಳಲ್ಲವಾಗಿ, ಅವು ಜಮಿನಾನುಗಳ ಹಕ್ಕುದಾರಿಯ ವಿಮರ್ಶೆಗೆ ಉಪಯುಕ್ತವಾದ ನಿದರ್ಶನಗಳಾಗುವುದಿಲ್ಲ. ಅದುಕಾರಣ ಲೇಖನಪ್ರಮಾಣಗಳು, ಅವುಗಳ ಅಭಾವದಲ್ಲಿ ಜನವಾದದ ಹೇಳಿಕೆಗಳು (ಎಂದರೆ, ಕಂಡವರ ಹೇಳಿಕೆಯಲ್ಲ; ಕೇಳಿದವರ ಹೇಳಿಕೆ) ಮಾತ್ರ ಉಪಯೋಗಕ್ಕೆ ಬರುತ್ತವೆ.

ಇಂಗ್ಲಾಂಡ್ ಅಂತಹ ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಸ್ಥಿರಸೊತ್ತುಳ್ಳವರೆಲ್ಲರಿಗೂ ಆ ಸೊತ್ತುಗಳ ಆಗಮಪತ್ರಗಳು ಇದ್ದೇ ಇರುತ್ತವೆ. ಕಾರಣ: ಒಂದು ಸೊತ್ತಿಗೆ ಸಾಧಾರಣವಾಗಿ ಒಬ್ಬನು ಮಾತ್ರ ಅಧಿಕಾರಿಯಾಗಿದ್ದಾನೆ; ಅದನ್ನು ಅವನು ಮತ್ತೊಬ್ಬನಿಗೆ ಕೊಟ್ಟಲ್ಲವಿನಾ ಇಲ್ಲದಿದ್ದರೆ ಮತ್ತಾವನಿಗೂ ಅದರ ಮೇಲೆ ಅಧಿಕಾರವುಂಟಾಗುವುದಿಲ್ಲ. ಮರಣಶಾಸನವನ್ನು ಬರೆಯದೆ ಪೂರ್ವಜನು ಸತ್ತರೆ, ಅವನ ಸಂತತಿಯವರು ಕೋರ್ಟಿನ ಸರ್ಟಿಫಿಕೇಟನ್ನು ಹೊಂದಿದ ಬಳಿಕಮಾತ್ರ ಮೃತನ ರಿಕ್ಥವನ್ನು ತೆಗೆದುಕೊಳ್ಳುವರು. ಅದುಕಾರಣ ಆ ದೇಶಗಳಲ್ಲಿ ಸೊತ್ತುಗಳು ಜನರಿಂದ ಜನಕ್ಕೆ ತೆರಳಿದುದರ ನಿದರ್ಶನಾರ್ಥವಾಗಿ ವಿಲ್ಲುಗಳು, ವ್ಯವಸ್ಥಾಪತ್ರಗಳು, ಸರ್ಟಿಫಿಕೇಟುಗಳು, ಇಂತಹ ಆಗಮಪತ್ರಗಳು ಮಾಲೀಕರಲ್ಲಿ ಇದ್ದೇ ಇರುತ್ತವೆ. ಮತ್ತೂ ಆ ದೇಶಗಳಲ್ಲಿ ಸರ್ಕಾರದವರು ರಾಜ್ಯಾದಾಯಕ್ಕೂ, ಪ್ರಜೆಗಳು ಜೀವನಕ್ಕೂ ಬಹುವಾಗಿ ಕೈಗಾರಿಕೆಯ ಕೆಲಸಗಳಮೇಲೆ ಅಧೀನರಾಗಿರುತ್ತಾರೆ. ಅದುಕಾರಣ ಆ ದೇಶಗಳಲ್ಲಿ ಜಮಿನಾನುಗಳ ವಿಷಯಕವಾದ ಹಕ್ಕುಬಾಧ್ಯತೆಗಳ ನಿದರ್ಶನಗಳನ್ನು ಸರ್ಕಾರದವರು ಇಡದಿರಬಹುದು. ಇಲ್ಲಾದರೋ, ಮೇಲಿನದಕ್ಕೆವಿಪರ್ಯಸ್ತವಾದ ಅವಸ್ಥೆಯಿದೆ. ಹಿಂದುಗಳ ಕುಟುಂಬದ ಸೊತ್ತುಗಳಲ್ಲಿ "ಏಕೋಽಸ್ಯನೀಶಸ್ಸರ್ವತ್ರ" ಎಂಬ ಮನುವಾಕ್ಯಕ್ಕನುಸಾರವಾಗಿ ಒಬ್ಬೊಬ್ಬನಾವನಿಗೂ ಪೂರ್ಣಸ್ವತ್ವಾಧಿಕಾರವು ಪ್ರಾಯಃ ಇರುವುದಿಲ್ಲವಾಗಿಯೂ, ಕುಟುಂಬದವನಿಗೆ ಜನ್ಮನಾ ಸ್ವತ್ವಾಧಿಕಾರವುಂಟಾಗುವುದಾಗಿಯೂ, ಪುತ್ರಸ್ವೀಕಾರವಿಭಾಗಗಳಿಗೆ ಲಿಖಿತನಿದರ್ಶನವಿರಬೇಕೆಂಬ ಬಾಧ ವಿಧಿಯಿಲ್ಲವಾಗಿಯೂ, ಸೊತ್ತು ಬಂಧುತ್ವದ ಕಾರಣದ ಮೇಲೆ ಒಬ್ಬರಿಂದೊಬ್ಬರಿಗೆ ಹೋಗುವುದರ ನಿದರ್ಶನಾರ್ಥವಾಗಿ ಜನರಲ್ಲಿ ಆಗಮಪತ್ರಗಳು ಸಾಧಾರಣವಾಗಿ ಇರುವುದಿಲ್ಲ. ಮತ್ತು ಹೊರಗಣವರಲ್ಲಿ ಸೊತ್ತು ಒಬ್ಬರಿಂದೊಬ್ಬರಿಗೆ ಹೋಗುವುದರ ವಿಷಯದಲ್ಲಾದರೋ, ಸ್ಥಿರಸೊತ್ತುಗಳ

ವಿಷಯಕವಾದ, 100 ರೂ, ಯಾ, ಹೆಚ್ಚಿನ ಬೆಲೆಯ ವ್ಯವಹಾರಗಳಲ್ಲಿ ಮಾತ್ರ ಲಿಖಿತ ಪ್ರಮಾಣವೂ ರಿಜಿಸ್ಟ್ರೇಷನೂ ಅವಶ್ಯಕವಾಗಿರುವುದರಿಂದ, ಅದಕ್ಕೆ ಕಡಮೆಯಾದ ಬೆಲೆಯ ವ್ಯವಹಾರಗಳ ವಿಷಯದಲ್ಲಿ ಲಿಖಿತಪ್ರಮಾಣಗಳೇ ಇರುವುದಿಲ್ಲ; ಇದ್ದರೂ, ರಿಜಿಸ್ಟರ್ ಮಾಡಿಸಲ್ಪಡುವುದಿಲ್ಲ. ಹೆಚ್ಚು ಬೆಲೆಯ ವ್ಯವಹಾರಗಳ ನಿದರ್ಶಕವಾದ ಪತ್ರಗಳು ರಿಜಿಸ್ಟರ್ ಮಾಡಿಸಲ್ಪಟ್ಟರೂ, 100—200 ಗ್ರಾಮುಗಳಿಗೊಂದೊಂದು ಮಾತ್ರ ಸಬ್ ರಿಜಿಸ್ಟ್ರಿ ಆಫೀಸು ಇರುವುದರಿಂದ, ವಿಶೇಷ ಕಾಲವ್ಯಯ ದ್ರವ್ಯವ್ಯಯಗಳಿಲ್ಲದೆ ಜನರಿಗೆ ರಿಜಿಸ್ಟ್ರೇಷನ್ನಿನ ದಾಖಲೆಗಳು ದೊರೆಯುವುದಿಲ್ಲ. ಅದುಕಾರಣ ಸ್ಥಿರಸೊತ್ತಿನ ಮೇಲಿನ ಹಕ್ಕುಬಾಧ್ಯತೆಗಳು ಬಂಧುತ್ವವಲ್ಲದ ಇತರ ಕಾರಣಗಳ ಮೇಲೆ ಒಬ್ಬರಿಂದೊಬ್ಬರಿಗೆ ಹೋಗುವುದರ ನಿದರ್ಶನಾರ್ಥವಾಗಿಯೂ, ಜನರು ಲೇಖನಪ್ರಮಾಣಗಳನ್ನು ಅನೇಕ ಸಂದರ್ಭಗಳಲ್ಲಿ ಇಟ್ಟಿಲ್ಲ. ಮತ್ತೂ ಅಂತಹ ಲೇಖನ ಪ್ರಮಾಣಗಳು ಇದ್ದರೂ ಸುಲಭವಾಗಿ ದೊರೆಯುವುದಿಲ್ಲ ಇಂಡಿಯ ದೇಶೀಯರೊಳಗೆ ಸೇಕಡ 80 ಜನಕ್ಕೆ ಭೂಸಂಬಂಧವೂ ಭೂಜೀವನವೂ ಇರುವುವು. ಭೂಸ್ವತ್ವಗಳ ದೌರ್ಲಭ್ಯವೂ ಬೆಲೆಯೂ ದಿನೇ ದಿನೇ ಹೆಚ್ಚುತ್ತಿರುವುದರಿಂದ ಭೂವಿಷಯಕವಾದ ಅಪರಾಧಗಳೂ ವಿವಾದಗಳೂ ಹೆಚ್ಚುತ್ತಲಿವೆ. ಭೂಸಂಬಂಧದ ಅಪರಾಧಗಳನ್ನೂ ವಿವಾದಗಳನ್ನೂ ಕಡಮೆ ಮಾಡುವುದಕ್ಕೂ, ಇವುಗಳನ್ನು ಸುಲಭವಾಗಿ—ಎಂದರೆ ಸರ್ಕಾರಕ್ಕೂ ಪ್ರಜೆಗಳಿಗೂ ದ್ರವ್ಯವ್ಯಯವೂ ಕಾಲವಿಳಂಬವೂ ಅತಿಯಾಗಿ ಉಂಟಾಗದಂತೆ ಮಾಡುವುದಕ್ಕೂ, ಭೂಸಂಬಂಧದ ಹಕ್ಕುಬಾಧ್ಯತೆಯ ವಿಷಯಕವಾದ ಯಾವದ್ವಿಶಿಷ್ಟವ್ಯವಹಾರಸಂಚಾರಗಳ ನಿದರ್ಶಕವಾದ ಲೇಖನಪ್ರಮಾಣಗಳು ಜನರಲ್ಲಿಯೂ ಮತ್ತೂ ಸರ್ಕಾರದಲ್ಲಿಯೂ ಇರಬೇಕಾದುದವಶ್ಯಕ.

ಸ್ಥಿರಸೊತ್ತುಗಳ ಹಕ್ಕುಬಾಧ್ಯತೆಯ ವಿಷಯಕವಾದ ಪೂರ್ಣವಾದ ರಿಕಾರ್ಡು ಕೆಳಗೆ ಸೂಚಿಸುವ ಕೆಲ ಪ್ರದೇಶಗಳಲ್ಲಿ ಹೊರತು ಇತರ ಕಡೆ ಸರ್ಕಾರದವರು ಇಟ್ಟಿಲ್ಲ. ರೆವಿನ್ಯೂ ರಿಜಿಸ್ಟರ್ನಲ್ಲಿರುವ ದಾಖಲೆಗಳು ಕಂದಾಯದ ವಸೂಲಿಗೆ ಉಪಯುಕ್ತವಾಗುವಂತೆ ಜನರ ಪರಸ್ಪರ ಹಕ್ಕುಬಾಧ್ಯತೆಗಳ ವಿಮರ್ಶೆಗೆ ಉಪಯುಕ್ತವಾಗುವುದಿಲ್ಲ. ಪಟ್ಟೆದಾರನು ಒಬ್ಬನಿದ್ದರೆ ಹಕ್ಕುದಾರನು ಮತ್ತೊಬ್ಬನು, ಅನುಭವದಾರನು ಮಗದೊಬ್ಬನು, ಬೇಸಾಯಗಾರನು ಇನ್ನೊಬ್ಬನು, ಈ ಪ್ರಕಾರದ ಸ್ಥಿತಿಯಿದೆ.

ಜಮೀನಿನ ಹಕ್ಕುಬಾಧ್ಯತೆಯ ವಿಷಯಕವಾದ ಪ್ರಬಲ ಲೇಖನಪ್ರಮಾಣಗಳು ಹಕ್ಕುದಾರರಲ್ಲಾಗಲಿ, ಅಥವಾ ಸರ್ಕಾರದಲ್ಲಾಗಲಿ ಪೂರ್ಣವಾಗಿ ಇಲ್ಲದಿರುವುದರಿಂದ ಧೂರ್ತತ್ವವಂಚನೆಗಳಿಗೆ ವಿಶೇಷ ಅವಕಾಶವುಂಟಾಗುತ್ತಿದೆ. ಕೂಟಸಾಕ್ಷಿ ಕೂಟಲೇಖನಗಳ ಮೂಲಕ ವ್ಯಾಜ್ಯ ಗೆಲ್ಲುವ ಧೈರ್ಯದಿಂದ ತುಂಟರು ಬೇಸಾಯಗಾರರ ಅನುಭವಕ್ಕೆ ಆತಂಕಗಳನ್ನುಂಟುಮಾಡುವುದು, ಜಮೀನಿಗೆ ಅಕ್ರಮ ಪ್ರವೇಶಮಾಡುವುದು, ಬೇಸಾಯಗಾರರನ್ನು ಕೋರ್ಟಿಗೆ ಎಳೆದು ಅವರಿಗೆ ವ್ಯರ್ಥ ಕಾಲಕ್ಷೇಪದ್ರವ್ಯನಷ್ಟಗಳನ್ನುಂಟುಮಾಡುವುದು ಇಂತಹ ಅನರ್ಥಗಳನ್ನುಂಟುಮಾಡುತ್ತಾರೆ. ಕೋರ್ಟಿನ ವಿಚಾರಣೆ ತೀರ್ಮಾನಗಳಾದರೋ ಶೀಘ್ರವಾಗಿ ದೊರೆಯತಕ್ಕ

ವುಗಳಲ್ಲ. ಜಮೀನುಗಳ ಮೇಲೆ ಜನರಿಗಿರುವ ಹಕ್ಕುಬಾಧ್ಯತೆಗಳ ನಿದರ್ಶಕವಾದ ಸರ್ಕಾರೀ ಲೇಖನಗಳು ವಿಚಾರಮಾಡುವ ಅಧಿಕಾರಿಗೆ ಸುಗಮ್ಯವಾಗದಿರುವುದರಿಂದ ಅವರು ಸಾಕ್ಷಿಗಳ ವಿಚಾರಣೆಮಾಡಬೇಕಾಗಿ ಸರ್ಕಾರೀ ಕಾಲವೂ ರೈತರ ಕಾಲವೂ ವ್ಯರ್ಥವಾಗಿ ಕಳೆದುಹೋಗುತ್ತದೆ. ಮತ್ತು ಉಭಯರಿಗೂ ಅರ್ಥಹಾನಿಯುಂಟಾಗುತ್ತದೆ. ಸಾಕ್ಷಿಗಳ ಹೇಳಿಕೆಯಮೇಲೆ ಆಲಂಬಿತವಾದ ನಿರ್ಣಯವು ಊಹೆಮಾತ್ರವಾಗಿದೆ. ಮಳಲಮೇಲೆ ಕಟ್ಟುವ ಮನೆಯಂತಿರುವ ಇಂತಹ ತೀರ್ಮಾನಗಳನ್ನು ರದ್ದುಮಾಡಿಸಿಕೊಳ್ಳಲು ಕಕ್ಷಿಗಾರರು ವರಿಷ್ಠನ್ಯಾಯಸ್ಥಾನದವರೆಗೂ ಹೋಗದೆ ವಿರಮಿಸರು.

ಕೆಳಗೆ ಸೂಚಿಸುವ ಏರ್ಪಾಟುಗಳು ಆ ಬಳಿಕ ವಿವರಿಸುವ ಖಾನೂನುಗಳಿಂದ ಕೆಲಕೆಲ ದೇಶಗಳಲ್ಲಿ ಪ್ರವರ್ತನೆಗೆ ತರಲ್ಪಟ್ಟಿವೆ. ಈ ಖಾನೂನುಗಳು ಇತರ ದೇಶಗಳಲ್ಲಿಯೂ ಜಾರಿಗೆ ತರಲ್ಪಡುವುದುಚಿತವೆಂದು ನಮ್ಮಭಿಪ್ರಾಯ.

1. ಸ್ಥಿರಸೊತ್ತಿನ ಮೇಲಿನ ಹಕ್ಕನ್ನುಂಟುಮಾಡುವ ಅಥವಾ ನಿವೃತ್ತಿಮಾಡುವ ಪ್ರತಿಯೊಂದು ವ್ಯವಹಾರವನ್ನು ಬರಹದಲ್ಲೇ ನಡೆಯಿಸಬೇಕೆಂಬುವ, ಅದು ಸರ್ಕಾರಿ ರಿಜಿಸ್ಟ್ರನಲ್ಲಿ ದಾಖಲಾಗಬೇಕೆಂಬುವ, ಇಲ್ಲದಿದ್ದರೆ ಆ ವ್ಯವಹಾರವು ಸುತರಾಂ ಪ್ರಯೋಜನಕ್ಕೆ ಬಾರದು ಎಂಬುವ ಖಂಡಿತವಾದ ಖಾನೂನನ್ನು ಮಾಡುವುದು. ಮತ್ತೂ ಸ್ಟಾಂಪಿನ ದರವನ್ನೂ ರಿಜಿಸ್ಟ್ರೇಷನ್ನಿನ ದರವನ್ನೂ ಕಡಮೆಮಾಡಬೇಕಲ್ಲದೆ ಪ್ರತಿಯೊಂದು ಗ್ರಾಮದಲ್ಲೂ ರಿಜಿಸ್ಟ್ರೇಷನ್ನಿನ ಆಫೀಸುಗಳನ್ನು ಇಡಬೇಕು. ಸ್ಟಾಂಪು ರಿಜಿಸ್ಟ್ರೇಷನುಗಳ ದರಗಳನ್ನು ಕಡಮೆಮಾಡದೆಯೂ, ಪ್ರತಿಗ್ರಾಮದಲ್ಲೂ ರಿಜಿಸ್ಟ್ರೇಷನ್ ಆಫೀಸುಗಳನ್ನಿಡದೆಯೂ ಇದ್ದರೆ, ಎಲ್ಲಾ ತರದ ಎಲ್ಲಾ ವ್ಯವಹಾರಗಳಿಗೂ ಲೇಖನ ಪ್ರಮಾಣಗಳನ್ನಿಡುವುದೂ, ಅವೆಲ್ಲವನ್ನೂ ರಿಜಿಸ್ಟರ್ ಮಾಡಿಸುವುದೂ ಜನರಿಗೆ ಬಹು ದುಸ್ತರಗಳಾಗುತ್ತವೆ. ಈ ವರಮಾನಗಳ ದರವನ್ನು ಕಡಮೆಮಾಡುವುದರಿಂದಲೂ, ರಿಜಿಸ್ಟ್ರೇಷನ್ ಆಫೀಸುಗಳನ್ನು ಹೆಚ್ಚಿಸುವುದರಿಂದಲೂ ಸರ್ಕಾರಕ್ಕುಂಟಾಗಬಹುದಾದ ನಷ್ಟಕ್ಕೆ ಪ್ರತಿಯಾಗಿ ಈ ಏರ್ಪಾಟಿನ ಪರಿಣಾಮಗಳಿಂದ ಲಾಭವುಂಟಾಗುತ್ತದೆ. ಹೇಗೆಂದರೆ, ಸ್ಟಾಂಪುಕಾಗದಗಳ ಬಿಕರಿಯೂ, ರಿಜಿಸ್ಟರಾಗುವ ದಸ್ತಾವೇಜುಗಳ ಸಂಖ್ಯೆಯೂ ಹೆಚ್ಚುವುದರಿಂದ ಕಾಣುವ ಹಾಗೇ ಸರ್ಕಾರಕ್ಕೆ ಲಾಭವುಂಟಾಗುತ್ತದೆ. ಮತ್ತೂ ಸ್ಥಿರಸೊತ್ತುಗಳ ಹಕ್ಕುಬಾಧ್ಯತೆಯ ವಿಷಯದಲ್ಲಿ ಬಲವಾದ ಲಿಖಿತ ನಿದರ್ಶನಗಳುಂಟಾಗುವುದರಿಂದ ವ್ಯಾಜ್ಯಗಳು ಹುಟ್ಟುವುದೂ ಕಡಮೆಯಾಗತ್ತದೆ. ವ್ಯಾಜ್ಯಗಳನ್ನು ವಿಮರ್ಶಿಸುವ ಕಾರ್ಯವು ಮತ್ತೂ ಕಡಮೆಯಾಗುತ್ತದೆ. ಸರ್ಕಾರೀ ಕಾರ್ಯವು ಈ ಪ್ರಕಾರ ಬಹು ಲಘುವಾಗುತ್ತದೆಯಾಗಿ, ನ್ಯಾಯಸ್ಥಾನಗಳನ್ನು ಕಡಮೆಮಾಡಬಹುದಾದುದರಿಂದ ಅಪ್ರತ್ಯಕ್ಷವಾದ ಲಾಭವೂ ಉಂಟಾಗುತ್ತದೆ. ಆ ಆ ಗ್ರಾಮದಲ್ಲೇ ವಾಸಮಾಡುವ ಶಾನಭೋಗರು (ಕರಣಿಕರು) ಮೊದಲಾದವರನ್ನು ರಿಜಿಸ್ಟ್ರಾರುಗಳನ್ನಾಗಿ ನೇಮಿಸಿದರೆ, ಅವರು ಬಹು ಸ್ವಲ್ಪವೇತನದಮೇಲೆ ಕೆಲಸ ಮಾಡುವರು. ರಿಜಿಸ್ಟ್ರೇಷನ್ನಿನ ವರಮಾನದ ಒಂದಂಶವನ್ನೇ ಅವರ ಪ್ರತಿಫಲಕ್ಕಾಗಿ ಕೊಟ್ಟರೆ ಅವರು ಮತ್ತಷ್ಟು ಚಟುವಟಿಕೆ ಆಸಕ್ತಿಗಳಿಂದ ಕೆಲಸಮಾಡುತ್ತಾರೆ.

2. ಮುಲ್ಕೀ ಮತ್ತೂ ಶಾರೀರಕ ಲಾ ಗಳ ಮೇರೆ ಜನರಿಗೆ ಜಮೀನುಗಳ ಮೇಲೆ ಇರುವ ಮತ್ತೂ ಬರುವ ಹಕ್ಕುಬಾಧ್ಯತೆಗಳನ್ನು ರೆವಿನ್ಯೂ ಇಲಾಖೆಯವರು ಆ ಆ ಗ್ರಾಮದಲ್ಲಿ ಬರೆಯಿಸಿ ಇಡುವುದು.—ಎಂದರೆ, ಭೂಮಾಲೀಕರು, ಇನಾಂದಾರರು, ಮೇಲ್‌ಹಿಡುವಳಿದಾರರು, ಕೀಳ್‌ಹಿಡುವಳಿದಾರರು, ಖಾಯಂಹಿಡುವಳಿದಾರರು, ಒಕ್ಕಲು, ರೈತರು, ಇಂತಹ ಆ ಆ ದೇಶದ ಲಾ ಪ್ರಕಾರ ಭೂಸಂಬಂಧವಿರುವವರಿಗೆ ಜಮೀನುಗಳ ಮೇಲಿರುವ ಹಕ್ಕಿನ ಸ್ವಭಾವಗಳನ್ನೂ ಹಕ್ಕುದಾರರ ಹೆಸರನ್ನೂ, ಮತ್ತೂ ಹಿಂದೂಲಾ, ಮಹಮದೀಯ ಲಾ ಪ್ರಕಾರ, ದಾಯಭಾಗ, ಅತಿಜೀವನ, ವಿಭಾಗ, ವಾರಿಸ್, ಪುತ್ರಸ್ವೀಕಾರ, ಸ್ವತ್ವಾಧಿಕಾರಗಳನ್ನುಂಟುಮಾಡುವ ಇಂತಹ ಸಂಗತಿಗಳನ್ನೂ ಮತ್ತೂ ಸ್ವತ್ವಾಧಿಕಾರಿಗಳ ಹೆಸರನ್ನೂ ಪ್ರತಿ ಗ್ರಾಮದಲ್ಲೂ ರಿಜಿಸ್ಟರ್ ಮಾಡಿಸಿಡುವುದು. ಮತ್ತೂ ಪ್ರತಿ ಗ್ರಾಮದ ಪ್ರತಿ ಭೂಮಿಯನ್ನೂ ವಸ್ತುತಃ ವ್ಯವಸಾಯಮಾಡುವವರ, ಅಥವಾ ಆಳುಗಳಿಂದ ಮಾಡಿಸುವವರ ನಾಮಧಾಮಗಳನ್ನೂ ಮತ್ತೂ ಅಂತಹ ಪ್ರತಿ ಭೂಮಿಯಲ್ಲಾಗುವ ಬೆಳೆಯನ್ನೂ ಮತ್ತೂ ಅದರ ಪರಿಮಾಣವನ್ನೂ ಬರೆಯಿಸಿಡುವುದು. ಆರೋಗ್ಯವನ್ನು ಕಾಪಾಡಿಕೊಳ್ಳಲಿಕ್ಕಾಗಿ ಮುಟ್ಟಿಸುವ ವೆಚ್ಚವು ವೈದ್ಯಕ್ಕಾಗಿ ಒಂದಕ್ಕೆರಡರಂತೆ ಮುಟ್ಟಿಸುವ ವೆಚ್ಚವನ್ನು ತಪ್ಪಿಸಿ ಹೇಗೆ ಲಾಭಕರವಾಗಿ ಪರಿಣಮಿಸುವುದೋ ಹಾಗೆ ಈ ಏರ್ಪಾಡು ಸರ್ಕಾರಕ್ಕೆ ಲಾಭಕರವಾಗಿಯೇ ಕೊನೆಗೆ ಪರಿಣಮಿಸುವುದು.

3. ಸಣ್ಣ ಸಿವಲ್ ವ್ಯಾಜ್ಯಗಳನ್ನು ಫೈಸಲ್ಮಾಡಲಿಕ್ಕೆ ಗ್ರಾಮಮುನಸೀಫರು, ಗ್ರಾಮಪಂಚಾಯಿತರು ಇವರನ್ನು ನೇಮಿಸುವುದು. ಈ ಏರ್ಪಾಟಿನಿಂದ ಆಗುವ ಪ್ರಯೋಜನಗಳೇನೆಂದರೆ : ರೈತರು ತುಚ್ಛವ್ಯಾಜ್ಯಗಳಿಗಾಗಿ ವಿಶೇಷ ಕಾಲವನ್ನೂ ಹಣವನ್ನೂ ಕಳೆಯದೆ, ಸುಲಭವಾಗಿಯೂ ಶೀಘ್ರವಾಗಿಯೂ ತಮ್ಮ ವಿವಾದಗಳ ವ್ಯವಸ್ಥೆಯನ್ನು ಹೊಂದಬಹುದು. ಗ್ರಾಮದ ನ್ಯಾಯಾಧಿಕಾರಿಗಳು ವ್ಯಾಜ್ಯದ ವಿದ್ಯಮಾನಗಳನ್ನು ತಿಳಿದವರೇ ಆಗಿದ್ದಾರೆ. ಸಾಕ್ಷಿಗಳ ಹೇಳಿಕೆಯ ಸತ್ಯಾಸತ್ಯವು ಕಕ್ಷಿಗಾರರಿಗೆ ಹೇಗೆ ತಿಳಿಯುವುದೋ ಹಾಗೆ ಆ ಅಧಿಕಾರಿಗಳಿಗೂ ತಿಳಿಯುವುದು. ಮತ್ತೂ ಸಾಕ್ಷಿಗಳ ಯೋಗ್ಯತೆಯನ್ನೂ ತಿಳಿದಿರುತ್ತಾರೆ. ಮತ್ತೂ ನ್ಯಾಯಾಧಿಕಾರಿಗಳೂ, ಕಕ್ಷಿಗಾರರೂ, ಸಾಕ್ಷಿಗಳೂ ಎಲ್ಲರೂ ಆಜನ್ಮಮರಣಾವಧಿ ಒಂದೇ ಕಡೆ ವಾಸಮಾಡುವವರಾಗಿಯೂ, ಅನ್ಯೋನ್ಯಸಂಟರಿಷ್ಟರಾಗಿಯೂ ಇರುವರು. ಅದುಕಾರಣ ಸುಳ್ಳು ರುಜುವಾತುಬರುವ ಸಂಭವವೂ ಕಡಮೆ; ಬಂದರೂ, ಅದನ್ನು ವಿಮರ್ಶಿಸುವುದು ಅವರಿಗೆ ಸುಲಭ. ವಿದ್ಯಮಾನದ ಮತ್ತೂ ರುಜುವಾತಿನ ತಪ್ಪುತಿಳುವಳಿಕೆಯಿಂದ ನ್ಯಾಯಕ್ಕೆ ಚ್ಯುತಿಯುಂಟಾಗುವುದು ಅಲ್ಲಿ ಬಹಳ ಕಡಮೆ. ಈ ಅನುಕೂಲ್ಯಗಳು, ದ್ವೇಷ, ಅಸೂಯೆ, ಅಭಿಮಾನ, ಪಕ್ಷಪಾತ, ಸ್ವಪ್ರಯೋಜನ ಇವುಗಳಿಂದ ಕದಾಚಿತ್ ಉಂಟಾಗಬಹುದಾದ ನ್ಯಾಯಚ್ಯುತಿಯ ಅನಾನುಕೂಲಕ್ಕಿಂತಲೂ ಬಹಳ ಹೆಚ್ಚು. ಮತ್ತೂ ಇಂತಹ ನ್ಯಾಯಚ್ಯುತಿಗಳನ್ನು ಮೇಲ್ಪಟ್ಟ ಅಧಿಕಾರಿಗಳು ಸರಿಪಡಿಸುವುದೂ ಬಹಳ ಸುಲಭ.

4 ಜಮೀನುಗಳನ್ನು ಮಾಲೀಕರಾಗಲಿ, ಸಿವಿಲ್ ಕೋರ್ಟಿನವರಾಗಲಿ ಪರಾಧೀನಮಾಡಲಿಕ್ಕೆ ಈಗಿರುವ ಅವಕಾಶಗಳನ್ನು ತಪ್ಪಿಸಬೇಕೇ ? ಬೇಡವೇ ? ಎಂಬುವ ವಿಚಾರವನ್ನು ಸರ್ಕಾರೀ ಅಧಿಕಾರಿಗಳು ಬಹಳ ಕಾಲದಿಂದ ಚರ್ಚಿಸುತ್ತಲೂ, ಜಮೀನಿನ ವ್ಯವಹಾರಕ್ಕೆ ಸಂಬಂಧಪಟ್ಟ ಖಾನೂನುಗಳಲ್ಲಿ ಅಂತಹ ಅವಕಾಶಗಳನ್ನು ಸ್ವಲ್ಪ ಸ್ವಲ್ಪ ತಪ್ಪಿಸುತ್ತಲೂ ಇದ್ದಾರೆ. ಈ ಚರ್ಚೆಗೆ ಕಾರಣವೇನೆಂದರೆ, ಜಮೀನುಗಳು ಬೇಸಾಯಗಾರರ ಕೈಬಿಟ್ಟು ಇತರರ ವಶಕ್ಕೆ ಹೋದರೆ, ಜಮೀನುಗಳಿಗೆ ಚೆನ್ನಾದ ಬೇಸಾಯವು ತಪ್ಪಿ, ಬೇಸಾಯಗಾರರು ನಿರ್ಗತಿಕರೂ ಆಗಿ, ದೇಶಕ್ಕೆ ಬಹು ಉಪಹತಿಯುಂಟಾಗುತ್ತದೆಯಾಗಿ, ಜಮೀನಿನ ವ್ಯವಹರಿಸುವ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಳ್ಳಬೇಕೆಂದು ಒಂದು ಪಕ್ಷದವರೂ, ರಾಜ್ಯದ ಜಮೀನುಗಳಿಗೆಲ್ಲಾ ಸರ್ಕಾರದವರೇ ಮಾಲೀಕರಾಗಿ ಬೇಸಾಯಗಾರರಿಗೆ ಅವಶ್ಯಕವಾದ ಸಾಲಗಳನ್ನು ಸರ್ಕಾರದವರೇ ಕೊಟ್ಟು ಅವರಿಂದ ಜಮೀನುಗಳನ್ನು ಸಾಗುವಳಿಮಾಡಿಸಲು ಸರ್ಕಾರದವರು ಉದ್ಯುಕ್ತರಾಗುವುದಾದರೆವಿನಾ, ಮತ್ತೂ ಕಂದಾಯದ ಬಾಕಿಗೂ ಸಹ ಜಮೀನ್ ಹರಾಜು ಮಾಡಿಸುವ ಪದ್ಧತಿಯನ್ನು ಸರ್ಕಾರದರು ಬಿಡುವುದಾದರೆ ವಿನಾ, ಇಲ್ಲದಿದ್ದಲ್ಲಿ ಜಮೀನುಗಳು ಒಬ್ಬರಿಂದೊಬ್ಬರಿಗೆ ಹೋಗುವುದನ್ನು ತಪ್ಪಿಸಲಿಕ್ಕಾಗುವುದಿಲ್ಲವೆಂದು ಮತ್ತೊಂದು ಪಕ್ಷದವರೂ ಅಭಿಪ್ರಾಯಪಡುತ್ತಾರೆ. ನ್ಯಾಯಾಧೀಶ ರಾನಡೆಯವರಾದರೋ, ನಿರ್ಗತಿಕರು, ಅಮಿತವ್ಯಯಿಗಳು, ದೂರದೃಷ್ಟಿಯಿಲ್ಲದವರು ಇಂತಹರಿಂದ, ದೂರದೃಷ್ಟಿಯಿಂದಲೂ, ಮಿತವ್ಯಯದಿಂದಲೂ ಬುದ್ಧಿಶಕ್ತ್ಯುಪಾಯಗಳಿಂದಲೂ ಧನಸಂಪಾದನೆ ಮಾಡುವವರಿಗೆ ಸೊತ್ತುಗಳು ಹೋಗಿ ಸೇರುವ ಲೋಕಪ್ರಗತಿಯನ್ನು ತಪ್ಪಿಸಲಾಗುವುದಿಲ್ಲವಾಗಿ, ಪ್ರಬಲರಿಂದ ದುರ್ಬಲರಿಗೆ ಉಂಟಾಗುವ ಹಿಂಸೆಯು ಅತಿ ಹೆಚ್ಚಿದಾಗ ಮಾತ್ರ ಸರ್ಕಾರದವರು ದುರ್ಬಲರ ಸಂರಕ್ಷಣೆಗಾಗಿ ಪ್ರವರ್ತಿಸತಕ್ಕುದೆಂದು, ಮಧ್ಯಸ್ಥವಾದ ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ. ಕೋರ್ಟಿನ ಹೊರಗೆ ಮನಃಪೂರ್ವಕವಾಗಿ ಅರ್ಥಿಪ್ರತ್ಯರ್ಥಿಗಳು ಮಾಡಿಕೊಳ್ಳುವ ವ್ಯವಹಾರಗಳ ವಿಷಯದಲ್ಲಿ ಈ ಭಿನ್ನಾಭಿಪ್ರಾಯವಿದ್ದರೂ, ಸಿವಿಲ್‌ಕೋರ್ಟಿನವರು ನಿರ್ಬಂಧದಿಂದ ಮಾಡುವ ಜಮೀನಿನ ವ್ಯವಹಾರಗಳ ವಿಷಯದಲ್ಲಿ ಏಕಾಭಿಪ್ರಾಯವಿದೆ. ಹೇಗೆಂದರೆ, ಬೇಸಾಯಗಾರರ ಮತ್ತೂ ಜಮೀನುಗಳ ಶೀಲಸ್ವಭಾವ ಸ್ಥಿತಿಗತಿಗಳು ರೆವಿನ್ಯೂ ಅಧಿಕಾರಿಗಳಿಗೆ ತಿಳಿಯುವ ಹಾಗೆ ಸಿವಿಲ್ ಕೋರ್ಟಿನವರಿಗೆ ತಿಳಿಯಲವಕಾಶವಿಲ್ಲ. ಅದುಕಾರಣ ಜಮೀನನ್ನು ಹರಾಜುಮಾಡುವುದು, ಜಮೀನಿನ ಮೇಲೆ ಡಿಕ್ರಿಯನ್ನು ಜಾರಿಮಾಡುವುದು ಈ ಸಂಬಂಧದ ಕಾರ್ಯಗಳನ್ನು ಸಿವಿಲ್ ಕೋರ್ಟಿನವರು ಮಾಡದೆ ರೆವಿನ್ಯೂ ಅಧಿಕಾರಿಗಳೇ ಮಾಡಿದರೆ ಉತ್ತಮವೆಂಬ ಅಭಿಪ್ರಾಯವು ಸಾರ್ವತ್ರಿಕವಾಗಿದೆ. ಜಾರಿಮಾಡುತ್ತಿರುವ ಡಿಕ್ರಿಯ ಲೇಣೆಯೂ ತೀರಬೇಕು ; ಇತರ ಡಿಕ್ರಿಗಳ ಲೇಣೆಗಳೂ ತೀರಬೇಕು ; ಜಮೀನು ಕೊನೆಗೆ ದೇಣೇದಾರನನ್ನೇ ಸೇರಬೇಕು. ಈ ಪರಿಣಾಮಗಳುಂಟಾಗುವಂತೆ ದೇಣೆದಾರನ ಜಮೀನನ್ನು ವ್ಯವಹರಿಸಬೇಕಾಗುತ್ತದೆ. ಹೀಗೆ ಮಾಡಬೇಕಾದರೆ ಜಮೀನಿನ ಯೋಗ್ಯತೆಯನ್ನೂ ಅದರ ನಿಶ್ಚಯವಾದ ಬೆಲೆಯನ್ನೂ ಸಾಗುವಳಿದಾರರ ಅವಶ್ಯ

ಕತೆ ಅಪೇಕ್ಷೆಗಳನ್ನೂ ತಿಳಿಯಬೇಕು. ಇವನ್ನು ತಿಳಿದು, ಜಮೀನನ್ನೆಲ್ಲವನ್ನೂ ಹರಾಜು ಮಾಡಬೇಕೇ? ಅಥವಾ, ಅದರ ಒಂದಿಷ್ಟು ಭಾಗವನ್ನು ಹರಾಜುಮಾಡಿದರೆ ಸಾಕೇ? ಒಂದಷ್ಟು ಕ್ರಯಕಟ್ಟಿ ಹರಾಜುಮಾಡಬೇಕೇ? ಕೂಡದೇ? ಭೋಗ್ಯಮಾಡುವುದು ತ್ರಮವೇ? ಒಂದಿಷ್ಟುಕಾಲ ಸಾಗುವಳಿಗೆ ಕೊಟ್ಟರೆ ಸಾಕೇ? ಎಂಬಿವುಗಳನ್ನು ನಿರ್ಧರಿಸಿ, ಹಾಗೆ ಮಾಡಬೇಕು. ಇಷ್ಟನ್ನೆಲ್ಲಾ ಮಾಡಲು ಸ್ಥಳವಿದ್ಯಮಾನಗಳನ್ನೂ ತಿಳಿದ, ಪ್ರತಿ ಗ್ರಾಮದ ಸ್ಥಳಾಧಿಕಾರಿಗಳೂ ಆದ, ಜಮೀನುಗಳ ಮೇಲೆ ವರಿಷ್ಠಾಧಿಕಾರಗಳನ್ನು ಮೊದಲೇ ಚಲಾಯಿಸುತ್ತಿರುವ ರೆವಿನ್ಯೂ ಅಧಿಕಾರಿಗಳಿಗೆ ಸಾಧ್ಯವೇ ಹೊರತು ಸಿವಿಲ್ ಕೋರ್ಟಿಗೆ ಸಾಧ್ಯವಲ್ಲ.

5. ಮೇಲೆ ಸೂಚಿಸಿದ ಮೇರೆ ಜಮೀನುಗಳ ಹಕ್ಕುಬಾಧ್ಯತೆಗಳ ವಿಷಯಕವಾದ ಪೂರ್ಣಲಿಖಿತನಿದರ್ಶನವು ಸರ್ಕಾರದಲ್ಲಿ ಇರುವುದಾದರೆ ಜಮೀನಿನ ಅನುಭೋಗಕ್ಕೆ ಆತಂಕ ಉಂಟುಮಾಡಲೂ ಮತ್ತೂ ಜಮೀನನ್ನು ಅಕ್ರಮಸ್ವಾಧೀನ ಮಾಡಿಕೊಳ್ಳಲೂ ಯಾವನಿಗೂ ಧೈರ್ಯವುಂಟಾಗುವುದಿಲ್ಲ. ಈಗಲಾದರೋ, ಕೂಟ ಲೇಖನಸಾಕ್ಷ್ಯಗಳಿಂದ ಜಮೀನು ತಮ್ಮ ಸ್ವಾಧೀನದಲ್ಲೇ ಇತ್ತೆಂಬುದನ್ನೂ ತಮಗೇ ಸೇರಿ ಇದ್ದಿತೆಂಬುದನ್ನೂ ಸಾಧಿಸಲಿಕ್ಕೆ ಕೆಟ್ಟ ಜನರಿಗೆ ಅವಕಾಶವಿರುತ್ತದೆಯಾಗಿ ಇಂತಹ ತುಂಟತನಗಳನ್ನು ಅವರು ಮಾಡುತ್ತಾರೆ. ಮತ್ತೂ ಇತರರು ಅನುಭೋಗಿಸುತ್ತಿರುವ ಜಮೀನಿನ ಮೇಲೆ ತಮಗೆ ಹಕ್ಕಿದೆಯೆಂದು ಭಾವಿಸುವ ಜನರುಸಹ ಸಿವಿಲ್ ಕೋರ್ಟಿನ ಕಾಲವಿಳಂಬ ದ್ರವ್ಯವ್ಯಯಗಳಿಗೆ ಹೆದರಿ, ತಮ್ಮ ಹಕ್ಕನ್ನು ಕೋರ್ಟಿನಲ್ಲಿ ಸಾಧಿಸಿಕೊಳ್ಳದೆ, ಸ್ವಶಕ್ತಿಯಿಂದ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಜಮೀನು ಲಾಗಾಯಿತಿನಿಂದಲೂ ತಮ್ಮ ಸ್ವಾಧೀನದಲ್ಲೇ ಇದ್ದಿತೆಂದು ಸಾಧಿಸಿ, ವಾಸ್ತವವಾದ ಅನುಭವದಾರನೇ ಕ್ರಮದಾವಾ ತರುವಂತೆ ಮಾಡಲು ಪ್ರಯತ್ನಮಾಡುತ್ತಾರೆ. ಭೂಮಿಯ ಸ್ವಾಧೀನವಿಷಯಕವಾದ ವ್ಯಾಜ್ಯಗಳನ್ನು ಕ್ರಿಮಿನಲ್ ಪ್ರೊಸೀಜರ್ ಕೋಡು 145 ನೆಯ ಸೆಕ್ಷನ್ ಮೇರೆ ಕ್ರಿಮಿನಲ್ ಕೋರ್ಟಿನಲ್ಲಿಯೂ, ಸ್ಪೆಸಿಫಿಕ್ ರಿಲೀಫ್ ಆಕ್ಟ್ 9 ನೆಯ ಸೆಕ್ಷನ್ ಮೇರೆ ಸಿವಿಲ್ ಕೋರ್ಟಿನಲ್ಲಿಯೂ ತರಬಹುದಾದರೂ, ಜನಸ್ವಾಸ್ಥ್ಯಕ್ಕೆ ಭಂಗವುಂಟಾಯಿತೆಂಬುದನ್ನು ರುಜುವಾತು ಕೊಡದಿದ್ದರೆ ಕ್ರಿಮಿನಲ್ ಕೋರ್ಟಿನವರು ವಾಜ್ಯವನ್ನೇ ಹಿಡಿಯುವುದಿಲ್ಲ. ಸಿವಿಲ್ ಕೋರ್ಟಿನಲ್ಲಾದರೋ, ಉಂಟು ಇಲ್ಲ ಎಂಬ ಬರಿಯ ಮಾತಿನ ಸಾಕ್ಷಿಗಳ ಹೇಳಿಕೆಯಲ್ಲಿ ಇಂತಹರ ಸ್ವಾಧೀನದಲ್ಲೇ ಜಮೀನು ಇದ್ದಿತೆಂಬುದನ್ನು ನಿರ್ಧರಿಸುವುದು ಬಹು ಕಠಿಣ. ಸ್ವಾಧೀನವನ್ನು ಕಳೆದುಕೊಂಡವನು ಜಯಿಸುವುದು ಎಷ್ಟು ಸಾಧ್ಯವೋ ಅಕ್ರಮಿಸಿದವನು ಜಯಿಸುವುದೂ ಅಷ್ಟು ಸಾಧ್ಯವಾಗಿರುತ್ತದೆ. ಇದರ ನಿಶ್ಚಯವನ್ನು ಅತಿ ಸುಲಭವಾಗಿಯೂ ಅತಿ ಜಾಗ್ರತೆಯಾಗಿಯೂ ತಿಳಿಯಲು ರೆವಿನ್ಯೂ ಇಲಾಖೆಯವರಿಗೆ ಪೂರ್ಣ ಅವಕಾಶವಿದೆ. ಇಂತಹ ಜಮೀನು ಇಂತಹರ ಸ್ವಾಧೀನದಲ್ಲಿದೆ ಎಂಬುದು ಗ್ರಾಮಾಧಿಕಾರಿಗಳಿಗೆ ಗೊತ್ತೇ ಇದೆ. ಅವರ ರಿಪೋರ್ಟಿನ ಮೇಲೆ ಅಮಲ್ದಾರರು (ಮಾಮಲೇದಾರರು ಯಾ ತಾಸಿಲ್‌ದಾರರು) ಸ್ವಾಧೀನದ ಹಕ್ಕನ್ನು ಬಹು ಸುಲಭವಾಗಿ ಇತ್ಯರ್ಥಮಾಡಿ

ಬಿಡಬಹುದು. ಪ್ರತಿ ಜಮೀನನ್ನೂ ಪ್ರತಿ ವರುಷವೂ ವ್ಯವಸಾಯಮಾಡುವವನ ಮತ್ತೂ ಅನುಭೋಗಿಸುವವನ ಹೆಸರುಗಳು ಖಾನೇಷುಮಾರಿ ಮೊದಲಾದ ಗ್ರಾಮದ ರಜಿಸ್ಟ್ರನಲ್ಲಿ ದಾಖಲ್ ಮಾಡಲ್ಪಟ್ಟರೆ ಇಂತಹ ವಾಜ್ಯ ಹುಟ್ಟುವುದೇ ಇಲ್ಲ; ಹುಟ್ಟಿದರೂ, ಬಹು ಸುಲಭವಾಗಿ ರೆವಿನ್ಯೂ ಅಧಿಕಾರಿಗಳು ಇತ್ಯರ್ಥಮಾಡಬಹುದು.

ಮೇಲೆ ಹೇಳಿರುವ ಸೂಚನೆಗಳೆಲ್ಲವು ಕೆಳಗೆ ವಿವರಿಸುವ ಖಾನೂನುಗಳಲ್ಲಿ ಕೆಲಕೆಲ ಕಡೆ ಆಗಲೇ ಜಾರಿಗೆ ತರಲ್ಪಟ್ಟಿವೆ.

ಡೆಕ್ಕನ್ ಅಗ್ರಿಕಲ್ಚರಿಸ್ಟ್ಸ್ ರಿಲೀಫ್ ಆಕ್ಟ್.

(ಡೆಕ್ಕನ್ ಬೇಸಾಯಗಾರರ ಪರಿಹಾರದ ಆಕ್ಟು.)

ಈ ಆಕ್ಟು ಬೊಂಬಾಯಿ ಆಧಿಪತ್ಯದ ಕೆಲಕಡೆ ಜಾರಿಯಲ್ಲಿದೆ.

ಲೇವಾದೇವಿಗೆ ಸಂಬಂಧಪಟ್ಟ ಬೇಸಾಯಗಾರರ ಮೇಲೆ ಮಾಡುವ, ದಾವಾಗಳನ್ನು ಅವರು ಯಾವ ಕೋರ್ಟಿನ ಅಧಿಕಾರದ ಸರಹದ್ದಿನೊಳಗೆ ವಾಸಿಸುವರೋ ಆ ಕೋರ್ಟಿನಲ್ಲೇ ಮಾಡಬೇಕು. 11. ಅಂತಹ ದಾವಾಗಳನ್ನು ವಿಳಂಬಕ್ಕೂ, ಅಪೀಲಿಗೂ ಅವಕಾಶಕೊಡದೆ ಸ್ಮಾಲ್‌ಕಾಜಿನಂತೆ ವ್ಯವಸ್ಥೆಮಾಡಬೇಕು. 6, 7, 10 ಹಣದ ಡಿಕ್ರಿಗಾಗಿ ಬೇಸಾಯಗಾರರನ್ನು ದಸ್ತಗಿರಿಯೂ ಮಾಡಕೂಡದು; ಅವರನ್ನು ಸಿವಿಲ್ ಜೈಲಿನಲ್ಲೂ ಇರಿಸಕೂಡದು. 21. ಬೇಸಾಯಗಾರನ ಭೂಮಿಯು ಸಾಲಕ್ಕೆ ಮೊದಲೇ ಈಡಾಗಿದ್ದರೆ ವಿನಾ ಇಲ್ಲದಿದ್ದರೆ ಕೋರ್ಟಿನವರು ಅದನ್ನು ಜಪ್ತಿ ಯಾ ಹರಾಜು ಮಾಡಕೂಡದು. 22. ಭೋಗ್ಯ ಬಿಡಿಸಿಕೊಳ್ಳಲು ವಾಯಿದೆಯು ಮುಗಿಯುವುದಕ್ಕೆ ಮುಂಚೆಯೇ ಭೋಗ್ಯನಿವೃತ್ತಿಯ ಡಿಕ್ರಿಯನ್ನು ಪಡೆಯಬಹುದು. 15 ಎ. ಮತ್ತು ಕಂತುಗಳಲ್ಲಿ ಸಾಲಾ ತೀರಿಸುವಂತೆ ಡಿಕ್ರಿಯಲ್ಲಿ ಆರ್ಡರನ್ನು ಮಾಡಬಹುದು 15 ಬಿ. ಭೋಗ್ಯದ ಮೇಲೆ ಮಾಡುವ ದಾವಾಗಳಲ್ಲಿ ಕೋರ್ಟಿನವರು ಭೋಗ್ಯದ ಹಣವನ್ನು ನಿರ್ಧರಿಸಿ, ಭೋಗ್ಯದಾರನು ಭೋಗ್ಯದ ಸೊತ್ತನ್ನು ತಾನೇ ಒಂದಿಷ್ಟು ಕಾಲ ಅನುಭವಿಸುವುದರ ಮೂಲಕ ಸಾಲವನ್ನು ತೀರಿಸಿಕೊಳ್ಳಬೇಕೆಂದು ಆರ್ಡರ್ ಮಾಡಬಹುದು. 15 ಬಿ. ಬೇಸಾಯಗಾರನ ಸಂಸಾರಕ್ಕೆ ಅವಶ್ಯಕವಾಗುವಷ್ಟಕ್ಕಿಂತ ಹೆಚ್ಚಾದ ಭೂಮಿಯನ್ನು ಕಲೆಕ್ಟರ ಮ್ಯಾನೇಜುಮೆಂಟಿನಲ್ಲಿಟ್ಟು ಒರೀ ಹಣದ ಡಿಕ್ರಿಯನ್ನು ಅವರು ಸಮಾಧಾನಮಾಡುವಂತೆ ಕೋರ್ಟಿನವರು ಆರ್ಡರನ್ನು ಮಾಡಬಹುದು. 22. ಸಿವಿಲ್ ಪ್ರೊ. ಕೋ. 325 ನೆಯ ಸೆಕ್ಷನ್ ಮೇರೆ ಜಮೀನು ಕಡಮೆಯ ಬೆಲೆಗೆ ಹರಾಜುಮಾಡಲ್ಪಟ್ಟಿದ್ದರೆ ಕಲೆಕ್ಟರು ಒಂದು ತಿಂಗಳೊಳಗೆ ಆ ಹರಾಜನ್ನು ರದ್ದುಮಾಡಬಹುದು 22 ಎ. 50 ರೂ. ಗೆ ಕಡಮೆಯಿಲ್ಲದಷ್ಟು ಸಾಲಮಾಡಿಕೊಂಡಿರುವ ಬೇಸಾಯಗಾರನು ಇನ್‌ಸಾಲ್ವೆಂಟಾಗಲು ಪ್ರಾರ್ಥಿಸಿಕೊಳ್ಳಬಹುದು. 25 ನೆ. ಲೇವಾದೇವಿಗಳ ವಿವಾದವನ್ನು ಫೈಸಲ್ಮಾಡಲು ಸರ್ಕಾರದವರು ವಿಲೇಜ ಮುನಸೀಫರನ್ನು ನೇಮಿಸಬಹುದು. 34, 35. ವಿವಾದಗಳನ್ನು ರಾಜಿಮಾಡಿಸಿ ಕೋರ್ಟಿಗೆ ಹೋಗದಂತೆ ಮಾಡ

ಲು ಸರ್ಕಾರದವರು ಕಾನ್ಸಿಲಿಯೇಟರ್ (ಸಂಧಾನಕಾರ) ಎಂಬುವ ಅಧಿಕಾರಿಯನ್ನು ನೇಮಿಸಬಹುದು. ಹಾಗೆ ನೇಮಿಸಿದ್ದರೆ ವಿವಾದಮಾಡತಕ್ಕವರೆಲ್ಲರೂ ಆತನಲ್ಲಿ ಮೊದಲು ಹಾಜರಾಗಿ ವಿವಾದಗಳನ್ನು ಆತನಲ್ಲಿ ಮೊದಲು ಇಡಬೇಕು. ಹಾಗೆ ಮಾಡ ದಿದ್ದರೆ ವಿವಾದಗಳನ್ನು ಕೋರ್ಟಿನಲ್ಲಿ ಹಾಕಲು ಆಗಲಿಕ್ಕಿಲ್ಲ. ಮತ್ತೂ ಪ್ರತಿವಾದಿಯು ಅವನಲ್ಲಿ ಹಾಜರಾಗಬೇಕೆಂದು ತಿಳಿಸಲ್ಪಟ್ಟೂ ಅವನು ಹಾಜರಾಗದಿರುವುದು ಕ್ರಿಮಿನಲ್ ತಕ್ಸೀರು. 38-49. ಗೌವರ್ನಮೆಂಟಿನವರು ಗ್ರಾಮದ ರಜಿಸ್ಟ್ರಾರುಗಳನ್ನು ನೇಮಿ ಸಬಹುದು. 55. ಹಾಗೆ ನೇಮಿಸುವ ಸ್ಥಳಗಳಲ್ಲಿನ ಬೇಸಾಯಗಾರರಿಗೆ ಸಂಬಂಧ ಪಡುವ ಲೇವಾದೇವಿ, ಸ್ಥಿರಸೊತ್ತಿನ ವ್ಯವಹಾರ, ಇವುಗಳಿಗೆ ಸಂಬಂಧಪಡುವ ಕಾಗದ ಪತ್ರಗಳೆಲ್ಲವೂ ಆ ರಜಿಸ್ಟ್ರಾರರ ಇದಿರಿಗೆ ಬರೆಯಲ್ಪಟ್ಟು ಅವರಲ್ಲಿ ರಜಿಸ್ಟರ್ ಮಾಡಿ ಸಲ್ಪಡಬೇಕು. ಇಲ್ಲದಿದ್ದರೆ ಅವು ಪ್ರಯೋಜನಕ್ಕೆ ಬಾರವು. ಈ ರಜಿಸ್ಟ್ರೇಷನ್ ಸಬ್ ರಜಿಸ್ಟ್ರಾರರ ರಜಿಸ್ಟ್ರೇಷನಿಗೆ ಸಮನಾಗಿರುವುದು. 55, 63.

ಮಾಮಲ್ದಾರ ಆಕ್ಟ್.

ಮಾಮಲ್‌ದಾರರು = ತಾಸಿಲ್‌ದಾರರು = ಅಮಲ್‌ದಾರರು.

ಈ ಆಕ್ಟು ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿ ಜಾರಿಯಲ್ಲಿದೆ.

ಜಮೀನು, ಮರ, ನೀರು ಇವುಗಳ ವಿಷಯದಲ್ಲಿ ಜನರು ಕೋರ್ಟಿನಲ್ಲಿ ದಾವಾ ಮಾಡದೆ ತಾವೇ ಅತಿಕ್ರಮಪ್ರವೇಶಮಾಡುವುದು, ಅನುಭೋಗಕ್ಕೆ ಆತಂಕಪಡಿಸು ವುದು, ಮತ್ತೂ ಸಾಗುವಳಿ ವಾಯಿದೆಯು ಕಳೆದ ಬಳಿಕ ಜಮೀನನ್ನು ಬಿಡದೆಹೋಗು ವುದು, ಇಂತಹ ವ್ಯಾಜ್ಯಗಳನ್ನು ಅಮಲ್ದಾರರು (ತಾಸಿಲ್‌ದಾರರು) ಸಂಕ್ಷಿಪ್ತವಿಚಾರಣೆ ಮಾಡಿ, ಸ್ಥಳಗಳನ್ನು ಆಜಮಾಷ್ ಮಾಡಿ, ತಾವೇ ಆದರೂ, ಗ್ರಾಮದ ನೌಕರರಿಂದ ಲಾದರೂ ಅತಿಕ್ರಮಪ್ರವೇಶಮಾಡಿದವರಿಂದ, ಅಥವಾ, ವಾಯಿದೆಯಾದ ಬಳಿಕ ಸ್ವಾಧೀನ ಬಿಟ್ಟುಕೊಡದವರಿಂದ ಅರ್ಹರಾದವರಿಗೆ ಅವುಗಳ ಸ್ವಾಧೀನವನ್ನು ಕೊಡಿಸ ಬಹುದು. ಮತ್ತೂ ಅನುಭೋಗಕ್ಕೆ ಆತಂಕವುಂಟುಮಾಡದಂತೆ ಇಂಜಂಕ್ಷನ್ನಿನ ಮೂಲಕ ನಿರೋಧಿಸಬಹುದು.

ನೋಟು:—

(ಜಮೀನು, ನೀರು, ಮರ ಇವುಗಳ ಸ್ವತ್ವಾಧಿಕಾರ ಅನುಭವಗಳ ನಿದರ್ಶನದ ರಿಕಾರ್ಡುಗಳು ರೆವಿನ್ಯೂ ಇಲಾಖೆಯಲ್ಲೇ ಇರುವುದರಿಂದಲೂ, ಇವುಗಳು ಸ್ವಭಾವತಃ ರೆವಿನ್ಯೂ ಅಧಿಕಾರಕ್ಕೇ ಒಳಪಟ್ಟಿ ರುವುದರಿಂದಲೂ, ಪ್ರತಿ ಗ್ರಾಮದಲ್ಲೂ ರೆವಿನ್ಯೂ ಅಧಿಕಾರಿಗಳು ಇರುವುದರಿಂದಲೂ ಮತ್ತೂ ಆ ಆ ಸ್ಥಳದ ವಿದ್ಯಮಾನಗಳು ರೆವಿನ್ಯೂ ಅಧಿಕಾರಿಗಳಿಗೆ ತಿಳಿದೇ ಇರುವುದರಿಂದಲೂ, ಈ ತರದ ವ್ಯಾಜ್ಯಗಳ ನಿಶ್ಚಯತ್ವವನ್ನು ಕಂಡುಹಿಡಿಯಲೂ, ವ್ಯಾಜ್ಯಗಳನ್ನು ಜಾಗ್ರತೆಯಾಗಿ ತೀರ್ಮಾನಿಸಲೂ, ಆರ್ಡರನ್ನು ಸಾಧಕವಾಗಿಯೂ ಖಂಡಿತವಾಗಿಯೂ ಜಾರಿಮಾಡಲೂ ರೆವಿನ್ಯೂ ಇಲಾಖೆಯವರಿಗಿರುವ ಸೌಲಭ್ಯವು ಸಿವಿಲ್, ಕ್ರಿಮಿನಲ್ ಕೋರ್ಟಿನವರಿಗೆ ಇಲ್ಲ.)

ಲ್ಯಾಂಡ್ ರಿಕಾರ್ಡ್ಸ್ ಆಫ್ ರೈಟ್ಸ್ ಆಕ್ಟ್

ಭೂಮಿಯ ಹಕ್ಕುಬಾಧ್ಯತೆಗಳ ನಿದರ್ಶನಲೇಖನದ ಆಕ್ಟು.

ಈ ಆಕ್ಟು ಮೊಂಬಾಯಿ ಪ್ರೆಸಿಡೆನ್ಸಿಯಲ್ಲಿ ಮಾತ್ರ ಜಾರಿಯಲ್ಲಿದೆ.

ಈ ಕೆಳಗೆ ವಿವರಿಸುವ ಸಂಗತಿಗಳನ್ನು ಕುರಿತು ಪ್ರತಿ ಗ್ರಾಮದ ಪ್ರತಿ ಭೂಮಿಯ ವಿಷಯದಲ್ಲೂ ರಿಕಾರ್ಡನ್ನು (ಲೇಖನಪ್ರಮಾಣವನ್ನು) ಬರೆದಿಡಬೇಕು:—ಪ್ರತಿ ಭೂಮಿಯ ಮಾಲೀಕದಾರರು, ಹಿಡುವಳಿದಾರರು, ಆಧಾರಭೋಗ್ಯದಾರರು, ಸಾಗುವಳಿದಾರರು, ಅವುಗಳ ಕಂದಾಯ, ಯಾ, ರೆಂಟನ್ನು ಇನಾಂ ಆಗಿ ಅಥವಾ ಇತರ ವಿಧವಾಗಿ ಹೊಂದಲರ್ಹರಾದವರು, ಇವರ ಹೆಸರು, ಇವರ ಹಕ್ಕುಬಾಧ್ಯತೆಗಳ ವಿವರ, ಇವರಿಗೆ ಅಥವಾ ಇವರಿಂದ ಸಲ್ಲುವ, ಅಥವಾ ಸಲ್ಲಬೇಕಾದ ಕಂದಾಯ, ಯಾ, ಗೇಣಿ ಇಂತಿಷ್ಟು ಸಂಗತಿಗಳನ್ನೂ ಮತ್ತು ಆಗಾಗ್ಗೆ ವಿಧಿಸಲ್ಪಡುವ ಇತರ ಸಂಗತಿಗಳನ್ನೂ ರಿಜಿಸ್ಟರಿನಲ್ಲಿ ಬರೆದಿಡಬೇಕು. 3. ಪ್ರತಿ ಗ್ರಾಮದ ಜಮೀನಿನ, ಅಥವಾ ಜಮೀನಿನ ಕಂದಾಯದ, ಯಾ, ಗೇಣಿಯ ಹಕ್ಕನ್ನು ವಾರಿಸ್, ಅತಿಜೀವಿತ, ಪಾಲುಪಾರಿಖತ್ತು, ಕ್ರಯ, ದಾನ, ಆಧಿ, ಗೇಣಿ ಇತ್ಯಾದಿ ಸಂಭವಗಳ, ಯಾ, ವ್ಯವಹಾರಗಳ ಮೂಲಕ ಹೊಂದುವ ಪ್ರತಿ ಮನುಷ್ಯನು ಮತ್ತು ಅಂತಹ ಆಧಿ, ಗೇಣಿಗಳ ನಿವೃತ್ತಿಯ ಹಕ್ಕನ್ನು ಹೊಂದುವ ಪ್ರತಿ ಮನುಷ್ಯನು ಈ ಸಂಗತಿಗಳನ್ನು ಗ್ರಾಮದ ಕರಣಿಕನಿಗೆ ತಿಳಿಸಬೇಕು. 4. ಹೀಗೆ ತಿಳಿಸದಿದ್ದರೆ 25 ರೂ. ವರೆಗಿನಷ್ಟು ಜುಲ್ಮಾನೆಕೊಡಲು ಬದ್ಧನಾಗುತ್ತಾನೆ. 8. ಮತ್ತು ಹಾಗೆ ತಿಳಿಸಲ್ಪಡದಿರುವ ಸಂಗತಿಗಳನ್ನು ರೆವಿನ್ಯೂ ಅಧಿಕಾರಿಗಳು ಗ್ರಾಮಾಧಿಕಾರಿಗಳ ಮೂಲಕ ತಿಳಿದುಕೊಳ್ಳಬೇಕು. ಮತ್ತು ಈ ಸಂಗತಿಗಳನ್ನು ತಿಳಿದಕೂಡಲೆ ಅಧಿಕಾರಿಗಳು ಅವುಗಳನ್ನು ಕುರಿತು ತತ್ಸಂಬಂಧವುಳ್ಳವರೆಲ್ಲರಿಗೂ ನೋಟೀಸ್ ಕೊಟ್ಟು ಪ್ರಸಿದ್ಧಪಡಿಸಬೇಕು. ಬಳಿಕ ಅಂತಹ ಜನರು ಮಾಡುವ ಆಕ್ಷೇಪಗಳನ್ನು ಮೇಲ್ಪಟ್ಟಧಿಕಾರಿಗಳು ಕೇಳಿ ಅವುಗಳನ್ನು ರಿಜಿಸ್ಟರ್ ಮಾಡಿಕೊಳ್ಳಲೋ, ಮಾಡದಿರಲೋ ಗ್ರಾಮಾಧಿಕಾರಿಗಳಿಗೆ ಆರ್ಡರುಮಾಡಿ ಹಾಗೆ ಮಾಡಿಸಬೇಕು. ಇಂತಹ ಹಕ್ಕಿನ ವಿಷಯದಲ್ಲಿ ಕೋರ್ಟುಕಚ್ಚೇರಿಗಳಲ್ಲಿ ಮಾಡುವ ದಾವಾ ಮತ್ತೂ ಅರ್ಜಿಗಳೊಡನೆ ಈ ರಿಜಿಸ್ಟರಿನ ಯಕ್ಸ್‌ಟ್ರಾಕ್ಟನ್ನು ಹಾಜರ್ಮಾಡದಿದ್ದರೆ ಆ ದಾವಾ, ಯಾ, ಅರ್ಜಿಯನ್ನು ಹಿಡಿಯುವುದಿಲ್ಲ. ಈ ಯಕ್ಸ್‌ಟ್ರಾಕ್ಟನ್ನು ಮುಫತ್ತಾಗಿ ಕೊಡಬೇಕು.

ನೋಟು:—

(ಈ ಜಮೀನುಗಳ ಹಕ್ಕುಬಾಧ್ಯತೆಗಳು ಮುಲ್ಕಿ ಲಾ ಪ್ರಕಾರವಾಗಲಿ, ಶಾರೀರಕ ಲಾ ಪ್ರಕಾರವಾಗಲಿ, ಅನ್ಯೋನ್ಯಸಮಯಗಳ ಪ್ರಕಾರವಾಗಲಿ ಜನರಿಗೆ ಬಂದಕೂಡಲೆ, ರೆವಿನ್ಯೂ ಅಧಿಕಾರಿಗಳ ಸೂಕ್ಷ್ಮವಿಚಾರಣೆಗೊಳಪಟ್ಟು, ಅವುಗಳ ವಿಷಯವಾದ ಲೇಖನನಿದರ್ಶನಗಳು ಸರ್ಕಾರದಲ್ಲಿ ಇಡಲ್ಪಡುವುದರಿಂದ, ದುರ್ವ್ಯಾಜ್ಯಗಳು ಹುಟ್ಟುವುದಕ್ಕೆ ಅವಕಾಶವಿಲ್ಲ; ಒಂದುವೇಳೆ ಹುಟ್ಟಿದರೂ, ಬಹು ಸುಲಭವಾಗಿ ನಿಶ್ಚಯವನ್ನು ಕಂಡುಹಿಡಿದು ವ್ಯವಸ್ಥೆಮಾಡಬಹುದು.)

ಆಧಾರಭೋಗ್ಯದಾರರು ಒಂದಷ್ಟು ಫೀಜನ್ನು ಕೊಟ್ಟು ತನಗಾಗಿರುವ ಆಧಾರಭೋಗ್ಯಗಳ ಸಂಗತಿಗಳನ್ನು ತಾಲ್ಲೂಕು ರೆವಿನ್ಯೂ ರಜಿಸ್ಟರಿನಲ್ಲಿ ದಾಖಲ್ಮಾಡಿಸಿಕೊಳ್ಳಬಹುದೆಂಬ ಲಾವು ಇತರ ದೇಶಗಳಲ್ಲೂ ಇರುತ್ತದೆ. ಆದರೆ ಇದು ಐಚ್ಛಿಕವಾಗಿದೆಯೇ ಹೊರತು ನಿರ್ಬಂಧವಲ್ಲ.

ಮದ್ರಾಸಿನಲ್ಲಿ ಮೂಲಿ ಆಸ್ತಿಗಳ (ಇನಾಂ, ಜಹಗೀರಿ, ಜಮೀನುದಾರಿ) ಗ್ರಾಮಗಳಲ್ಲಿ ಭೂಮಾಲೀಕರು ರೈತರು ಮೊದಲಾದವರಿಗಿರುವ ಹಕ್ಕುಬಾಧ್ಯತೆಗಳನ್ನು ಸರ್ಕಾರದವರು ಸರ್ವೆ ಮೂಲಕ ರಿಜಿಸ್ಟರ್ ಮಾಡಿಸಬಹುದು.

ಸಿವಿಲ್ ಪ್ರೊಸೀಜರ್ ಕೋಡು.

ಹಳೆ 320—327, ಹೊಸ 68–3 ನೇ ಷೆಡ್ಯೂಲ್.

ಸ್ಥಿರಸ್ವೊತ್ತಿಗೆ ಸಂಬಂಧಪಟ್ಟ ಕೆಲತರದ ಡಿಕ್ರಿಗಳನ್ನು ಕಲೆಕ್ಟರು ಜಾರಿಮಾಡುವಂತೆ ಗೌವರ್ನಮೆಂಟಿನವರು ಹುಕುಂ ಮಾಡಬಹುದು. ಹಾಗೆ ಮಾಡಿದರೆ, ಕಲೆಕ್ಟರು ಆ ಸ್ವೊತ್ತುಗಳನ್ನು ಹರಾಜುಮಾಡುವುದು, ಭೋಗ್ಯಮಾಡುವುದು, ಯಾ, ಸಾಗುವಳಿಗೆ ಕೊಡುವುದು, ಅಥವಾ ತಮ್ಮಲ್ಲಿಯೇ ಕೆಲಕಾಲ ಇಟ್ಟು ಮ್ಯಾನೇಜುಮಾಡುವುದು ಈ ಮೊದಲಾದ ವ್ಯವಹಾರಗಳಿಂದ ದೇಣೆದಾರನ ಮೇಲೆ ಹೊಂದಲ್ಪಟ್ಟ ಡಿಕ್ರಿಗಳನ್ನು ಸಮಾಧಾನಮಾಡುವರು.

ಅರ್ಥಸಹಾಯಕವಾದ ಖಾನೂನುಗಳು.

ಭೂಮಿಯೂ, ಉದ್ಯೋಗವೂ, ದ್ರವ್ಯವೂ ಈ ಮೂರು ಕೃಷಿಗೆ ಬೇಕಲ್ಲವೆ? ಸಾಧಾರಣವಾದ ನೇಗಲು, ಉಳುವ ಎತ್ತುಗಳು ಮೊದಲ್ಗೊಂಡು ವ್ಯವಸಾಯದ ಯಂತ್ರಗಳು ನಿರ್ಮಿತವಾದ ಗೊಬ್ಬರವು ಇವನ್ನು ಕೊಳ್ಳುವುದು, ಕೃಷ್ಯರ್ಥವಾದ ಜಲಾಶಯಗಳನ್ನು ಕಟ್ಟಿಸುವುದು, ಯಾವ ಫಲವತ್ತಾದ ಭೂಮಿಗಳಲ್ಲಿ ಬೇಸಾಯಗಾರರು ಇಲ್ಲವೋ ಆ ಭೂಮಿಗಳಿಗೆ ಬೇಸಾಯಗಾರರನ್ನು ಆಕರ್ಷಿಸುವುದು, ಈ ಕಾರ್ಯಗಳಿಗೆಲ್ಲಾ ದ್ರವ್ಯಬೇಕು.

ಜನಸಂಖ್ಯೆಯತಿವಿರಳವಾಗಿದ್ದ ಪೂರ್ವಕಾಲದಲ್ಲಿ ಸಾಧಾರಣೋಪಕರಣಂಗಳಿಂದ ಅತ್ಯಂತ ಫಲವತ್ತಾದ ಭೂಮಿಗಳಲ್ಲಿ ಬೆಳೆಯುತ್ತಿದ್ದ ಬೆಳೆಯು ಜನರಿಗೆಲ್ಲ ಸಾಕಾಗುತ್ತಿದ್ದುದರಿಂದ ವಿಶೇಷೋಪಕರಣಗಳಿಂದ ಫಲಹೀನಭೂಮಿಗಳನ್ನು ಬೇಸಾಯಮಾಡಬೇಕಾದ ಅವಶ್ಯಕತೆಯಿರಲಿಲ್ಲ. ಆದುಕಾರಣ ವಿಶೇಷದ್ರವ್ಯವೂ ಅವಶ್ಯಕವಾಗಿರಲಿಲ್ಲ ಜನರು ಹೆಚ್ಚಿರುವ ಈ ಕಾಲದಲ್ಲಿ ಫಲಹೀನಭೂಮಿಗಳನ್ನೂ ಬೇಸಾಯಮಾಡಬೇಕಾಗಿಬಂದಿರುವುದರಿಂದ ಆ ಭೂಮಿಯನ್ನು ಫಲವತ್ತಾಗಿಮಾಡಿಕೊಳ್ಳಬೋಸುಗ ವಿಶೇಷ ದ್ರವ್ಯಬೇಕು ಬೇಸಾಯಗಾರರಲ್ಲಿ ದ್ರವ್ಯವಿಲ್ಲ. ಬೇಸಾಯಗಾರರಿಂದ ಹೆಚ್ಚಾಗಿ ಬೆಳೆಯಿಸುವುದು ಇತರರ ಸ್ವಾರ್ಥಕ್ಕೆ ಬೇಕಾಗಿರುವುದರಿಂದ ಇತರರು ಅವರಿಗೆ ದ್ರವ್ಯಸಹಾಯವನ್ನು ಮಾಡಲೇಬೇಕು. ಇದೊಂದು ಸಾಮಾಜಿಕ

ಕರ್ತವ್ಯ.[1] ಸಮಾಜಿಕಕರ್ತವ್ಯವನ್ನು ಪ್ರಜೆಗಳೇ ನೆರವೇರಿಸಲು ಅವರಿಗೆ ಶಕ್ತಿಯಿಲ್ಲದರಿಂದಲೂ, ಮತ್ತೂ ಒಂದುವೇಳೆ ಅವರು ಶಕ್ತರಾಗಿರುವದಾದರೂ ಅನೇಕ ಕಾರ್ಯಗಳ ವಿಷಯದಲ್ಲಿ ಅವರು ಒಟ್ಟುಗೂಡಿ ನಡೆಯಿಸುವದು ಕಾರ್ಯಸಾಧಕವಲ್ಲದರಿಂದಲೂ ಸರ್ಕಾರವು ಏರ್ಪಟ್ಟಿತು. ಸರ್ಕಾರದವರು ಕೋರ್ಟು, ಪೋಲೀಸು, ಈ ಶಾಖೆಗಳ ಮೂಲಕ ನೆರವೇರಿಸುವ ಧರ್ಮಕರ್ತವ್ಯಕ್ಕಿಂತಲೂ ಮರಾಮತ್ ಇಲಾಖೆಯ ಮೂಲಕ ನೆರವೇರಿಸುತ್ತಿರುವ ಅರ್ಥಸಾಧಕಕರ್ತವ್ಯವೇ ನಿತ್ಯವೂ ಮುಖ್ಯವೂ ಆದುದು. ಹೇಗೆಂದರೆ, ಒಂದಾನೊಂದು ರಾಷ್ಟ್ರದವರು ಪೂರ್ಣಸತ್ಯಸಂಧರಾದರೆ, ಆ ದೇಶದ ಕೋರ್ಟುಗಳ, ಪೋಲೀಸಿನ ಶಾಖೆಗಳನ್ನು ತೆಗೆದುಹಾಕಿಬಿಡಬಹುದು. ಎಲ್ಲ ದೇಶದವರೂ ಒಳ್ಳೆಯವರಾದರೆ ಸೈನಿಕಶಾಖೆಯ ಅವಶ್ಯಕತೆಯೂ ತಪ್ಪುವದು. ಆದರೆ ಪ್ರಜೆಗಳು ಎಷ್ಟು ಸತ್ಯವಂತರಾದರೂ ರೋಡುಗಳನ್ನು ಮಾಡುವದು, ಪೋಸ್ಟಾಫೀಸಿನ ಕಾರ್ಯ, ಕೆರೆಕಾಲ್ವೆಗಳ ಕಾರ್ಯ, ಇಂತಹ ಅರ್ಥಸಾಧಕಕಾರ್ಯಗಳ ಶಾಖೆಗಳನ್ನು ಸರ್ಕಾರದವರು ಶಾಶ್ವತವಾಗಿ ನಡೆಯಿಸಲೇಬೇಕು; ಇಲ್ಲವಿದ್ದರೆ ಕಾರ್ಯಸಾಧಕವಾಗುವದಿಲ್ಲ. ಏಕೆಂದರೆ, ಅಲ್ಪಭಾಗದ ಜನರ ಅನುಮತಿಗೂ ಅನುಕೂಲಕ್ಕೂ ಲಕ್ಷ್ಯಕೊಡದೆ ವಿಶಿಷ್ಟ ಪ್ರಜೆಗಳನ್ನೂ ಬಲಾತ್ಕರಿಸಲಿಕ್ಕೆ ಯಾರಿಗೆ ಅಧಿಕಾರವಿರುವದೋ ಅಂತಹರು ಮಾತ್ರ ಮೇಲೆ ವಿವರಿಸುವ ಕಾರ್ಯಗಳನ್ನು ಮಾಡಶಕ್ತರು; ಅಂತಹ ಅಧಿಕಾರವು ಸರ್ಕಾರಕ್ಕೆ ಮಾತ್ರವಿರುತ್ತದೆ. ಆದುಕಾರಣ ಸಾಮಾಜಿಕಕರ್ತವ್ಯಗಳು ಸರ್ಕಾರಕ್ಕೇ ಸೇರಿದುವುಗಳು. ಇವು ಅರ್ಥಸಾಧಕ ಧರ್ಮಸಾಧಕವೆಂದು ಎರಡು ವಿಧದುವುಗಳಾಗಿರುತ್ತವೆಯಷ್ಟೆ. ಅಸಭ್ಯವಾದ ಪೂರ್ವಕಾಲದಲ್ಲಿನ ಸರ್ಕಾರದವರಿಗೆ ಧರ್ಮಸಾಧಕಕರ್ತವ್ಯವೇ ಹೆಚ್ಚಾಗಿದ್ದಿತು; ಅರ್ಥಸಾಧಕಕಾರ್ಯವಾದರೋ ಬಹು ಅಲ್ಪವಾಗಿದ್ದಿತು. ಜನರ ಬಾಹುಳ್ಯವುಂಟಾದ ಹಾಗೆಲ್ಲಾ ಅವರ ಸಭ್ಯತೆಯೂ ಸಾಮಾಜಿಕಗುಣವೂ ಅಧಿಕವಾಗುತ್ತವೆ; ಆದರೆ ಅನ್ಯಾಯವಾದರೊ ನ್ಯೂನವಾಗುತ್ತದೆ. ಆದುಕಾರಣ ಅಧುನಿಕರಾಜ್ಯಗಳ ಸರ್ಕಾರದವರಿಗೆ ಧಾರ್ಮಿಕಕರ್ತವ್ಯವು ಕಡಮೆಯಾಗುತ್ತಲೂ, ಅರ್ಥಸಾಧಕಕರ್ತವ್ಯಗಳು ಹೆಚ್ಚುತ್ತಲೂ ಬಂದಿವೆ. ನಾಗರಿಕರಾಜ್ಯಗಳೆಲ್ಲವೂ ಮತಸಂಬಂಧವಾದ ಕಾರ್ಯಗಳನ್ನೂ, ಶಿಕ್ಷಣ (ಸ್ಕೂಲ್, ಕಾಲೇಜ್)ದ ಕಾರ್ಯದೊಳಗೆ ಪ್ರೌಢಶಿಕ್ಷಣದ ಕಾರ್ಯವನ್ನೂ ಪ್ರಜೆಗಳಿಗೇ ಬಿಡುತ್ತಲೂ, ಕೋರ್ಟು, ಪೋಲೀಸಿಗೆ ಸಂಬಂಧಪಟ್ಟ ಕೆಲವಧಿಕಾರಗಳನ್ನು ಪ್ರಜೆಗಳಿಗೇ ವಹಿಸುತ್ತಲೂ, ಧರ್ಮಸಾಧಕಕೆಲಸಗಳನ್ನೂ ಕಡಮೆ ಕಡಮೆ ಮಾಡಿಕೊಳ್ಳುತ್ತಿದ್ದಾರೆ; ಮತ್ತೂ ಇವುಗಳಿಗಾಗಿ ತಗಲುತ್ತಿದ್ದ ಶ್ರಮವನ್ನೂ ಕಾಲವನ್ನೂ ದ್ರವ್ಯವನ್ನೂ ಅರ್ಥಸಾಧಕಕಾರ್ಯಗಳಿಗೇ ವಿನಿಯೋಗಿಸುತ್ತಿದ್ದಾರೆ. ಏಕೆಂದರೆ, ಅರ್ಥಸಾಧನೆಯ ಕೆಲಸವೇ ಸರ್ಕಾರದವರ ಬುದ್ಧಿಶಕ್ತಿಗಳನ್ನೆಲ್ಲಾ ಅಪೇಕ್ಷಿ

---

1. ಉಪಭೋಜ್ಯವಸ್ತುಗಳ ಉತ್ಪಾದನೆಗಾಗಿ ಮಾಡುವ ಕಾರ್ಯಗಳಿಗೆ ಅರ್ಥಸಾಧಕಕಾರ್ಯವೆಂತಲೂ, ದುಷ್ಟರನ್ನು ಶಿಕ್ಷಿಸುವ, ಶಿಷ್ಟರನ್ನು ರಕ್ಷಿಸುವ ಕಾರ್ಯಕ್ಕೆ ಧರ್ಮಸಾಧಕಕಾರ್ಯವೆಂತಲೂ, ಅನೇಕರು ಒಟ್ಟಿಗೆ ಸೇರಿ ಮಾಡುವ ಕಾರ್ಯಕ್ಕೆ ಸಾಮಾಜಿಕಕಾರ್ಯವೆಂತಲೂ ಹೇಳಬಹುದು. ಕಾರ್ಯವೆಂದರೆ ಕರ್ತವ್ಯ.

ಸುತ್ತಿದೆ. ಮನುಷ್ಯನಿಗೆ ಅನ್ನ ಬಟ್ಟೆ ಎರಡು ಸಿಕ್ಕಿದ ಬಳಿಕ ಮಾತ್ರ ಪರಲೋಕಸಾಧನೆಗವಶ್ಯಕವಾದ ಮತಬೋಧೆ ನೀತಿಬೋಧೆಗಳು ಬೇಕು.

"ಶರೀರಮಾದ್ಯಂ ಖಲು ಧರ್ಮಸಾಧನಂ."

ಹೊಟ್ಟೆಗಿಲ್ಲದವನಿಗೆ ಮತಧರ್ಮ ನೀತಿಧರ್ಮಗಳೆಲ್ಲವೂ ಮರೆತುಹೋಗುತ್ತವೆ. ಅರ್ಥಸಾಧಕಕಾರ್ಯಗಳೊಳಗೆಲ್ಲ ಆಹಾರೋತ್ಪತ್ತಿಸಾಧಕಕಾರ್ಯವೇ ಮುಖ್ಯವಾದುದು. ಇತರ ಉಪಭುಜ್ಯಪದಾರ್ಥಗಳ ಉತ್ಪಾದನೆಯ ಕಾರ್ಯಗಳು ಸಹ ಆಹಾರಸಂಪಾದನೆಗಾಗಿಯೇ ವಿಶೇಷ ಮಾಡಲ್ಪಡುತ್ತವೆ. ಈ ಉಪಭುಜ್ಯಪದಾರ್ಥಗಳಾದರೋ ಭೇದಗಳಲ್ಲೂ ಪರಿಮಾಣದಲ್ಲೂ ಪೂರ್ವಕ್ಕಿಂತ ಈಗ ಸಹಸ್ರಪಾಲಾಗಿ ಹೆಚ್ಚಿವೆ. ಪೂರ್ವದಲ್ಲಿ ಚಕ್ರವರ್ತಿಗಳಿಗೂ ದುರ್ಲಭ್ಯವಾಗಿದ್ದ ಹಲವುತರದ ಉಪಭುಜ್ಯ-ಪದಾರ್ಥಗಳನ್ನು ಈಗ ಸಾಮಾನ್ಯರೂ ಭೋಗಿಸುತ್ತಾರೆ. ಈಗ ದುರ್ಲಭವಾಗಿರುವ ಪದಾರ್ಥ ಒಂದೇ ಒಂದು. ಆ ಪದಾರ್ಥವಾದರೋ ಪ್ರಾಣಾಧಾರಕವಾದುದು. ಆ ಪದಾರ್ಥ ಒಂದಿಲ್ಲದಿದ್ದರೆ ಇತರ ಯಾವದ್ವಿಶಿಷ್ಟಪದಾರ್ಥಗಳೂ ಅನವಶ್ಯಕವಾಗುತ್ತವೆ.

ಅನ್ನದ ನ್ಯೂನತೆಗೆ ಸರ್ಕಾರದವರು ಸ್ವಲ್ಪವೂ ಜವಾಬ್ದಾರರಲ್ಲ. ಅನ್ನದ ನ್ಯೂನತೆಯು ಜನಸಂಖ್ಯೆ ಹೆಚ್ಚಾದುದರಿಂದ ಉಂಟಾಗಿದೆ. ಆದರೆ ಸ್ವಸಂರಕ್ಷಣೆಗಾಗಿ ಪೃಥಕ್ ಜನವು ಹೇಗೆ ವ್ಯವಹರಿಸುತ್ತದೋ ಹಾಗೆ ಪ್ರಜೆಗಳ ಸಂರಕ್ಷಣೆಗಾಗಿ ಸರ್ಕಾರವು ವ್ಯವಹರಿಸಬೇಕು. ಮನುಷ್ಯನು ಮೊದಲು ಅನ್ನವನ್ನು ಹುಟ್ಟಿಸಿಕೊಳ್ಳಲಿಕ್ಕೆ ಪ್ರಯತ್ನಿಸುವನು. ಅವನಧೀನದಲ್ಲಿರುವ ಶಕ್ತಿ ಬುದ್ಧಿ ದ್ರವ್ಯಗಳನ್ನೆಲ್ಲಾ ಇದಕ್ಕಾಗಿ ಮೊದಲು ವೆಚ್ಚಮಾಡುವನು. ಈ ಉದ್ದೇಶಕ್ಕಾಗಿ ಮಿಕ್ಕ ಅವುಗಳನ್ನು ಇತರ ಉದ್ದೇಶಗಳಲ್ಲಿ ವಿನಿಯೋಗಿಸುವನು. ಹಾಗೇ ಸರ್ಕಾರವು ತಮ್ಮ ಅಧೀನದಲ್ಲಿರುವ ಬುದ್ಧಿ ಶಕ್ತಿ ದ್ರವ್ಯಗಳನ್ನು ಪ್ರಜೆಗಳಿಗಾಗುವಷ್ಟು ಅನ್ನದ ಉತ್ಪಾದನೆಗಾಗಿ ವೆಚ್ಚಮಾಡಿ, ಇದಕ್ಕಾಗಿ ಮಿಕ್ಕುದನ್ನು ಮಾತ್ರ ಇತರ ಕಾರ್ಯಗಳಿಗೆ ವ್ಯಯಮಾಡತಕ್ಕುದಾಗಿರುತ್ತದೆ.

ಮತ್ತೂ ಇಂಡಿಯ ದೇಶದ ಪ್ರಜೆಗಳೊಳಗೆ ಸೇಕಡ 80 ಜನವು ಕೃಷಿಯಿಂದ ಜೀವಿಸತಕ್ಕವರಾಗಿದ್ದಾರೆ.

ಕರ್ಜನ್ ಪ್ರಭುಗಳು ಹೇಳುವಂತೆ "ಸೇಕಡ 80 ರಷ್ಟು ಜನಸಂಖ್ಯೆಯುಳ್ಳ, ರಾಷ್ಟ್ರದ ಅಸ್ಥಿಯೂ ಸ್ನಾಯುವೂ ಆದ, ರಾಜ್ಯಾದಾಯದೊಳಗೆ ಕಾಲುಭಾಗವನ್ನು ಕೊಡುವ ರೈತರ ಪೋಷಣೆಯೇ ಪ್ರತಿ ಸರ್ಕಾರದ ಮೊದಲಿನ ಮತ್ತೂ ಕೊನೆಯ ಉದ್ದೇಶಗಳಾಗಿರಬೇಕು" ರೈತರ ಪೋಷಣೆಯೆಂದರೆ ಪ್ರಜೆಗಳಿಗೆಲ್ಲರಿಗೂ ಅನ್ನೋತ್ಪಾದನೆಮಾಡಿಕೊಡುವುದು. ಪ್ರಜೆಯಿದ್ದರೆ ಸರ್ಕಾರ. ಅನ್ನವಿದ್ದರೆ ಪ್ರಜೆ. "ವೃಷ್ಟೇರನ್ನಂ ತತಃಪ್ರಜಾಃ." ಆದುಕಾರಣ ಅನ್ನವಿದ್ದರೆ ಸರ್ಕಾರ. ಈ ಉದ್ದೇಶಕ್ಕೆ ಸಾಕಾಗಿ ಉಳಿದುದನ್ನು ಮಾತ್ರ ಜನರಿಗೆ ಪರಲೋಕಪ್ರಾಪ್ತಿಯನ್ನೈದಿಸುವ ಮುಜರಾಯಿ ಇಲಾಖೆಗಳಂತಹಗಳಿಗೆ ಉಪಯೋಗಿಸತಕ್ಕುದಾಗಿರುತ್ತದೆ. ಆದರೆ ಸರ್ಕಾರದವರು ಈ ತತ್ವವನ್ನು

ರಿತು ಈಗೀಗ ಕಾರ್ಯನಡೆಯಿಸುತ್ತಿದ್ದಾರೆ. ಜನರು ಮಾತ್ರ ಬುದ್ಧಿವಂತಿಕೆಯಿಂದ ಸರ್ಕಾರದವರ ಪ್ರಯತ್ನಗಳನ್ನು ಉಪಯೋಗಕ್ಕೆ ತಂದುಕೊಳ್ಳಬೇಕಾಗಿದೆ.

ಸರ್ಕಾರದವರು ಬೇಸಾಯಕ್ಕಾಗಿ ಹಣ ವೆಚ್ಚಮಾಡುವ ವಿಧಾನಗಳು ಮೂರು : (1) ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿಸಿ ಲಕ್ಷಾಂತರ ಎಕರೆಗಳ ಭೂಮಿಯನ್ನು ನೀರಾವರಿಯ ಸಾಗುವಳಿಗೆ ಯೋಗ್ಯವಾಗಿ ಮಾಡುವುದು. (2) ರೈತರೇ ಅವರವರ ಜಮೀನನ್ನು ಫಲವತ್ತತೆಗೆ ತಂದುಕೊಳ್ಳಲು ಸರ್ಕಾರದವರು ತಾವೇ ಖುದ್ದಾಗಿ ರೈತರಿಗೆ ಸಾಲಕೊಡುವುದು (3) ರೈತರೇ ಅನ್ಯೋನ್ಯವಾಗಿ ಸಹಾಯ ಮಾಡಿಕೊಳ್ಳಲು ಮಾಡುವ ಪ್ರಯತ್ನಗಳಿಗೆ ಸರ್ಕಾರದವರು ತೆರಿಗೆಯ ವಿನಾಯಿತಿ, ಋಣಸಹಾಯ, ಇವುಗಳ ಮೂಲಕ ಪ್ರೋತ್ಸಾಹಮಾಡುವುದು.

(1) ರಾಜ್ಯಾದಾಯದ ಮುಖ್ಯವಾದ ಭಾಗವನ್ನು ಬೇಸಾಯದ ಅಭಿವೃದ್ಧ್ಯರ್ಥವಾಗಿ ಸರ್ಕಾರದವರು ವೆಚ್ಚಮಾಡಲು ಸಿದ್ಧರಾದರೆ ಅದನ್ನು ಸಾಧಕವಾಗಿ ವಿನಿಯೋಗಮಾಡಬಹುದಾದ ನೂರಾರು ರೀತಿಗಳನ್ನು ಕೃಷಿಶಾಸ್ತ್ರಜ್ಞರು ಬೋಧಿಸಿಕೊಡುವರು. ಮೇಲೆ ಕಂಡ 1ನೇ ವಿಧದ ಕಾರ್ಯಗಳನ್ನು ಸರ್ಕಾರದವರು ತಮ್ಮ ಇಂಜಿನೀರ್ ಇಲಾಖೆಯವರ ಮೂಲಕ ಮಾಡಿಸುತ್ತಾರೆ. ಭೂಮಿಯ ಮೇಲೆ ಬೀಳುವ ಮಳೆಯ ನೀರಿನ ಪೈಕಿ ವಿಶೇಷವಾದ ಭಾಗವು ನದಿಗಳ ಮೂಲಕ ಹರಿದುಹೋಗಿ ಯಾರಿಗೂ ಪ್ರಯೋಜನವಿಲ್ಲದೆ ಸಮುದ್ರಕ್ಕೆ ಸೇರುತ್ತಿದೆ. ದ್ರವ್ಯವ್ಯಯದಿಂದ ಈ ನೀರನ್ನು ನಿಲ್ಲಿಸಿ ಇದರಿಂದ ಹೀನ ಭೂಮಿಗಳನೇಕವನ್ನು ನಿರಾವರಿಗೆ ತಿರುಗಿಸಬಹುದು. ಈ ವಿಧವಾಗಿ ವೆಚ್ಚಮಾಡಿದ ಹಣವು ಸರ್ಕಾರಕ್ಕೆ ಶಾಶ್ವತವಾದ ಆಸ್ತಿಯಾಗುತ್ತದೆ. ಆದರೆ ವಿಶೇಷವಾದ ಹಣ ಬೇಕು. ಈ ಹಣವು ಸ್ವದೇಶದಲ್ಲಿ ಸಿಕ್ಕುವುದಿಲ್ಲ. ಪಾಶ್ಚಿಮಾತ್ಯದೇಶದವರಿಂದ ಸುಲಭವಾಗಿ ಸಾಲಪಡೆಯಬಹುದು. ಭೂಮಿಯ ಫಲವತ್ತತೆಗಾಗಿ, ಅಥವಾ ಒಳ್ಳೆಯ ಭೂಮಿಯನ್ನು ಕೊಳ್ಳುವುದಕ್ಕಾಗಿ ರೈತರು ಪರರ ಒಳಿ ಸಾಲಮಾಡುವುದು ಎಷ್ಟು ಲಾಭಕರವೋ ಈ ಉದ್ದೇಶಕ್ಕಾಗಿ ಪರದೇಶದಲ್ಲಿ ಸಾಲ ಮಾಡುವುದು ಒಂದಾನೊಂದು ದೇಶದ ಸರ್ಕಾರಕ್ಕೂ ಅಷ್ಟು ಲಾಭಕರವಾಗಿರುತ್ತದೆ. ಇದರಿಂದ ಉಂಟಾಗುವ ಹೆಚ್ಚಿನ ಉತ್ಪತ್ತಿಯಿಂದ ನಿಯತಕಾಲದಲ್ಲಿ ಋಣಶೋಧನೆ ಮಾಡಿಬಿಡಬಹುದು. ಬಳಿಕ ಆಸ್ತಿಯು ಸರ್ಕಾರಕ್ಕೇ ಉಳಿದುಕೊಳ್ಳುತ್ತದೆ ದ್ರವ್ಯೋತ್ಪತ್ತಿಗವಶ್ಯಕವಾದ ಭೂಮಿಯೂ, ಹಣವೂ, ಉದ್ಯೋಗವೂ ಒಂದೇ ಕಡೆ ಇರಬೇಕಾದ ಅವಶ್ಯಕವಿಲ್ಲ. ಈ ಮೂರು ಪದಾರ್ಥಗಳ ಮಾಲೀಕರು ತಂತಮ್ಮಲ್ಲಿರುವ ಪದಾರ್ಥಗಳನ್ನು ಒಟ್ಟುಗೂಡಿಸಿ ಮನುಷ್ಯನಿಗೆ ಉಪಯುಕ್ತವಾಗುವ ಪದಾರ್ಥಗಳನ್ನು ಉತ್ಪಾದನೆಮಾಡುವುದು ಅರ್ಥಶಾಸ್ತ್ರಕ್ಕೆ ವಿಹಿತವಾಗಿದೆ. ಇಂಡಿಯದೇಶದಲ್ಲಿ ಯಥೇಚ್ಛವಾಗಿ ಭೂಮಿಯೂ ಉದ್ಯೋಗವೂ ದೊರೆಯುತ್ತವೆ. ಹಣವಿಲ್ಲದುದರಿಂದ ಈ ದೈವಾನುಗ್ರಹಗಳೆರಡು ಮನುಷ್ಯೋಪಯೋಗಕ್ಕೆ ತಕ್ಕಷ್ಟು ಬರುತ್ತಿಲ್ಲದೆ ನಿಷ್ಪ್ರಯೋಜಕವಾಗುತ್ತಿವೆ. ಆದುಕಾರಣ ಹಣವನ್ನು ಇತರ ಸ್ಥಳದಿಂದ ತಂದು ಈ ದೈವಾನುಗ್ರಹಗಳನ್ನು ಮನುಷ್ಯೋಪಯೋಗಕ್ಕೆ ತಂದುಕೊಳ್ಳುವುದು ಅವಶ್ಯಕ.

ಜನಾಕೀರ್ಣವಾದ ಗ್ರಾಮಗಳಲ್ಲಿ ಭೂಮಿಯಿಲ್ಲದೆ ಇತರರ ಜಮೀನುಗಳನ್ನು ಬೇಸಾಯಮಾಡುತ್ತಿರುವವರು ಮತ್ತು ಫಲಹೀನವಾದ ಕಲ್ಲುಭೂಮಿಗಳನ್ನು ವ್ಯವಸಾಯಮಾಡುವವರು ತಂತಮ್ಮ ಗ್ರಾಮಗಳನ್ನು ಬಿಟ್ಟು, ಈಗ ಹೊಸದಾಗಿ ತರಿಸಾಗುವಳಿಗೆ ತರಲ್ಪಟ್ಟಿರುವ ಜಮೀನುಗಳ ಬಳಿ ನಿಂತು ಅವುಗಳನ್ನು ವ್ಯವಸಾಯ ಮಾಡಲು ಇಚ್ಛಿಸಿದರೆ ಸರ್ಕಾರದವರು ಅನೇಕ ಅನುಕೂಲಗಳನ್ನು ಕಲ್ಪಿಸಿಕೊಡುತ್ತಾರೆ.

(2) ಎರಡನೆಯ ರೀತಿಯಲ್ಲಿ ಸರ್ಕಾರದವರು ಮಾಡುವ ಧನಸಹಾಯವು ತಖಾವಿಸಾಲಗಳಾಗಿವೆ. ಈ ಸಹಾಯವು ರೈತರಿಗೆ ಸುಲಭವಾಗಿ ದೊರೆಯುವುದಾದರೆ, ರೈತರಿಗೆ ಅವಶ್ಯಕವಾದ ಋಣಸಹಾಯವೆಲ್ಲಾ ಸರ್ಕಾರದಿಂದಲೇ ದೊರೆದಂತಾಗುವುದು. ಮತ್ತು ರೈತರು ಹೊತ್ತುಕೊಳ್ಳಬಹುದಾದ ಸಾಲದ ಭಾರವಾದರೋ ಅತ್ಯಂತ ಲಘುವಾದುದು. ಏಕೆಂದರೆ ಸೇಕಡ ಸಾಲೀಯಾನಾ 5 ರೂ. ನಂತೆ ಬಡ್ಡಿ, ಸಾಲತೀರಿಸಲು 30 ವರ್ಷದ ವರೆಗಿನ ವಾಯಿದೆ. ಕಂತುಗಳಾಗಿ ಸಾಲತೀರಿಸಲಾನುಕೂಲ್ಯ ಈ ಸೌಲಭ್ಯಗಳು ಋಣಿಗೆ ಮತ್ತೆಲ್ಲೂ ದೊರೆಯುವುದಿಲ್ಲ. ಆದರೆ ಈ ಸಹಾಯವು ಋಣಿಗೊದಗುವುದರಲ್ಲಿ ಬಹು ತೊಡಕಿರುತ್ತದೆ. ಇದರ ದಾರಿಯು ಬಹು ಗೂಢವೂ, ಕಂಟಕಿಯೂ, ನತೋನ್ನತವೂ, ವಕ್ರವೂ ಆಗಿದೆ. ಹೇಗೆಂದರೆ—

ಸರ್ಕಾರದವರು ಪ್ರಜೆಗಳಿಗಾಗಿ ಸಂಕಲ್ಪಿಸಿರುವ ಛತ್ರಗಳು, ಧರ್ಮಕಾರ್ಯಗಳು ಮೊದಲಾದ ಸಹಾಯಗಳ ಇರುವಿಕೆಯೇ ಹಿಂದುಳಿದ ಜಾತಿಯವರಿಗೂ ಗ್ರಾಮವಾಸಿಗಳಿಗೂ ತಿಳಿಯದು. ಕೃಷ್ಯರ್ಥದ ಸಾಲಗಳು ಕ್ಷಾಮಕಾಲದಲ್ಲಿ ನಿರ್ಗತಿಕರಿಗೆ ಕೊಡಲುದ್ದಿಷ್ಟವಾದುವು ಮಾತ್ರವೆಂದು ಬಹು ಜನ ರೈತರು ತಿಳಿದುಕೊಂಡಿದ್ದಾರೆ. ದೇಶದ ಭೂಮಿಗಳನ್ನು ಫಲವತ್ತತೆಗೆ ತರುವುದಕ್ಕಾಗಿ ಸಾರ್ವಕಾಲದಲ್ಲೂ ಕೊಡಲುದ್ದಿಷ್ಟವಾದುವೆಂದು ಅನೇಕರಿಗೆ ತಿಳಿದಿಲ್ಲ. ಏಕೆಂದರೆ, ದುರ್ಭಿಕ್ಷಕಾಲದಲ್ಲಿ ಮಾತ್ರ ಇವುಗಳಿರುವಿಕೆಯನ್ನು ಅಧಿಕಾರಿಗಳು ರೈತರ ತಿಳುವಿಕೆಗೆ ತರುತಾರ್ತೆ. ಕೃಷಿಶಾಸ್ತ್ರಜ್ಞರಾದ ಅಧಿಕಾರಿಗಳು ಗ್ರಾಮಭೂಮಿಗಳನ್ನು ಆಗಾಗ್ಗೆ ದರ್ಶಿಸುತ್ತ, ಭೂಮಿಗೆ ಫಲವತ್ತತೆಯುಂಟುಮಾಡುವ ಅವಕಾಶಗಳನ್ನೂ ಅದಕ್ಕಾಗಿ ಸರ್ಕಾರದಿಂದ ಪಡೆಯಬಹುದಾದ ಋಣಸಹಾಯವನ್ನೂ ರೈತರಿಗೆ ತಿಳಿಸುವುದರಿಂದ ಮಾತ್ರ ಈ ಸಹಾಯವನ್ನು ಉದ್ದಿಷ್ಟವಾದ ರೀತಿಯಲ್ಲಿ ರೈತರ ಉಪಯೋಗಕ್ಕೆ ತರಬಹುದು.

ಸಾಲಗಳನ್ನು ಮಂಜೂರ್ಮಾಡುವುದಕ್ಕಿಂತ ಮುಂಚೆ ಪ್ರಾರ್ಥಕರಿಗೂ ಮತ್ತೂ ಅವರ ಜಾಮೀನ್ದಾರರಿಗೂ ತಂತಮ್ಮ ಭೂಮಿಗಳ ಮೇಲೆ ಎಷ್ಟುಮಟ್ಟಿನ ಹಕ್ಕಿದೆ ಎಂಬುದನ್ನೂ ಮತ್ತೂ ಅವುಗಳಿಗಿರುವ ಪೂರ್ವಾರ್ಧಿಗಳನ್ನೂ ತಿಳಿದುಕೊಳ್ಳಬೇಕಾದುದು ಮತ್ತೂ ಅವುಗಳಿಗೆ ಕ್ರಯಕಟ್ಟುವುದು ಅವಶ್ಯಕ. ಹಕ್ಕುಬಾಧ್ಯತೆಗಳ ರಿಕಾರ್ಡಿನ ಆಕ್ಟು ಬೊಂಬಾಯಿ ಪ್ರಾಂತ್ಯದಲ್ಲಿ ಜಾರಿಯಲ್ಲಿರುವಂತೆ ಇತರ ದೇಶಗಳಲ್ಲಿಲ್ಲ. ಅದುಕಾರಣ ಗ್ರಾಮದ ಜಮೀನುಗಳ ಮೇಲೆ ಆರಾರಿಗೆ ಆವಾವ ತರದ ಹಕ್ಕುಬಾಧ್ಯತೆಗಳಿವೆ ಎಂಬುದು ಗ್ರಾಮದ ಸರ್ಕಾರಿ ರಿಕಾರ್ಡುಗಳಲ್ಲಿ ಇಲ್ಲ. ಇವುಗಳನ್ನು ತಿಳಿದುಕೊಳ್ಳಲು ಸರ್ಕಾರದವರು ವಿಸ್ತಾರವಾದ ವಿಚಾರಣೆಗೇ ತೊಡಗಬೇಕು. ರಿಜಿಸ್ಟ್ರೇಷನ್ನಿನ

ಆಫೀಸಿಗೆ ಬರೆದು ಕೆಲಸಂಗತಿಗಳನ್ನು ತಿಳಿದುಕೊಳ್ಳಬೇಕು. ಆಫೀಸಿನಿಂದ ಆಫೀಸಿಗೆ ನಡೆಯಬೇಕಾದ ಪತ್ರವ್ಯವಹಾರವು ಜಾಗ್ರತೆಯಾಗಿ ನಡೆಯುವುದಲ್ಲ. ಮತ್ತೂ ಬೇರೆ ಮಾಡಬೇಕಾದ ವಿಚಾರಣೆಯಾದರೋ ಶೀಘ್ರವಾಗಿ ನಡೆಯತಕ್ಕುದಲ್ಲ. ಇಷ್ಟು ಮಾಡಿದರೂ ಅನೇಕ ಸಂಗತಿಗಳು ಗೊತ್ತಿಗೇ ಬರುವುದಿಲ್ಲ. ಸಾಲ ವಸೂಲ್ಮಾಡಿಕೊಳ್ಳುವಾಗ ಮಾತ್ರ ಹೊರಕ್ಕೆ ಬಂದು ವಸೂಲಿಗೆ ಆತಂಕವನ್ನುಂಟುಮಾಡುತ್ತವೆ; ಅಥವಾ ಪರಿಹಾರ ಶೂನ್ಯವಾಗಿಹೋಗುತ್ತವೆ. ಜಮಾಸಿಗೆ ಕ್ರಯಕಟ್ಟುವ ಕಾರ್ಯವು ಸಹ ತೊಡಕಾದುದು. ಗ್ರಾಮದ ಪ್ರತಿಯೊಂದು ಭೂಮಿಯಲ್ಲೂ ಪ್ರತಿ ವರ್ಷವೂ ಇಷ್ಟಿಷ್ಟು ಬೆಳೆಯಾಯಿತೆಂಬುದಕ್ಕೆ ಗ್ರಾಮದ ರಿಕಾರ್ಡಿನಲ್ಲಿ ದಾಖಲೆಯಿಡುವುದಿಲ್ಲ. ಅದುಕಾರಣ ಈ ಕೆಲಸಕ್ಕೂ ದೊಡ್ಡ ವಿಚಾರಣೆಯನ್ನೇ ಇಟ್ಟುಕೊಂಡು ಪಂಚಾಯಿತಿಮಾಡಬೇಕಾಗುತ್ತದೆ. ಈ ಕಾರ್ಯವೂ ಜಾಗ್ರತೆಯಾಗಿ ಆಗತಕ್ಕುದಲ್ಲ. ಸರ್ಕಾರದ ಆಸ್ತಿಗಳೊಳಗೆ ಶಾಶ್ವತವಾದುದು ಸ್ಥಿರಾಸ್ತಿಯಾಗಿದೆ. ಈ ಆಸ್ತಿಗೆ ಬೆಲೆಕಟ್ಟಿ ಆ ಬೆಲೆಯ ದಾಖಲೆಯನ್ನು ಸರ್ಕಾರದಲ್ಲಿಡುವುದು ಬಹಳ ಉಪಯುಕ್ತ. ಈ ದಾಖಲೆಯು ಸರ್ಕಾರಿಯ ಇತರ ವ್ಯವಹಾರಗಳಿಗೂ ಬಹಳ ಉಪಯೋಗಕ್ಕೆ ಬರುತ್ತದೆ. ಪ್ರತಿ ಗ್ರಾಮದ ಜಮೀನುಗಳ ಮೇಲೆ ಪೃಥಕ್ಪ್ರಜೆಗಳಿಗಿರುವ ವಿಶಿಷ್ಟ ವಿಧವಾದ ಹಕ್ಕುಬಾಧ್ಯತೆಗಳೂ, ಮತ್ತು ಅವುಗಳಲ್ಲಿ ಪ್ರತಿ ವರ್ಷವೂ ಬೆಳೆಯುವ ಬೆಳೆಯ ಅಂದಾಜ ಇವುಗಳ ಲೇಖನಪ್ರಮಾಣಗಳನ್ನು ಪ್ರತಿ ಗ್ರಾಮದಲ್ಲಿಡುವುದು ಅವಶ್ಯಕ. ಈ ದಾಖಲೆಯನ್ನಿಡುವುದರಿಂದ ತಪಾವಿಗೆ ಸಂಬಂಧಪಡುವ ಕಾರ್ಯಗಳನ್ನು ಮಾಡಲು ಬಹು ಸುಖಕರವಾಗುವುದಲ್ಲದೆ ಸರ್ಕಾರಿಯ ಇತರ ಅನೇಕ ವ್ಯವಹಾರಗಳನ್ನೂ ಸುಲಭವಾಗಿ ನಡೆಯಿಸಬಹುದು.

ಸಿವಿಲ್ ಮತ್ತು ಕ್ರಿಮಿನಲ್ ಸಂಬಂಧದ ಕಾರ್ಯಗಳಲ್ಲಿ ಒಂದೊಂದು ಕಾರ್ಯವನ್ನು ಪೂರ್ಣವಾಗಿ ಮಾಡಿಬಿಡಲು ಒಬ್ಬೊಬ್ಬ ಅಧಿಕಾರಿಗೇ ಸಂಪೂರ್ಣ ಹಕ್ಕಿರುತ್ತದೆ. ಮತ್ತು ಹಾಗೆ ಮಾಡಲು ಅವಕಾಶವೂ ಕಲ್ಪಿಸಲ್ಪಟ್ಟಿದೆ. ಹೇಗೆಂದರೆ, ಲಕ್ಷ ರೂಪಾಯಿನ ಮೊಕದ್ದಮೆಯನ್ನು ಡಿಸ್ಟ್ರಿಕ್ಟ್ ಜಡ್ಜರು ಆದ್ಯಂತವಾಗಿ ದಾವಾ ಮೊದಲ್ಗೊಂಡು ಡಿಕ್ರಿಯನ್ನು ಜಾರಿಮಾಡುವವರೆಗೂ ತಾವೇ ಆ ಮೊಕದ್ದಮೆಗೆ ಸಂಬಂಧಪಟ್ಟ ಎಲ್ಲ ಕಾರ್ಯಗಳನ್ನೂ ಪೂರ್ಣವಾಗಿ ಮಾಡಿಮುಗಿಸಲು ಅವರಿಗೆ ಹೇಗೆ ಅಧಿಕಾರವಿದೆಯೋ, ಹಾಗೇ 10 ರೂ. ವರೆಗಿನ ಮೊಕದ್ದಮೆಯನ್ನು ಪೂರ್ಣಗೊಳಿಸಲು ಗ್ರಾಮದ ಮುನಸೀಫನಿಗೆ ಅಧಿಕಾರವಿದೆ. ಈ ಅಧಿಕಾರಿಗಳೊಳಗೆ ಪ್ರತಿಯೊಬ್ಬರಿಗೂ ತಮ್ಮಲ್ಲಿಗೆ ಬರುವ ಕಾರ್ಯಗಳನ್ನು ತಾವೇ ಇತರರ ಕೈಕಾಯದೆ ಮಾಡಿಮುಗಿಸಲು ಸಂಪೂರ್ಣ ಅಧಿಕಾರವೂ, ಮತ್ತೂ ಅವಕಾಶವೂ ಕಲ್ಪಿಸಲ್ಪಟ್ಟಿವೆ. ಮುಲ್ಕಿಯ ವಿಷಯದಲ್ಲಿ ಹೀಗಲ್ಲ. ಮೇಲ್ಪಟ್ಟಧಿಕಾರಿಗಳು ಕೀಳ್ಪಟ್ಟಧಿಕಾರಿಗಳ ಅಭಿಪ್ರಾಯವನ್ನು ಕೇಳದೆ ಅವರ ಕೈಕಾಯದೆ ಸ್ವತಃ ಮಾಡಿಮುಗಿಸುವಂತಹ ಕಾರ್ಯಗಳು ಬಹಳ ಅಪರೂಪ. ಮತ್ತೂ ಅನೇಕ ಸಂಗತಿಗಳಲ್ಲಿ ವ್ಯವಸ್ಥೆಮಾಡುವ ಅಧಿಕಾರಿಯು ಮೇಲ್ಪಟ್ಟಧಿಕಾರಿಗಳ ಅಭಿಪ್ರಾಯವನ್ನು ಕೇಳೇ ವ್ಯವಸ್ಥೆಮಾಡಬೇಕಾಗಿ ಬರುತ್ತದೆ. ಅಸಲು ಅಪೀಲುಗಳ ಅಧಿ

ಕಾರಗಳು ನಿಯತಾಧಿಕಾರಿಗಳಲ್ಲಿ ನಿಬದ್ಧಿಸಲ್ಪಟ್ಟಿಲ್ಲ. ಡಿಸ್ಟ್ರಿಕ್ಟ ಅಧಿಕಾರಿಗೆ ಮನುವೆ ಮಾಡಿಕೊಂಡರೆ, ಅವರು ಡಿವಿರ್ಷ ಅಧಿಕಾರಿಗೆ ಅದನ್ನು ಕಳುಹುವರು. ಇವರು ಪುನಃ ಅದನ್ನು ತಾಲ್ಲೂಕು ಅಧಿಕಾರಿಗಳಿಗೂ, ಇವರು ಪುನಃ ಹೋಬಳಿ (ಮಾಗಣಿ)ಯ ಅಧಿಕಾರಿಗೂ, ಅವರು ಗ್ರಾಮಾಧಿಕಾರಿಗೂ ಕಳುಹುವರು ಈ ಅಧಿಕಾರಿಗಳೊಬ್ಬೊಬ್ಬರಲ್ಲಿ ಮನುವೆಯು ಎಷ್ಟೆಷ್ಟು ಕಾಲ ನಿಲ್ಲುವುದೋ ಗೊತ್ತಾಗುವುದಿಲ್ಲ. ಈ ಮನುವೆಯು ಪುನಃ ಮೆಟ್ಟಲುಗಳನ್ನು ಹತ್ತಬೇಕು. ಮತ್ತೂ ಆ ಮನುವೆಯನ್ನು ಮೇಲ್ಪಟ್ಟಧಿಕಾರಿಗಳ ಅನುಮತಿಯಿಲ್ಲದೆ ವ್ಯವಸ್ಥಿಸಲು ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ಅಧಿಕಾರವಿಲ್ಲದಿದ್ದಲ್ಲಿ ಅವರು ಆ ಮನುವೆಯನ್ನು ತಮ್ಮ ಮೇಲಿನ ಮೆಟ್ಟಲುಗಳನ್ನು ಹತ್ತಿಸಿ ಪುನಃ ಇಳಿಯಿಸಿಕೊಳ್ಳಬೇಕು. ಇದೇ ಬಹಳ ರುಜುವಾದ ಪ್ರಯಾಣ. ಸಿವಿಲ್ ಕಾರ್ಯದ ವಿಷಯದಲ್ಲಿ, ಡಿಸ್ಟ್ರಿಕ್ಟ್ ಜಡ್ಜರಲ್ಲಿ ಆಗತಕ್ಕ ಕಾರ್ಯವನ್ನು ನೆರವೇರಿಸಿಕೊಳ್ಳಲು, ಆ ಅಧಿಕಾರಿಯೊಬ್ಬರನ್ನು ಅನುವರ್ತಿಸಿದರೆ ಸಾಕು. ಆ ಅಧಿಕಾರಿಯು ಆಫೀಸಿನೊಳಗಿನ ಉದ್ಯೋಗಸ್ಥರನ್ನೂ ಲಕ್ಷಿಸದಿರಬಹುದು. ಮತ್ತೂ ಕೆಳಗಿನ ಅಧಿಕಾರಿಗಳ ಕಡೆಗೆ ತಿರುಗಿನೋಡಬೇಕಾದವಶ್ಯಕತೆಯೇ ಇಲ್ಲ. ಮತ್ತೂ ಮೇಲಕ್ಕೆ ಅಪ್ಪೀಲು ಹೋಗುವ ಸಂದರ್ಭವಿಲ್ಲದಿದ್ದರೆ ಮೇಲಿನಧಿಕಾರಿಗಳನ್ನೂ ಲಕ್ಷಿಸದಿರಬಹುದು. ಮುಲ್ಕೀ ಸಂಬಂಧದಲ್ಲಾದರೋ ಕಮಿಶ್ನರಲ್ಲಿ ಆಗಬೇಕಾದ ಕಾರ್ಯವನ್ನು ನೆರವೇರಿಸಿಕೊಳ್ಳಬೇಕಾದರೆ ಆ ಅಧಿಕಾರಿಗಳ ಆಫೀಸಿನ ಉದ್ಯೋಗಸ್ಥರನ್ನೂ, ಕೆಳಗಿನ ಹತ್ತಾರು ಅಧಿಕಾರಿಗಳನ್ನೂ, ಅವರವರ ಆಫೀಸಿನ ನೂರಾರು ಉದ್ಯೋಗಸ್ಥರನ್ನೂ, ಕೊನೆಗೆ ತನ್ನ ಸ್ಥಳದ ಅಧಿಕಾರಿಗಳನ್ನೂ ಮತ್ತಾವ ವಿತರಣೆಗಲ್ಲದಿದ್ದರೂ ಕಾರ್ಯವನ್ನು ತ್ವರೆಮಾಡುವುದಕ್ಕೊಂದಕ್ಕಾದರೂ ಆಶ್ರಯಿಸಬೇಕಾಗುತ್ತದೆ. ಮುಲ್ಕೀ ಕಾರ್ಯದ ಈ ತೊಡಕಿಗೆ ಮುಖ್ಯವಾದಕಾರಣ ಇದು :—ದೊಡ್ಡಧಿಕಾರಿಗಳಲ್ಲಿರುವುದಕ್ಕಿಂತ ಸಣ್ಣಧಿಕಾರಿಗಳಲ್ಲಿ ಅಶುಚಿತ್ವ ಹೆಚ್ಚಾಗಿದೆ ಎಂಬ ಭಾವನೆಯಿಂದ ಸಣ್ಣಧಿಕಾರಿಗಳಿಗೆ ಅವರ ಶಕ್ತಿಗನುಸಾರವಾಗಿ ಎಷ್ಟು ಅಧಿಕಾರಗಳನ್ನು ಕೊಡಬಹುದೋ ಅಷ್ಟರ ಹತ್ತರಲ್ಲೊಂದು ಭಾಗವನ್ನೂ ಕೊಡದೆ, ಸಣ್ಣ ದೊಡ್ಡ ಅಧಿಕಾರಗಳನ್ನೆಲ್ಲವನ್ನೂ ದೊಡ್ಡಧಿಕಾರಿಗಳಮೇಲೇ ಹೊರಿಸಿದ್ದಾರೆ. ತಮ್ಮ ಮೇಲೆ ಹೊರಿಸಿರುವ ಸಣ್ಣ ದೊಡ್ಡ ಕಾರ್ಯಗಳನ್ನೆಲ್ಲಾ ಜಾಗ್ರತೆಯಾಗಿ ಇತ್ಯರ್ಥಮಾಡಲು ಈ ದೊಡ್ಡಧಿಕಾರಿಗಳಿಗೆ ಸಾಕಾದಷ್ಟು ಕಾಲವಿಲ್ಲ. ಕೆಳಗಿನ ಉದ್ಯೋಗಸ್ಥರು ಬರೆಯುವ ಬರವಣಿಗೆಗಳಿಗೆ ಒರೀ ರುಜುಮಾಡುವುದಕ್ಕೇ ಅಧಿಕಾರಿಗಳಿಗೆ ಅನೇಕ ಗಂಟೆಗಳು ಹಿಡಿಯುತ್ತವೆ. ವಿಧಿವತ್ತಾಗಿ ತಾವೇ ಮಾಡಬೇಕಾದ ಕ್ರಿಮಿನಲ್ ರಿಜಿಸ್ಟ್ರೇಷನ್‌ಗಳಿಗೆ ಸಂಬಂಧಪಟ್ಟ ಕಾರ್ಯವನ್ನು ಮಾಡಿ, ಮೇಲ್ಪಟ್ಟಧಿಕಾರಿಗಳಿಗೆ ಬರೆಯಬೇಕಾದ ಲೇಖನಗಳನ್ನು ಬರೆದು ಆ ಬಳಿಕ ಉಳಿಯುವ ಕಾಲದೊಳಗೆ ಕೆಳಗಿನ ಉದ್ಯೋಗಸ್ಥರು ಬರೆಯುವ ಆರ್ಡರುಗಳನ್ನು ಓದಿಕೊಂಡು ರುಜುಮಾಡಲು ಸಹ ಇವರಿಗೆ ಕಾಲದೊರೆಯುವುದಿಲ್ಲ. ಆದುಕಾರಣ ಮೇಲ್ಪಟ್ಟ ಅಧಿಕಾರಿಗಳು ಚಲಾಯಿಸಿದಂತೆ ತೋರ್ಪಡಿಸುವ ಕಾರ್ಯಗಳನ್ನು ವಾಸ್ತವವಾಗಿ ಚಲಾಯಿಸುವವರು, ಮುಲ್ಕೀ ಬಾಬಿನಲ್ಲಿ, ಕೀಳ್ಪಟ್ಟ ಅಧಿಕಾರಿಗಳೇ ಆಗಿರುತ್ತಾರೆ. ಆ ಕಾರ್ಯಗಳಿಗೆ ಕೆಳಗಿನ ಅಧಿಕಾರಿಗಳ ಅಭಿಪ್ರಾಯಗಳೇ ಮೂಲವಾಗಿವೆ.

ಈ ಅಭಿಪ್ರಾಯಗಳ ಕೆಳಗೆ ಮೇಲ್ಪಟ್ಟಧಿಕಾರಿಗಳು ರುಜುಮಾಡುವುದರಿಂದ ಅವರಲ್ಲಿ ಮಾಡಿಕೊಳ್ಳಬಹುದಾದ ಅಪ್ಪೀಲುಗಳಿಗೆ ಅವಕಾಶತಪ್ಪುತ್ತದೆ ಇವರ ಅಸಮರ್ಪಕತೆಯನ್ನು ಉದಾಹರಣೆಯಿಂದ ತೋರಿಸುವ:–ಮುನಸೀಫರು ಸ್ಥಳವನ್ನು ಅಜಮಾಷ್ ಮಾಡಿ ರಿಪೋರ್ಟು ಮಾಡುವುದು, 1 ನೇ ಕ್ಲಾಸ್ ಸಬ್ ಜಡ್ಜರವರು ಸಾಕ್ಷಿಗಳನ್ನು ವಿಚಾರಣೆಮಾಡುವುದು, 2 ನೇ ಕ್ಲಾಸ್ ಸಬ್ ಜಡ್ಜರವರು ರಿಕಾರ್ಡಿನ ರುಜುವಾತನ್ನು ತೆಗೆದುಕೊಳ್ಳುವುದು, ಇವುಗಳೆಲ್ಲವನ್ನು ಪರಿಶೋಧಿಸಿ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನ ಶಿರಸ್ತೆದಾರರು ಜಡ್ಜಮೆಂಟನ್ನು ಬರೆಯುವುದು, ಆ ಜಡ್ಜಮೆಂಟಿಗೆ ಡಿಸ್ಟ್ರಿಕ್ಟ್ ಜಡ್ಜರವರು ರುಜುಮಾಡುವುದು. ಕೇವಲ ಊಹಿತವಾದ ಸಿವಿಲ್ ಕೋರ್ಟಿನ ಈ ಜಡ್ಜಮೆಂಟು ಎಷ್ಟು ಅಸಮರ್ಪಕವಾಗಿರಬಹುದೋ, ವಾಸ್ತವಿಕವಾಗಿಯೂ ನಡೆಯುತ್ತಿರುವ ಮುಲ್ಕೀ ಇಲಾಖೆಯ ಜಡ್ಜಮೆಂಟುಗಳು ಹಾಗೆ ಅಸಮರ್ಪಕವಾಗಿರುವುವು. ಈ ದುರವಸ್ಥೆಗೆ ಯಾವ ಅಧಿಕಾರಿಗಳೂ ಆಕ್ಷೇಪಣೀಯರಲ್ಲ. ಅವರಿಗೆ ಅನ್ಯಥಾ ಸಿವಿಲ್ ಕೋರ್ಟಿನ ಕ್ರಮವನ್ನು ಅನುಸರಿಸಲು ಕಾಲಾವಕಾಶವೂ ಇಲ್ಲ; ನಿದರ್ಶನಸಾಮಗ್ರಿಯ ಅವಕಾಶವೂ ಇಲ್ಲ. ನಡೆದುಬಂದಿರುವ ಪದ್ಧತಿಯನ್ನು ಅವರು ಅನುಸರಿಸುತ್ತಾರೆ. ಬೇರೇ ವಿಧವಾಗಿ ಮಾಡಲು ಅವರಿಗೆ ಅವಕಾಶವೇ ಇಲ್ಲ. ನಡೆದುಬಂದಿರುವ ಪದ್ಧತಿ ಮಾತ್ರ ಆಕ್ಷೇಪಿಸಲ್ಪಡಬೇಕು.

ಈ ರೀತಿಯ ಇತ್ಯರ್ಥಗಳು ಸಿವಿಲ್ ಕೋರ್ಟಿನ ಕ್ರಮದಿಂದ ಕೂಡಿಲ್ಲವಾದರೂ, ಇವುಗಳಲ್ಲಿ ನ್ಯಾಯವೇ ಸಿಕ್ಕಬಹುದು. ಈ ಇತ್ಯರ್ಥಕ್ಕೆ ಕೈಹಾಕುವ ಕೀಳ್ಪಟ್ಟ ಅಧಿಕಾರಿಗಳೆಲ್ಲರೂ ಶುಚಿಸ್ವಭಾವದವರೇ ಆಗಿರಬಹುದು; ಅಥವಾ ಕಡೆಯ ಇತ್ಯರ್ಥವನ್ನು ಮಾಡುವ ಮೇಲ್ಪಟ್ಟ ಅಧಿಕಾರಿಯ ಭಯದಿಂದ ನ್ಯಾಯವಾದ ಅಭಿಪ್ರಾಯಗಳನ್ನೇ ಇವರು ಕೊಟ್ಟಿರಬಹುದು. ನ್ಯಾಯದೊರೆಯುವುದಿಲ್ಲವೆಂಬ ಕಾರಣಕ್ಕಾಗಿ ಈ ಪದ್ಧತಿಯು ಆಕ್ಷೇಪಣೀಯವಲ್ಲ. ಮತ್ತೇತಕೆಂದರೆ, ರೈತನು ಎಷ್ಟುಜನ ಅಧಿಕಾರಿಗಳನ್ನು ಆಶ್ರಯಿಸಬೇಕು? ಅವರಿರುವ ಎಷ್ಟು ಸ್ಥಳಗಳಿಗೆ ಎಷ್ಟಾವೃತ್ತಿ, ತನ್ನ ಬದುಕುಬಾಳನ್ನೆಲ್ಲಾ ಬಿಟ್ಟು ಅಲೆಯಬೇಕು? ಅವರ ಸಮಯವನ್ನು ಎಷ್ಟುಕಾಲ ನಿರೀಕ್ಷಿಸಬೇಕು? ರೈತನು ಹೀಗೆ ಅಲೆಯಬೇಕಾದರೆ, ಅವನ ವ್ಯವಸಾಯಕ್ಕೆ ಎಷ್ಟು ಕುಂದಕವಾಗುತ್ತದೆ? ಮತ್ತು ಅನವಶ್ಯಕವಾದ ಪ್ರಯಾಣದ ಮತ್ತೂ ತಿಂಡಿಯ ವೆಚ್ಚ ಅವನಿಗೆ ಎಷ್ಟು ತಗಲುತ್ತದೆ?—ಈ ವಿಚಾರಗಳನ್ನು ಯೋಚಿಸಿದರೆ ಆ ಪದ್ಧತಿಯು ಜನರಿಗೆ ಬಹು ಕಷ್ಟಕಾರಿ ಎಂಬುದು ಗೊತ್ತಾಗುತ್ತದೆ. ಸದುದ್ದೇಶದೊಡನೆ ಕೂಡಿರುವ ಈ ಪದ್ಧತಿಯು ಘಟ್ಟಕ್ಕೆ ಹೋಗಿ ಉಪ್ಪನ್ನು ತರುವಂತಿರುವುದು. ಘಟ್ಟಕ್ಕೆ ಹೋದರೆ ಉಪ್ಪು ಮುಫತ್ತಾಗಿ ಸಿಕ್ಕುವುದೇನೋ ನಿಶ್ಚಯ ಆದರೆ ದಾರಿಯ ಖರ್ಚಿಗೆ 50 ರೂ.ನ್ನು ವೆಚ್ಚಮಾಡಿಕೊಂಡು ಘಟ್ಟಕ್ಕೆ ಹೋಗಿ ತರುವಷ್ಟು ಉಪ್ಪು ಸ್ಥಳದಲ್ಲಿ 40 ರೂ. ಗೇ ಸಿಕ್ಕಿದರೆ ಅದನ್ನು ಸ್ಥಳದಲ್ಲಿಯೇ ತೆಗೆದುಕೊಳ್ಳುವುದು ಲಾಭಕರವಲ್ಲವೆ? ಪ್ರಯಾಣಕ್ಕಾಗಿ ವ್ಯರ್ಥವಾಗಿ ಕಳೆಯುವ ಕಾಲವನ್ನೂ ಪಡುವ ಶ್ರಮವನ್ನೂ ಯೋಚಿಸಿದರೆ ಆ ಉಪ್ಪನ್ನು ಸ್ಥಳದಲ್ಲಿ 70–80 ರೂ. ಗೆ ಕೊಂಡುಕೊಂಡರೂ ನಷ್ಟವಿಲ್ಲದಿರುವುದು. ಈ

ಪದ್ಧತಿಯ ಸದುದ್ದೇಶವು ಹೇಗಿದೆಯೆಂದರೆ ಕುದುರೆಗಳಿಗೆ ಹುರುಳಿ ತಿನ್ನಿಸುವ ಕೆಲಸವನ್ನು ಅಶ್ವಸೇವಕರಿಗೇ ವಹಿಸಿದರೆ ಅವರು ಹುರುಳಿಯನ್ನು ಉಳಿಸಿಕೊಂಡಾರೆಂಬ ಸಂಶಯದ ಮೇಲೆ ಸಾವಿರಾರು ಕುದುರೆಗಳಿಗೆ ಯಜಮಾನನಾದೊಬ್ಬನು ಸ್ವಹಸ್ತದಿಂದ ಪ್ರತಿ ಕುದುರೆಗೂ ಹುರುಳಿ ತಿನ್ನಿಸಲು ಉದ್ಯುಕ್ತನಾದರೆ ಕಾಲಕಾಲಕ್ಕೆ ಅವುಗಳಿಗೆ ಹುರುಳಿ ದೊರೆಯಗೊಡದೆ ತನ್ನ ದಯಾಳುತ್ವದಿಂದ ಅವನು ಆ ಕುದುರೆಗಳನ್ನು ಕೊಲ್ಲುವನು.

ರೈತರಿಗೆ ಸರ್ಕಾರದಿಂದ ಮುಲ್ಕೀ ಬಾಬಿನಲ್ಲಿ ಆಗಬೇಕಾದ ಕಾರ್ಯಗಳ ಬಹು ಭಾಗವು ಸ್ಥಳಾಧಿಕಾರಿಗಳಿಂದಲೇ ಅಥವಾ ಹೋಬಳಿ, ಯಾ, ಮಾಗಣಿಯ ಅಧಿಕಾರಿಗಳಿಂದಲೇ ಪೂರ್ಣವಾಗಿ ಆಗುವಂತೆಯೂ, ಮತ್ತೂ ಆ ಅಧಿಕಾರಿಗಳು ಆ ಕಾರ್ಯಗಳನ್ನು ಮೇಲ್ಪಟ್ಟವರನ್ನು ಕೇಳದೆ ಪೂರ್ಣವಾಗಿ ನೆರವೇರಿಸುವಂತೆಯೂ ಏರ್ಪಡಿಸುವುದು ರೈತರ ಹಿತಕ್ಕೆ ಬಹು ಅವಶ್ಯಕ. ಸ್ಥಳವಿದ್ಯಮಾನವನ್ನು ತಿಳಿದ ಸ್ಥಳಾಧಿಕಾರಿಯು ಬಹಳ ಸುಲಭವಾಗಿ ವಸ್ತುತಃ ಯಥಾರ್ಥವೇ ಆದ ಇತ್ಯರ್ಥವನ್ನು ಮಾಡಬಲ್ಲನು. ರೈತನು ತನ್ನ ಕಾರ್ಯವನ್ನು ತನ್ನ ಮನೆಯ ಮುಂದೆ ಬಹು ಸುಲಭವಾಗಿ ನೆರವೇರಿಸಿಕೊಳ್ಳುವನು. ಮುಲ್ಕಿ ಕಾರ್ಯಗಳು ಕ್ರಿಮಿನಲ್ ಕೋರ್ಟಿನ ಕಾರ್ಯಗಳಂತೆ ನಡೆದುಹೋದಬಳಿಕ ಪರಾವರ್ತಿಸಲಾಗದುವುಗಳಾಗಿಲ್ಲ. ಮತ್ತೂ ಅಧಿಕಾರಿಯು ಎಷ್ಟು ಕೆಟ್ಟವನಾದರೂ ಅನ್ಯಾಯಕ್ಕಿಂತ ನ್ಯಾಯವನ್ನೇ ಹೆಚ್ಚಾಗಿ ಮಾಡುವನು. ಅದುಕಾರಣ ಸಣ್ಣಾಧಿಕಾರಿಗಳು ಕದಾಚಿತ್ ಮಾಡಬಹುದಾದ ಅನ್ಯಾಯದ ನಷ್ಟಕ್ಕಿಂತಲೂ, ಇವರು ಪ್ರಾರ್ಥಕರ ಕಾರ್ಯಗಳನ್ನು ಶೀಘ್ರವಾಗಿ ಅನವಶ್ಯಕವಾದ ಶ್ರಮಕ್ಕೂ ದ್ರವ್ಯವ್ಯಯಕ್ಕೂ ಅವಕಾಶವಿಲ್ಲದೆ ಅವರವರ ಸ್ಥಳಗಳಲ್ಲೆ ಮಾಡಿಕೊಡುವುದರಿಂದುಂಟಾಗುವ ಲಾಭವು ಶತಗುಣಾಧಿಕವಾಗಿದೆ. ಮತ್ತೂ ಅಪರಾಧವನ್ನು ಸಾಧಿಸುವ ರೀತಿಯಲ್ಲಿ ಅಧಿಕಾರದುರ್ವಿನಿಯೋಗವನ್ನು ಸಾಧಿಸದೆ, ಪೊಲೀಸ್ ಕಮಿಷನು ಸೂಚಿಸುವಂತೆ ಜನಪ್ರವಾದದ ಮೇಲೂ, ಮೇಲ್ಪಟ್ಟಧಿಕಾರಿಗಳ ಶಂಕೆಯ ಮೇಲೂ ಅದನ್ನು ಸಾಧಿಸಿ ಅಧಿಕಾರ ದುರ್ವಿನಿಯೋಗ ಮಾಡಿದವರನ್ನು ಪದಭ್ರಷ್ಟರನ್ನಾಗಿ ಮಾಡುವುದಾದರೆ ಅಧಿಕಾರಿಗಳು ಬಹು ಜಾಗ್ರತರಾಗಿ ಆಕ್ಷೇಪಣೆಗೆ ಅವಕಾಶಕೊಡದಂತೆ ದೊಡ್ಡಧಿಕಾರವನ್ನು ನಿರ್ವಹಿಸಲು ಸಮರ್ಥರಾಗುವರು. ಈ ಅಧಿಕಾರಿಗಳ ಕಾರ್ಯಗಳಿಂದ ತೃಪ್ತಿಪಡದವರು ಮೇಲ್ಪಟ್ಟಧಿಕಾರಿಗಳಿಗೆ ಅಪೀಲು ಮಾಡಿಕೊಳ್ಳಲು ಪೂರ್ಣಾವಕಾಶಕೊಡುವುದೂ, ಮತ್ತೂ ಇವರ ಕಾರ್ಯದಿಂದ ಸರ್ಕಾರಕ್ಕೆ ಅಹಿತವುಂಟಾಗುವ ಸಂದರ್ಭಗಳಲ್ಲಿ ಅವುಗಳನ್ನು ನಿರಾಕರಿಸುವ ಅಧಿಕಾರವನ್ನು ಮೇಲ್ಪಟ್ಟಧಿಕಾರಿಗಳಿಗೆ ಕೊಡುವುದೂ ಈ ಏರ್ಪಾಟುಗಳಿಂದ ಸ್ಥಳಾಧಿಕಾರಿಯ ಅಧಿಕಾರದುರ್ವಿನಿಯೋಗದ ಬಾಧೆಯನ್ನು ಪೂರ್ಣವಾಗಿ ತಪ್ಪಿಸಿಬಿಡಬಹುದು ಮತ್ತೂ ಸ್ಥಳಾಧಿಕಾರಿಗಳಿಗೆ ವಿಶೇಷ ಅಧಿಕಾರ ವಹಿಸುವುದರಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಮತ್ತೊಂದು ಪ್ರಯೋಜನವಾವುದೆಂದರೆ, ಪ್ರಜೆಗಳ ಕಾರ್ಯಗಳನ್ನು ನೆರವೇರಿಸಿಕೊಡಲು ಸ್ಥಳಾಧಿಕಾರಿಗಳಿಗೆ ಈಗಿರುವ ಅಧಿಕಾರವು ಬಹು ಸ್ವಲ್ಪವಾಗಿರುವುದರಿಂದ ಅವರಲ್ಲಿ ಪ್ರಜೆಗಳಿಗೆ ವಿಶೇಷ ಗೌರವವಿಲ್ಲ. ಸ್ಥಳದ ಪ್ರಜೆಗಳಿಂದ ಅನೇಕ ಸಾಮಾಜಿಕಕರ್ತವ್ಯಗಳು ಎಂದರೆ—ಗ್ರಾಮವನ್ನು ಶುಚಿಯಾಗಿ

ಟ್ಟುಕೊಳ್ಳುವುದು, ಪ್ಲೇಗು ಬಂದಾಗ ಗ್ರಾಮವನ್ನು ಬಿಡಿಸಿ ಹೊರಗೆ ಗುಡಿಸಲುಗಳಲ್ಲಿ ವಾಸಮಾಡುವ ಹಾಗೆ ಮಾಡುವುದು, ಅನ್ಯೋನ್ಯಸಹಾಯಕಬ್ಯಾಂಕುಗಳನ್ನು ಏರ್ಪ ಡಿಸುವುದು, ಗ್ರಾಮದ ಧಾನ್ಯಕೋಷ್ಠಗಳನ್ನು ಏರ್ಪಡಿಸುವುದು, ಕೆರೆಗಳನ್ನು ರಿಪೇರಿ ಮಾಡಿಸುವುದು, ಇಂತಹ ನೂರಾರು ಸಾಮಾಜಿಕಕರ್ತವ್ಯಗಳು ನಡೆಯಿಸಲ್ಪಡಬೇಕಾ ಗುತ್ತವೆ. ಈ ಕರ್ತವ್ಯಗಳು ಕೇವಲ ಶಿಕ್ಷಾಭಯದಿಂದ ನಡೆಯುವುವಲ್ಲ. ಸ್ಥಳಾಧಿ ಕಾರಿಗಳಿಗಿರುವ ಗೌರವಪ್ರಭಾವದಿಂದ ಈ ಕಾರ್ಯಗಳು ನಡೆಯಬೇಕು. ಪ್ರಜೆಗಳ ಭಯಭಕ್ತಿಗೆ ಸ್ಥಳಾಧಿಕಾರಿಗಳು ಪಾತ್ರರಾಗಬೇಕಾದರೆ ಅವರಿಗೆ ಅಧಿಕಾರಗಳನ್ನು ಅಧಿ ಕವಾಗಿ ವಹಿಸಬೇಕು. ಮತ್ತು ಸ್ಥಳಾಧಿಕಾರಿಗಳು ಗ್ರಾಮಸ್ಥರೊಳಗೇ ಸೇರಿದವರಾಗಿರು ವುದರಿಂದ ಈ ಅಧಿಕಾರಿಗಳಲ್ಲಿ ತಮ್ಮ ಕಷ್ಟ ಸುಖಗಳನ್ನು ಸಲಿಗೆಯಿಂದ ಹೇಳಿಕೊಳ್ಳ ಲೂ, ತಮ್ಮ ನ್ಯಾಯವನ್ನು ಭಯವಿಲ್ಲದೆ ಚರ್ಚಿಸಲೂ ಸಹ ರೈತರಿಗೆ ಅನುಕೂಲವಾ ಗುತ್ತದೆ. ಈ ಕಾರಣಗಳಿಗಾಗಿಯೂ ಸ್ಥಳಾಧಿಕಾರಿಗಳಿಗೆ ವಿಶೇಷಾಧಿಕಾರವನ್ನು ವಹಿ ಸುವುದು ಆವಶ್ಯಕ.

ಈ ಪ್ರಕಾರ ಗ್ರಾಮಗಳ ಲಾಗಾಯಿತು ಡಿಸ್ಟ್ರಿಕ್ಟುಗಳ ಸಮುದಾಯದ ಅಧಿಕಾರಿಗಳಿಗೆಲ್ಲಾ ಕಾರ್ಯಗಳನ್ನು ಅವುಗಳ ಗುರುತ್ವಕ್ಕನುಸಾರವಾಗಿ ಹಂಚಿ ಕೊಟ್ಟು, ಅವರವರಿಗೆ ಸೇರಿದ ಕಾರ್ಯವನ್ನು ಅವರವರು ಮೇಲ್ಪಟ್ಟ, ಅಥವಾ ಕೀಳ್ಪಟ್ಟ ಅಧಿಕಾರಿಗಳೊಬ್ಬರನ್ನೂ ಕೇಳದೆ ಆದ್ಯಂತವಾಗಿ ಮಾಡಿಪೂರಯಿಸಲು ಅವರಿಗೆ ಪೂರ್ಣಾಧಿಕಾರವನ್ನು ಸಿವಿಲ್ ಕೋರ್ಟುಗಳಿಗೆ ವಹಿಸಿರುವಂತೆ ವಹಿಸಿ, ಗ್ರಾಮದ ಪೂರ್ಣವಾದ ರಿಕಾರ್ಡುಗಳು ಆ ಅಧಿಕಾರಿಗಳಿಗೆ ಇತರರ ಕೈಕಾಯದೆ ದೊರಕುವಂತೆ ಮಾಡಿ, ಈ ಪ್ರಕಾರ ಏರ್ಪಡಿಸಿದರೆ ಗೌವರ್ನ್ಮೆಂಟಿನವರು ರೈತರ ಹಿತಕ್ಕಾಗಿ ಉದ್ದೇಶಿಸಿರುವ ತಖಾವಿ ಮೊದಲಾದ ಸಹಾಯಗಳೆಲ್ಲವೂ ರೈತರ ಕೈಗೆ ಸುಲಭವಾಗಿ ಸೇರುವುವು. ಮತ್ತೂ ನ್ಯಾಯವಿಧಾಯಕಸಭೆ, ಲೋಕಲ್ ಬೋರ್ಡ್ ಸಭೆ, ಮುನಿಸಿ ಪಾಲಿಟಿ ಇವುಗಳ ಸಭಾಸದರಿಂದ ಬರಿಯ ಮಾತಿನ ಸಹಾಯವಲ್ಲದೆ ಕಾರ್ಯದ ಸಹಾ ಯವನ್ನೂ ಹೊಂದಬಹುದು. ಮತ್ತೂ ರಾಜ್ಯದ ಭೂಮಿಗಳನ್ನು ಮುಫತ್ತಾಗಿ ಅನು ಭೋಗಿಸುತ್ತಿರುವ ಜಹಗೀರ್‌ದಾರರು ಇನಾಂದಾರು ಇಂತಹರಿಗೆ ಅನೇಕ ಸಾಮಾಜಿಕ ಕರ್ತವ್ಯಗಳ ಅಧಿಕಾರವನ್ನು ವಹಿಸಿದರೆ ರಾಜ್ಯದ ವೆಚ್ಚವು ಕಡಮೆಯಾಗುವುದು. ಮತ್ತೂ ವೈತನಿಕ ಉದ್ಯೋಗಸ್ಥರ ಮೇಲಿನ ಭಾರವು ಲಘುವಾಗುವುದು.

ನೋಟು :—

[ನಮ್ಮ ಪ್ರಕೃತಪ್ರಬಂಧದವಶ್ಯಕತೆಗಿಂತ ಹೆಚ್ಚಾಗಿ ಮೇಲೆ ಕಂಡ ಮೇರೆ ನಾವು ವಿಚಾರಮಾಡಿದ ಕಾರಣವೇನೆಂದರೆ:— ಅಧಿಕಾರ-ಏಕತ್ರ-ಕರಣದ ಅನಾನುಕೂಲವು ಬ್ರಿಟಿಷ್ ಸರ್ಕಾರಕ್ಕೆ ತಿಳಿದುಬಂದು, ಅಧಿಕಾರ-ಅನೇಕತ್ರ-ಕರಣದ ವಿಷಯದಲ್ಲಿ ವಿಚಾರಮಾಡಿ ರಿಪೋರ್ಟುಮಾಡಲು ಅವರು ನಿಯೋಗಿಸಿದ್ದ ಕಮಿಷ್ಷನು ಈಗ ರಿಪೋರ್ಟುಮಾಡಿದ್ದಾರೆ. ರಾಜ್ಯನಿರ್ವಹಣೆಯ ರೀತಿಯನ್ನು ಸರಿಪಡಿಸಲು ಸರ್ಕಾರ ದವರು ಈಗ ಉದ್ಯುಕ್ತರಾಗಿದ್ದಾರೆ. ಸರ್ಕಾರಿ ಅಧಿಕಾರಿಗಳ ಅಧಿಕಾರನಿರ್ವಹಣದ ರೀತಿಯಲ್ಲಿ ಪ್ರಜೆ ಗಳಿಗಿರುವ ಅನುಕೂಲಾನಾನುಕೂಲಗಳನ್ನು ಸರ್ಕಾರದವರಿಗೆ ತಿಳಿಸಿ ಪ್ರಜೆಗಳು ಅದನ್ನು ಸರಿಪಡಿಸಿ ಕೊಳ್ಳಲಿ ಎಂಬ ಸದುದ್ದೇಶದಿಂದ ನ್ಯಾಯನಿರ್ಮಾಣಕಸಭೆ, ಲೋಕಲ್ ಬೋರ್ಡ್ ಎಂಬ ಸಭೆಗಳು,

ಪ್ರಜಾಪ್ರತಿನಿಧಿಸಭೆ, ಇವುಗಳಿಗೆ ಪ್ರಜಾಪ್ರತಿನಿಧಿಗಳನ್ನು ಆರಿಸಿಕೊಂಡು ಅವರ ಅಭಿಪ್ರಾಯಗಳನ್ನು ತಿಳಿದು ಕಾರ್ಯ ನಡೆಯಿಸುತ್ತಾ ಇದ್ದಾರೆ. ಅಧಿಕಾರಗಳನ್ನು ಬಹುಕಡೆ ಬಹುಜನರಲ್ಲಿ ಹಂಚದೆ ಒಂದೇ ಕಡೆಯಲ್ಲಿ ಅಲ್ಪಸಂಖ್ಯೆಯವರು ಇಟ್ಟುಕೊಂಡಿರುವುದರಿಂದ ಜನರಿಗೆ ಉಂಟಾಗುತ್ತಿರುವ ಬಾಧೆಯನ್ನು ಈ ಪ್ರತಿನಿಧಿಗಳು ಸರ್ಕಾರಕ್ಕೆ ತಿಳಿಸಿ ಸರಿಪಡಿಸಿಕೊಳ್ಳಲೆಂಬ ಉದ್ದೇಶದಿಂದ, ಮೇಲಿನ ವಿಚಾರವನ್ನು ಸ್ವಲ್ಪ ದೀರ್ಘವಾಗಿ ಮಾಡಲಾಯಿತು.

(3) ಒಂದನೇ ಸಹಾಯವು ಗೌವರ್ನಮೆಂಟಿನವರಿಂದ ಸಾರ್ವದಾ ಮಾಡಲ್ಪಡುತ್ತಲೇ ಇರುವುದು. ಎರಡನೇ ಸಹಾಯವು ಎಂದರೆ ಭೂಮಿಗೆ ಫಲವತ್ತತೆಯನ್ನುಂಟುಮಾಡಲು ಸರ್ಕಾರದವರು ಖುದ್ದಾಗಿ ಮಾಡುವ ಋಣಸಹಾಯವು ನಿತ್ಯವಾದುದಾಗಿರಬಹುದಾದರೂ ನೈಮಿತ್ತಿಕವೇ ಆಗಿರುತ್ತದೆ. ಏಕೆಂದರೆ ಲೇವಾದೇವಿ ಸಂಬಂಧವಾದ ಕಾರ್ಯವು ಖಾಸ್ಗಿ ಜನರಿಗೆ ಸಲ್ಲುವಂತೆ ಗೌವರ್ನಮೆಂಟಿನವರಿಗೆ ಸಲ್ಲುವುದಿಲ್ಲ. ಋಣವನ್ನಪೇಕ್ಷಿಸುವವನ ಬಂಡವಾಳವನ್ನು ತಿಳಿದುಕೊಳ್ಳಲು ನೆರೆಹೊರೆಯವರಿಗಿರುವ ಸೌಲಭ್ಯವು ಸರ್ಕಾರಿಯಧಿಕಾರಿಗಳಿಗಿಲ್ಲ. ಮತ್ತೂ ಋಣಿಗಳ ಸತ್ವವನ್ನರಿತು, ಅವರ ಸುಳ್ಳುನೆಪಗಳಿಗೆ ಅವಕಾಶಕೊಡದೆ, ಅವರಿಗೆ ಸತ್ವವಿರುವಾಗ ನಿಷ್ಕರುಣವಾಗಿ ಸಾಲಾ ವಸೂಲ್ಮಾಡುವುದೂ, ಸತ್ವವಿಲ್ಲದಿರುವಾಗ ವಾಯಿದೆಕೊಡುವುದೂ, ಈ ಮೊದಲಾದ ವಸೂಲಿಗೆ ಸಂಬಂಧಪಟ್ಟ ಕಾರ್ಯಗಳೂ ಸಹ ವಿಧಿವತ್ತಾಗಿ ಕಾರ್ಯ ನಡೆಯಿಸುವ ಗೌವರ್ನಮೆಂಟ್ ಅಧಿಕಾರಿಗಳಿಗೆ ಬಹು ತೊಡಕಾಗಿವೆ. ಆದುಕಾರಣ ಸರ್ಕಾರದ ಸಹಾಯಗಳೆಲ್ಲವೂ ರೈತರಿಗೆ ಬಹು ಸುಲಭವಾಗಿ ಒದಗುವುದು, ಸರ್ಕಾರದವರು ಕೊಡುವ ಋಣವು ಸಮುದಾಯದ ಜವಾಬ್ದಾರಿಯಿಂದ ವಸೂಲಾಗುವುದು, ಮತ್ತೂ ಬಹು ಭಾಗದ ಋಣಸಹಾಯವು ಪ್ರಜೆಗಳಿಂದ ಪ್ರಜೆಗಳಿಗೇ ಅನ್ಯೋನ್ಯವಾಗಿ ಆಗುವುದು, ಮತ್ತೂ ಬಡ್ಡಿಯನ್ನು ಸಂಪಾದಿಸುವ ಅವಕಾಶವು ಐಶ್ವರ್ಯವಂತರಿಗೆ ಮಾತ್ರವಲ್ಲದೆ ಸಮಸ್ತರಿಗೂ ಇರುವುದು, ಈ ಮೊದಲಾದ ಅನುಕೂಲ್ಯಗಳನ್ನು ಕಲ್ಪಿಸಲಿಕ್ಕೆ ಸರ್ಕಾರದವರು ಕೋಆಪರೇಟಿವ್ ಸೊಸೈಟಿಯ (ಅನ್ಯೋನ್ಯ ಸಹಾಯಕ ಸಂಘದ) ಖಾನೂನನ್ನು ಬ್ರಿಟಿಷ್ ಮತ್ತು ಮೈಸೂರು ದೇಶಗಳಲ್ಲಿ ಜಾರಿಗೆ ತಂದಿರುವರು. ತಖಾವಿ ಸಾಲಗಳ ರೂಪವಾಗಿ, ಅಥವಾ ಮತ್ತಿತರ ರೂಪವಾಗಿ ಸರ್ಕಾರದವರು ಪ್ರಜೆಗಳಿಗೆ ಸಹಾಯಮಾಡುವ ಧನವು ಮೊದಲು ಪ್ರಜೆಗಳಿಗೇ ಸೇರಿದುದು; ಅದು ಪ್ರಜೆಗಳ ಕೈಯಿಂದ ಸರ್ಕಾರದವರ ಕೈಗೆ ಸೇರಿ, ಬಳಿಕ ಸರ್ಕಾರದ ಕೈಯಿಂದ ಪ್ರಜೆಗಳ ಕೈಗೆ ಬರುತ್ತದೆ. ಹೇಗೆಂದರೆ,

ಪ್ರಜಾನಾಮೇವಭೂತ್ಯರ್ಥಂ ಸತಾಭ್ಯೋಬಲಿಮಗ್ರಹೀತ್ ।
ಸಹಸ್ರಗುಣಮುತ್ಸ್ರಷ್ಟು ಮಾದತ್ತೇಹಿರಸಂರವಿಃ ॥ (ಕಾಳಿದಾಸ.)

[ಸೂರ್ಯನು ಹೇಗೆ ಭೂಮಿಯ ಮೇಲೆ ನಿಂತಿರುವ ನೀರನ್ನು ಹೀರಿ ಪುನಃ ನೀರನ್ನೇ ಸಹಸ್ರಪಾಲು ಹೆಚ್ಚಾಗಿ ಭೂಮಿಗೇ ಸುರಿಯುವನೋ ಹಾಗೆ ರಾಜನು ಪ್ರಜೆಗಳಿಂದ ಕರದ (ತೆರಿಗೆ, ಸುಂಕ, ಕಂದಾಯದ) ರೂಪವಾಗಿ ಧನವನ್ನು ತೆಗೆದುಕೊಂಡು ಸಹಸ್ರಗುಣ ಹೆಚ್ಚಿನ ಧನವನ್ನು ಪ್ರಜೆಗಳ ಅಭಿವೃದ್ಧ್ಯರ್ಥವಾಗಿಯೇ ಉಪಯೋಗಿಸುವನು.]

ಮೊದಲು ಗತಿಹೀನವಾಗಿದ್ದ ನೀರನ್ನೂ ಹಣವನ್ನೂ ಸೂರ್ಯನು ಮತ್ತು ರಾಜನು ಉಪಯೋಗಕ್ಕೆ ತರುತ್ತಾರೆಂಬುದೇ ಅವುಗಳನ್ನು ಸಹಸ್ರಗುಣವಾಗಿ ಇವರು ಉಪಯೋಗಿಸುತ್ತಾರೆಂಬುದರ ಅರ್ಥ. ಆದರೆ ಹಣವನ್ನು ಹೊಂದಿರುವ ಧನಿಕರೇ ಈ ಕಾರ್ಯವನ್ನು ಮಾಡುವುದಾದರೆ ಆ ಉಪಯೋಗವು ಮತ್ತಷ್ಟು ಹೆಚ್ಚುತ್ತದೆ. ಏಕೆಂದರೆ: ಸರ್ಕಾರಿಯ ಕಾರ್ಯವನ್ನು ಅನೇಕ ವಿಧದ ಅನೇಕ ಉದ್ಯೋಗಸ್ಥರು ನಡಿಸಬೇಕಾಗುತ್ತದೆ. ಸ್ವಂತಕಾರ್ಯದಲ್ಲಿರುವ ಆಸಕ್ತತೆಯು ಇವರಿಗಿರುವುದಿಲ್ಲ. ಮನುಷ್ಯಮಾತ್ರದವರಿಗೆ ಸ್ವಾಭಾವಿಕವಾದ ಸ್ಖಾಲಿತ್ಯಗಳು ಇವರಿಗೂ ಇರುವುವು. ಕಾರ್ಯದಿಂದ ಪ್ರಯೋಜನಹೊಂದುವವರಿಗೆ ಹೆದರಿ ಕಾರ್ಯವನ್ನು ನಡಿಸಬೇಕಾದ ಆವಶ್ಯಕತೆಯು ಈ ಉದ್ಯೋಗಸ್ಥರಿಗೆ ಇರುವುದಿಲ್ಲ. ಅದುಕಾರಣ ಸರ್ಕಾರಿ ಕಾರ್ಯಗಳು ಯಾವಾಗಲೂ ಅತಿ ವಿಳಂಬ, ಅತಿ ವ್ಯಯ, ನ್ಯೂನತೆ, ಅತಿರೇಕ, ಅಸತ್ಪಾತ್ರದಲ್ಲಿ ಪ್ರಾಪ್ತಿ, ಸತ್ಪಾತ್ರದಲ್ಲಿ ಅಪ್ರಾಪ್ತಿ ಈ ದೋಷಗಳಿಗೆ ಸಾಧಾರಣವಾಗಿ ಒಳಗಾಗಿರುತ್ತವೆ. ಸರ್ಕಾರವು ವೈದ್ಯನಂತಿರುವುದು. ಇವರ ಸಹಾಯವನ್ನು ಹೆಚ್ಚಾಗಿ ಕೋರಲು ಅವಶ್ಯಕತೆಯು ಒದಗದ ರೀತಿಯಲ್ಲಿ ಆಚಾರವ್ಯವಹಾರಗಳನ್ನು ಪ್ರಜೆಗಳೇ ಏರ್ಪಡಿಸಿಕೊಳ್ಳುವುದುತ್ತಮ. ಪ್ರಜೆಗಳಿಂದಲೇ ನೆರವೇರಲು ಸಾಧ್ಯವಾದ ಸಾಮಾಜಿಕಕಾರ್ಯಗಳನ್ನು ಯಾವತ್ತೂ ಪ್ರಜೆಗಳೇ ನಡಿಸಿಕೊಳ್ಳುವುದು ಲಾಭಕರ. ಸರ್ಕಾರದವರು ಧನವನ್ನು ಧನವಂತರಿಂದ ಒಯಿದು ಧನಹೀನರಿಗೆ ಕೊಡುವುದಕ್ಕೆ ಪ್ರತಿಯಾಗಿ ಧನವಂತರೇ ಸ್ವಹಸ್ತದಿಂದ ಧನಹೀನರಿಗೆ ಸರ್ಕಾರದವರು ಏರ್ಪಡಿಸುವ ರೀತಿಯಲ್ಲಿ ಕೊಟ್ಟರೆ ಉಭಯರಿಗೂ ಲಾಭಕರವಾಗಿರುವುದು. ಪೃಥಕ್ ಜನರೇ ಮಾಡುವ ಕಾರ್ಯಗಳಲ್ಲಿ ಸ್ವೇಚ್ಛಾಚಾರದ ಸ್ವಾಭಾವಿಕವಾದ ದೋಷಗಳಿರುತ್ತವೆ. ಸರ್ಕಾರಿ ಕಾರ್ಯಗಳಿಗೆ ಸ್ವಾಭಾವಿಕವಾದ ದೋಷಗಳು ಮೇಲೆ ಪರಿಗಣಿಸಲ್ಪಟ್ಟಿವೆ. ಈ ಎರಡು ವಿಧದ ದೋಷಗಳನ್ನು ತಪ್ಪಿಸಬೇಕೆಂಬುದೇ ನಾಗರಿಕರಾಜ್ಯಗಳ ಆಧುನಿಕವ್ಯವಹರಣೆಯಾಗಿದೆ. ಸರ್ಕಾರಿ ಪರ್ಯವೇಕ್ಷಣಕ್ಕೆ ಒಳಪಟ್ಟ ಪ್ರಜಾಪ್ರತಿನಿಧಿಗಳ ಸಂಘಗಳ ಮೂಲಕ ಕಾರ್ಯನಡೆಯಿಸುವುದೇ ಆಧುನಿಕವ್ಯವಹರಣೆಯಾಗಿದೆ. ರಾಜ್ಯದ ಶಾಸನಗಳನ್ನು ನಿರ್ಮಿಸುವ, ರಾಜ್ಯದ ಆದಾಯವೆಚ್ಚಗಳನ್ನು ನಿರ್ಧರಿಸುವ ವರಿಷ್ಠಕಾರ್ಯದಿಂದ ಹಳ್ಳಿಯ ಕನಿಷ್ಠಕಾರ್ಯದ ವರೆಗೂ ಅನೇಕ ವ್ಯವಹರಣೆಗಳು ಈ ಸಂಘಗಳಿಂದ ನಡೆಯಿಸಲ್ಪಡುತ್ತಿವೆ. ನಿರ್ಧನಿಕರಿಗೆ ಧನಸಹಾಯಮಾಡುವ ಕಾರ್ಯವೂ ಈ ದೊಡ್ಡ ಪ್ರಗತಿಯ ಒಂದು ಪಲ್ಲವವಾಗಿದೆ. ಸರ್ಕಾರದವರ ಪರ್ಯವೇಕ್ಷಣಕ್ಕೂ, ಸರ್ಕಾರದವರು ಶಾಸಿಸುವ ಕಾನೂನಿನ ಅನುಸರಣೆಗೂ ಒಳಪಟ್ಟ ಪ್ರಜೆಗಳ ಸಂಘಗಳೇ ಲೇವಾದೇವಿಯ ಕಾರ್ಯವನ್ನು ಮಾಡಬೇಕೆಂಬುದು ಈ ಪಲ್ಲವವಾಗಿದೆ. ಈ ಪ್ರಕಾರ ಲೇವಾದೇವಿ ಮಾಡುವುದರಿಂದುಂಟಾಗುವ ಪ್ರಯೋಜನಗಳನ್ನೂ ಮತ್ತು ಈ ಕೋ ಆಪರೇಟಿವ್ ಸೊಸೈಟೀಸ್ ಕಾನೂನಿನ ವಿಧಿಗಳ ಉದ್ದೇಶಗಳನ್ನೂ ಕುರಿತು ಮೈಸೂರು ಕೋ ಆಪರೇಟಿವ್ ಸೊಸೈಟಿಗಳಿಗೆ ರಿಜಿಸ್ಟ್ರಾರಾದ ಎಂ. ರಾಮರಾವ್, ಎಂ. ಎ.

ಇವರು ಬರೆದಿರುವ ಸ್ಮಾರಕಪತ್ರದ ಸಂಗ್ರಹವನ್ನು ಕೆಳಗೆ ಕೊಡುವೆವು. ಈ ಲಾವು ಬ್ರಿಟಿಷ್ ಮತ್ತು ಮೈಸೂರು ರಾಜ್ಯಗಳಿಗೆ ಸಮಾನವಾಗಿರುವುದರಿಂದ ಈ ಸಂಗ್ರಹವು ಬ್ರಿಟಿಷ್ ದೇಶಕ್ಕೂ ಅನ್ವಯಿಸುತ್ತದೆ.

ಕಾನೂನಿನ ಏರ್ಪಾಟ್.

'ಸಂಹತಿಃ ಕಾರ್ಯಸಾಧಿಕಾ' ಎಂಬಂತೆ, ಒಗ್ಗಟ್ಟಿನಿಂದ ಎಲ್ಲಾ ಕಾರ್ಯವು ನೆರವೇರುವುದು. ಹಾಗೆ ಜನಗಳು ಒಗ್ಗಟ್ಟಾಗಿ ಸೇರುವ ಸಂಘಗಳಿಗೆ ಸೊಸೈಟಿಗಳೆಂದು ಹೆಸರು. ಅಂತಹ ಜನರು ಪರಸ್ಪರಸಹಾಯದಿಂದ, ತಮ್ಮೆಲ್ಲರಿಗೂ ಪ್ರಯೋಜನವಾಗುವ ಕಾರ್ಯಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಸ್ಥಾಪಿಸುವ ಸಂಘಗಳಿಗೆ ಕೋಆಪರೇಟಿವ್ ಸೊಸೈಟಿಗಳು ಅಂದರೆ ಅನ್ಯೋನ್ಯ ಸಹಾಯ ಸಂಘಗಳೆಂದು ಹೆಸರು."

* * * * *

ಸೊಸೈಟಿಗಳ ಪ್ರಯೋಜನ.

"ಎಲ್ಲಾ ತರಹ ಜನಗಳಲ್ಲಿಯೂ, ಮಿತವ್ಯಯವನ್ನು ಮತ್ತು ಮುಂಜಾಗರೂಕತೆಯನ್ನು ನೆಲೆಗೊಳಿಸಿ, ಅನ್ಯೋನ್ಯಸಹಾಯದಿಂದ ಅವುಗಳನ್ನು ಸಫಲಗೊಳಿಸಬೇಕೆಂಬುದೇ ಕಾನೂನಿನ ಮುಖ್ಯೋದ್ದೇಶವು. ಆದರೆ, ಅನ್ಯೋನ್ಯಸಹಾಯವೆಂಬ ಮಾತಿನಿಂದ ಅನಿರ್ದಿಷ್ಟವಾದ ಮನುಷ್ಯನ ಎಲ್ಲಾ ಪ್ರಯೋಜನಗಳನ್ನು ಒದಗಿಸಿಕೊಡುವ ಸಂಘಗಳೆಂದು ತಿಳಿಯಕೂಡದು. ಜನರು ತಮ್ಮ ಗೃಹಕೃತ್ಯಗಳಿಗೆ ಬೇಕಾಗುವ ಪದಾರ್ಥಗಳನ್ನು ಒಟ್ಟಾಗಿಟ್ಟುಕೊಂಡು ಹಂಚಿಕೊಳ್ಳುವುದಕ್ಕಾಗಲಿ, ಬೇಕಾದ ಪದಾರ್ಥಗಳನ್ನು ಬೆಳೆಯುವುದಕ್ಕಾಗಲಿ, ಅವಶ್ಯಕವಾದ ಸಾಮಾನುಗಳನ್ನು ತಯಾರ್ಮಾಡುವುದಕ್ಕಾಗಲಿ, ಬಂಡವಾಳದ ಹಣಕ್ಕಾಗಿ ಲೇವಾದೇವಿ ಕೆಲಸವನ್ನು ನಡೆಸುವುದಕ್ಕಾಗಲಿ, ಒಗ್ಗಟ್ಟಿನಿಂದ ಕೆಲವು ನಿರ್ದಿಷ್ಟವಾದ ಪ್ರಯೋಜನಗಳಿಗಾಗಿ ಏರ್ಪಡಿಸಿಕೊಳ್ಳುವ ಸಂಘಗಳನ್ನೇ, ಕೋಆಪರೇಟಿವ್ ಸೊಸೈಟಿಗಳೆಂದು ತಿಳಿಯಬೇಕು."

ಸೊಸೈಟಿಯ ಉದ್ದೇಶಗಳು (ಕಾನೂನಿನ 3 ನೆಯ ಅಧಿಕರಣ).

"ಅಂತಹ ಸೊಸೈಟಿಗಳ ಮೆಂಬರುಗಳಲ್ಲಿ ಮಿತವ್ಯಯವನ್ನು ಮತ್ತು ಮುಂಜಾಗರೂಕತೆಯನ್ನು ಹೆಚ್ಚಿಸುವುದು; ಮೂಲಧನವನ್ನು ವೃದ್ಧಿಗೊಳಿಸಿ, ಅದರಿಂದ ಮೆಂಬರುಗಳಿಗೆ ಸಾಲಕೊಡುವುದು; ಮೆಂಬರುಗಳಿಗೆ ಕಟ್ಟಾ ಸಾಮಾನು, ಬೀಜ, ಗೊಬ್ಬರ ಮುಂತಾದುದನ್ನು ಒದಗಿಸಿಕೊಡುವುದು; ಆಹಾರಕ್ಕೆ ಬೇಕಾದ ಪದಾರ್ಥಗಳನ್ನು, ಉಡುಪಿಗೆ ಬೇಕಾದ ಬಟ್ಟೆಗಳನ್ನು, ವ್ಯವಸಾಯಕ್ಕೆ ಅವಶ್ಯಕವಾದ ಮುಟ್ಟುಗಳು, ಜಾನುವಾರ್ ಮೊದಲಾದುವನ್ನು, ಕೈಗಾರಿಕೆ ಕಸಬಿಗೆ ಬೇಕಾದ ಸಾಮಾನುಗಳನ್ನು ಒಟ್ಟಾಗಿ ಕೊಂಡು ಮೆಂಬರುಗಳಿಗೆ ಚಿಲ್ಲರೆಚಿಲ್ಲರೆಯಾಗಿ ಮಾರುವುದು; ಭೂಮಿಯಲ್ಲಿ ಬೆಳೆಯುವ ಪದಾರ್ಥಗಳನ್ನು, ಕಾರ್ಖಾನೆಗಳಲ್ಲಿ ತಯಾರಾಗುವ ಸಾಮಾನುಗಳನ್ನು ಮೆಂಬರುಗಳಿಗೆ ಬಿಕರಿ ಮಾಡುವುದಲ್ಲದೇ, ಅನ್ಯೋನ್ಯಸಹಾಯದಿಂದ ಮೆಂಬರುಗಳಿಂದಲೇ ಸರಕುಗಳನ್ನು ತಯಾರ್ ಮಾಡಿ"

ಸುವುದು; ಅಥವಾ ಧಾನ್ಯಗಳನ್ನು ಬೆಳೆಮಾಡಿಸುವುದು; ಯಂತ್ರಗಳನ್ನು ಕೊಂಡು ಮೆಂಬರುಗಳಿಗೆಲ್ಲಾ ಉಪಯೋಗವಾಗುವಂತೆ ಮಾಡುವುದು; ಮೆಂಬರುಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದು; ಜಮೀನುಗಳನ್ನು ಅವರಿಗೆ ತೆಗೆದುಕೊಡುವುದು; ಹೆಚ್ಚಾಗಿ ವಿವರಿಸಲೇತಕೆ: ಕೈಗೊಂಡ ಕಾರ್ಯವು ವ್ಯವಸಾಯಸಂಬಂಧವಾದುದೇ ಆಗಲಿ, ಕೈಗಾರಿಕೆಸಂಬಂಧವಾದುದೇ ಆಗಲಿ, ಅಥವಾ ಸರಕಾರದವರು ಒಪ್ಪುವ ಮತ್ಯಾವ ಕೆಲಸವೇ ಆಗಲಿ, ಅದನ್ನು ಸರಿಯಾಗಿ ಪ್ರವರ್ತಿಗೊಳಿಸಿ, ಎಲ್ಲರ ಮುತುವರ್ಜಿಯಿಂದಲೂ ಅದನ್ನು ಅಭಿವೃದ್ಧಿಗೆತರುವುದು; ಇವುಗಳೇ ಈ ಸೊಸೈಟಿಗಳ ಮುಖ್ಯೋದ್ದೇಶಗಳು.''

''ಇವುಗಳನ್ನು ಈಗ ಸ್ವಲ್ಪ ವಿಶದಪಡಿಸಬೇಕಾಗಿರುತ್ತದೆ. ಪ್ರತಿ ಮೆಂಬರು ದುಂದುಗಾರನಾಗದೆ ಮಿತವ್ಯಯವುಳ್ಳವನಾಗಿಯೂ, ಪಡಪೋಸಿಯಾಗಿರದೆ ಜಾಗರೂಕನಾಗಿಯೂ ಇರಬೇಕೆಂಬ ಅಂಶವನ್ನು ತಿಳಿಸಬೇಕಾದುದೇ ಇಲ್ಲ. ಆದರೆ, ರೈತರಲ್ಲಿಯೂ ಮತ್ತು ಇತರ ಕಸಬುದಾರರಲ್ಲಿಯೂ ಅನೇಕರು ಒಬ್ಬಂಟಿಗರಾಗಿದ್ದುಕೊಂಡು, ಕೆಲವು ಸಂದರ್ಭಗಳಲ್ಲಿ ಸಹಾಯವಿಲ್ಲದೇ ಕಷ್ಟಕ್ಕೆ ಸಿಕ್ಕಿ, ಬಹಳ ಪೇಚಾಡುತ್ತಾರಾದದರಿಂದ, ಅವರಲ್ಲಿ ಸದರಿ ಗುಣಗಳು ಅಂದರೆ ಮಿತವ್ಯಯವು ಮುಂಜಾಗರೂಕತೆಯು ಸಹ ವಿಶೇಷವಾಗಿ ಇರಲೇಬೇಕು.''

ಉದ್ದೇಶಗಳ ವಿವರಣೆ.

''ಯಾವ ಕೆಲಸವನ್ನು ಮಾಡಬೇಕಾಗಲಿ, ಬಂಡವಾಳವಿರಲೇಬೇಕೆಂಬ ಸಂಗತಿಯು ಎಲ್ಲರಿಗೂ ತಿಳಿದೇ ಇದೆಯಷ್ಟೆ; ಮಸಲ, ರೈತನಿಗೆ ಸ್ವಂತ ಬಂಡವಾಳವಿಲ್ಲದೇ ಇದ್ದರೆ, ಅವನು ವ್ಯವಸಾಯಕ್ಕೆ ಬೇಕಾದ ಜಮೀನನ್ನು ಹೇಗೆತಾನೇ ತೆಗೆದಾನು? ಒಂದುವೇಳೆ ಜಮೀನು ಹೇಗೆಯಾದರೂ ದೊರಕಿದಾಗ್ಯೂ ಅವನು ಅದನ್ನು ಬೇಸಾಯುಮಾಡುವ ಬಗೆ ಹೇಗೆ? ಅವನಿಗೆ ಸಾಲವೇನಾದರೂ ಇದ್ದರೆ ಅದನ್ನು ತೀರಿಸುವುದಕ್ಕೆ ದಾರಿಯೆಲ್ಲಿ? ಅವನು ದನಕರುಗಳನ್ನು, ಕುರಿಮರಿಗಳನ್ನು, ಬೀಜಬಿತ್ತನೆಗಳನ್ನು, ಗೋಡುಗೊಬ್ಬರಗಳನ್ನು, ಮುಟ್ಟುಕಟ್ಟುಗಳನ್ನು ಕೊಂಡುಕೊಳ್ಳುವ ಮಾರ್ಗವು ಯಾವುದು? ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ದಾರಿಯೆಲ್ಲಿ? ಮುಂದೆ ಬೆಳೆಯುವ ಫಲವನ್ನು ಖರೀದಿಗೆ ಕೊಡುವ ಷರತ್ತಿನಮೇಲೆಯಾದರೂ ಮುಂಗಡವಾಗಿ ಹಣವನ್ನು ತೆಗೆದುಕೊಳ್ಳದೇ ಇರುವುದಕ್ಕೆ ಆದೀತೆ? ಅವನ ಸಂಸಾರದ ಖರ್ಚಿಗೆ ಹಣ ಬೇಡವೆ? ಅವನು ಕಂದಾಯವನ್ನು ಕಟ್ಟತಕ್ಕ ರೀತಿ ಹೇಗೆ? ಗುತ್ತಿಗೆ ಮೊದಲಾದ ಬಾಬುಗಳಿಗಾಗಿ ಜಮೀನು ಮಾಲೀಕನಿಗೆ ಹಣವನ್ನು ಹೇಗೆ ತಾನು ಕೊಟ್ಟಾನು? ಚೆನ್ನಾಗಿ ಪರ್ಯಾಲೋಚಿಸಿದಲ್ಲಿ ಮೇಲೆ ತಿಳಿಸಿದಂತಹ ಅನೇಕ ಕೆಲಸಗಳಿಗೆ ಅವನು ಸಾಲಮಾಡದೇ ಇದ್ದರೆ ವಿಧಿಯೇ ಇಲ್ಲವೆಂದು ಗೊತ್ತಾಗುತ್ತದೆ.''

''ಇದಕೆ ರೈತನಿಗೆ ಸುಲಭವಾಗಿ ಸಾಲ ದೊರೆಯುವುದಕ್ಕೆ ಈಗ ಅನುಕೂಲವಾದ ಯಾವ ಆಶ್ರಯವೂ ಇಲ್ಲದೆ ಇರುವುದರಿಂದಲ್ಲವೇ, ಅವನು ಸಾಲಕ್ಕಾಗಿ''

"ದುಬಾರಿ ಬಡ್ಡಿಯನ್ನು ತೆತ್ತು, ಸಾಲ ಕೊಡಿಸುವವರಿಗೂ ಸಾಕ್ಷಿಗಾರರಿಗೂ ಸಹ ರುಸುಂ ಕೂಡ ಕೊಟ್ಟು ನಷ್ಟಪಡುತ್ತಲಿರುವುದು? ಈ ಕಾರಣಗಳಿಂದ ಅವನ ವರಮಾನಗಳೆಲ್ಲಾ ವ್ಯರ್ಥವಾಗಿ ಖರ್ಚಾಗುತ್ತದೆಯಾಗಿ, ಕೊನೆ ಅವನಿಗೆ ನಿಜವಾಗಿ ಉಳಿಯುವುದು ಬಹಳ ಕಡಮೆ. ಇದರಿಂದಲ್ಲವೇ ಅವನ ಅಹಸ್ಯಹಸಿಕ ಕಾಲಕ್ಷೇಪವು ಎಂದಿಗೂ ಕೊನೆಗಾಣದಂತೆ ಆಗಿರುವುದು? ಇದಕ್ಕೆ ಪ್ರತೀಕಾರವನ್ನು ಕಲ್ಪಿಸಿದರಷ್ಟೇ, ಅಂತಹ ರೈತನು ಮಿತವ್ಯಯಿಯಾಗಿ ಮುಂದಕ್ಕೆ ಬಂದಾನು? ಆದುದರಿಂದಲೇ ಈಗ ಸೊಸೈಟಿಗಳನ್ನು ಏರ್ಪಡಿಸಲು ಪ್ರಯತ್ನಪಡುವುದು."

"ಸಾಧಾರಣವಾಗಿ ರೈತನು ತನ್ನ ಕೆಲಸಗಳಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಳ್ಳುವುದಕ್ಕೆ ಸ್ವಲ್ಪ ದಿವಸಗಳ ಮಟ್ಟಿಗಾದರೂ ಚಿಲ್ಲರೆ ಸಾಲವನ್ನು ಮಾಡಲೇಬೇಕು. ಹಾಗೆ ಸಾಲ ದೊರೆಯದೇ ಇದ್ದರೆ ಅವನ ಕೆಲಸವೇ ಸಾಗುವುದಿಲ್ಲ. ಮಸಲ, ರೈತನಿಗೆ ಆರಂಭಕ್ಕೆ ಎತ್ತನ್ನು ಕೊಂಡುಕೊಳ್ಳುವುದಕ್ಕೆ ಹಣ ದೊರೆಯದೇಹೋದರೆ, ಆ ಸಾಲಿನಲ್ಲಿ ಬೆಳೆಮಾಡುವುದಕ್ಕೆ ಅವನಿಗೆ ಆಗದೆ ಹೋಗಬಹುದು. ಅದರಿಂದ ಅವನಿಗೆ ತುಂಬಾ ಕಷ್ಟ ಉಂಟಾಗಬಹುದು. ಹೀಗಿರುವಲ್ಲಿ ಅವನು ಕೂಪಕೂರ್ಮದಂತೆ ತನ್ನಮಟ್ಟಿಗೆ ತಾನು ಇದ್ದುಕೊಂಡು, ತನ್ನ ಕಷ್ಟಾರ್ಜಿತದಿಂದಲೇ ತನ್ನ ಆದಾಯವೆಚ್ಚಗಳನ್ನು ನಡೆಸಿಕೊಳ್ಳುತ್ತಿದ್ದಲ್ಲಿ, ಒಂದುವೇಳೆ, ಯಾತಕ್ಕಾದರೂ ಸಾಲಮಾಡಬೇಕಾದ ಸಂದರ್ಭವು ಅವನಿಗೆ ಒದಗಿದರೆ, ಯಾರಿಗೂ ಅವನ ಪರಿಚಯವೇ ಇಲ್ಲದುದರಿಂದ, ಸಾಲಕೊಡುವುದಕ್ಕೆ ಯಾರಿಗೆ ತಾನೇ ಅವನಲ್ಲಿ ಪೂರಾ ಖಾತ್ರಿ ಇದ್ದೀತು? ಒಂದುವೇಳೆ ಸಾಲಕ್ಕಾಗಿ ಅವನು ಯಾವುದನ್ನಾದರೂ ಆಧಾರಮಾಡುವುದಾದರೆ, ಆ ಆಧಾರವು ಇಂಥದೇ ಇಷ್ಟರದೇ ಎಂದು ನಿಶ್ಚಯಿಸಿ ನಂಬುವುದುತಾನೇ ಹೇಗೆ? ಈ ಅನಿವಾರ್ಯಗಳು ನಿವಾರಣೆಯಾಗುವ ಬಗೆ ಹೇಗೆಂದರೆ: ಅಂತಹವನು ಒಂದು ಸೊಸೈಟಿಗೆ ಮೆಂಬರಾಗಿ ಸೇರಿದರೆ, ಅವನ ಪರಿಚಯವು ಎಲ್ಲರಿಗೂ ಉಂಟಾಗುವುದರಿಂದ, ಜನರಿಗೆ ಅವನಲ್ಲಿ ಖಾತ್ರಿ ಹೆಚ್ಚುತ್ತದೆ. ಸೊಸೈಟಿಯ ಒಟ್ಟು ಖಾತ್ರಿಮೇಲೆ ಎಷ್ಟು ಹಣ ಬೇಕಾದರೂ ಸೇರಿಸಬಹುದು. ಆದರೆ ಅಷ್ಟು ಹಣವನ್ನು ಒಬ್ಬನು ಪ್ರತ್ಯೇಕವಾಗಿ ತನ್ನ ಖಾತ್ರಿ ಇಂದಲೇ ಜಮಾಯಿಸಬಲ್ಲನೇ? ಈ ಅಂಶಗಳನ್ನು ಯೋಚಿಸದೇನೆ, ಸುಲಭ ಬಡ್ಡಿಯಮೇಲೆ ಸಾಲಾ ತೆಗೆಯಲು ಹಣ ದೊರೆಯುವುದಿಲ್ಲವೆಂದು ಹೇಳುವುದು ಸರಿಯೇ? ಸಾಲ ಪಡೆಯುವವನ ಖಾತ್ರಿ ಸಾಲದುದರಿಂದ ಹಣ ದೊರೆಯುವುದಿಲ್ಲವೇ ಹೊರತು, ಸುಲಭ ಬಡ್ಡಿಗೆ ಸಾಲ ಕೊಡಲು ಹಣವೇನೋ ಬೇಕಾದಷ್ಟು ಇದ್ದೇ ಇರುತ್ತದೆ. ಇದಕ್ಕೆ ದೃಷ್ಟಾಂತವೇನೆಂದರೆ: ಈಗ ಸರ್ಕಾರದ ಸೇವಿಂಗ್ಸ್ ಬ್ಯಾಂಕಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಇರುತ್ತದೆಯಷ್ಟೆ. ಇಷ್ಟು ಭಾರೀ ಮೊಬಲಗನ್ನು ಅಲ್ಪ ಬಡ್ಡಿಮೇಲೆ ಇಂಡಿಯಾ ಗೌರ್ನಮೆಂಟಿನ ಪತ್ರಗಳಲ್ಲಿ ಹಾಕಬೇಕು; ಇಲ್ಲವೇ ಅದು ನಿಷ್ಪ್ರಯೋಜನವಾಗಿ ಖಜಾನೆಯಲ್ಲಿ ಮಲಗುತ್ತಾ ಬಿದ್ದಿರಬೇಕಾಗಿದೆ. ಸರಿಯಾದ ಖಾತ್ರಿ ಇದ್ದಲ್ಲಿ ಕೇವಣಾತಿ ಇಡುವವರು ಹಣ"

"ವನ್ನು ಸರ್ಕಾರದಲ್ಲಿ ಇಡುವುದಕ್ಕೆ ಬದಲಾಗಿ ವ್ಯವಸಾಯಗಾರರಿಗೂ ಇತರ ಕಸಬುದಾರರಿಗೂ ಸುಲಭ ಬಡ್ಡಿ ಮೇಲೆ ಸಾಲವನ್ನು ಕೊಡಲೇ ಕೊಡುವರು. ಆದರೆ ಸೊಸೈಟಿಯು ಖಾತ್ರಿಯನ್ನು ತಾನೇ ಹೇಗೆ ನೆಚ್ಚುವುದೆಂದು ಕೇಳಬಹುದು. ಸೊಸೈಟಿಯ ಆಡಳಿತವು ಕ್ರಮವಾಗಿಯೂ ಎಲ್ಲರಿಗೂ ಗೊತ್ತಾಗುವ ರೀತಿಯಲ್ಲಿಯೂ ನಡೆಯುತ್ತದೆಯಾಗಿ, ಅವು ಪ್ರತ್ಯೇಕವಾಗಿ ಯಾವನೊಬ್ಬನ ನಡವಳಿಕೆಗಳಿಗೂ ಸಂಬಂಧಪಡದೆ, ಸ್ವತಂತ್ರವಾಗಿರುವುದರಿಂದ, ಸೊಸೈಟಿಯ ವಿಷಯದಲ್ಲಿ ಜನಗಳಿಗೆ ಪ್ರತ್ಯೇಕವಾಗಿ ಒಬ್ಬ ಮನುಷ್ಯನಲ್ಲಿರುವುದಕ್ಕಿಂತಲೂ ಹೆಚ್ಚು ನಂಬಿಕೆಯುಂಟಾಗುತ್ತದೆ. ಆದುದರಿಂದಲೇ ಅಂತಹ ಸೊಸೈಟಿಗಳನ್ನು ಏರ್ಪಡಿಸಲು ಅವಶ್ಯಕತೆಯುಂಟಾಗಿರುವುದು. ಆದಕಾರಣ ಈ ವಿಷಯವನ್ನು ಚೆನ್ನಾಗಿ ವಿಚಾರಮಾಡಬೇಕು.

ಸೊಸೈಟಿಯಿಂದುಂಟಾಗುವ ವಿಶೇಷ ಪ್ರಯೋಜನಗಳು.

ಕೋ ಆಪರೇಟಿವ್ ಸೊಸೈಟಿಗಳಿಂದ ಮೆಂಬರುಗಳಿಗೆ ಇತರ ವಿಧವಾದ ಪ್ರಯೋಜನಗಳೂ ಉಂಟು. ಅವು ಯಾವುವೆಂದರೆ:—"

"ಸದರೀ ಸೊಸೈಟಿಗಳ ಮಾರ್ಫತ್, ಕಚ್ಚಾ ಪದಾರ್ಥಗಳನ್ನು, ಮತ್ತೂ ಗೊಬ್ಬರವನ್ನು ಕಮ್ಮಿದರದ ಬೆಲೆಗೆ ಪಡೆಯಬಹುದು. ಒಬ್ಬೊಬ್ಬನು ಪ್ರತ್ಯೇಕ ಪ್ರತ್ಯೇಕವಾಗಿ ಸ್ವಲ್ಪಸ್ವಲ್ಪ ಪದಾರ್ಥಗಳನ್ನು ಕೊಂಡುಕೊಳ್ಳುವುದರಿಂದಲೂ ಅವನಿಗೆ ಪದಾರ್ಥಗಳು ಸರಿಯಾಗಿ ದೊರೆಯುವ ಸ್ಥಳಗಳ ಪರಿಚಯವಿಲ್ಲದುದರಿಂದಲೂ ಒಳ್ಳೆಯ ತರಹೆ ಪದಾರ್ಥಗಳು ಅವನಿಗೆ ದೊರೆಯದೆ ಹೋಗಬಹುದು. ಆದರೆ, ಸೊಸೈಟಿಯ ದಾರ್ಢ್ಯದಿಂದ ಅವಲ್ ರಖಂ ಪದಾರ್ಥಗಳನ್ನು ಪಡೆಯಬಹುದು. ಅಲ್ಲದೆ ಈಗ ರೈತರಿಗೇ ಆಗಲಿ, ಇತರ ಕಸಬುದಾರರಿಗೇ ಆಗಲಿ, ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ ರಹವೂ ಇಲ್ಲ; ಯಂತ್ರಗಳ ಮೂಲಕ ನಡೆಸತಕ್ಕಷ್ಟು ಕೆಲಸವು ಅವರಲ್ಲಿ ಇಲ್ಲವೂ ಇಲ್ಲ. ಸೊಸೈಟಿಗಳು ಏರ್ಪಟ್ಟಲ್ಲಿ, ಅವು ಯಂತ್ರಗಳನ್ನು ತರಿಸಿ ಮೆಂಬರುಗಳಿಗೆ ಬಾಡಿಗೆಗೆ ಕೊಟ್ಟರೂ ಕೊಡಬಹುದು; ಅಥವಾ ಕಂತುಮೇರೆಗೆ ಮೊಬಲಗನ್ನು ತೆಗೆದುಕೊಂಡು ಖರೀದಿಗಾದರೂ ಕೊಡಬಹುದು. ಇದರ ಮೇಲೆ ಪ್ರತಿಯೊಬ್ಬನು ತಾನು ಬೆಳೆದ ಪದಾರ್ಥಗಳನ್ನಾಗಲಿ, ತಾನು ತಯಾರ್ ಮಾಡಿದ ಸರಕನ್ನಾಗಲಿ, ಪ್ರತ್ಯೇಕವಾಗಿ ಬಿಕರಿಗೆ ಕಳುಹಿಸುವುದಕ್ಕೆ ಬದಲಾಗಿ, ಮೆಂಬರುಗಳ ಬಗೆ ಸರಕುಗಳನ್ನೆಲ್ಲಾ ರಖಂವಾರ್ ವಿಂಗಡಿಸಿ, ಮೂಟೆಗಳನ್ನು ಕಟ್ಟಿಸಿ, ಸೊಸೈಟಿಗಳ ಮೂಲಕ ಕಳುಹಿಸುವುದಾದರೆ, ಸಾಗಿಸುವ ಖರ್ಚು ಕಡಮೆಯಾಗುತ್ತದೆ. ಖರೀದಿಗೆ ಬೇಕಾದಷ್ಟು ಗಿರಾಕಿಯೂ ದೊರೆಯುತ್ತದೆ. ಇದೂ ಅಲ್ಲದೆ, ಎಂಥಾ ಪದಾರ್ಥಗಳಿಗೆ ಹೊರಗೆ ಗಿರಾಕಿ ಇರುತ್ತದೆ? ಯಾವ ಯಾವ ಪದಾರ್ಥಗಳನ್ನು ಯಾವ ಯಾವ ರೀತಿಯಲ್ಲಿ ಬೆಳೆಯಬೇಕು? ಅದನ್ನು ಯಾವ ರೀತಿಯಿಂದ ಭರ್ತಿಮಾಡಿ ರವಾನಿಸಬೇಕು? ವ್ಯಾಪಾರಮುಖ್ಯರಾಷ್ಟ್ರಗಳಲ್ಲಿ ಅವುಗಳನ್ನು ಜರನಾಡಿಕೊಂಡು, ಒಂದು ಕಡೆ ಜಮಾಯಿಸಿ, ಸರಿಯಾಗಿ ಬಿಕರಿ ಮಾಡಿ, ಖರ್ಚು ಜಾತಾ ಉಳಿಯುವ ಮೊಬಲಗನ್ನು ಮಾಲೀಕರಿಗೆ ಪಾವತಿ"

‘‘ಮಾಡಲು ಯಾವ ಯಾವ ಏರ್ಪಾಟುಗಳನ್ನು ಮಾಡಬೇಕು ? ಎಂಬೀ ಸಂಗತಿಗಳನ್ನು ಸೊಸೈಟಿಗಳ ಮೂಲಕ ತಿಳಿದುಕೊಳ್ಳುವುದಕ್ಕೆ ತುಂಬಾ ಅನುಕೂಲವಿರುತ್ತದೆ. ಮತ್ತು ಯಾವುದಾದರೂ ಒಂದು ಸೊಸೈಟಿಯು ಸ್ಥಾಪಿತವಾಗಿ ಚೆನ್ನಾಗಿ ಅಭಿವೃದ್ಧಿಗೆ ಬಂದ ಮೇಲೆ, ಅದರ ಮಾರ್ಫತ್ ಷೇಣಿಗಳನ್ನು ಮಾಡಿಸಿ, ಅಲ್ಲಿ ವ್ಯವಸಾಯದ ಮುಟ್ಟುಗಳನ್ನು, ಜಾರ್ವಾರ್ ವಗೈರೆ ಸಲಕರಣೆಗಳನ್ನು ಇಡಿಸಿ, ಅದರ ಪ್ರಯೋಜನವನ್ನು ಎಲ್ಲರಿಗೂ ವ್ಯಕ್ತಪಡಿಸಬಹುದು. ಇದರ ಮೇಲೆ, ವ್ಯವಸಾಯ ಮತ್ತು ಕೈಗಾರಿಕೆ ಸಂಬಂಧವಾದ ವಸ್ತುಪ್ರದರ್ಶನಗಳನ್ನು ನಡೆಯಿಸಿ, ಹೆಚ್ಚು ಮುತುವರ್ಜಿಯಿಂದ ಬೆಳೆದ ಪದಾರ್ಥಗಳನ್ನು ತರುವ ಜನರಿಗೂ, ಬಹಳ ಮೆಹನತ್ತಿನಿಂದ ತಯಾರ್ ಮಾಡಿದ ಸಾಮಾನುಗಳನ್ನು ತರುವ ಜನರಿಗೂ ಬಹುಮಾನಗಳನ್ನು ಕೊಡಲು ಸೊಸೈಟಿಗೆ ಸಾಧ್ಯವಾಗಬಹುದು. ಈ ವಿಧಗಳಾದ ಸೊಸೈಟಿಗಳ ಪ್ರಯೋಜನಗಳನ್ನು ಸಂಕ್ಷೇಪವಾಗಿ ವಿವರಿಸಿರುತ್ತದೆ. ಅವುಗಳಿಂದ ಮೆಂಬರುಗಳಿಗೆ ಲಾಭಕರವಾದ ಅಂಶಗಳು ಇನ್ನೂ ಅನೇಕವಿರುವುವು. ಮುಖ್ಯವಾಗಿ ಹೇಳತಕ್ಕುದೇನೆಂದರೆ, ಸೊಸೈಟಿಯ ಆಡಳಿತವನ್ನು ಸರಿಯಾಗಿ ನಡೆಸಿದಲ್ಲಿ, ಅದರಿಂದುಂಟಾಗುವ ಪ್ರಯೋಜನವು ಅಪಾರವಾಗಿರುವುದು.’’

* * * * *

ಸೊಸೈಟಿಗಳ ಆಡಳಿತದ ಕ್ರಮ.

‘‘ಒಂದು ಸೊಸೈಟಿಗೆ ಕನಿಷ್ಠಪಕ್ಷ 10 ಜನ ಮೆಂಬರುಗಳಿರಬೇಕು. ಅವರ ವಯಸ್ಸು 18 ವರುಷಗಳಿಗೆ ಮೇಲ್ಪಟ್ಟಿರಬೇಕು. ಸೊಸೈಟಿಯ ಮೆಂಬರುಗಳಲ್ಲಿ ಒಬ್ಬರಲ್ಲೊಬ್ಬರಿಗೆ ಖಾತ್ರಿ ಇರಬೇಕು. ಹಾಗೆ ನಂಬಿಕೆಯನ್ನು ಹೆಚ್ಚುಗೊಳಿಸಲು, ಮೆಂಬರುಗಳು ಸೊಸೈಟಿಯ ಆಡಳಿತಗಳಲ್ಲೆಲ್ಲಾ ಪರಸ್ಪರ ಪರಿಚಯವುಳ್ಳವರಾಗಿ, ತುಂಬಾ ನಿಖಾಲ್ಸಿನಿಂದ ಕೆಲಸಮಾಡುತ್ತಾ, ಗೌರವವನ್ನು ಪಡೆದು, ಒಬ್ಬರನ್ನೊಬ್ಬರು ಹತೋಟಿಯಲ್ಲಿಟ್ಟುಕೊಳ್ಳಬೇಕು. ಮೆಂಬರುಗಳನ್ನು ಚುನಾವಣೆಯಿಂದಲೇ ತೆಗೆದುಕೊಳ್ಳಬೇಕೆಂತಲೂ ಅವರು ಒಂದೇ ಪಟ್ಟಣದವರಾಗಿಯಾಗಲಿ, ಒಂದೇ ಗ್ರಾಮಸ್ಥರಾಗಿಯಾಗಲಿ, ಅಥವಾ ಒಂದೇ ಗ್ರಾಮಸಮುದಾಯಕ್ಕೆ ಸೇರಿದವರಾಗಿಯಾಗಲಿ ಇರಬೇಕೆಂತಲೂ ಕೆಲವು ಸಲಹೆಗಳು, ಕಾನೂನಿನ ಏರ್ಪಾಟಿಗೆ ಪೂರ್ವದಲ್ಲಿಯೇ ಇಂಡಿಯಾ ಗೌರ್ನಮೆಂಟಿನವರ ಬಳಿಗೆ ಬಂದುವು. ಒಂದೇ ರೈಲ್ವೆಯ ಮಾರ್ಗದಲ್ಲಿ ಕೆಲಸಮಾಡುವ ಜನಗಳ ಗುಂಪಿನಂತಹ ಕೆಲವು ಪಂಗಡಗಳಲ್ಲಿ ಜನರು ಒಂದು ಕಟ್ಟನ್ನು ಮಾಡಿಕೊಂಡು, ತಮ್ಮ ಪಂಗಡದವರಿಗೆಲ್ಲ ಪ್ರಯೋಜನವಾಗುವ ಏರ್ಪಾಟುಗಳನ್ನು ಒಗ್ಗಟ್ಟಾಗಿ ಮಾಡಿಕೊಂಡಿರುತ್ತಾರೆ. ಅಂತಹವರ ವಿಷಯದಲ್ಲಿಯೂ ಮೇಲಿನ ಸಲಹೆಯನ್ನೂ ಅನ್ವಯಿಸುವಂತೆ ಮಾಡಿ, ಅಂತಹವರು ಎಲ್ಲಿಯೇ ಇರಲಿ ಒಂದೇ ಸ್ಥಳದಲ್ಲಿರಬೇಕೆಂಬ ನಿರ್ಬಂಧವನ್ನು ಕಲ್ಪಿಸದೇ ಇದ್ದಲ್ಲಿ ಉದ್ದಿಷ್ಟವಾದ ಕಾರ್ಯವು ಅನುಕೂಲವಾಗಿ ನೆರವೇರುವುದೆಂತಲೂ, ಒಂದೇ ಪಂಗಡದವರಲ್ಲಿಯಾಗಲಿ, ಒಂದೇ ಕಸಬುದಾರರಲ್ಲಿಯಾಗಲಿ, ಬಾಧಕವಿಲ್ಲದೆ ಸೊಸೈಟಿಯನ್ನು’’

" ಸ್ಥಾಪಿಸಬಹುದೆಂದು ರಿಜಿಸ್ಟ್ರಾರವರ ಮನಸ್ಸಿಗೆ ತೃಪ್ತಿಕರವಾಗಿ ತೋರಿಸಿದರೆ, ಅದೇ ಪ್ರಕಾರ ನಡೆಸಲು ಅವರಿಗೆ ಕಾನೂನಿನ ಮೇರೆಗೆ ಅಧಿಕಾರವಿರುತ್ತದೆ ಎಂತಲೂ ಇಂಡಿಯಾ ಗೌರ್ನಮೆಂಟಿನವರು ಅಭಿಪ್ರಾಯಪಟ್ಟರು."

" ಆದರೆ ಮೈಸೂರು ದೇಶದ ಕಾನೂನಿನಲ್ಲಿ ಅಂತಹ ನಿರ್ಬಂಧಗಳನ್ನು ಏರ್ಪ ಡಿಸಿರುವುದಿಲ್ಲ. ಆದಾಗ್ಯೂ, ಸೊಸೈಟಿಗೆ ಮೆಂಬರುಗಳನ್ನು ಸೇರಿಸಿಕೊಳ್ಳುವಾಗ ಮೇಲಿನ ಅಂಶಗಳಿಗೆ ನಿಗಾಕೊಡುವುದು ಅತ್ಯವಶ್ಯಕವು. ಮನಸ್ಸುಬಂದಂತೆ ನಿಯ ಮಗಳನ್ನು ಕಲ್ಪಿಸಿ, ಹೊಸಬರನ್ನು ಮೆಂಬರುಗಳನ್ನಾಗಿ ಸೇರಿಸಿಕೊಳ್ಳಕೂಡದು. ಹಾಗೆ ಹೊಸಬನನ್ನು ಸೊಸೈಟಿಗೆ ಮೆಂಬರನ್ನಾಗಿ ತೆಗೆದುಕೊಳ್ಳಬೇಕಾದರೆ, ಆ ಕಾಲದಲ್ಲಿ ಸೊಸೈಟಿಯಲ್ಲಿ ಮೊದಲೇ ಸೇರಿದ್ದ ಮೆಂಬರುಗಳು ಒಪ್ಪಬೇಕು; ಇಲ್ಲವೇ, ಮೆಂಬರುಗಳಿಗೆ ಪ್ರತಿನಿಧಿಗಳಾಗಿ ಏರ್ಪಟ್ಟಿರುವ ಎಗ್ಸಿಕ್ಯುಟಿವ್ ಕಮಿ ಟಿಯವರು, ಅಂದರೆ ಕಾರ್ಯನಿರ್ವಾಹಕ ಸಭೆಯವರು, ಒಪ್ಪಬೇಕೆಂಬ ಸಂಗತಿಯ ನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕು."

ಮೆಂಬರಿನ ಜವಾಬ್ದಾರಿ (ಕಾನೂನಿನ 7 ನೆಯ ಅಧಿಕರಣ).

" ಸೊಸೈಟಿಗೆ ಇರುವ ಸಾಲವನ್ನು ತೀರಿಸಲು ಮೆಂಬರಿಗೆ ಇರತಕ್ಕ ಜವಾ ಬ್ದಾರಿಯೂ ಅವಧಿಗೆ ಒಳಪಟ್ಟಾದರೂ ಇರಬಹುದು, ಒಳಪಡದೆಯಾದರೂ ಇರ ಬಹುದು. ಒಂದು ವೇಳೆ ಅಂತಹ ಜವಾಬ್ದಾರಿಯು ಅವಧಿಗೆ ಒಳಪಟ್ಟಿದ್ದಲ್ಲಿ ಅದನ್ನು ಸಾವಧಿಕಜವಾಬ್ದಾರಿ ಎಂತಲೂ, ಒಳಪಡದೇ ಇದ್ದಲ್ಲಿ ನಿರವಧಿಕಜವಾಬ್ದಾರಿ ಎಂತಲೂ ತಿಳಿ ಯಬೇಕು. ಸೊಸೈಟಿಯ ಸಾಲ ತೀರಿಸುವ ವಿಷಯದಲ್ಲಿ ಮೆಂ ಬರಿನ ಜವಾಬ್ದಾರಿಯು ನಿರವಧಿಕವಾಗಿದ್ದಾಗ ಸೊಸೈಟಿಯನ್ನು ಮುಚ್ಚಬೇಕಾಗಿ ಬಂದರೆ, ಮೆಂಬರು ಸೊಸೈಟಿಯ ಸಾಲ ತೀರುವವರೆಗೂ ಕಂಟ್ರಿಬ್ಯೂಷನ್ ಯಾನೆ ಮೊಬಲಗನ್ನು ಕೊಡುತ್ತಲೇ ಇರಬೇಕು. ಆದರೆ ಒಂದು ಸೊಸೈಟಿಗೆ ಇಷ್ಟೇ ಷೇರುಗಳಿರಬೇಕೆಂದು ಅವಧಿಯನ್ನು ಗೊತ್ತುಮಾಡಿದಾಗ ಷೇರನ್ನು ಪಡೆದವನು ಅದಕ್ಕಾಗಿ ತಾನು ಕೊಡಬೇಕಾದ ಮೊಬಲಗನ್ನು ಕೊಟ್ಟ ಬಳಿಕ, ಮುಂದೆ ಇನ್ನೇನೂ ಹೆಚ್ಚಾಗಿ ಕೊಡಬೇಕಾಗಿರುವುದಿಲ್ಲ. ಯಾವ ಮೆಂಬರೇ ಆಗಲಿ, ಸೊಸೈ ಟಿಯನ್ನು ಬಿಟ್ಟುಬಿಟ್ಟ ಮಾತ್ರದಿಂದಲೇ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳ ಲಾರನು. ಅಂತಹವನು ಸೊಸೈಟಿಯನ್ನು ಬಿಡುವ ಕಾಲದಲ್ಲಿ ಸೊಸೈಟಿಗೆ ಎಷ್ಟರ ಮಟ್ಟಿಗೆ ಸಾಲವಿರುತ್ತದೆಯೋ ಅದನ್ನು ತಾನು ಬಿಟ್ಟ ಕಾಲದಿಂದ ಮುಂದೆ ಒಂದು ವರುಷದ ವರೆಗೂ ತೀರಿಸುತ್ತಿರಬೇಕಾದ ಜವಾಬ್ದಾರಿಯು ಅವನಿಗೆ ಇದ್ದೇ ಇರು ತ್ತದೆ. ಇದೇ ಮೇರೆಗೆ ಫೌತಿಯಾದ ಮೆಂಬರಿನ ಆಸ್ತಿಯೂ ಕೂಡ ಫೌತಿ ಕಾಲದ ಲಾಗಾಯಿತು ಮುಂದೆ ಒಂದು ವರುಷದ ಪರ್ಯಂತ ಸಾಲಕ್ಕೆ ಈಡಾಗಿರುತ್ತದೆ."

" ಕೆಲವು ಮೆಂಬರುಗಳು ಇತರರ ಪ್ರಯೋಜನಕ್ಕೆ ಕುಂದುಕಪಡಿಸಿ, ಸೊಸೈ ಟಿಯ ಷೇರುಗಳನ್ನೆಲ್ಲಾ ತಾವೇ ತೆಗೆದುಕೊಳ್ಳಬಹುದಾದ ಪ್ರಮೇಯವೂ ಸಂಭ"

"ವಿಸಬಹುದು. ಅದನ್ನು ತಪ್ಪಿಸುವುದಕ್ಕಾಗಿ ಒಬ್ಬ ಮೆಂಬರಿಗೆ ಪರಮಾವಧಿ ಇಷ್ಟೇ ಷೇರುಗಳಿರಬೇಕೆಂದು ಗೊತ್ತುಮಾಡಿರುತ್ತದೆ. ಸಾಲ ತೀರಿಸುವ ಜವಾಬ್ದಾರಿಯು ಸಾವಧಿಕವಾಗಿದ್ದಲ್ಲಿ ಒಬ್ಬ ಮೆಂಬರಿಗೆ ಸೊಸೈಟಿಯ ಒಟ್ಟು ಷೇರುಗಳ ಪೈಕಿ ಐದರಲ್ಲಿ ಒಂದು ಭಾಗವಿರಬಹುದು. ಸರ್ಕಾರದಿಂದ ಕಂಠೋಕ್ತವಾದ ಮಂಜೂರಾತಿಯನ್ನು ಪಡೆದ ಹೊರತು ಅಂತಹ ಷೇರುಗಳ ಬೆಲೆಯು ಒಂದುಸಾವಿರ ರೂಪಾಯಿಗಳಿಗೆ ಮೀರಿರಕೂಡದು."

ಷೇರಿನ ಅವಧಿ (12 ನೆಯ ಅಧಿಕರಣ).

"ಮೆಂಬರು ತನ್ನ ಷೇರನ್ನಾಗಲಿ, ಮೂಲಧನದಲ್ಲಿ ತನಗಿರುವ ಹಕ್ಕನ್ನಾಗಲಿ ವರ್ಗಾಯಿಸುವ ವಿಷಯದಲ್ಲಿ ಏರ್ಪಡಿಸಿರುವ ನಿರ್ಬಂಧಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದುದು ಅವಶ್ಯಕವು. ಒಬ್ಬ ಮೆಂಬರು ಕಡೇ ಪಕ್ಷ ಒಂದು ವರುಷದವರೆಗಾದರೂ ಸೊಸೈಟಿಯಲ್ಲಿ ಷೇರನ್ನಾಗಲಿ, ಹಕ್ಕನ್ನಾಗಲಿ ಉಂಟಾಗಿದ್ದ ಹೊರತು ತಾನು ಅದನ್ನು ವರ್ಗಾಯಿಸಕೂಡದು. ಹಾಗೆ ವರ್ಗಾಯಿಸಲು ಅವಕಾಶ ಉಂಟಾದಾಗಲೂ, ಅದನ್ನು ಸೊಸೈಟಿಗೇ ಆಗಲಿ, ಅಥವಾ ಸೊಸೈಟಿಯ ಮೆಂಬರಿಗೇ ಆಗಲಿ ವರ್ಗಾಯಿಸಬೇಕು. ಅಂತಹ ಸಂದರ್ಭದಲ್ಲಿ ಅದನ್ನು ವರ್ಗ ಪಡೆಯತಕ್ಕವನ ಒಟ್ಟು ಷೇರುಗಳ ಕ್ಲುಪ್ತವಾದ ಪರಮಾವಧಿ ಷೇರುಗಳಿಗಿಂತ ಹೆಚ್ಚಾಗಿರಕೂಡದು."

ಷೇರನ್ನು ವರ್ಗಾಯಿಸುವುದು (14 ನೆಯ ಅಧಿಕರಣ).

"ಸೊಸೈಟಿಗಳಲ್ಲಿ ಇತರ ಮೆಂಬರುಗಳಿಗಿಂತ ಹೆಚ್ಚಾದ ಹಕ್ಕನ್ನು ಪಡೆದುಕೊಳ್ಳಲು ಯಾವ ಮೆಂಬರಿಗೂ ಸಾಧ್ಯವಾಗದಂತೆಯೂ, ಸೊಸೈಟಿಯ ಸಂಬಂಧದಿಂದ ತನಗೆ ಮಾತ್ರ ಫಾಯಿದೆಯಾಗುವ ದುರಾಲೋಚನೆಗಳನ್ನು ಯಾವ ಮೆಂಬರೂ ಮಾಡದೆ ಇರುವಂತೆಯೂ, ಯಾವ ಉದ್ದೇಶಗಳಿಗಾಗಿ ಸೊಸೈಟಿಗಳನ್ನು ಏರ್ಪಡಿಸಬೇಕೋ ಅವುಗಳಿಗೆ ವ್ಯತಿರಿಕ್ತವಾದ ಉದ್ದೇಶಗಳಿಂದ ಜನರು ಕಾನೂನಿನಿಂದೊದಗುವ ಸೌಲಭ್ಯಗಳ ಆಧಾರದಮೇಲೆ ಬ್ಯಾಂಕುಗಳನ್ನು ಮಾಡಿ, ಅದರಿಂದ ಸ್ವಪ್ರಯೋಜನವನ್ನು ಪಡೆಯಬೇಕೆಂದು ಬಯಸುವುದಕ್ಕೆ ಅವಕಾಶವಾಗದಂತೆಯೂ ಮಾಡಬೇಕೆಂಬ ಉದ್ದೇಶದಿಂದಲೇ ಮೇಲೆ ಹೇಳಿದ ನಿರ್ಬಂಧಗಳನ್ನು ಏರ್ಪಡಿಸಿರುತ್ತದೆ."

ನಿರ್ಬಂಧಗಳನ್ನು ಏರ್ಪಡಿಸುವುದರ ಉದ್ದೇಶ.

"ಈ ಮೇರೆಗೆ ನಡೆದುಕೊಳ್ಳುವ ಸೊಸೈಟಿಗಳಿಗೆ ಇಂಡಿಯಾ ಗೌರ್ನಮೆಂಟಿನ ಕಾನೂನಿನಲ್ಲಿ ಏರ್ಪಡಿಸಿರುವಂತೆಯೇ ನಮ್ಮ ಮೈಸೂರು ದೇಶದ ಕೋ ಆಪರೇಟಿವ್ ಸೊಸೈಟಿ ಕಾನೂನಿನಲ್ಲಿಯೂ ಕೆಲವು ರಿಯಾಯಿತಿಗಳನ್ನು ಏರ್ಪಡಿಸಿರುತ್ತದೆ. ಅವು ಯಾವುವೆಂದರೆ :—"

ರಿಯಾಯಿತಿಗಳು.

"ಮೆಂಬರಿನ ಮೇಲೆ ಸಾಲಕ್ಕಾಗಿ ಕೋರ್ಟಿನವರು ಕೊಡುವ ಡಿಕ್ರೀಗಳ ಜಾರೀಗೆ, ಸೊಸೈಟಿಯಲ್ಲಿ ಸದರಿ ಮೆಂಬರಿಗೆ ಇರುವ ಹಕ್ಕು ಗುರಿಯಾಗಿರತಕ್ಕದ್ದಲ್ಲ. ಸದರಿ ಮೆಂಬರಿನ ಅಂತಹ ಹಕ್ಕಿನಮೇಲೆ ಸರಕಾರದವರಿಗೇ ಆಗಲಿ, ಅವರಿಂದ ಸಿವಿಲ್‌ಪ್ರೊಸೀಜರ್ ಕೋಡಿನ 20 ನೆಯ ಅಧ್ಯಾಯದ ಮೇಲೆ ನೇಮಕವಾಗುವವರೆಗೇ ಆಗಲಿ ಅಧಿಕಾರವಿರುವುದಿಲ್ಲ."

ಕಾನೂನಿನ 15 ನೆಯ ಅಧಿಕರಣ.

"ಯಾವ ಮೆಂಬರಿನಿಂದಲೇ ಆಗಲಿ ಸೊಸೈಟಿಗೆ ಬಾಕೀಬರಬೇಕಾಗಿದ್ದರೆ ಅದನ್ನು ಸೊಸೈಟಿಯಿಂದ ಮೆಂಬರಿಗೆ ಸಲ್ಲಬೇಕಾದ ಹಂಚಿಕೆ ಹಣ, ಬಹುಮಾನದ್ರವ್ಯ, ಲಾಭದ ಮೊಬಲಗು, ಇವುಗಳಿಂದ ಕಟಾಯಿಸುವುದಕ್ಕೆ ಸೊಸೈಟಿಗೆ ಹಕ್ಕಿರುತ್ತದೆ. ಇವು ಮುಖ್ಯವಾದ ರಿಯಾಯಿತಿಗಳು. ಸರ್ಕಾರಕ್ಕೇ ಆಗಲಿ, ಜಮೀನ್ ಮಾಲೀಕನಿಗೇ ಆಗಲಿ ಕೊಡಬೇಕಾದ ಕಂದಾಯ, ಅಥವಾ ಕಂದಾಯದಂತೆ ವಸೂಲಾಗಬೇಕಾದ ಮೊಬಲಗಿನ ವಿಷಯಗಳನ್ನು ಬಿಟ್ಟರೆ, ಮೆಂಬರಿನಿಂದ ಬಾಕೀ ವಸೂಲಿಗೆ ಇತರ ಹಕ್ಕುದಾರರಿಗಿಂತಲೂ ಸೊಸೈಟಿಗೆ ಮೊದಲನೆಯ ಹಕ್ಕಿರುತ್ತದೆ; ಅಂದರೆ, ಮೆಂಬರಿನ ಆಸ್ತಿಮೇಲೆ ಸೊಸೈಟಿಯ ಬಾಕೀ ವಸೂಲಾದ ಬಳಿಕ ಸದರಿ ಮೆಂಬರಿಗೆ ಸಾಲಕೊಟ್ಟಿರುವ ಇತರ ಜನರು ಪ್ರವೇಶಿಸ ಬೇಕಾಗಿರುತ್ತದೆ."

ಕಾನೂನಿನ 20 ನೆಯ ಅಧಿಕರಣ.

"ಯಾವ ಮೆಂಬರಿಗೇ ಆಗಲಿ ಸೊಸೈಟಿಯಿಂದ ಬೀಜ, ಬಿತ್ತನೆ, ಗೊಬ್ಬರ ಮುಂತಾದ್ದು ಕೊಟ್ಟಿದ್ದರೂ, ಅಥವಾ ಇವುಗಳನ್ನು ಕೊಂಡುಕೊಳುವುದಕ್ಕೆ ಹಣವನ್ನು ಕೊಟ್ಟಿದ್ದರೂ, ಆಬಗ್ಗೆ ಬಾಕೀ ವಸೂಲಿಗೆ ಒಂದು ವರುಷದ ವರೆಗೂ ಅವನ ಜಮೀನಿನ ಬೆಳೆಯು ಗುರಿಯಾಗಿರುತ್ತದೆ."

"ಸೊಸೈಟಿಯಿಂದ ಮೆಂಬರಿಗೆ ಕೊಡುವ, ಅಥವಾ ಸೊಸೈಟಿಯ ಹಣದಿಂದ ಕೊಂಡುಕೊಳ್ಳುವ ವ್ಯವಸಾಯದ ಮುಟ್ಟುಗಳು, ಕೈಗಾರಿಕೆ ಕಸಬಿಗೆ ಬೇಕಾದ ಸಾಮಾನುಗಳು, ಕಾರ್ಖಾನೆ ಕೆಲಸಕ್ಕೆ ಅವಶ್ಯಕವಾದ ಪದಾರ್ಥಗಳು, ಇವುಗಳ ಮೇಲೆಯೂ ಸಾಲದ ವಸೂಲಿಗೆ ಸೊಸೈಟಿಗೆ ಮೊದಲನೆಯ ಹಕ್ಕಿರುತ್ತದೆ."

"ರಿಜಿಸ್ಟ್ರಾರವರು ವರುಷಕ್ಕೆ ಒಂದುಸಲವಾದರೂ ಸೊಸೈಟಿಯ ಲೆಖ್ಖಪತ್ರಗಳನ್ನು, ಸಾಲವನ್ನು, ಸಾಲಕ್ಕೆ ಆಧಾರವಾದ ಈಡನ್ನು ಸೊಸೈಟಿಯಿಂದ ಮೆಂಬರುಗಳಿಗೆ ಸಲ್ಲಬೇಕಾದ ಬಾಬುಗಳನ್ನು, ರುಸುಂ ತೆಗೆದುಕೊಳ್ಳದೇ ತನಿಖೆ ಮಾಡುವರು. ಹಾಗೆ ಸೊಸೈಟಿಯ ಲೆಖ್ಖಪತ್ರಗಳನ್ನು, ಸಾಲದ ಆಧಾರಗಳನ್ನು ಯಾವ ಕಾಲದಲ್ಲಿಯಾದರೂ ಹೋಗಿ ಅಜಮಾಯಿಷಿ ಮಾಡ"

ಕಾನೂನಿನ 21 ನೆಯ ಅಧಿಕರಣ.

“ಉ ರಿಜಿಸ್ಟ್ರಾರವರಿಗೂ, ಡೆಪ್ಯುಟಿಕಮಿಾಷನರಿಗೂ, ಅವರಿಂದ ನಿಯಮಿತರಾಗುವವರಿಗೂ, ಅಧಿಕಾರವಿರುತ್ತದೆ.”

“ಸೊಸೈಟಿಗೆ ಯಾವ ಮೆಂಬರಿನಿಂದಲಾಗಲಿ, ರೋಜುವಾರ್ ಲೆಖ್ಖದ ದಾಖಲೆ ಪ್ರಕಾರ ಎಷ್ಟು ಮೊಬಲಗು ಬರಬೇಕಾಗಿರುತ್ತದೆಯೋ ಅಷ್ಟು ಮೊಬಲಗನ್ನು ಕೋರ್ಟಿನಲ್ಲಿ ದಾವೆ ಮೂಲಕ ಬರಮಾಡಿಕೊಳ್ಳಬೇಕಾದರೆ, ಕೋರ್ಟಿಗೆ ಹಾಜರ್ ಮಾಡುವ ಅಂತಹ ದಾಖಲಾತಿಗಳ ನಕಲುಗಳನ್ನು ರುಜುವಾತಿಗೆ ಆಧಾರವಾಗಿ ತೆಗೆದುಕೊಳ್ಳಬೇಕು.”

ಕಾನೂನಿನ 22 ನೆಯ ಅಧಿಕರಣ.

“ಯಾವ ತರಹ ಸೊಸೈಟಿಗಾಗಲಿ, ಸರ್ಕಾರದವರು ತೆರಿಗೆಗಳ ವಿನಾಯಿತಿ ಕೊಡಬಹುದು. ಮತ್ತು ರಿಜಿಸ್ಟ್ರೇಷನ್ ಕಾನೂನಿನ ಪ್ರಕಾರ ಕೊಡಬೇಕಾಗುವ ಸ್ಟ್ಯಾಂಪ್ ಫೀಜನ್ನು ವಜಾ ಮಾಡಬಹುದು.”

ಕಾನೂನಿನ 25 ನೆಯ ಅಧಿಕರಣ.

6 ನೆಯ ಅಧಿಕರಣದ 5 ನೆಯ ಪ್ರಕರಣ. ಸೊಸೈಟಿಗಳಿಗೆ ಸರ್ಕಾರದವರು ಏರ್ಪಡಿಸಿರುವ ನಿರ್ಬಂಧಗಳು.

“ಅಲ್ಲದೇ ಸೊಸೈಟಿಯನ್ನು ರಿಜಿಸ್ಟರ್ ಮಾಡುವುದಕ್ಕಾಗಿ ಸ್ಟ್ಯಾಂಪ್ ಫೀಜನ್ನು ಕೊಡಬೇಕಾಗಿರುವುದಿಲ್ಲ. ಸರ್ಕಾರದವರು ಇಂತಹ ರಿಯಾಯಿತಿಗಳನ್ನು ತೋರಿಸಿ, ಸೊಸೈಟಿಗಳ ಕಾರ್ಯವು ಸರಿಯಾಗಿ ನಡೆಯಲಿ ಎಂಬ ಉದ್ದೇಶದಿಂದ ಕೆಲವು ನಿರ್ಬಂಧಗಳನ್ನು ಏರ್ಪಡಿಸಿರುತ್ತಾರೆ.”

“ಒಂದು ಸೊಸೈಟಿಗೆ ಒಂದು ಸಾಲಿನಲ್ಲಿ ಬರುವ ಲಾಭವನ್ನು ಹಂಚುವುದಕ್ಕೆ ಮೊದಲು, ಆ ಪೈಕಿ ನಾಲ್ಕರಲ್ಲೊಂದು ಭಾಗಕ್ಕೆ ಕಡಿಮೆ ಇಲ್ಲದಷ್ಟು ಮೊಬಲಗನ್ನು ರಿಜರ್ವ್ ಅಂದರೆ ಜಕೇರಿ ಫಂಡಿಗಾಗಿ ಇಡಬೇಕು. ಆದರೆ ಸರ್ಕಾರದವರ ಯಾವದಾದರೂ ಒಂದು ಸೊಸೈಟಿಯ ವಿಷಯದಲ್ಲಿ ಈ ಬಾಬನ್ನು ಕುರಿತು ಬೇರೇವಿಧವಾಗಿ ಹುಕುಂ ಮಾಡಬಹುದು.”

“ಸೊಸೈಟಿಯು ಮೆಂಬರುಗಳಿಂದ, ಧಾರಾಳವಾಗಿ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳಬಹುದು. ಆದರೆ ಇತರರಿಂದ ಸಾಲ ತೆಗೆಯಬೇಕಾದರೆ, ಸೊಸೈಟಿಯ ನಿಬಂಧನೆಗಳನ್ನು ಅನುಸರಿಸಿ ಎಷ್ಟು ಬೇಕೋ ಅಷ್ಟು ಹಣವನ್ನೇ ಸಾಲ ತೆಗೆಯಬೇಕು.”

“ಮೆಂಬರು ಅಲ್ಲದವರಿಗೆ ಸೊಸೈಟಿಯಿಂದ ಸಾಲ ಕೊಡಕೂಡದು. ಆದರೆ ರಿಜಿಸ್ಟ್ರಾರವರ ಸಮ್ಮತಿಮೇಲೆ ಒಂದು ಸೊಸೈಟಿಯಿಂದ ಮತ್ತೊಂದು ಸೊಸೈಟಿಗೆ ಸಾಲ ಕೊಡಬಹುದು.”

“ಸೊಸೈಟಿಯ ಹಣವನ್ನು ಸರ್ಕಾರದ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಬಹುದು. ಆದರೆ ಇತರ ಬ್ಯಾಂಕುಗಳಲ್ಲಿಯಾಗಲಿ ಇತರ ಮನುಷ್ಯರಲ್ಲಿಯಾಗಲಿ, ಹಣವನ್ನು ಇಡಬೇಕಾದರೆ, ರಿಜಿಸ್ಟ್ರಾರವರು ಒಪ್ಪಬೇಕು.”

ಸೊಸೈಟಿಗಳ ಮೇಲೆ ಸರ್ಕಾರದವರಿಗೆ ಇರುವ ಅಧಿಕಾರ.

“ಸಾಮಾನ್ಯವಾದ ಹುಕುಂನಿಂದಾಗಲಿ, ಹೆಚ್ಚು ಕಟ್ಟಿ ಹುಕುಂನಿಂದಲಾಗಲಿ ಸೊಸೈಟಿಗಳಿಂದ, ಚರಸ್ಥಿರ ಸ್ವತ್ತುಗಳ ಆಧಾರದಮೇಲೂ, ಇತರ ಆಧಾರಗಳ ಮೇಲೂ ಹಣವನ್ನು ಕೊಡಕೂಡದೆಂದು ನಿಷೇಧಿಸುವುದಕ್ಕೂ, ಅಥವಾ ಹಾಗೆ ಕೊಡುವುದಕ್ಕೆ ನಿರ್ಬಂಧಗಳನ್ನು ಕಲ್ಪಿಸುವುದಕ್ಕೂ, ಸರ್ಕಾರದವರು ಅಧಿಕಾರವನ್ನು ಇಟ್ಟುಕೊಂಡಿರುತ್ತಾರೆ. ಇಂತಹ ಅಧಿಕಾರವನ್ನು ಇಂಡಿಯಾ ಗೌರ್ನಮೆಂಟಿನವರು ರಿಜಿಸ್ಟ್ರಾರಿಗೆ ಕೊಟ್ಟಿರುತ್ತಾರೆ. ಆದುದರಿಂದಲೇ ಅಲ್ಲಿನ ರಿಜಿಸ್ಟ್ರಾರಿಗೆ ಯಾವ ಸೊಸೈಟಿಯ ವಿಷಯದಲ್ಲಿ ದೃಢವಾದ ನಂಬಿಕೆ ಇರುತ್ತದೆಯೋ, ಆ ಸೊಸೈಟಿಯಿಂದ ನಗಗಳ ಆಧಾರದಮೇಲೆ ಹಣವನ್ನು ಕೊಡಬಹುದೆಂದು ಅಪ್ಪಣೆ ಕೊಡಲು ಇಂಡಿಯಾ ಗೌರ್ನಮೆಂಟಿನ ಕಾನೂನುಮೇರಿಗೆ ಅವರಿಗೆ ಅಧಿಕಾರವಿರುತ್ತದೆ. ಆದರೆ ಮೈಸೂರು ಕಾನೂನಿನಲ್ಲಿ, ಚರಸ್ಥಿರ ಸ್ವತ್ತುಗಳ ವಿಷಯವಾಗಿ ಅಂತಹ ನಿರ್ಬಂಧಗಳನ್ನು ಏರ್ಪಡಿಸಿರುವದಿಲ್ಲ. ಸರ್ಕಾರದವರು ಹಾಗೆ ಕೊಡಕೂಡದೆಂದು ನಿರೋಧಿಸಿದ ಹೊರತು, ಅಥವಾ ಹಾಗೆ ಕೊಡಲು ಕೆಲವು ನಿರ್ಬಂಧಗಳನ್ನು ಕಲ್ಪಿಸಿದ ಹೊರತು, ಸರಿಯಾದ ಆಧಾರದ ಮೇಲೆ ಹಣವನ್ನು ಸಾಲಕೊಡುವದಕ್ಕೆ ಯಾವ ಸೊಸೈಟಿಗೂ ಅಭ್ಯಂತರ ವಿರುವದಿಲ್ಲ.”

“ಆದಾಗ್ಯೂ ನಗಗಳ ಆಧಾರದ ವಿಷಯದಲ್ಲಿ ನಿಜವಾದ ಕೆಲವು ತೊಂದರೆಗಳಿರುತ್ತವೆ. ಒಂದು ಪಟ್ಟಣದಲ್ಲಿಯೇ ಆಗಲಿ, ಒಂದು ದೊಡ್ಡ ಹಳ್ಳಿಯಲ್ಲಿಯೇ ಆಗಲಿ, ಸೊಸೈಟಿ ಇದ್ದು, ಅಲ್ಲಿ ಅಗಸಾಲೆಯೂ ಇದ್ದು, ಸಮೀಪದಲ್ಲಿಯೇ ಎಲ್ಲಿಯಾದರೂ ಅದಕ್ಕೆ ಸರಿಯಾಗಿ ಬೆಲೆಕಟ್ಟಿ, ಕೊಂಡುಕೊಳ್ಳುವವರೂ ಇದ್ದು, ಸೊಸೈಟಿಯಲ್ಲಿ ಬುದ್ಧಿವಂತರಾದವರು ಮೆಂಬರುಗಳಾಗಿಯೂ ಇದ್ದಲ್ಲಿ, ಈ ವಿಧವಾದ ವ್ಯಾಪಾರವನ್ನು ನಿರ್ಭಯವಾಗಿ ನಡೆಸಬಹುದು. ಅಂತಹ ಅನುಕೂಲ್ಯಗಳಿಲ್ಲದ ಹಳ್ಳಿಗಳಲ್ಲಿನ ಸೊಸೈಟಿಗಳಲ್ಲಿ ಆ ಪ್ರಕಾರ ನಡೆಸುವುದು ಅಪಾಯಕರವೇ ಸರಿ.”

“ಜಮೀನ್ ಆಧಾರದ ಮೂಲಕ ನಡೆಯುವ ಲೇವಾದೇವಿ ವಿಷಯದಲ್ಲಿ ಇನ್ನೂ ಹೆಚ್ಚು ತೊಂದರೆಗಳಿರುತ್ತವೆ. ರೈತನಿಗೆ ತೊಂದರೆ ತಪ್ಪಿಸಿ, ನಿಜವಾದ ಸಹಾಯವನ್ನು ಮಾಡಬೇಕಾದರೆ ಅವನು ತನ್ನ ಆಸ್ತಿಯನ್ನು ದುಬಾರೆ ಬಡ್ಡಿಯ ಮೇಲೆ ಪಡೆಯುವ ಸಾಲಕ್ಕೆ ಆಧಾರ ಮಾಡದಂತೆ ಮಾಡಿ, ಯುಕ್ತವಾದ ಬಡ್ಡಿಗೆ ಹಣವನ್ನು ಅವನಿಗೆ ಸಾಲ ಕೊಡಬೇಕು. ಹಾಗೆ ಜಮೀನ್ ಯೋಗ್ಯತೆಗೆ ತಕ್ಕಷ್ಟು ಮೊಬಲಗನ್ನು ಅವನಿಗೆ ಸಾಲಕೊಡದೇ ಹೋದರೆ, ಅವನು ಯಥಾಪ್ರಕಾರ ಇತರರ”

“ಹತ್ರ ಸಾಲಮಾಡಿ ನಷ್ಟಪಡಬೇಕಾಗುತ್ತದೆ. ಹಾಗಿಲ್ಲದೇ ಮೇಲೆ ಹೇಳಿದಂತೆ ನಡೆದುಕೊಂಡರೆ ಉಭಯತ್ರರಿಗೂ ಪ್ರಯೋಜನವಾಗುತ್ತದೆ. ಹೀಗೆ ಮಾಡದೇ ಸ್ವಲ್ಪವಾಗಿ ಸೇರುವ ಮೂಲಧನವನ್ನು, ಸಮಯಕ್ಕೆ ಸಿದ್ಧವಾಗಿ ಒದಗದಂತೆ ಇಟ್ಟಿರುವುದು ಸರಿಯಲ್ಲ. ಸ್ವಲ್ಪಕಾಲದ ಮಟ್ಟಿಗೆ ವಾಯಿದೇ ಕೊಟ್ಟು, ಚಿಲ್ಲರೆ ಚಿಲ್ಲರೆಯಾಗಿ ಸಾಲವನ್ನು ಕೊಟ್ಟು, ಅವುಗಳನ್ನು ಜಾಗ್ರತೆಯಾಗಿ ಬರಮಾಡಿಕೊಳ್ಳುವುದರಿಂದ, ಹಣಗಳನ್ನು ಸರಿಯಾಗಿ ಉಪಯೋಗಿಸಿದಂತೆ ಆಗುತ್ತದೆ. ಮುಖ್ಯವಾಗಿ, ಸಾಲವನ್ನು ಬರಮಾಡಿಕೊಳ್ಳಲು, ಕೋರ್ಟಿಗೆ ಹೋಗಬೇಕಾದ ತೊಂದರೆ ಸಂಭವಿಸದಂತೆ ನಡೆದುಕೊಳ್ಳುವುದು ಅವಶ್ಯಕವು.”

ಉಪಸಂಹಾರ. “ಇವುಗಳೇ ಈ ಹೊಸಕಾನೂನಿನ ಮುಖ್ಯೋದ್ದೇಶಗಳು. ಇವುಗಳನ್ನು ಸರಿಯಾದ ರೀತಿಯಲ್ಲಿ ನೆರವೇರಿಸಿದರೆ, ದೇಶದಲ್ಲಿ ವ್ಯವಸಾಯದ ಕಾರ್ಯಗಳು, ಕೈಗಾರಿಕೆ ಕಸಬುಗಳು ಯುಕ್ತವಾಗಿ ನಡೆಯುತ್ತವೆಯಲ್ಲದೆ, ಹಿಂದೆ ಹೇಳಿದಂತೆ ಸಾಲಮಾಡಬೇಕಾದ ಅವಶ್ಯಕತೆಯುಳ್ಳ ರೈತರಿಗೆ ಈ ಕಾನೂನಿಂದ ಬಹಳ ಪ್ರಯೋಜನವಾಗುತ್ತದೆ.”

“ಈ ವಿಧವಾದ ಸೊಸೈಟಿಗಳ ಕಾರ್ಯವು ತಡೆ ಇಲ್ಲದೇ ನೆರವೇರಬೇಕೆಂಬ ಉದ್ದೇಶದಿಂದ, ಇವುಗಳನ್ನು ಕಂಪೆನಿಗಳ ವಿಷಯವಾಗಿ ಏರ್ಪಟ್ಟಿರುವ ಸಾಮಾನ್ಯವಾದ ಕಾನೂನಿಗೆ ಒಳಪಡಿಸದೇ ಇರುತ್ತದೆಯಲ್ಲದೇ, ಇವುಗಳಿಗೆ ವಿಶೇಷವಾದ ಕೆಲವು ಹಕ್ಕುಗಳನ್ನು ಕೊಟ್ಟು, ಸೌಕರ್ಯಗಳನ್ನು ಕಲ್ಪಿಸಿರುತ್ತದೆ.”

“ಇಂತಹ ಸೌಕರ್ಯಗಳು ಈ ಕಾನೂನಿನಿಂದ ಒದಗುತ್ತದೆ ಎಂದು ತಿಳಿದು, ಯಾರೇ ಆಗಲಿ, ಸ್ವಪ್ರಯೋಜನಪರರಾಗಿ ಉಪಾಯಾಂತರಗಳಿಂದ ತಮ್ಮ ಉದ್ದೇಶಗಳನ್ನು ನೆರವೇರಿಸಿಕೊಳ್ಳದಂತೆಯೂ, ಯಾವ ನೆವದಿಂದಲೂ, ಸೊಸೈಟಿಯ ನಿಜವಾದ ಉದ್ದೇಶಗಳನ್ನು ಭಂಗಪಡಿಸಿ ಅವುಗಳನ್ನು ದೂಷಣೆಗೆ ತಾರದಂತೆಯೂ ವಿಶೇಷ ಜಾಗರೂಕತೆಯಿಂದ ನೋಡಿಕೊಳ್ಳುವುದು ಅತ್ಯವಶ್ಯಕವು.”

ಇಂತಹ ಸಂಘಗಳ ಏರ್ಪಡಿಸಿಕೊಳ್ಳಲಿಚ್ಛಿಸುವವರು ಆ ಆ ಅಧಿಪತ್ಯದ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರಿಗೆ ಬರೆದುಕೊಂಡರೆ, ಅವರು, ಬಹು ಸಂತೋಷದಿಂದ ಬೇಕಾದ ಸಲಹೆಗಳನ್ನುಕೊಟ್ಟು ಮಾರ್ಗ ತೋರಿಸಿಕೊಡುತ್ತಾರೆ.

ಅನ್ಯೋನ್ಯ ಸಹಾಯಕ ಸಂಘಗಳ ಉಪಯುಕ್ತತೆ.

ಬ್ಯಾಂಕುಗಳ ಉಪಯುಕ್ತತೆ. ಹಣವನ್ನು ಉಪಯೋಗದಲ್ಲಿಟ್ಟಿದ್ದರೆ, ಅದು ಯಾವಾಗಲೂ ಬೆಳೆಯುತ್ತಲೇ ಹೋಗುವುದು. ಹಣವನ್ನು ಉಪಯೋಗದಲ್ಲಿಡಲು ಬ್ಯಾಂಕುಗಳಿಗಿಂತ ಅನುಕೂಲವಾದ ಸಾಧನಗಳು ಮತ್ತಾವೂ ಇಲ್ಲ. ಹಣವನ್ನು

ಕೊಳ್ಳುವುದು ಕೊಡುವುದು ಇವುಗಳೇ ಬ್ಯಾಂಕಿನ ವೃತ್ತಿಗಳು. ಎಂದರೆ ಬಡ್ಡಿಗೆ ಹಣವನ್ನು ಸಾಲಾ ತೆಗೆದುಕೊಂಡು, ಆ ಹಣವನ್ನು ಹೆಚ್ಚು ಬಡ್ಡಿಗೆ ಸಾಲಕೊಟ್ಟು ಲಾಭ ಸಂಪಾದನೆಮಾಡುವುದೇ ಬ್ಯಾಂಕಿನ ವೃತ್ತಿಯಾಗಿರುತ್ತದೆ. ಖಾಸ್ಗಿ ಜನರು ತಮ್ಮ ಹಣವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವುದಾದರೆ ಆ ಹಣಕ್ಕೆ ಅವರು ಸದಾ ಬಡ್ಡಿಯನ್ನು ಹುಟ್ಟಿಸಲಾರರು. ಏಕೆಂದರೆ ಋಣಿಗಳನ್ನು ಹೊಂದಿಸಲಾಗುವುದಿಲ್ಲ. ಇವರ ಕೈಗೆ ಹಣ ಬಂದಾಗ ಅದನ್ನು ಯಾರೂ ಸಾಲವಾಗಿ ಅಪೇಕ್ಷಿಸದಿರಬಹುದು. ಖಾತರಿ ಆಸಾಮಿಗಳು ಸಿಕ್ಕದಿರಬಹುದು. ಅಥವಾ ಆಸಾಮಿಗಳಿಗೆ ಬೇಕಾದಷ್ಟು ಹಣವು ಇಲ್ಲದಿರಬಹುದು. ಮತ್ತೂ ಖಾಸ್ಗಿ ಜನರಿಗೆ ಸಾಲ ವಸೂಲ್ಮಾಡುವ ಕಾರ್ಯವು ಬಹು ಕ್ಲೇಶಕರವಾಗಿರುತ್ತದೆ. ಸಾಲ ವಸೂಲಾಗದಿದ್ದರೆ ಕೋರ್ಟಿಗೆ ಹೋಗಬೇಕಾಗಿ ಬಂದು, ದ್ರವ್ಯವ್ಯಯವೂ, ದೇಹ ಶ್ರಮೆಯೂ, ಮನೊವ್ಯಾಕುಲವೂ, ವೃಥಾಕಾಲಕ್ಷೇಪವೂ ಉಂಟಾಗುತ್ತವೆ. ಅನೇಕ ವೇಳೆ ಹಣವೇ ಮುಳಗಿ ಹೋಗುವುದು.

ಖಾಸ್ಗಿ ಲೇವಾದೇವಿಯಲ್ಲಿ ಈ ತರದ ಅನಾನುಕೂಲಗಳಿರುವುದರಿಂದ ಖಾಸ್ಗಿ ಋಣದಾತರು ಸೇಕಡ ಒಂದೂ ಒಂದೂವರೆಯಂತೆ ಬಡ್ಡಿಯನ್ನು ತೆಗೆದುಕೊಂಡರೂ, ಅವರ ಒಟ್ಟು ಹಣವನ್ನೂ ಒಟ್ಟು ಕಾಲವನ್ನೂ ಲೆಕ್ಕಾ ಹಾಕಿದರೆ ಒಟ್ಟು ಹಣಕ್ಕೆ ಸೇಕಡ 6–8 ಆಣೆ ಗಿಂತಲೂ ಹೆಚ್ಚು ಬಡ್ಡಿಯು ಉತ್ಪತ್ತಿಯಾದಂತಾಗುವುದಿಲ್ಲ. ಇದರ ಮೇಲೆ, ಖಾಸ್ಗಿಯಲ್ಲಿ ಲೇವಾದೇವಿಮಾಡುವ ಮನುಷ್ಯನು ಬಹು ಕಾಲವನ್ನು ಈ ಕೆಲಸದಲ್ಲೇ ಕಳಿಯಬೇಕಾಗುವುದು. ತನ್ನಲ್ಲಿರುವ ಹಣವನ್ನು ಋಣಿಗಳ ಕೈಗೆ ಸೇರಿಸುವವರೆಗೂ ಹಣವನ್ನು ಕಳ್ಳಕಾಕರ ಹಾವಳಿಯಿಂದ ಕಾಪಾಡಬೇಕಾಗುತ್ತದೆ.

ಇಂತಹ ಅನಾನುಕೂಲಗಳ ನಿವಾರಣೆಗಾಗಿಯೇ ಬ್ಯಾಂಕುಗಳು ಏರ್ಪಟ್ಟಿವೆ. ಸರ್ಕಾರದ ಪರ್ಯವೇಕ್ಷಣಕ್ಕೊಳಪಟ್ಟ ಅನ್ಯೋನ್ಯ ಸಹಾಯಕ ಸಂಘಗಳಂತಹ ಬ್ಯಾಂಕುಗಳಲ್ಲಿ ಪೂರ್ಣ ಸುರಕ್ಷಿತೆಯಿದೆ. ಅವು ದಿವಾಳಿಯಾಗತಕ್ಕ ಸಂಭವವೇ ಇಲ್ಲ. ಬ್ಯಾಂಕುಗಳು ಹಣದ ಅಂಗಡಿಗಳು; ಬ್ಯಾಂಕಿನವರು ಹಣದ ದಳ್ಳಾಳಿಗಳು. ಹಣವನ್ನಪೇಕ್ಷಿಸುವರಾರುಬೇಕಾದರೂ, ಋಣದಾತನಿಗೆ, ಅಡಿಯಾಳಾಗದೆ ಅವನನ್ನು ಆಶ್ರಯಿಸದೆ, ಅವನ ದಾಕ್ಷಿಣ್ಯಕ್ಕೆ ಒಳಗಾಗದೆ, ವಿಳಂಬವಿಲ್ಲದೆ, ಅಂಗಡಿಯಲ್ಲಿ ಸರಕನ್ನು ಕೊಳ್ಳುವಂತೆ ಸಾಲವನ್ನು ಪಡೆಯಬಹುದು. ಧನವಂತರಾದರೋ ತಮ್ಮ ಕೈಗೆ ಬರುವ ಹಣವನ್ನು ತಮ್ಮಲ್ಲಿ ಒಂದು ಗಳಿಗೆಯೂ ವೃಥಾ ಇಟ್ಟುಕೊಳ್ಳದೆ ಬ್ಯಾಂಕಿನಲ್ಲಿಟ್ಟು ಇಟ್ಟಂದಿನಿಂದ ಬಡ್ಡಿಯನ್ನು ಸಂಪಾದನೆಮಾಡಬಹುದು. ತಮಗೆ ಬೇಕಾದಾಗ ಬೇಕಾಗುವಷ್ಟು ಹಣವನ್ನು ಬ್ಯಾಂಕಿನಿಂದ ವಾಪಸ್ಸು ತೆಗೆದುಕೊಂಡು ಮಿಕ್ಕ ಹಣಕ್ಕೆ ಬಡ್ಡಿಯನ್ನು ಸಂಪಾದನೆಮಾಡುತ್ತಿರಬಹುದು. ಮತ್ತು ಖಾಸ್ಗಿ ಜನರೊಳಗೆ ಲೇವಾದೇವಿಯಿಂದ ಬಡ್ಡಿಯನ್ನು ಸಂಪಾದನೆಮಾಡುವುದು

ವಿಶೇಷ ಹಣವಂತರಿಗೆ ಸಾಧ್ಯವೇ ಹೊರತು ಸಾಧಾರಣರಿಗೆ ಸಾಧ್ಯವಲ್ಲ. ಬ್ಯಾಂಕುಗಳಲ್ಲಾದರೊ ಬಡ್ಡಿ ಸಂಪಾದನೆಯು ಕೂಲಿಗೂ ಸಾಧ್ಯ. ದಿನ ಗೂಲಿ ಸಾಲ್ಕಾಣೆಯನ್ನು ಕೂಲಿಯು ತನಲ್ಲಿಟ್ಟುಕೊಳ್ಳದೆ ಬ್ಯಾಂಕಿಗೆ ಹಾಕಿದರೆ, ಅದು ಬಡ್ಡಿಯನ್ನು ಹುಟ್ಟಿಸುತ ಹೋಗುವುದು. ಅದುಕಾರಣ ಬ್ಯಾಂಕುಗಳ ಸಂಸ್ಥಾಪನೆಗಳಿಂದ ಉಪಪನ್ನರು ಅನುಪಪನ್ನರು ಎಲ್ಲರೂ ಬಡ್ಡಿಯನ್ನು ಸಂಪಾದಿಸಬಹುದು.

ಪಾಶ್ಚಿಮಾತ್ಯರೂ ನಾಗರೀಕರಾದ ಹಿಂದುಗಳೂ ತಮ್ಮಲ್ಲಿರುವ ಹಣವನ್ನು ಬ್ಯಾಂಕಿನಲ್ಲಿಡುವರೇ ಹೊರತು ತಮ್ಮಲ್ಲಿಟ್ಟುಕೊಳ್ಳುವುದಿಲ್ಲ. ಚಿನ್ನ ಬೆಳ್ಳಿಯ ನಾಣ್ಯವನ್ನು ಹಸ್ತದಿಂದ ಹಸ್ತಕ್ಕೆಕೊಟ್ಟು ತೆಕ್ಕೊಳ್ಳುವ ಪದ್ಧತಿಯು ಸಾಧಾರಣವಾಗಿ ಪಾಶ್ಚಿಮಾತ್ಯರಲ್ಲಿ ಇಲ್ಲ. ತಾವು ಕೊಡಬೇಕಾದ ಹಣವನ್ನು ಬ್ಯಾಂಕಿನಿಂದಲೇ ಕೊಡಿಸಿಬಿಡುತ್ತಾರೆ. ತಮಗೆ ಬರಬೇಕಾದ ಹಣವನ್ನು ಬ್ಯಾಂಕಿಗೇ ಕೊಡಿಸಿಬಿಡುತ್ತಾರೆ. ಮತ್ತು ಹಣವನ್ನು ವಸ್ತುತಃ ಬ್ಯಾಂಕಿಗೆ ಕೂಡುವ ಮತ್ತೂ ಬ್ಯಾಂಕಿನಿಂದ ತೆಗೆದುಕೊಳ್ಳುವ ಪದ್ಧತಿಗಳು ಸಹ ಸಾಧಾರಣವಾಗಿ ಪ್ರವರ್ತನೆಯಲಿಲ್ಲ. 8–10 ಚಿಲ್ಲರೆ ಹಣವಿನಾ, ಸಾವಿರ, ಲಕ್ಷ, ಕೋಟಿ; ಗಟ್ಟಲೆಯಾಗಿ ಹಣವು ಬ್ಯಾಂಕಿನಿಂದ ಹೊರಕ್ಕೆ ಹೋಗಬೇಕಾದ ಅವಶ್ಯಕವೇ ಇಲ್ಲ. ಒಬ್ಬನ ಹೆಸರಿನಲ್ಲಿರುವ ಲೆಕ್ಕವನ್ನು ಅವನ ಹೆಸರಿಗೆ ಖರ್ಚು ಬರೆದು ಅದನ್ನು ಮತ್ತೊಬ್ಬನ ಹೆಸರಿಗೆ ಜಮಾ ಹಿಡಿಯುವ ಬ್ಯಾಂಕು ಲೆಕ್ಕಗಳ ಬದಲಾವಣೆಗಳಿಂದಲೇ ಹೆಚ್ಚು ಮೊಬಲಗಿನ ಲೇವಾದೇವಿಗಳೆಲ್ಲವೂ ನಡೆಯುತ್ತವೆ.

ಉದಾಹರಣೆ.

ಬಟ್ಟೆಯಂಗಡಿಯಿಡಲುದ್ಯುಕ್ತನಾಗುವ ರಾಮನಿಗೆ ಬಂಡವಾಳಕ್ಕಾಗಿ 1,000 ರೂಪಾಯಿಯು ಬೇಕಾಗುತ್ತದೆ. ಅದನ್ನು ಅವನು ಭೀಮನಿಂದ ಸಾಲವಾಗಿ ಪಡೆಯುತ್ತಾನೆ. ಭೀಮನು ರಾಮನಿಗೆ ಈ ಸಾಲವನ್ನು ಕೊಡುವ ರೀತಿ ಹೇಗೆಂದರೆ—ಬ್ಯಾಂಕಿನಲ್ಲಿ ತನ್ನ ಹೆಸರಿನಲ್ಲಿರುವ ಹಣದ ಲೆಕ್ಕವನ್ನು ರಾಮನ ಹೆಸರಿಗೆ ಜಮಾ ಹಿಡಿಯಲು ಭೀಮನು ಬ್ಯಾಂಕಿಗೆ ಆಜ್ಞೆ ಮಾಡುತ್ತಾನೆ. ಬ್ಯಾಂಕಿನವರು ಹಾಗೆ ಮಾಡಿ ಆ ಹಣವನ್ನು ರಾಮನಿಗೆ ಕೊಡಲು ಸಿದ್ಧರಾಗುತ್ತಾರೆ. ರಾಮನು ಬಟ್ಟೆ ಗಿರಿಣಿಯಲ್ಲಿ 1,000 ಗೆ ಬಟ್ಟೆಯನ್ನು ಕೊಂಡುಕೊಂಡು, ಕ್ರಯದ ಮೊಬಲಗನ್ನು ಗಿರಿಣಿಯವರಿಗೆ ವಸ್ತುತಃ ನಾಣಕ ರೂಪದಲ್ಲಿ ಕೊಡುವುದಕ್ಕೆ ಬದಲು, ತನ್ನ ಹೆಸರಿಗಿರುವ 1,000 ರೂಪಾಯಿನ ಜಮೆಯನ್ನು ತನ್ನ ಹೆಸರಿಗೆ ಖರ್ಚು ಬರೆದು ಅದನ್ನು ಗಿರಿಣಿಯವರ ಹೆಸರಿಗೆ ಜಮಾ ಹಿಡಿಯಲು ಬ್ಯಾಂಕಿನವರನ್ನು ಆಜ್ಞೆಮಾಡುತ್ತಾನೆ. ಅವರು ಹಾಗೆ ಮಾಡಿ ಆ ಹಣವನ್ನು ಗಿರಿಣಿಯವರಿಗೆ ಅವರು ಕೇಳಿದಾಗ ಕೊಡಲು ಸಿದ್ಧರಾಗುತ್ತಾರೆ. ಅರಳೆಯ ವರ್ತಕನಿಂದ ಅರಳೆಯನ್ನು 1,000 ರೂ ಗೆ ಕೊಂಡುಕೊಳ್ಳಲು ಗಿರಿಣಿಯವರಿಗೆ ಅವಶ್ಯಕ ಬಿದ್ದಾಗ ಅವರೂ ಅದೇ ಮೇರೆ ತಮ್ಮ ಹೆಸರಿನಲ್ಲಿರುವ ಜಮೆಯನ್ನು ಅರಳೆ ವರ್ತಕನ ಹೆಸರಿಗೆ ಬ್ಯಾಂಕಿನಲ್ಲಿ ಜಮಾ ಬರೆಸುತ್ತಾರೆಯೇ ಹೊರತು ಅದನ್ನು ತಮ್ಮ ಕೈಗೆ ತೆಗೆದುಕೊಂಡು ವರ್ತಕನ ಕೈಗೆ ಕೊಡುವುದಿಲ್ಲ. ಅರಳೇ ವರ್ತಕನು ಸಹ ಅರಳೆಯನ್ನು ಒಂದು ಮಣ ಅರ್ಧ ಮಣ ಚಿಲ್ಲರೆಯಾಗಿ ರೈತರಿಂದ ಕೊಳ್ಳದೆ, ಭಾರಿ ಭೂಮಾಲಿಕನಲ್ಲಿ ನೂರು ಇನ್ನೂರು ಮಣದಂತೆ ಕೊಂಡುಕೊಳ್ಳುವ ಪಕ್ಷದಲ್ಲಿ ಅದೇ ಮೇರೆ ಆ ಭೂಮಾಲಿಕನ ಹೆಸರಿಗೆ ಜಮಾ ಬರಿಸಿಬಿಡುತ್ತಾನೆ. ಆ ಭೂಮಾಲಿಕನು ಆಳುಗಳಿಗೂ ಮುಟ್ಟುಗಳಿಗೂ ಚಿಲ್ಲರೆ ಚಿಲ್ಲರೆಯಾಗಿ ಹಣ ಕೊಡಬೇ

ಕಾಗಿರುವುದರಿಂದ ಆಗಾಗ್ಗೆ ಬೇಕಾಗುವಷ್ಟು ಹಣವನ್ನು ಬ್ಯಾಂಕಿನಿಂದ ಬಹುಶಃ ತೆಗದುಕೊಳ್ಳಬಹುದು. ಬಡವರಿಗೋಸ್ಕರಲೇ ಇಟ್ಟಿರುವ ಸೇವಿಂಗ್ ಬ್ಯಾಂಕುಗಳಲ್ಲಿ ಆ ಆಳುಗಳ ಮತ್ತು ಮುಟ್ಟುಗಳನ್ನು ಮಾರುವವರ ಲೆಕ್ಕವಿದ್ದರೆ ಆ ಭೂಮಾಲೀಕನು ಸಹ ಲೆಕ್ಕದ ಬರಿ ಪರಿವರ್ತನೆಯಿಂದ ಕಾರ್ಯ ನಡೆಯಿಸಬಹುದು.

ಸಾಲ ಪಡೆಯುವುದು, ವ್ಯಾಪಾರಮಾಡುವುದು, ಖಾರ್ಖಾನೆ ನಡೆಯಿಸುವುದು, ಈ ಕಾರ್ಯಗಳೆಲ್ಲವೂ ಬ್ಯಾಂಕಿನಲ್ಲಿರುವ ಹಣವನ್ನು ಕದಲಿಸದೇ ನಡೆಯುತ್ತವೆಂಬುದು ಮೇಲಿನ ಉದಾರಣೆಯಿಂದ ಗೊತ್ತಾಗುತ್ತದೆ. ಮತ್ತು ಇಲ್ಲಿ ಮತ್ತೊಂದು ವಿಶೇಷವೇನೆಂದರೆ:—ಬ್ಯಾಂಕಿನವರು ಆ ಸಾವಿರ ರೂಪಾಯನ್ನು ರಾಮನ ಹೆಸರಿಗೆ ಜಮಾ ಕಟ್ಟುವುದಕ್ಕಿಂತ ಹಿಂದೆ ಆ ಹಣದಿಂದ ಭೀಮನಿಗೆ ಬಡ್ಡಿಯು ಉತ್ಪತ್ತಿಯಾಗುತ್ತಿತ್ತು. ಬಳಿಕ ಗಿರಿಣಿಯವರ ಹೆಸರಿಗೆ ಜಮಾ ಕಟ್ಟುವವರೆಗೂ ಆ ಹಣದಿಂದ ರಾಮನಿಗೆ ಬಡ್ಡಿಯು ಉತ್ಪತ್ತಿಯಾಯಿತು ; ಬಳಿಕ ವರ್ತಕನ ಹೆಸರಿಗೆ ಜಮಾ ಕಟ್ಟುವ ಪರ್ಯಂತ ಗಿರಿಣಿಯವರಿಗೆ ಬಡ್ಡಿಯುತ್ಪತ್ತಿಯಾಯಿತು. ಆ ಬಳಿಕ ಭೂಮಾಲಿಕನ ಹೆಸರಿಗೆ ಜಮಾ ಕಟ್ಟಿದ ವರೆಗೂ ವರ್ತಕನಿಗೆ ಬಡ್ಡಿ ಬಂದಿತು, ಆ ಬಳಿಕ ಆ ಬಡ್ಡಿಯು ಭೂಮಾಲಿಕನಿಗೆ ಸೇರಲು ಪ್ರಾರಂಭಿಸಿತು. ಈ ಪ್ರಕಾರ ಆ ಹಣವು ತನ್ನ ಪ್ರಭಾವದಿಂದ ವ್ಯಾಪಾರ ಮೊದಲಾದ ಅನೇಕ ಕಾರ್ಯಗಳನ್ನು ನಡೆಯಿಸಿತಲ್ಲದೆ ಹಾಗೆ ನಡೆಯಿಸುವ ಪ್ರತಿಯೊಂದು ದಿವಸದಲ್ಲೂ ಬಡ್ಡಿಯನ್ನು ಸಹಾ ಉತ್ಪತ್ತಿಮಾಡುತ್ತಲೇ ಇದ್ದಿತು.

ಈ ಪ್ರಕಾರ ಪಾಶ್ಚಿಮಾತ್ಯದೇಶಗಳಲ್ಲಿ ಸಮಸ್ತರ ಹಣವು ಚಿನ್ನಬೆಳ್ಳಿಯ ನಾಣ್ಯರೂಪಕದಲ್ಲಾಗಲಿ ಗಟ್ಟಿಯರೂಪಕದಲ್ಲಾಗಲಿ ಬ್ಯಾಂಕುಗಳಲ್ಲಿ ಕದಲದೆ ಬಿದ್ದಿರುವುದು.

ಬ್ಯಾಂಕುನೋಟು, ಚಕ್ಕು, ಹುಂಡಿ, ಆರ್ಡರ್ ಮೊದಲಾದ ಬರಿಕಾಗದಗಳಿಂದ ಸಮಸ್ತವಾದ ವ್ಯವಹಾರಗಳು ನಡೆಯುತ್ತಿರುವುವು.

ನಾಗರಿಕ ರಾಜ್ಯಗಳು ಸಹ ತಂತಮ್ಮ ಸರ್ಕಾರಿ ಹಣದಿಂದ ಜನರಿಗೆ ಪ್ರಯೋಜನವನ್ನುಂಟು ಮಾಡುವುದಕ್ಕೂ ಅದರಿಂದ ಬಡ್ಡಿಯನ್ನು ಹುಟ್ಟಿಸುವುದಕ್ಕೂ ಆ ಹಣವನ್ನು ಬ್ಯಾಂಕಿನಲ್ಲೇ ಇಟ್ಟಿರುತ್ತಾರೆ.

ಹಣವು ಸಾಲದ ಪತ್ರಗಳಂತೆ ಬರಿಪ್ರಭಾವದಿಂದ ಜನರಿಗೆ ಉಪಯುಕ್ತವಾಗಿದೆಯೇ ಹೊರತು ಅಕ್ಕಿ, ರಾಗಿ ಮೊದಲಾದ ಉಪಭುಜ್ಯಪದಾರ್ಥದಂತೆ ಸಹಜತೆಯಿಂದ ಉಪಯುಕ್ತವಾಗಿಲ್ಲ. ಮೇಲೆ ವಿವರಿಸಲ್ಪಟ್ಟಿರುವ ಉಪಯುಕ್ತತೆಗಳೇ ಹಣದ ಪ್ರಭಾವಗಳು. ಆ ಪ್ರಭಾವಗಳು ಪ್ರಕಾಶಿಸುವ ರೀತಿಯಲ್ಲಿ ಹಣವನ್ನಿಡಬೇಕು.

ಅನ್ಯೋನ್ಯ ಸಹಾಯಕ ಸಂಘಗಳ ಉಪಯುಕ್ತತೆ. ಅನ್ಯೋನ್ಯ ಸಹಾಯಕ ಸಂಘಗಳ ಬ್ಯಾಂಕುಗಳಿಗೂ ಸಾಧಾರಣ ಬ್ಯಾಂಕುಗಳಿಗೂ ಇರುವವ್ಯತ್ಯಾಸಗಳು ಇವು : ಸಾಧಾರಣಬ್ಯಾಂಕುಗಳ ಮುಖ್ಯೋದ್ದೇಶವು ಸಾಧ್ಯವಾದಷ್ಟು ಹೆಚ್ಚು ಬಡ್ಡಿಯನ್ನು ಹುಟ್ಟಿಸುವುದು. ಎಂದರೆ ಸಾಲ ಕೊಡುವವರ ಹಿತಾರ್ಥವಾಗಿಮಾತ್ರ ಇರುತ್ತವೆ. ಅನ್ಯೋನ್ಯ ಸಹಾಯಕ ಸಂಘಗಳ ಬ್ಯಾಂಕುಗಳ ಉದ್ದೇಶವು ಹೆಸರಿನಿಂದ ವ್ಯಕ್ತವಾಗುವಂತೆ ಒಬ್ಬರು ಮತ್ತೊಬ್ಬರಿಗೆ ಅನ್ಯೋನ್ಯವಾಗಿ ಹಣ ಸಹಾಯ ಮಾಡುವುದು. ಎಂದರೆ ಹಣವಿರುವವರು ಹಣವನ್ನು ವೃಥಾ ಇಟ್ಟುಕೊಳ್ಳದೆಯೂ, ಅಥವಾ ಆ ಹಣಕ್ಕೆ ವಿಶೇಷ ಬಡ್ಡಿ ಸಂಪಾದನೆ ಮಾಡಲು ಪ್ರಯತ್ನಿಸದೆಯೂ ದರದುಳ್ಳ ನೆರೆಯವನಿಗೆ ಅದನ್ನು ಸುಲಭ ಬಡ್ಡಿಗೆ ಸಾಲವಾಗಿ ಕೊಡುವುದು. ತನಗೆ ದರದುಂಟಾದಾಗ ನೆರೆಯವನಿಂದ ಹಣವನ್ನು ಆ ಪ್ರಕಾರ ಈಸಿಕೊಳ್ಳುವುದು. ತಮ್ಮಲ್ಲಿ ಹಣವಿಲ್ಲದಿದ್ದರೆ ತಾವು ಎಲ್ಲರೂ ಒಗ್ಗಟ್ಟಾಗಿ ತಮ್ಮ ಒಟ್ಟಿನ ಜವಾಬ್ದಾರೀಮೇಲೆ ಸರ್ಕಾರದಿಂದಲಾದರೂ ಇತರ ಖಾಸ್ಗಿ ಧನಿಕರಿಂದಲಾದರೂ ಸಾಲ ತೆಗೆದುಕೊಂಡು ಅದನ್ನು ತಾವು ತಮ್ಮ ದರದಿಗೆ ತಕ್ಕಂತೆ ಹಂಚಿಕೊಂಡು ಉಪಯೋಗಿಸುವುದು ಸಹ ಈ ಸಂಘಗಳ ಪದ್ಧತಿಗಳಾಗಿರುತ್ತವೆ. ಈ ವಿಧದಲ್ಲಿ ಈ ಸಂಘಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಜಮೀನುದಾರರಿಗೆ ಹಣ ಸಹಾಯ ಮಾಡುತ್ತಿರುವ ವಿಧಾನವು ಪರಮಾಶ್ಚರ್ಯವಾಗಿದೆ. ಆ ವಿಧಾನದ ಸ್ವರೂಪವನ್ನು ಕೆಳಗೆ ಸೂಚಿಸುವೆವು.

ರಾಜ್ಯದ ಮುಖ್ಯ ಪಟ್ಟಣದಲ್ಲಿ ಕೆಲ ಶ್ರೀಮಂತರು ಸರ್ಕಾರದ ಪರ್ಯವೇಕ್ಷಣಕ್ಕೊಳಪಟ್ಟ ಒಂದು ಸಂಘವನ್ನು ಎಂದರೆ ಬ್ಯಾಂಕನ್ನು ಮಾಡಿಕೊಂಡಿರುತ್ತಾರೆ. ಈ ಸಂಘದ ಋಣಶೋಧನ ಕ್ಷಮತೆಗೆ ಸರ್ಕಾರದವರು ಜವಾಬ್ದಾರರಾಗಿರುತ್ತಾರೆ. ಈ ಮುಖ್ಯ ಸಂಘದ ಶಾಖಾ ಸಂಘಗಳು (ಶಾಖಾ ಬ್ಯಾಂಕುಗಳು) ಪ್ರತಿ ತಾಲ್ಲೂಕಿನಲ್ಲಿಯೂ ಇರುತ್ತವೆ. ಸಾಲವನ್ನಪೇಕ್ಷಿಸುವ ಭೂಮಾಲೀಕರು ತಮಗೆ ಎಷ್ಟು ಹಣ ಬೇಕೆಂಬುದನ್ನೂ ಹಣಕ್ಕೆ ತಾವು ಈಡುಮಾಡುವ ಜಮೀನಿನ ತಪ್ಸೀಲನ್ನೂ ತಿಳಿಸಿ ಈ ಶಾಖ ಸಂಘವೊಂದಕ್ಕೆ ಮನುವೆ ಬರದುಕೊಳ್ಳುವರು. ಬಳಿಕ ಈ ಸಂಘದವರು ತಮ್ಮ ಅಧಿಕಾರಿಯ ಮೂಲಕ ಆ ಸಾಲಕ್ಕೆ ಈಡಾಗಲು ಆ ಜಮೀನು ಸಾಕಾಗುತ್ತದೆಯೇ ಯೆಂಬುದನ್ನು ತಿಳಿದುಕೊಳ್ಳುವರು. ಸಾಕಾಗಿದ್ದರೆ, ವಾಯಿದೆ, ಬಡ್ಡಿಯ ದರ, ಮೊದಲಾದ ಷರತ್ತುಗಳುಳ್ಳ ಒಂದು ಆಧಾರ ಪತ್ರವನ್ನು ಬರೆಯಿಸಿಕೊಳ್ಳುವರು. ಆ ಪತ್ರವನ್ನು ವರಿಷ್ಠ ಸಂಘಕ್ಕೆ (ಬ್ಯಾಂಕಿಗೆ) ಕಳುಹುವರು. ವರಿಷ್ಠ ಸಂಘದವರು (ಬ್ಯಾಂಕಿನವರು) ಆ ಪತ್ರವನ್ನು ತಮ್ಮಲ್ಲಿಟ್ಟುಕೊಂಡು, ಡಿಬೆಂಚರ್ ಎಂಬುವ ಪತ್ರವನ್ನು ಬರೆದು ಋಣಿಯ ವಶಕ್ಕೆ ಕೊಡುವರು. ಋಣಿಯು ಅದನ್ನು ಮಾರ್ಕೆಟ್ಟಿನಲ್ಲಿ ತಂದು ಮಾರಾಟಕ್ಕೆ ಇಡುವನು. ಬಡ್ಡಿ ಸಂಪಾದನೆ ಮಾಡಬೇಕೆಂಬ ಜನರೊಳಗಾರಾದರೂ ಡಿಸ್ಕೌಂಟಿನಮೇಲಾಗಲಿ,

ಪ್ರೇಮಿಯಮ್ ಆಗಾಗಲಿ, ಬಾರಾಗಿ ಆಗಲಿ ಆ ಪತ್ರವನ್ನು ಕ್ರಯಕ್ಕೆ ತೆಗೆದುಕೊಳ್ಳುವರು ; ಹೇಗೆಂದರೆ, ಡಿಬೆಂಚರ ಪತ್ರವು 100 ರೂ. ಗೆ ಹುಟ್ಟಿದ್ದರೆ ಅದನ್ನು ಆ ಮೊಬಲಗಿಗಿಂತ ಕಡಮೆ ಕ್ರಯಕ್ಕಾಗಲಿ, ಅಥವಾ ಹೆಚ್ಚಿನ ಕ್ರಯಕ್ಕಾಗಲಿ, ಅಥವಾ ಅಷ್ಟಕ್ಕೆ (100 ರೂ. ಗೇ) ಆಗಲಿ ಆಗಿನ ಧಾರಣೆಯಂತೆ ಕೊಂಡುಕೊಳ್ಳುವರು. ಪತ್ರದ ಹಣಕ್ಕೇ ಆಗಲಿ, ಹೆಚ್ಚು ಮೊಬಲಿಗಿಗೇ ಆಗಲಿ ಆ ಪತ್ರವು ಮಾರ್ಕೆಟ್ಟಿನಲ್ಲಿ ಕ್ರಯವಾಗದಿದ್ದರೆ, ಡಿಸ್‌ಕೌಂಟಿನ ಮೇಲೆ ಬ್ಯಾಂಕಿನವರೇ ಹಣವನ್ನು ಕೊಡಬಹುದು. ಪತ್ರವನ್ನು ಕೊಂಡುಕೊಂಡವನು ಪತ್ರದ ಷರತ್ತಿನಂತೆ ವರಿಷ್ಠ ಸಂಘದಿಂದ ಎಂದರೆ ವರಿಷ್ಠ ಬ್ಯಾಂಕಿನಿಂದ ಕಾಲಕಾಲಕ್ಕೆ ಬಡ್ಡಿಯನ್ನು ತೆಗೆದುಕೊಳ್ಳಬಹುದು. ಅಸಲೇ ಬೇಕಾದರೆ ಆ ಪತ್ರವನ್ನು ಇತರರಿಗೆ ಮಾರಬಹುದು. ಸಂಘದವರು ಎಂದರೆ ಬ್ಯಾಂಕಿನವರು ಕೆಳಗೆ ವಿವರಿಸುವ ಮೇರೆ ಋಣಿಗಳಿಂದ ಸಾಲಗಳು ವಸೂಲಾದ ಹಾಗೆಲ್ಲ ಆ ವಸೂಲಾದ ಹಣದಿಂದ, ತಾವು ಕೊಟ್ಟಿರುವ ಡಿಬೆಂಚರ್ ಪತ್ರಗಳನ್ನು ಮಾರ್ಕೆಟ್ಟಿನಲ್ಲಿ ಕೊಂಡುಕೊಂಡು ಆ ಪತ್ರಗಳನ್ನು ನಾಶಮಾಡಿಬಿಡುವರು ; ಅಥವಾ, ನಿಯತವಾದ ಒಂದಷ್ಟು ಡಿಬೆಂಚರ್ ಪತ್ರಗಳನ್ನು ಲಾಟರಿ ಎಳೆಯುವುದರ ಮೂಲಕವಾದರೂ ಡಿಬೆಂಚರ್ ಪತ್ರದ ಹಣವನ್ನು ತೀರಿಸಿ ಬಿಡುವರು. ಈ ಲಾಟರಿ ಹಾಕುವುದರ ವಿಧಾನವೂ ಪ್ರಯೋಜನಗಳೂ ಈ ಪ್ರಕಾರವಾಗಿವೆ: ಮಸಲ: ಒಂದು ವರ್ಷದೊಳಗೆ 1 ಲಕ್ಷ ರೂಪಾಯಿನ ಒಟ್ಟು ಬೆಲೆಯ 25 ರೂ. ನಿಂದ 100 ವರೆಗಿನ 200 ಪತ್ರಗಳನ್ನು ವರ್ಷಕ್ಕೆ 4 ಆ ವೃತ್ತಿ ಲಾಟರಿ ಎಳೆಯುವರು. ಆ ಲಾಟರಿಯಲ್ಲಿ ಮೊದಲು ಎಳೆಯಲ್ಪಟ್ಟ 50 ಪತ್ರಗಳೊಳಗೆ ಮೊದಲನೇ 3 ಪತ್ರಗಳಿಗೆ ಪಾರಿತೋಷಕವನ್ನೂ ಬಾಕಿ 47 ಪತ್ರಗಳಿಗೆ ಪತ್ರದ ಬೆಲೆಯಷ್ಟು ಮಾತ್ರದ ಮೊಬಲಗನ್ನು ಕೊಟ್ಟು ಮೊದಲನೆಯಾವೃತ್ತಿ ಲಾಟರಿಯಲ್ಲಿ 50 ಪತ್ರಗಳನ್ನು, ಈ ಪ್ರಕಾರ ಮಿಕ್ಕ ಮೂರಾ ವೃತ್ತಿಯ ಲಾಟರಿಗಳಲ್ಲಿ 50–50 ಪತ್ರಗಳನ್ನೂ ಒಂದು ವರ್ಷದೊಳಗೆ ಒಂದು ವರ್ಷದಲ್ಲಿ ಹುಟ್ಟಿದ 200 ಪತ್ರಗಳ ಸಾಲವನ್ನು ಬ್ಯಾಂಕಿನವರು ತೀರಿಸಿಬಿಡುವರು. ಪಾರಿತೋಷಕದ 3 ಪತ್ರಗಳಿಗಾದರೊ, 3 ನೆಯದಕ್ಕೆ ಪತ್ರದ ಹಣದ 10–15 ರಷ್ಟು ಹಣವು ಪಾರಿತೋಷಿಕವಾಗಿ ಸಿಕ್ಕುವುದು. 2 ನೆ, 1 ನೆಯದಕ್ಕೆ ಈ ಪಾರಿತೋಷಕವು ಮತ್ತೂ ಹೆಚ್ಚುವುದು. ಉಳಿಯುವ ಎಲ್ಲ ಪತ್ರಗಳಿಗೂ ಪತ್ರದ ಬೆಲೆಯಷ್ಟಾದರೂ ಹಣವು ಕೊಡಲ್ಪಡುವುದು. ಸಾಧಾರಣ ಲಾಟರಿಯಲ್ಲಿ (ಜೂಜಾಟದಲ್ಲಿ) ಹಣಹಾಕಿದ ಸೇಕಡ 90 ಜನಕ್ಕೆ ನಷ್ಟವಾಗುತ್ತದೆ. ಎಂದರೆ ಕೊಟ್ಟ ಹಣವು ಸಹ ಬರುವುದಿಲ್ಲ. ಆದರೆ ಈ ವಿಧವಾದ ಲಾಟರಿಯಲ್ಲಾದರೊ, ಯಾವನೊಬ್ಬನಿಗೂ ಕೊಟ್ಟ ಹಣಕ್ಕೆ ಲೋಪವಿಲ್ಲದೆ, ಅದೃಷ್ಟವಂತರಾದವರಿಗೆ ಬಹು ವಿಶೇಷ ದ್ರವ್ಯ ದೊರೆಯುತ್ತದೆ; ನಷ್ಟದಿಂದ ಕೂಡಿಲ್ಲದ ಈ ಜೂಜಾಟದಿಂದ ಡಿಬೆಂಚರ್ ಪತ್ರಗಳಿಗೆ ಯಾವಾಗಲೂ ಕಿರಾಕಿಗಳು ಇದ್ದೇ ಇರುವರು. ಮತ್ತೂ ಧಾರಣೆಯು ಬಹುಶಃ ಕಡಮೆಯಾಗುವದಿಲ್ಲ.

ಬ್ಯಾಂಕಿನವರು ಋಣಿಗಳಿಂದ ಬರೆಯಿಸಿಕೊಳ್ಳುವ ಆಧಾರ ಪತ್ರದ ಬಡ್ಡಿಗಿಂತ ತಾವು ಋಣಿಗಳಿಗಾಗಿ ಬರೆದುಕೊಡುವ ಡಿಬೆಂಚರ್ ಪತ್ರದ ಬಡ್ಡಿಯು ಸ್ವಲ್ಪ ಕಡಮೆಯಾಗಿರುವುದು. ಮಸಲ ಋಣಿಯಿಂದ ತಾವು ಸೇಕಡ 5 ರೂ. ಮೇರೆ ಬಡ್ಡಿಯನ್ನು ತೆಗೆದುಕೊಂಡರೆ ತಾವು ಕೊಡುವ ಬಡ್ಡಿಯು ಸೇಕಡ 4 ರೂ. ನಂತಿರುವುದು. ಹೀಗೆ ತಮಗುಳಿಯುವ ಬಡ್ಡಿಯ ಲಾಭದಿಂದ ಬಂಡವಾಳ ಹಣದ ಬಡ್ಡಿಯೂ, ಕೆಲಸಗಾರರ ವೇತನವೂ, ಪಾರಿತೋಷಕಕ್ಕಾಗಿ ಹೆಚ್ಚಾಗಿ ಕೊಡಬೇಕಾದ ಹಣವೂ, ರಿಸೆರ್ವ್‌ಗೆ ಕೂಡಿಸಿಡಬೇಕಾದ ಹಣವೂ, ಇತರ ವೆಚ್ಚವೂ ಇವೆಲ್ಲವೂ ಹುಟ್ಟುವುವು.

ಈ ತರದ ಬ್ಯಾಂಕುಗಳಿಂದ ಖಾಸ್ಗಿ ಲೇವಾದೇವಿಯಲ್ಲಿ ಋಣಿಯ ದರುದಿಗೆ ತಕ್ಕಂತೆ ಹೆಚ್ಚುಹೆಚ್ಚು ಬಡ್ಡಿಯನ್ನು ಉತ್ಪತ್ತಿಮಾಡಿಕೊಳ್ಳುವ ಪ್ರಯೋಜನವೂ ಮತ್ತೂ ಹಣವನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿಡುವುದರ ಪ್ರಯೋಜನವೂ ಈ ಎರಡೂ ಹಣಗಾರರಿಗೆ ಉಂಟಾಗುತ್ತವೆ. ಹೇಗೆಂದರೆ—ಡಿಬೆಂಚರ್ ಪತ್ರಗಳನ್ನು ಮಾರುವ ಋಣಿಗೆ ಅತಿದರುದಿದ್ದರೆ 100 ರೂ ನ ಪತ್ರವನ್ನು ಮಸಲ 90 ರೂ. ಗೆ ಮಾರಿಬಿಡಬಹುದು. 90 ರೂ. ಪತ್ರವನ್ನು ಕ್ರಯಕ್ಕೆ ತೆಗೆದುಕೊಂಡವನಿಗೆ, 100 ರೂ. ನ ಬಡ್ಡಿಯು 90 ರೂ. ಗೇ ಸಲ್ಲುವುದಲ್ಲದೆ, ಅಸಲಿಗೆ 100 ರೂ ಪಾಯಿಯೇ ಬರುತ್ತದೆ. ಋಣಿಗೆ ಅಷ್ಟು ದರುದಿಲ್ಲದೆ, ಹಣವನ್ನು ವಿನಿಯೋಗಿಸಬೇಕೆಂಬ ಆವಶ್ಯಕತೆಯು ಹಣವಂತರಿಗೇ ಹೆಚ್ಚಾಗಿದ್ದರೆ 100 ರೂ. ನ ಪತ್ರವನ್ನು ಮಸಲ 110 ರೂ. ಗೆ ಕೊಂಡುಕೊಂಡು. ಆ 110 ರೂ. ಗೆ 100 ರೂ. ನ ಮೇಲಿನ ಬಡ್ಡಿಯನ್ನೇ ಹೊಂದಬೇಕಾಗುವುದು. ಈ ಪ್ರಕಾರ ಖಾಸ್ಗಿ ಲೇವಾದೇವಿಯಲ್ಲಿರುವ ಬಡ್ಡಿ ಸಂಪಾದನೆ ಮಾಡುವ ಅವಕಾಶವು ಈ ಪದ್ಧತಿಯಲ್ಲಿರುತ್ತದೆ; ಖಾಸ್ಗಿ ಲೇವಾದೇವಿಗೆ ಸ್ವಾಭಾವಿಕವಾದ ಅನನುಕೂಲಗಳಾದರೋ ಈ ಪದ್ಧತಿಯಲಿಲ್ಲ. ಬಡ್ಡಿಯ ಮತ್ತೂ ಅಸಲಿನ ವಸೂಲಿಗೆ ಋಣಿಯೊಡನೆ ಹಣಗಾಡಬೇಕಾದುದಿಲ್ಲ, ಕೋರ್ಟಿಗೆ ಹೋಗಿಪೇಚಾಡಬೇಕಾದುದಿಲ್ಲ. ಕೊಟ್ಟ ಹಣವು ಮುಳುಗಿ ಹೋದೀತೆಂಬ ಶಂಕೆಯು ಈಷನ್ಮಾತ್ರವೂ ಇಲ್ಲ. ಸರ್ಕಾರಿ ಬ್ಯಾಂಕಿನಲ್ಲಿ ಹಣವನ್ನಿಟ್ಟರೆ ಅಸಲು ಮತ್ತೂ ಬಡ್ಡಿಯ ವಸೂಲಿಯು ಎಷ್ಟು ಸುಲಭವೂ, ದಾರ್ಢ್ಯವೋ ಅಷ್ಟು ಸೌಲಭ್ಯದಾರ್ಢ್ಯಗಳು ಇಲ್ಲಿಯೂ ಇವೆ. ಮತ್ತೂ ಹಣವಂತರು ನಷ್ಟವಿಲ್ಲದೆ ಜೂಜಾಡಲೂ ಬಹುದು. ಮತ್ತೂ ಹಣವನ್ನು ಕೇಳುವವರಿಲ್ಲದಿದ್ದರೆ ಖಾಸ್ಗಿ ಲೇವಾದೇವಿಯಲ್ಲಿ ಬಡ್ಡಿಯುತ್ಪತ್ತಿಯಾಗುವುದಿಲ್ಲ. ಇಲ್ಲಾದರೋ, ಡಿಬೆಂಚರ್ ಪತ್ರಗಳು ಅಕ್ಕಿ ರಾಗಿಯಂತೆ ಮಾರ್ಕೆಟ್ಟಿನಲ್ಲಿ ದೊರೆಯುವುದರಿಂದ, ಆ ಅನನುಕೂಲವು ಇಲ್ಲ. ಮತ್ತೂ ಹೆಚ್ಚುಕಡಮೆ ಎಲ್ಲಾ ಮೊಬಲಿಗಿನ ಡಿಬೆಂಚರ್ ಪತ್ರಗಳು ಮಾರ್ಕೆಟ್ಟಿನಲ್ಲಿ ಕ್ರಯಕ್ಕೆ ದೊರೆಯುವುದರಿಂದ ಎಷ್ಟು ಹಣವಿದ್ದರೆ, ಅಷ್ಟಕ್ಕೇ ಲೇವಾದೇವಿ ಮಾಡಬಹುದು. ಈ ಪ್ರಯೋಜನಗಳ ದೆಸೆಯಿಂದ.

ದೇಶದಲ್ಲಿ ಯಾವನೊಬ್ಬನೂ ಒಂದು ಕಾಸನ್ನೂ ಒಂದು ದಿವಸವೂ ಬಡ್ಡಿಯುತ್ಪತ್ತಿಯಿಲ್ಲದೆ ತನ್ನಲ್ಲಿಟ್ಟುಕೊಳ್ಳುವುದಿಲ್ಲ. ಪ್ರಜೆಗಳ ಹಣವೆಲ್ಲವೂ ಮಾರ್ಕೆಟ್ಟಿನಲ್ಲಿ ಮಾರಾಟಕ್ಕೆ ಬಂದು ಬಿದ್ದಿರುತ್ತದೆ. ಆಸ್ತಿಯಿರುವವರಿಗೆ ಆ ಆಸ್ತಿಗನುಸಾರವಾದಷ್ಟು ಹಣವು ಯಾವ ಕ್ಷಣದಲ್ಲಿ ಬೇಕಾದರೂ ದೊರೆಯುತ್ತದೆ.

ಈ ತರದ ಬ್ಯಾಂಕಿನ ಪದ್ಧತಿಯಲ್ಲಿ ಜಮಿಾನುದಾರರಿಗೆ ಇರುವ ಪ್ರಯೋಜನಗಳನ್ನು ವಿವರಿಸುವ. ಪ್ರತಿಜಮಿಾನುದಾರನಿಗೂ, ಮೇಲೆ ಕಂಡ ಮೇರೆ ಜಮಿಾನಿನ ಬೆಲೆಯ ಅರ್ಧದಿಂದ ಮುಕ್ಕಾಲು ಪಾಲಿನ ವರೆಗೆ ಸಾಲವು ದೊರೆಯುತ್ತದೆ. ಆದರೆ ಸಾಲತೀರಿಸುವ ಸೌಲಭ್ಯವಿತರಣೆಗಳೇ ಜಮಿಾನುದಾರರುಗಳಿಗೆ ಈ ಪದ್ಧತಿಯ ಮುಖ್ಯ ಪ್ರಯೋಜನಗಳು. ಜಮಿಾನಿಗಾಗಿ ವೆಚ್ಚಮಾಡಿದ ಹಣವು ಒಂದೆರಡು ವರ್ಷದಲ್ಲಿ ಉತ್ಪತ್ತಿಯಾಗುವದಿಲ್ಲವೆಂತಲೂ, ಅದು ಉತ್ಪತ್ತಿಯಾಗಬೇಕಾದರೆ ಅನೇಕ ವರ್ಷಗಳು ಬೇಕೆಂತಲೂ ಮೊದಲೇ ತಿಳಿಸಲ್ಪಟ್ಟಿವೆ. ಹೇಗೆಂದರೆ—100 ರೂ. ನಿಂದ ಒಂದಾನೊಂದು ಜಮಿಾನನ್ನು ಆಬಾದು ಮಾಡಿದರೆ, ಆ ಆ ಬಾದಿನಿಂದ ಜಮಿಾನಿನಲ್ಲಿ ಬಹುಶಃ ವರ್ಷ 1 ಕ್ಕೆ 5 ರೂ. ಗಿಂತ ಹೆಚ್ಚಾಗಿ ಬೆಳೆ ಹೆಚ್ಚುವುದಿಲ್ಲ. 4 ಪಲ್ಲವು ಮೊದಲು ಬೆಳೆಯುತ್ತಿದ್ದ ಭೂಮಿಗೆ 100 ರೂ. ನಷ್ಟು ಆಬಾದು ಮಾಡಿದರೆ 5 ಪಲ್ಲ ಬೆಳೆಯಬಹುದು. 1 ಪಲ್ಲದ ಬೆಲೆ 5 ರೂ. ಹೆಚ್ಚು ಉತ್ಪತ್ತಿಯಾದಂತಾಯಿತು. ಹೀಗೆ ವರ್ಷ 1 ಕ್ಕೆ 5 ರೂ. ಮೇರೆ ಆಗುವ ಹೆಚ್ಚು ಉತ್ಪತ್ತಿಯನ್ನು 20 ವರ್ಷ ಕೂಡಿಟ್ಟರೆ 20 ವರ್ಷದ ಬಳಿಕ ಖರ್ಚುಮಾಡಿದ್ದ 100 ರೂ. ಯು ಉತ್ಪತ್ತಿಯಾದಂತಾಗುವುದು. ಈಗ ಭೂಮಾಲೀಕನು 100 ರೂ. ನ್ನು ಸಾಲವಾಗಿ ತೆಗೆದುಕೊಂಡು ಅದನ್ನು ಭೂಮಿಯಾಬಾದಿಗೆ ವೆಚ್ಚಮಾಡುವನೆಂದು ಊಹಿಸುವ. ಈ ಸಾಲಕೊಟ್ಟವನು ವರ್ಷ 1 ಕ್ಕೆ 5 ರೂ. ನ್ನು ಅಸಲೂ ಮತ್ತೂ ಬಡ್ಡಿಗಾಗಿ 20 ವರ್ಷ ತೆಗೆದುಕೊಂಡು ಸಾಲತೀರಿಸಿಸಿಕೊಳ್ಳಲು ಒಪ್ಪಿದರೆ ಭೂಮಾಲೀಕನು ಆ ಭೂಮಿಯನ್ನು ಕಳೆದುಕೊಳ್ಳದೆ 20 ವರ್ಷದಲ್ಲಿ ಋಣಮುಕ್ತನಾಗುವನು. ಇಷ್ಟೊಂದು ಕಾಲ ವಾಯಿದೆ ಕೊಡಲೂ, ಇಷ್ಟು ಸಣ್ಣ ಕಂತುಗಳಲ್ಲಿ ಸಾಲವನ್ನು ವಸೂಲ್ಮಾಡಿಕೊಳ್ಳಲೂ ಖಾಸ್ಗಿ ಋಣದಾತನಾವನೂ ಒಪ್ಪುವುದಿಲ್ಲ; 2-3 ವರ್ಷಕ್ಕಿಂತ ಹೆಚ್ಚು ವಾಯಿದೆಯನ್ನು ಅವನು ಕೊಡಲಾರನು. ಋಣಿಯು ಇಷ್ಟು ಜಾಗ್ರತೆ ಸಾಲತೀರಿಸಬೇಕಾದರೆ ಜಮಿಾನನ್ನು ಅವನು ಮಾರಲೇಬೇಕು. ಅಥವಾ ಇನ್ನೊಂದು ಕಡೆ ಸಾಲತೆಗೆದುಕೊಂಡು ಮೊದಲನೆ ಸಾಲವನ್ನು ತೀರಿಸಬೇಕು. ಕಡೆಸಾಲವನ್ನು ತೀರಿಸಲಿಕ್ಕಾದರೂ ಕೊನೆಗೆ ಜಮಿಾನನ್ನು ಮಾರಲೇಬೇಕಾಗುತ್ತದೆ. ಅದುಕಾರಣ ಭೂಮಾಲೀಕರು ಆಬಾದುಮಾಡಿದ ಜಮಿಾನನ್ನು ಉಳಿಸಿಕೊಂಡು, ಆಬಾದಿಗಾಗಿ ಮಾಡಿದ ಸಾಲದಿಂದ ಮುಕ್ತರೂ ಆಗಬೇಕಾದರೆ ಅವರಿಗೆ ಸಾಲತೀರಿಲು ಅನೇಕ ವರ್ಷಗಳ ವಾಯಿದೆಯೂ ವರ್ಷದ ಕಂತುಗಳಾಗಿ ಸಾಲತೀರಿಸುವ ವಿತರಣೆಯೂ ಅವಶ್ಯಕವಾಗಿ ಬೇಕು ; ಮತ್ತೂ ಆಬಾದಿನ ಫಲ

ವಾದ ವರ್ಷದ ಹೆಚ್ಚು ಉತ್ಪತ್ತಿಯಿಂದ ಮಾತ್ರ ಅವರು ಸಾಲದ ವರ್ಷದ ಕಂತ ನ್ನು ತೀರಿಸಬೇಕಾಗಿ, ಆ ಕಂತು ಈ ಹೆಚ್ಚು ಫಸಲಿನ ಬೆಲೆಗಿಂತ ಹೆಚ್ಚಾಗಿರ ಕೂಡದು. ಈ ಸೌಕರ್ಯಗಳನ್ನುಂಟುಮಾಡಿ ಕೊಡಲೋಸ್ಕರಲೇ ಇಂಡಿಯದಲ್ಲಿ ಮುಂದೆ ವಿವರಿಸಲ್ಪಡುವ ಭೂಮಿಯಾಬಾದಿನ ವಿಷಯಕವಾದ ಖಾನೂನು ಏರ್ಪಟ್ಟಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕೃಷಿ ಮೊದಲಾದ ಫಲೋತ್ಪಾದಕ ಕಾರ್ಯಗಳಿಗಾಗಿ ಸಾಲವನ್ನಪೇಕ್ಷಿಸುವವರಿಗೆ ಮೇಲೆ ಕಂಡ ಸಂಘಗಳಿಂದ ಬಹು ಪ್ರಯೋಜನಗಳು ಉಂಟಾಗುತ್ತಿವೆ. ಅಲ್ಲಿ, ಸಾಲತೀರಿಸಲು ಸಾಧಾರಣವಾಗಿ 50 ರಿಂದ 75 ವರ್ಷದ ವರೆಗೂ ವಾಯಿದೆ ದೊರಿಯುತ್ತದೆ. ಮತ್ತು ವರ್ಷದ ಕಂತಾದರೋ, ಸೇಕಡ ಸಾಲಿಯಾನಾ 5, ಯಾ, $5\frac{1}{2}$ ಮೇರೆ ವರ್ಷವೊಂದಕ್ಕೆ ಎಷ್ಟು ಬಡ್ಡಿಯನ್ನು ಕೊಡಬೇಕಾಗುವುದೋ, ಅದಕ್ಕೂ ವರ್ಷದ ಕಂತು ಮೊಬಲಗಿಗೂ, ತಾರತಮ್ಯವೇ ಹೆಚ್ಚಾಗಿ ಕಾಣುವುದಿಲ್ಲ. ಹೇಗೆಂದರೆ—ಮಸಲ 100 ರೂಪಾಯಿ ಸಾಲವನ್ನು ತೀರಿಸಲು 75 ವರ್ಷ ವಾಯಿದೆ ಸಿಕ್ಕುವುದು. ಇದಕ್ಕೆ ಸಾಲಿಯಾನಾ ($4\frac{1}{2}$) ನಾಲ್ಕೂವರೆ ರೂ. ಮಾತ್ರ ಬಡ್ಡಿದರವಾಗಿರುವುದು. ಈ ಮೇರೆ ಆಗುವ ಬಡ್ಡಿಯನ್ನೂ ಮತ್ತೂ ಅಸಲನ್ನೂ 75 ವರ್ಷದಲ್ಲಿ ವರ್ಷದ ಸಮಕಂತುಗಳಲ್ಲಿ ತೀರಿಸಬೇಕಾದರೆ, ವರ್ಷವೊಂದಕ್ಕೆ ಅಸಲೂ ಮತ್ತೂ ಬಡ್ಡಿ ಎರಡಕ್ಕೂ 4·67=4 ರೂ. 10 ಆ. 9 ಕಾ. ಮಾತ್ರ ಕೊಡಬೇಕಾಗುವುದು. ಇದರಲ್ಲಿ 4 ರೂ. 8 ಆ. ಬಡ್ಡಿಯು ಹೋದರೆ ಅಸಲಿಗೆ 1 ಆಣೆ ಒಂಬತ್ತು ಪೈ ಮಾತ್ರ ಕೊಟ್ಟಂತಾಗುವುದು.

ಉದಾಹರಣೆ : 100 ರೂ. ಸಾಲಕ್ಕೆ 50 ವರ್ಷ ವಾಯಿದೆ, ಮತ್ತೂ ಸಾಲಿಯಾನಾ ಸೇಕಡ 5·30=ರೂ. 5-4-9$\frac{16}{25}$ ನಂತೆ ಬಡ್ಡಿಯ ದರ. ಈ ಷರತ್ತುಗಳ ಮೇರೆ ವರ್ಷದ ಕಂತು 5·72=ರೂ.5-11-6$\frac{6}{25}$ ಆಗಿರುತ್ತದೆಯಾಗಿ, ಈ ಪೈಕಿ ಅಸಲಿಗಾಗಿ 0·42=ರೂ.0-6-8$\frac{16}{25}$ ಮಾತ್ರ ಕೊಟ್ಟಂತಾಗುವುದು. ವರ್ಷ 1 ಕ್ಕೆ ರೂ.0-6-8$\frac{16}{25}$ ರಂತೆ 50 ವರ್ಷ ಕೊಟ್ಟರೆ ಅಸಲಿಗಾಗಿ ಒಟ್ಟು 21 ರೂ. ನಷ್ಟು ಮಾತ್ರ ಕೊಟ್ಟಂತಾಗುವದು. ಆದರೂ ಇಷ್ಟು ಮಾತ್ರ ಕೊಡುವುದರಿಂದಲೇ ಅಸಲು 100 ರೂ. ಎಲ್ಲವನ್ನೂ ತೀರಿಸಿದಂತಾಗುವದು ಇದು ಹೇಗಾಗುತ್ತದೆ ? ಸಾಲ ಕೊಟ್ಟವರಿಗೆ ನಷ್ಟವಲ್ಲವೇ ? ಎಂದು ಕೇಳಬಹುದು; ನಷ್ಟವಲ್ಲ. ಇದರ ತತ್ವ ಹೀಗಿದೆ : ವರ್ಷದ ಕಂತಿನೊಳಗೆ ಅಸಲಿಗಾಗಿ ಹೋಗುವ ಭಾಗವು ಚಕ್ರಬಡ್ಡಿಯಲ್ಲಿ ವೃದ್ಧಿಯಾಗುತ್ತದೆ. ಹೀಗೆ ಚಕ್ರಬಡ್ಡಿಯಲ್ಲಿ ವೃದ್ಧಿಯಾಗುವ, ಅಸಲಿಗಾಗಿ ಹೋಗುವ, ಕಂತಿನ ಭಾಗಗಳು ಅಸಲಿಗೆ ವಜ ಕೊಡಲ್ಪಟ್ಟು, ಅಸಲು ಕ್ರಮೇಣ ಕಡಮೆಯಾಗುತ ಬರುತ್ತದೆ. ಅಸಲು ಕಡಮೆಯಾದಹಾಗೆಲ್ಲಾ ಅದರ ಮೇಲಿನ ಬಡ್ಡಿಯೂ ಕಡಮೆಯಾಗುತ್ತದೆ. ವರ್ಷದ ಕಂತು ಯಾವಾಗಲೂ ಸಮನಾಗಿರುತ್ತದೆಯಾಗಿ ಅದರ ಪೈಕಿ ಕ್ರಮೇಣ ಹೆಚ್ಚು ಹೆಚ್ಚು ಭಾಗವು ಅಸಲಿಗೂ ಕಡಮೆ ಕಡಮೆ ಭಾಗವು ಬಡ್ಡಿಗೂ ಹೋಗುತ್ತದೆ. ಹೇಗೆಂದರೆ ಮೊದಲನೆ ಕಂತಿನಲ್ಲಿ ರೂ.5-4-9$\frac{16}{25}$ ಬಡ್ಡಿಗೂ, ರೂ.0-6-8$\frac{16}{25}$ ಅಸಲಿಗೂ ಹೋದರೆ 20 ವರ್ಷದ ಕೊನೆಯಲ್ಲಿ ಕೊಡುವ ಕಂತು ಮೊಬಲಿಗಿನೊಳಗೆ ರೂ. i-2-4$\frac{5}{24}$ ಭಾಗ ಮಾತ್ರ ಬಡ್ಡಿಗೂ, ಉಳಿದ ರೂ 4-9-1$\frac{11}{25}$ ಭಾಗವು ಅಸಲಿಗೂ ಹೋಗುತ್ತದೆ. ಋಣಿ ಪ್ರತಿವರ್ಷವೂ ಕೊಡುವ ರೂ.5·72 ರೊಳಗೆ ಬಡ್ಡಿಗೋಸ್ಕರ ಹೋಗುವ ರೂ.5·32 ಜಾತಾ ಉಳಿಯುವ 0·42 ನ್ನು ಅವನು ಪ್ರತಿವರ್ಷವೂ ಬ್ಯಾಂಕಿನಲ್ಲಿ ನಿಕ್ಷೇಪಿಸಿ, ಬ್ಯಾಂಕಿನವರು

ಆ ನಿಕ್ಷೇಪಕ್ಕೆ ಚಕ್ರಬಡ್ಡಿಯನ್ನು ಕೊಟ್ಟರೆ, ಈ ನಿಕ್ಷೇಪಗಳು ಚಕ್ರವೃದ್ಧಿಯಾಗಿ 50 ವರ್ಷಗಳಲ್ಲಿ 100 ರೂ. ಆಗುವುವು. ಎಂದರೆ 100 ರೂ. ಪೈಕಿ 21 ರೂ. ಮಾತ್ರ 50 ನಿಕ್ಷೇಪಗಳಲ್ಲಿ ಕೈಯ್ಯಾರ ಕೊಟ್ಟ ಮೊಬಲಗು; ಮಿಕ್ಕದು ಆ ನಿಕ್ಷೇಪಗಳಮೇಲೆ ವೃದ್ಧಿಯಾದ ಚಕ್ರಬಡ್ಡಿ. ಬ್ಯಾಂಕಿಗೆ 50 ವರ್ಷಗಳಲ್ಲಿ 100 ರೂ. ಗೆ (5·72 × 50)-100=186 ರೂ. ಬಡ್ಡಿ ಬಂದಂತಾಯಿತು. ಮೇಲಿನ ಷರತ್ತುಗಳ ಮೇಲೆ 10,000 ರೂ. ಸಾಲ ಕೊಡಲ್ಪಡುತ್ತೆಂದು ಊಹಿಸುವ; ವರ್ಷದ ಕಂತು ಮೊಬಲಗು 572 ರೂ. ಆಗುತ್ತದೆ. 50 ವರ್ಷಕ್ಕೆ ಈ ಕಂತು ಮೊಬಲಗುಗಳು 28600 ರೂ. ಆಗುವುವು. ಎಂದರೆ 10,000 ಸಾಲ ತೆಗೆದುಕೊಂಡು 28600 ರೂ. ಕೊಟ್ಟಂತಾಯಿತು. ಇಂತಹ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳದೆ ಖಾಸಗಿ ಲೇವಾದೇವಿ ಮಾಡುವನಲ್ಲಿ ಸಾಲವು ತೆಗೆದುಕೊಳ್ಳಲ್ಪಡುತ್ತೆಂದು ಊಹಿಸುವ. ಮೇಲೆ ಕಂಡ 5.72 ಅತ್ಯಂತ ಕಡಮೆ ಬಡ್ಡಿಗೂ, 50 ವರ್ಷದಷ್ಟು ಹೆಚ್ಚು ಕಾಲದ ವಾಯಿದೆಯಮೇಲೂ ಖಾಸಗಿ ಮನುಷ್ಯನಾವನಲ್ಲೂ ವಸ್ತುತಃ ಸಾಲ ದೊರೆಯದಿದ್ದರೂ ಉದಾಹರಣೆಗಾಗಿ ದೊರೆಯುತ್ತೆಂದು ಊಹಿಸುವ. ಬಡ್ಡಿಗೇ 26,500 ರೂ. ಅಸಲಿಗೆ 10,000 ಒಟ್ಟು 36,500 ರೂ. ಅಂಥವನಿಗೆ ಕೊಡಬೇಕಾಗುವುದು; ಎಂದರೆ ಮೊದಲಿಗಿಂತ 7900 ರೂ. ಹೆಚ್ಚು ಕೊಟ್ಟಂತಾಗುವುದು. ಇಷ್ಟು ಕಡಮೆ ಬಡ್ಡಿ, ಇಷ್ಟು ದೀರ್ಘವಾದ ವಾಯಿದೆ ಕಂತುಗಳಲ್ಲಿ ಸಾಲವಸೂಲಿಮಾಡಿಕೊಳ್ಳುವ ವಿತರಣೆ ನಮ್ಮ ದೇಶಗಳಲ್ಲಿ ಸಾಧ್ಯವಿಲ್ಲ. ಏಕೆಂದರೆ ದೇಶದಲ್ಲಿರುವ ಒಟ್ಟಿನ ಹಣದಪೈಕಿ ಬಹು ಸ್ವಲ್ಪಭಾಗ ಮಾತ್ರ ಸಾಲ ಕೊಡಲ್ಪಡಲು ಉದ್ದಿಷ್ಟವಾಗಿರುತ್ತದೆ. ಈ ಉದ್ದಿಷ್ಟವಾದ ಮೊಬಲಗಿನೊಳಗೂ, ಕೆಲಭಾಗಮಾತ್ರ ಸಾಲವಾಗಿ ಬಡ್ಡಿಯನ್ನು ವಸ್ತುತಃ ದುಡಿಯುತ್ತಿರುತ್ತದೆ. ಉಳಿದುದು ನಿಷ್ಪ್ರಯೋಜಕವಾಗಿದೆ.

ಉದಾಹರಣೆ.

ಐನೂರು ಮನೆಗಳಿರುವ ಒಂದು ಗ್ರಾಮದಲ್ಲಿ ಎಲ್ಲರ ಬಳಿಯಲ್ಲಿ ಚಿನ್ನಬೆಳ್ಳಿಯ ನಗಗಳ ಮತ್ತು ನಾಣ್ಯದ ರೂಪದಲ್ಲೂ, ಕರೆನ್ಸಿ ನೋಟಿನ ರೂಪದಲ್ಲೂ ಸಾಲದ ಪತ್ರ, ಹುಂಡಿ, ಪ್ರೋನೋಟು ಮೊದಲಾದ ಋಣ ಪ್ರದರ್ಶಕ ಪತ್ರಗಳ ರೂಪದಲ್ಲೂ ಒಟ್ಟು ನೂರು ಸಾವಿರ ರೂಪಾಯಿ ಬೆಲೆಯುಳ್ಳ ಐಶ್ವರ್ಯ ವಿದೆಯೆಂದು ಇಟ್ಟುಕೊಳ್ಳುವ. ಈ 100,000 ರೂ. ಪೈಕಿ ಅರ್ಧವೆಲ್ಲವೂ ಬಹುಶಃ ನಗಗಳ ರೂಪದಲ್ಲಿರುತ್ತದೆಯಾಗಿ ಅದರಿಂದ ಒಂದು ಕಾಸೂ ಉತ್ಪತ್ತಿಯಾಗುವುದಿಲ್ಲ. ಉಳಿದ ಐವತ್ತು ಸಾವಿರ ರೂಪಾಯಿನೊಳಗೆ ಇಪ್ಪತ್ತೈದು ಸಾವಿರ ರೂಪಾಯಿಯು ಬಡಬಗ್ಗರಲ್ಲಿ 50-70-100 ರೂಪಾಯಿನಂತೆ ಹಂಚಲ್ಪಟ್ಟು ಅದರಿಂದಲೂ ಏನೂ ಉತ್ಪತ್ತಿಯಾಗುವದಿಲ್ಲ. ಏಕೆಂದರೆ ಅನುಪಪನ್ನರಲ್ಲಿ ನಗದಾಗಿರಬಹುದಾದ ಸ್ವಲ್ಪ ಹಣವನ್ನು ಅವರು ಬಡ್ಡಿಗೆ ಸಾಲಕೊಡುವುದಿಲ್ಲ; ಸಮಯದಲ್ಲಿ ಮತ್ತೊಬ್ಬರನ್ನು ಬೇಡದೆ ಉಪಯೋಗಿಸಿಕೊಳ್ಳಲು, ಅದನ್ನು ತಮ್ಮಲ್ಲಿಯೇ ಇಟ್ಟುಕೊಂಡಿರುವರು. ಉಳಿದ ಇಪತ್ತೈದು ಸಾವಿರ ರೂಪಾಯಿ ಮಾತ್ರ ಎರಡು ಮೂರು ಜನರಲ್ಲಿರುತ್ತಾ ಸಾಲವಾಗಿ ವಿನಿಯೋಗಿಸಲ್ಪಡತಕ್ಕುದಾಗಿರಬಹುದು; ಇದು ಸಹ ಎಲ್ಲವೂ ಋಣಿಗಳ ಮೇಲಿದ್ದುಕೊಂಡು ಬಡ್ಡಿಯನ್ನು ದುಡಿಯುತ್ತಿದೆ ಎಂದು ಹೇಳಲಿಕ್ಕಾಗದು. ಋಣಿಗಳು ವಾಪಸ್ಸು ಕೊಟ್ಟ ಹಣವು ಪುನಃ ಋಣಿಗಳಿಗೆ ಕೊಡಲ್ಪಡುವವರೆಗೂ, ಧನವಂತರಲ್ಲೇ ಉಳಿದಿರುವುದು ಈ ಮೊಬಲಗು 5 ಸಾವಿರ ರೂ. ಎಂದು ಊಹಿಸಿದರೆ, ಮಿಕ್ಕ 20,000 ಮಾತ್ರ ಬಡ್ಡಿಯನ್ನು ದುಡಿಯುತ್ತಿದೆ ಯೆಂದು ಹೇಳಬಹುದು. ಬಡ್ಡಿ ಹುಟ್ಟಿಸುವಂತಹ ನೂರು ಸಾವಿರ ರೂಪಾಯಿ ದ್ರವ್ಯದೊಳಗೆ ಎಂಬತ್ತು ಸಾವಿರ ರೂಪಾಯಿಯು ನಿಷ್ಪ್ರಯೋಜಕವಾದಂತಾಯಿತು. ಮತ್ತು ಆ ಗ್ರಾಮದವರ ಪೈಕಿ 3 ಮಂದಿ ಮಾತ್ರ ಸಾಲ ಕೊಡಲು ಯೋಗ್ಯರಾಗಿಯೂ, ಮಿಕ್ಕ 497 ಜನರೆಲ್ಲರೂ ಸಾಲ ಕೇಳತಕ್ಕವರಾಗಿ ಮಾತ್ರ ಇದ್ದಾರೆ. ಹೆಚ್ಚು ಕಡಮೆ ಈ ತರದ ಸ್ಥಿತಿಯು ನಮ್ಮ ದೇಶದಲ್ಲಿರುವುದರಿಂದ, ಹಣಕ್ಕೆ ಅಭಾವವುಂಟಾಗಿ, ಸಾಲವು ಸುಲಭ

ವಾಗಿ ದೊರೆಯುವುದಿಲ್ಲ. ಪಾಶ್ಚಿಮಾತ್ಯ ದೇಶದಲ್ಲಿನ ಸ್ಥಿತಿಯು ಮೇಲಿನದಕ್ಕೆ ವಿಪರೀತವಾಗಿರುವುದು. ಮೇಲಿನ ಉದಾಹರಣೆಯಲ್ಲಿ ಕೊಟ್ಟಿರುವ ಜನತೆಯೂ ಐಶ್ವರ್ಯವೂ ಉಳ್ಳ ಊರುವೊಂದು ಆ ದೇಶದಲ್ಲಿದೆಯೆಂದು ಇಟ್ಟುಕೊಳ್ಳುವ. ಆ ಊರು ಒಟ್ಟಿನ ನೂರು ಸಾವಿರ ರೂಪಾಯಿ ಎಲ್ಲವೂ ಬ್ಯಾಂಕಿನಲ್ಲಿರುತ್ತದೆ. ಎಲ್ಲರ ಹಣವೂ ಬ್ಯಾಂಕಿನಲ್ಲಿರುತ್ತದೆ. ಏಕೆಂದರೆ, ಉಣ್ಣುವುದು, ಉಡುವುದು, ವಾಸಿಸುವುದು ಇಂತಹ ವಾಸ್ತವಿಕವಾದ ಉಪಭೋಗಕ್ಕೆ ಅವಶ್ಯಕವಾಗಿ ಬೇಕಾಗುವಷ್ಟು ಉಪಭುಜ್ಯ ಪದಾರ್ಥಗಳನ್ನು ಮಾತ್ರ ಅವರು ಇಟ್ಟುಕೊಳ್ಳುತ್ತಾರೆ; ಅವರ ಒಟ್ಟು ಐಶ್ವರ್ಯದಲ್ಲಿ ಈ ಉಪಭುಜ್ಯ ಪದಾರ್ಥಗಳಿಗೆಷ್ಟು ಬೇಕೋ ಅಷ್ಟನ್ನು ಉಪಯೋಗಿಸಿಕೊಂಡು, ಮಿಕ್ಕ ಐಶ್ವರ್ಯವನ್ನೆಲ್ಲಾ ಫಲೋತ್ಪಾದಕವಾದ ವ್ಯಾಪಾರ, ಕೃಷಿ, ಕೈಗಾರಿಕೆ ಕಾರ್ಯಗಳಲ್ಲಿ ಉಪಯೋಗಿಸುತ್ತಾರೆ; ಹಣದ ರೂಪದಲ್ಲಿ ಬ್ಯಾಂಕಿನಲ್ಲಾದರೂ ಇಡುತ್ತಾರೆ. ಅಥವಾ ಈ ಎರಡು ವಿಧವಾಗಿಯೂ ಉಪಯೋಗಿಸುತ್ತಾರೆ. ರಾಜರೂ, ಮತ್ತು ರಾಜರಂತಹ ಇತರ ಅಲ್ಪ ಮಂದಿವಿನಾ ವಿಕ್ಕವರಾರೂ ನಗಗಳಿಗೆ ಹಣವನ್ನು ವೆಚ್ಚಮಾಡುವುದಿಲ್ಲ. ಬ್ಯಾಂಕಿನಲ್ಲಿಡುವ ಹಣವು ಯಾವಾಗಲೂ ಬಡ್ಡಿಯನ್ನೂ, ಬಡ್ಡಿಗೆ ಬಡ್ಡಿಯನ್ನೂ ಉತ್ಪತ್ತಿಮಾಡತಕ್ಕುದಾಗಿದೆ. ಉದಾಹರಣೆಯಲ್ಲಿನ ಒಟ್ಟು ನೂರು ಸಾವಿರ ರೂಪಾಯಿಗೂ ಬಡ್ಡಿಯುತ್ಪತ್ತಿಯಾಗುತ್ತಲೆಯಿರುತ್ತದೆ. ಮತ್ತೂ ಊರಿನ ಸಮಸ್ತರಿಗೂ, ಅವರವರು ಸಂಪಾದಿಸುವ ಹಣಕ್ಕನುಸಾರವಾಗಿ ಬಡ್ಡಿಯುತ್ಪತ್ತಿಯಾಗುತ್ತದೆ. ನಮ್ಮ ದೇಶದಲ್ಲಿ ಸಾಲಕೊಡುವವರು ಕಡಮೆ. ಸಾಲ ಕೇಳುವವರೇ ಹೆಚ್ಚು ಮಂದಿ; ಏಕೆಂದರೆ ಸಾಲಕೊಡುವವರು ಪುಣ್ಯವಂತರು, ಸಾಲ ಕೇಳುವವರು ಬಡವರು. ಅಲ್ಲಾದರೊ, ಬಡವರೆಲ್ಲರೂ ಎಂದರೆ ಬಹು ಭಾಗದ ಜನರು ಸಾಲಕೊಡತಕ್ಕವರೂ ಬಡ್ಡಿಯನ್ನು ಸಂಪಾದನೆಮಾಡುವವರೂ ಆಗಿರುತ್ತಾರೆ. ಸಾಲಕೇಳವರಾದರೋ ಬಹುವಿರಳ. ಏಕೆಂದರೆ, ಕೈಗಾರಿಕೆ, ಕೃಷಿ. ವ್ಯಾಪಾರ ಮೊದಲಾದ ವೃತ್ತಿಗಳನ್ನು ಸ್ವತಂತ್ರನಾಗಿ ನಡೆಯಿಸುವವರು, ಸಾಲವನ್ನು ತೆಗೆದುಕೊಂಡು, ಸಾಲದ ಹಣವನ್ನು ಆ ವೃತ್ತಿಗಳಿಗುಪಯೋಗಿಸಿ, ಸಾಲದ ಬಡ್ಡಿಗಿಂತಲೂ ದ್ವಿಗುಣತ್ರಿಗುಣವಾಗಿ ಸಂಪಾದನೆ ಮಾಡುತ್ತಾರೆ. ಇಂತಹರು ಮಾತ್ರ ಸಾಲಪಡೆಯುವವರಾಗಿರುತ್ತಾರೆ. ವೇತನತೆಗೆದುಕೊಂಡು ಅನ್ಯರ ಕಾರ್ಯಗಳನ್ನು ಮಾಡುವ ವಿಶಿಷ್ಟರು ಸಾಲಕೊಡುವವರೇ ಹೊರತು ಸಾಲ ತೆಗೆದುಕೊಳ್ಳರಲ್ಲ. ಸ್ವತಂತ್ರ ಕಾರ್ಯ ನಡೆಯಿಸುವ ಮೊದಲನೆಯ ವರ್ಗದವರು ಉಪಪನ್ನರಾಗಿರುತ್ತಾರೆ. ಇವರ ಸಂಖ್ಯೆ ಬಹು ಕಡಮೆ. ಅನ್ಯರ ಕಾರ್ಯವನ್ನು ಮಾಡಿ ವೇತನದಿಂದ ಜೀವಿಸುವ ಎರಡನೆಯ ವರ್ಗದವರು ಅನುಪಪನ್ನರು. ಇಂಥವರೇ ಬಹು ಭಾಗದ ಜನರಾಗಿದ್ದಾರೆ. ಬಹು ಭಾಗದ ಜನರು ಸ್ವಲ್ಪ ಸ್ವಲ್ಪ ಮೊಬಲಿಗಿನಲ್ಲಿ ಸಾಲಕೊಡುತ್ತಾರೆ. ಅಲ್ಪ ಭಾಗದ ಜನರು ದೊಡ್ಡ ದೊಡ್ಡ ಮೊಬಲಿಗಿನಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ಈ ಎರಡು ವರ್ಗದವರನ್ನು ಸಂಬಂಧಿಸುವವರು ಬ್ಯಾಂಕಿನವರು ಬಡವರಾದ ಬಹು ಭಾಗದ ವಿಶಿಷ್ಟರೂ ತಮ್ಮ ಕೈಗೆ ಬರುವಯತ್ಕಿಂಚಿದ್ಧನವನ್ನು ತಮ್ಮ ಬಳಿಯಿಟ್ಟುಕೊಳ್ಳದೆ ಬ್ಯಾಂಕಿನಲ್ಲಿಡುತ್ತಾರೆ. ಆ ಹಣವನ್ನು ಬ್ಯಾಂಕಿನಿಂದ ಸ್ವತಂತ್ರ ವೃತ್ತಿಯನ್ನವಲಂಬಿಸುವ ಅಲ್ಪ ಭಾಗದ ಪುಣ್ಯವಂತರು ಹೆಚ್ಚು ಹೆಚ್ಚಾಗಿ ಸಾಲವಾಗಿ ತೆಗೆದುಕೊಳ್ಳುತ್ತಾರೆ. ಹೀಗೆ ಇವರು ತೆಗೆದುಕೊಂಡ ಹಣವು ಪುನಃ ಬಡವರ ಕೈಗೇ ಸೇರುತ್ತದೆ. ಹೀಗೆ ಹಣವು ಬಡವರಿಂದ ಬ್ಯಾಂಕಿಗೂ, ಬ್ಯಾಂಕಿನಿಂದ ಸ್ವತಂತ್ರ ವೃತ್ತಿಯನ್ನವಲಂಬಿಸುವ ಪುಣ್ಯವಂತರಿಗೂ, ಅವರಿಂದ ಪುನಃ ಬಡವರಿಗೂ, ಈ ಪ್ರಕಾರ ನಿಲ್ಲದೆಸುತ್ತುತ್ತಿದೆ. ಹಿಂದೆ ಉದಾಹೃತವಾದ 500 ಮನೆಗಳ ಊರು ಪಾಶ್ಚಿಮಾತ್ಯದೇಶಗಳಲ್ಲಿದ್ದರೆ, ಆ ಊರಿನ ಇಬ್ಬರು ಮೂವರು ಐಶ್ವರ್ಯವಂತರು ತಮ್ಮ ಹಣವನ್ನು ಬಹುಶಃ ವಿಶೇಷ ಲಾಭಕರವಾದ ಕೃಷಿ, ವಾಣಿಜ್ಯ, ಕೈಗಾರಿಕೆ ಮೊದಲಾದ ವಿಶೇಷ ಲಾಭಕರವಾದ ವೃತ್ತಿಗಳಲ್ಲುಪಯೋಗಿಸುವರೇ ಹೊರತು, ತಮ್ಮ ಹಣಕ್ಕೆ ಬಡ್ಡಿ ಬಂದರೆ ಸಾಕೆಂದು ತೃಪ್ತರಾಗುವದಿಲ್ಲ. ಅದುಕಾರಣ ಇವರಿಗೆ ತಮ್ಮಲ್ಲಿರುವ ಹಣದ ಜತೆಗೆ ಮತ್ತಷ್ಟು ಹಣವು ಬೇಕಾಗುತ್ತದೆ. ಈ ಹಣವನ್ನು ಇವರು ಸಾಲತೆಗೆದುಕೊಳ್ಳುತ್ತಾರೆ. ಈ ಸಾಲವು ಬಹುಶಃ ಆ ಊರಿನ 497 ಬಡ ಜನರಿಂದ ದೊರೆಯು

ತ್ತವೆ. ಹೇಗೆಂದರೆ, ಪಾಶ್ಚಿಮಾತ್ಯದೇಶಗಳಲ್ಲಿ ಬಡವರಿಗೋಸ್ಕರ ಎಲ್ಲೆಡೆಯಲ್ಲೂ ಸೇವಿಂಗ್ಸ್‌ಬ್ಯಾಂಕು ಸ್ಥಾಪಿತವಾಗಿವೆ. ಆ ಪ್ರಕಾರ ಆ ಊರಿನಲ್ಲಿ ಸ್ಥಾಪಿತವಾಗಿರಬಹುದಾದ ಸೇವಿಂಗ್ಸ್‌ಬ್ಯಾಂಕಿನಲ್ಲಿ ಆ ಬಡವರು ತಮ್ಮ ಕೈಗೆ ಬರುವಹಣವನ್ನೆಲ್ಲಾ ಇಡುತ್ತಾರೆ. ಆ ಹಣವನ್ನು ಬ್ಯಾಂಕಿನವರು ಆ ಇಬ್ಬರು ಮೂವರು ಸ್ವತಂತ್ರ ವೃತ್ತಿಯನ್ನವಲಂಬಿಸುವವರಿಗೆ ಸಾಲವಾಗಿ ಕೊಡುತ್ತಾರೆ ಈ ಪ್ರಕಾರ ಹಣವು ಪಾಶ್ಚಿಮಾತ್ಯ ದೇಶಗಳಲ್ಲಿ ಬಡ್ಡಿಯನ್ನುತ್ಪತ್ತಿಮಾಡಿಕೊಡುವುದರಲ್ಲಾದರೂ, ವೃತ್ತಿಗಳಲ್ಲಿ ಮತ್ತೂ ವಿಶೇಷ ಲಾಭವನ್ನುಂಟುಮಾಡಿಕೊಡುವುದರಲ್ಲಾದರೂ ಸಾರ್ವದಾ ಇರುತ್ತದೆ. ಅಲ್ಲಿನವರು ಹಣವನ್ನು ಫಲೋತ್ಪಾದಕವಲ್ಲದ ನಗನಾಣ್ಯಗಳಿಗೂ, ಡಾಂಭಿಕತನತ ಉದ್ದೇಶಗಳಿಗೂ, ಉಪಯೋಗಿಸುವದಿಲ್ಲ. ಮತ್ತೂ ಅಂತಹ ನಗಗಳನ್ನೂ ಮತ್ತೂ ತಾತ್ಕಾಲಿಕ ಉಪಯೋಗಕ್ಕವಶ್ಯವಿಲ್ಲದ ಉಪಭುಜ್ಯ ಪದಾರ್ಥಗಳನ್ನೂ ಅವರು ಮಾರಿಬಿಟ್ಟು ಆ ಹಣವನ್ನು ಬಡ್ಡಿಯ ಕೊಡತಕ್ಕ ಬ್ಯಾಂಕಿನಲ್ಲಾದರೂ ಅಥವಾ ಮತ್ತೂ ವಿಶೇಷ ಲಾಭಕರವಾದ ವೃತ್ತಿಯಲ್ಲಾದರೂ ವಿನಿಯೋಗಿಸದೆ ಇರಲಾರರು. ಅದುಕಾರಣ ಅಲ್ಲಿ ಹಣವು ಹೇರಳ, ಅದರ ಚಲನೆ ಸುಲಭ, ಬಡ್ಡಿಯು ಬಹು ಕಡಮೆ, ಸಾಲ ತೀರಿಸುವ ವಾಯಿದೆಯು ಬಹು ದೀರ್ಘ, ಬಹು ಸಣ್ಣ ಕಂತುಗಳಲ್ಲಿ ಸಾಲವನ್ನು ವಸೂಲಿಮಾಡಿಕೊಳ್ಳುವ ವಿತರಣೆ ನಮ್ಮ ದೇಶಗಳಲ್ಲಾದರೊ, ಇವಕ್ಕೆ ವಿಪರೀತವಾದ ಪರಿಣಾಮಗಳು.

ಋಣಿಯು ಬ್ಯಾಂಕಿಗೆ ಬರೆದುಕೊಡುವ ಸಾಲದ ಪತ್ರವು ಒಂದೇ ಆದರೂ, ಬ್ಯಾಂಕಿನವರು ಆ ಪತ್ರದ ಮೊಬಲಗನ್ನು ಸ್ವಲ್ಪ ಸ್ವಲ್ಪವಾದ ಅನೇಕ ಭಾಗಗಳನ್ನಾಗಿ ವಿಭಾಗಿಸಿ ಆ ಪ್ರತಿಯೊಂದು ಭಾಗಕ್ಕೂ ಬೇರೆ ಬೇರೆ ಪತ್ರಗಳನ್ನು ಬರೆದುಕೊಡುವರು. ಮಸಲ: ಋಣಿಯು ಬ್ಯಾಂಕಿಗೆ 150 ರೂ. ಗೆ ಒಂದೇ ಪತ್ರವನ್ನು ಬರೆದುಕೊಟ್ಟರೆ, ಬ್ಯಾಂಕಿನವರು ಋಣಿಗೆ 15--15 ರೂ. ಗೆ 10 ಡಿಬೆಂಚರ್ ಪತ್ರಗಳನ್ನು ಬರೆದುಕೊಡಬಹುದು. ಇದರ ಪ್ರಯೋಜನಗಳಾವುವೆಂದರೆ—1. ತಾತ್ಕಾಲಿಕಾವಶ್ಯಕತೆಗಾಗಿ ಋಣಿಗೆ ಬೇಕಾಗುವ ಮೊಬಲಗು ಹುಟ್ಟುವಷ್ಟು ಪತ್ರಗಳನ್ನು ಮಾತ್ರ ಅವನು ಮಾರಿ, ಮಿಕ್ಕ ಪತ್ರಗಳನ್ನು ಧಾರಣೆ ಏರಿದಾಗ ಮಾರಬಹುದು. ಏಕೆಂದರೆ ಡಿಬೆಂಚರ್ ಪತ್ರಗಳು ಪತ್ರದಲ್ಲಿ ಕಂಡ ಮೊಬಲಗಿಗೇ ಆಗಲಿ, ಅಥವಾ ಹೆಚ್ಚು ಕಡಮೆ ಮೊಬಲಗಿಗೇ ಆಗಲಿ ಕ್ರಯವಾಗಬಹುದು. ಅದುಕಾರಣ ಋಣಿಗೆ ಹಣದ ದರುದು ಹೆಚ್ಚಾಗಿದ್ದರೆ, ಆ ಹಣ ಹುಟ್ಟುವಷ್ಟು ಪತ್ರಗಳನ್ನು ಮಾತ್ರ ಹೀನಕ್ರಯಕ್ಕೆ ಮಾರಿ, ಮಿಕ್ಕ ಪತ್ರಗಳನ್ನು ಮಾರಲು ಒಳ್ಳೆಯ ಧಾರಣೆಯನ್ನು ಸಾವಕಾಶವಾಗಿ ನಿರೀಕ್ಷಿಸಬಹುದು. ಮಸಲ—ಒಬ್ಬನು ಜಮೀನನ್ನು ಆಬಾದು ಮಾಡಲಿಕ್ಕಾಗಿ 150 ರೂ. ಹುಟ್ಟಿಸುವುದಕ್ಕೋಸ್ಕರ, ಬ್ಯಾಂಕಿಗೆ ಅಷ್ಟು ಮೊಬಲಗ್ಗೆ ಪತ್ರ ಬರೆದುಕೊಟ್ಟಿರುತ್ತಾನೆಂದು ಊಹಿಸುವ. ಇವನು ಆ ಬಾದಿನ ಕಾರ್ಯ ಮಾಡುವವರಿಗೆ ಒಂದೇ ಆ ವೃತ್ತಿ 150 ರೂ. ನ್ನೆಲ್ಲಾ ಕೊಡುವುದಿಲ್ಲ. ಒಂದಾವೃತ್ತಿ 20 ರೂ. ಬಳಿಕ 1 ತಿಂಗಳಲ್ಲಿ 15 ರೂ., ಬಳಿಕ 15 ದಿವಸದಲ್ಲಿ 10 ರೂ. ಈ ಪ್ರಕಾರ ಆಗಾಗ್ಗೆ ಕೊಡಬೇಕಾಗುತ್ತದೆ. ಮೊದಲನೆಯಾವೃತ್ತಿ ಕೂಲಿಯವರಿಗೆ 20 ರೂ. ಕೊಡಬೇಕಾಗುತ್ತದೆ. ಆಗ ಪತ್ರಕ್ಕೆ ಗಿರಾಕಿಗಳು ಬಹು ಕಡಮೆಯಾಗಿದ್ದಾರಾಗಿ, ಸೇಕಡ 5 ರೂ. ನಂತೆ ಡಿಸ್ಕೌಂಟು ಕೊಟ್ಟಲ್ಲದೆ ಪತ್ರಗಳು ಮಾರವು. ಆದರೂ ಆಗ ಅವನಿಗೆ ಬಹು ದರದಿರುವುದರಿಂದ ಎರಡು ಪತ್ರಗಳನ್ನು

೨೪$\frac{1}{2}$ ರೂ. ಗೆ ಮಾರಿಬಿಡುವನು. ಮಿಕ್ಕ ೪ ಪತ್ರಗಳನ್ನು ಧಾರಣೆ ಏರಿದ ಒಂದು ತಿಂಗಳ ಬಳಿಕ ಸೇಕಡ 10 ರೂ. ಸ ಪ್ರೀಮಿಯಮ್ಮಿನ ಮೇಲೆ 132 ರೂ. ಗೆ ಮಾರುವನು. ಆದರಿಂದ ಅವನಿಗೆ 12 ರೂ. ಪತ್ರಗಳಿಗೆ ಲಾಭ ಬಂದಿತು. ಹಿಂದಣ 2 ಪತ್ರಗಳಿಗೆ ನಷ್ಟವಾದ 1$\frac{1}{2}$ ರೂ. ನ್ನು ವಜಾಮಾಡಿದರೆ ಒಟ್ಟು 10 ಡಿಬೆಂಚರ್ ಪತ್ರಗಳಿಗೆ ಅವನಿಗೆ 10$\frac{1}{2}$ ರೂ. ಲಾಭಬಂದ ಹಾಗಾಯಿತು. ಹೀಗಲ್ಲದೆ ಬ್ಯಾಂಕಿನವರು 150 ರೂ. ಗೂ ಒಂದೇ ಪತ್ರವನ್ನು ಬರೆದುಕೊಟ್ಟಿದ್ದರೆ, ೨೦ ರೂ.ನ ದರದು ಋಣಿಗುಂಟಾದಾಗಲೇ ಆ ಪತ್ರವನ್ನು ಸೆ 5 ರೂ. ಡಿಸ್ಕೌಂಟಿನ ಮೇಲೆ ಮಾರಿಬಿಡಬೇಕಾಗಿದ್ದಿತು.

ಇದರಿಂದ ಮತ್ತೊಂದು ಪ್ರಯೋಜನವೇನೆಂದರೆ—ಮಸಲ—ಒಬ್ಬನು ಜಮೀನಿನ ಆಬಾದಿಗಾಗಿ ಮೊದಲು 100 ರೂ. ನ ಸಾಲವನ್ನೂ, 6 ತಿಂಗಳ ಮೇಲೆ ಮಗನ ಮದುವೆಗಾಗಿ 100 ರೂ. ಸಾಲವನ್ನೂ 6 ತಿಂಗಳು ತದನಂತರ ಎತ್ತುಗಳನ್ನು ಕೊಂಡುಕೊಳ್ಳಲಿಕ್ಕಾಗಿ 100 ರೂ. ಸಾಲವನ್ನೂ ಮಾಡಬೇಕಾಗುತ್ತದೆ. ಎಂದರೆ ಈ ವಿವಿಧ ಉದ್ದೇಶಗಳಿಗೆ ಅವನಿಗೆ ಒಟ್ಟು 300 ರೂ. ಸಾಲವು ಬೇಕಾಗುತ್ತದೆ. ಅವನ ಜಮೀನು 400 ರೂ. ಬಾಳುತ್ತದೆ. ಈ ಡಿಬೆಂಚರ್ ಲೇವಾದೇವಿಯನ್ನು ಅವನು ಮಾಡಿದರೆ ಅವನಿಗೆ ಯಾವ ವಿಧದ ಅನನುಕೂಲವೂ ಇಲ್ಲ. ಹಾಗೆ ಮಾಡದೆ ಖಾಸ್ಗಿ ಮನುಷ್ಯನಲ್ಲಿ ಸಾಲಮಾಡಬೇಕಾಗಿ ಬಂದರೆ ಅವನಿಗುಂಟಾಗುವ ಅನನುಕೂಲವನ್ನು ವಿಚಾರಮಾಡುವ.

ಅವಶ್ಯಕತೆಯುಂಟಾದ ಹಾಗೆಲ್ಲ ಬೇರೆ ಬೇರೆ ಸಾಲವನ್ನು ಒಂದೇ ಆಸ್ತಿಯ ಈಡಿನ ಮೇಲೆ ಪಡೆಯಲಿಕ್ಕಾಗುವುದಿಲ್ಲ. ಏಕೆಂದರೆ ಪೂರ್ವಾಧಿಯಿದ್ದರೆ ಸಾಲ ಕೊಡಲೊಲ್ಲರು. ಮತ್ತೂ ಎರಡನೆಯಾವೃತ್ತಿಯ ಸಾಲಕ್ಕೆ ಮೊದಲೇ ಮೊದಲನೆಯ ಸಾಲವನ್ನು ತೀರಿಸಲಿಕ್ಕೆ ಬಹುಶಃ ಅವನಿಂದ ಆಗಲಾರದು. ಆದುದರಿಂದ ಅವನು ಮೊದಲಾವೃತ್ತಿಯೇ ಒಟ್ಟು 300 ರೂ. ನ್ನೂ ಸಾಲವಾಗಿ ಪಡೆಯಬೇಕಾಗುವುದು. ಇದರಿಂದ ಅವನು ತನ್ನ ಬಳಿ ನಿಷ್ಪ್ರಯೋಜಕವಾಗಿ ಇಟ್ಟುಕೊಳ್ಳಬೇಕಾದ 100 ರೂ. ಗೆ 6 ತಿಂಗಳು, ಮತ್ತೆ 100 ರೂ. ಗೆ 1 ವರ್ಷ ಅನವಶ್ಯಕವಾಗಿ ಬಡ್ಡಿ ಕೊಡಬೇಕಾಗುತ್ತದೆ. ಹೀಗಿಲ್ಲದಿದ್ದರೆ, ಹಿಂದಣ ಸಾಲಕ್ಕೂ ಮುಂದಣ ಸಾಲಕ್ಕೂ ಬೇರೆ ಬೇರೆ ಪತ್ರಗಳನ್ನು ಹೆಚ್ಚು ಹೆಚ್ಚು ಬಡ್ಡಿಗೆ ಬರೆದುಕೊಟ್ಟು ಆಸ್ತಿಯನ್ನೇ ಕಳೆದುಕೊಳ್ಳಬೇಕಾಗುವುದು.

ಮೇಲೆ ವಿವರಿಸಲ್ಪಟ್ಟ ಲೇವಾದೇವಿಯ ಕ್ರಮವಿಧಾನಗಳು ಪಾಶ್ಚಿಮಾತ್ಯದೇಶಗಳಲ್ಲಿ ನಡೆಯುತ್ತಿವೆ. ನಮ್ಮ ದೇಶಗಳ ಹಣವು ಸಹ ಯಾರಲ್ಲಿಯೂ, ಎಂದರೆ ಸರ್ಕಾರದಲ್ಲಾಗಲಿ, ಪ್ರಜೆಗಳಲ್ಲಾಗಲಿ, ನಿಷ್ಪ್ರಯೋಜಕವಾಗಿರದೆ, ಫಲೋತ್ಪಾದವಾದ ಕೃಷಿಮೊದಲಾದ ವ್ಯವಸಾಯಗಳಿಗೆ ಉಪಯುಕ್ತವಾಗುವಂತೆ ಮಾಡಲು ಸರ್ಕಾರದವರೂ ದೇಶಹಿತೈಷಿಗಳೂ ಈ ತರದ ತಕ್ಕ ಉಪಾಯಗಳನ್ನು ಯೋಚಿಸುತ್ತಿದ್ದಾರೆ.

ಅನ್ಯೋನ್ಯ ಸಹಾಯಕ ಸಂಘಗಳು ಈ ಉದ್ದೇಶವನ್ನು ನಡೆಯಿಸತಕ್ಕವು ಗಳಾಗಿವೆ. ಆದರೆ ನಮ್ಮ ದೇಶದ ಜನರಲ್ಲಿ ಅನ್ಯೋನ್ಯ ನಂಬುಗೆಯೂ ಸಾಹಸಿಕ ಸ್ವಭಾವವೂ, ಸಹಕಾರಿತೆಯೂ, ಆತ್ಮಾಧೀನತೆಯೂ ಪಾಶ್ಚಿಮಾತ್ಯರಲ್ಲಿನಂತೆ ಇಲ್ಲವಾಗಿ ಈ ವಿಷಯದಲ್ಲಿ ಮತ್ತಷ್ಟು ಕಾರ್ಯಭಾಗವನ್ನು ಸರ್ಕಾರದವರೇ ವಹಿಸಿಕೊಳ್ಳುವುದು ಈ ಜನರ ಆಧುನಿಕಸ್ಥಿತಿಗಳಿಗೆ ತಕ್ಕದಾಗಿದೆ. ಅದುಕಾರಣ,

ಸರ್ಕಾರಿ ಮತ್ತು ಖಾಸ್ಗಿ ಉಭಯಸ್ವಭಾವದ ವಿಲೇಜ್ ಯೂನಿಯನುಗಳು, ತಾಲ್ಲೂಕುಬೋರ್ಡುಗಳು, ಡಿಸ್ಟ್ರಿಕ್ಟ್ ಬೋರ್ಡುಗಳು ಈ ಸಂಘಗಳನ್ನೇ ಅನ್ಯೋನ್ಯಧನಸಹಾಯಕ ಬ್ಯಾಂಕುಗಳನ್ನಾಗಿ ಏರ್ಪಡಿಸಿದರೆ, ಧನಿಕರಲ್ಲಿ ನಿಷ್ಪ್ರಯೋಜಕವಾಗಿರುವ ಹಣವು, ನಿರ್ಧನಿಕರೂ ಮತ್ತೂ ವ್ಯವಸಾಯಿಗಳೂ ಆದವರ ಉಪಯೋಗಕ್ಕೆ ಸುಲಭವಾಗಿ ಬರುವಂತೆಯೂ, ಆ ಮೂಲಕ ಆ ಎರಡು ವರ್ಗದವರಿಗೂ ಲಾಭವಾಗುವಂತೆಯೂ, ಲೇವಾದೇವಿಯ ಸೌಕರ್ಯಗಳು ಹೆಚ್ಚುವುವೆಂದು ಇಂಡಿಯದ ಹಿತೈಷಿಗಳಾದ ಪಂಡಿತರು ಅಭಿಪ್ರಾಯಪಡುತ್ತಾರೆ.

ಲ್ಯಾಂಡ್ ಇಂಪ್ರುವ್‌ಮೆಂಟ್ಸ್ ಲೋನ್ಸ್

ಬ್ರಿ. ಇ. ಆಕ್ಟ

ಮೈ. ರೆಗ್ಯುಲೇಷನ್

ಈ ಖಾನೂನಿನ ಸಾಧಕವಾದ ಸೆಕ್ಷನುಗಳು ಕೆಳಗೆ ವಿವರಿಸಲ್ಪಡುತ್ತವೆ.

1 ನೇಯ ಸೆಕ್ಷನು :—ಜಮೀನಿನ ಆಬಾದಿಗಾಗಿ, ಆ ಜಮೀನಿಗೆ ಆಬಾದು ಮಾಡಲು ಯಾರಿಗೆ ಹಕ್ಕಿದೆಯೋ ಅಂಥವರಿಗೂ, ಅಂಥವರ ಅನುಮತಿಯ ಮೇರೆ ಇತರರಿಗೂ ಸರ್ಕಾರದವರು ಸಾಲಗಳನ್ನು ಕೊಡಬಹುದು.

ಟಿಪ್ಪಣಿ.

ಸಾಲವು ತೀರಿಸಲ್ಪಡದಿದ್ದಲ್ಲಿ ಸರ್ಕಾರದವರು ಆಬಾದು ಮಾಡಲ್ಪಟ್ಟ ಜಮೀನಿನ ಮೇಲೆ ಸಾಲದ ವಸೂಲಿಗೆ ಪ್ರವರ್ತಿಸಬೇಕಾಗಿ ಬರುತ್ತದೆಯಾದುದರಿಂದಲೂ, ಜಮೀನು ಋಣಿಗಲ್ಲದೆ ಇತರರಿಗೆ ಸೇರಿರುವ ಪಕ್ಷದಲ್ಲಿ ಹಾಗೆ ಅದರ ಮೇಲೆ ಪ್ರವರ್ತಿಸಲಾಗುವುದಿಲ್ಲವಾದುದರಿಂದಲೂ, ಜಮೀನಿನ ಮೇಲೆ ತಕ್ಕಮಟ್ಟಿನ ಮೂಲಸ್ವತ್ವಾಧಿಕಾರವಿಲ್ಲದವರಿಗೆ ಸಾಲಗಳನ್ನು ಕೊಡುವುದಿಲ್ಲ. ಜಮೀನಿನ ವರಿಷ್ಠಾಧಿಕಾರಿಗಳಾದ ಜಮೀನ್‌ದಾರರೂ ಇನಾಮುದಾರರೂ ಇಂಥವರ ಅನುಮತಿಯ ಮೇರೆ ಅದರ ಸಾಗುವಳಿದಾರರಿಗೂ (ಗೇಣಿದಾರರಿಗೂ) ಸಾಲಗಳನ್ನು ಕೊಡುವರು.

ಆಬಾದು:-ಭೂಮಿಯ ಸಾಗುವಳಿಯ ಅನುಭೋಗಕ್ಕೋಸ್ಕರ ಸಾಗುವಳಿದಾರನು ಭೂಮಿಯ ಮಾಲೀಕನಿಗೆ ರಾಜಪಾಲಿಗಾಗಿ ಕೊಡಬೇಕಾದ ಕಂದಾಯ, ಯಾ, ವಾರ ಯಾ, ಗುತ್ತಿಗೆ, ಯಾ, ರೆಂಟ್, ಯಾ, ಇತರ ಹೆಸರಿನಪ್ರತಿಫಲ, ಅದರ ಬೆಲೆಯು, ಆ ಜಮೀನಿಗೆ ಯಾವ ಕಾರ್ಯವನ್ನು (ಕಾಮಗಾರಿಯನ್ನು) ಮಾಡಿಸಿದರೆ ಹೆಚ್ಚುವುದೋ ಅಂತಹ ಕಾರ್ಯಕ್ಕೆ ಆಬಾದು ಎಂದು ಇಲ್ಲಿ ಹೇಳಲ್ಪಡುತ್ತದೆ.

ಟಿಪ್ಪಣಿ.

ಆದಾಯದ ತೆರಿಗೆಯ ಆಕ್ಟು ಜಾರಿಯಲ್ಲಿರುವ ದೇಶಗಳಲ್ಲಿ ಒಬ್ಬನಿಗೆ ಭೂದ್ರವ್ಯವಲ್ಲದ ಇತರ ದ್ರವ್ಯದಿಂದ ಬರುವ ಆದಾಯದ ಮೇಲೆ ಹೇಗೆ ಆದಾಯದ ತೆರಿಗೆಯು ನಿರ್ಧರಿಸಲ್ಪಡುವುದೋ ಹಾಗೆ ಭೂಮಿಯ ಆದಾಯದ ಮೇಲೆ ಭೂಕಂದಾಯವು ನಿರ್ಧರಿಸಲ್ಪಡುವುದು. ಭೂಮ್ಯಾದಾಯವು ಭೂಕಂದಾಯಕ್ಕೆ ಪಾತ್ರವಾಗಿರುತ್ತಾಗಿ, ಇದು ಆದಾಯದ ತೆರಿಗೆಯಿಂದ, ಆದಾಯ ತೆರಿಗೆ ಆಕ್ಟಿನ ನೆಯ ಸೆಕ್ಷನಿನಲ್ಲಿ ವಿನಾಯಿಸಲ್ಪಟ್ಟಿದೆ. ಜಮೀನಿನ ಮಾಲೀಕನಿಗೆ ಸಾಗುವಳಿದಾರನು ಕೊಡುವ ಪ್ರತಿಫಲವೇ ಮಾಲೀಕನ ಆದಾಯವಾಗಿರುವುದು. ಸಾಗುವಳಿಯನ್ನು ಜಮೀನಿನ ಮಾಲೀಕನೇ ಮಾಡಿದರೂ ಇದೇ ರೀತಿಯಲ್ಲಿ ಪ್ರತ್ಯೇಕಿಸಲ್ಪಟ್ಟು ಲೆಕ್ಕಿಸಲ್ಪಡುವುದು. ಹೇಗೆಂದರೆ—'ಮಾಲೀಕನು ಜಮೀನನ್ನು ತಾನೇ ಸಾಗುವಳಿ ಮಾಡದೆ ಅದನ್ನು ಮತ್ತೊಬ್ಬನಿಗೆ ಕೊಟ್ಟಿದ್ದರೆ ಮಾಲೀಕನಿಗೆ ಎಷ್ಟು ಆದಾಯವು ಬರಬಹುದಾಗಿದ್ದಿತು' ಎಂಬುದನ್ನು ಆಲೋಚಿಸಿ ಅದರ ಮೇಲೆ ಕಂದಾಯವು ನಿರ್ಧರಿಸಲ್ಪಡುವುದು. ಈ ಆದಾಯವಾದರೋ—ವೆಚ್ಚ ಕಳೆದುಳಿದ ಭೂಮಿಯ ಉತ್ಪತ್ತಿಯೇ ಹೊರತು ಒಟ್ಟಿನ ಉತ್ಪತ್ತಿಯಲ್ಲ. ಅಂತಹ ವೆಚ್ಚವು ಯಾವುದೆಂದರೆ—ಜಮೀನಿನ ಮಾಲೀಕನು ಆಳನ್ನಿಟ್ಟು ವ್ಯವಸಾಯ ಮಾಡಿಸಿದರೆ, ಅವನಿಗೆ ಆಳಿನ ವೆಚ್ಚಕ್ಕಾಗಿ ಎಷ್ಟು ತಗಲುತ್ತದೋ ಅದೂ, ಮತ್ತೂ ಉಳುವ ಎತ್ತುಗಳು, ನೇಗಲು, ಗೊಬ್ಬರ, ಇತ್ಯಾದಿ ವ್ಯವಸಾಯ ಸಾಧನಗಳ ವೆಚ್ಚಕ್ಕೆ ಎಷ್ಟು ತಗಲುತ್ತದೋ ಅದೂ ಇತ್ಯಾದಿಗಳು. ಈ ವೆಚ್ಚವನ್ನು ಒಟ್ಟು ಉತ್ಪತ್ತಿಯಲ್ಲಿ ಕಳೆದ ಮೇಲೆ ಉಳಿಯುವವೆಷ್ಟೋ ಅಷ್ಟರ ಬೆಲೆಯ ಮೇಲೆ ಭೂಕಂದಾಯವು ನಿರ್ಧರಿಸಲ್ಪಡುತ್ತದೆ. ಈ ವೆಚ್ಚಕ್ಕೆ ತಕ್ಕ ಜಮೀನಿನ ಉತ್ಪತ್ತಿಯು ಸಾಗುವಳಿ ಮಾಡಿದವನಿಗೆ ಸೇರತಕ್ಕುದು; ಮಿಕ್ಕದು ಭೂಮಿಯ ಮಾಲೀಕನಿಗೆ ಸೇರತಕ್ಕುದು. ಅದುಕಾರಣ ಕಂದಾಯವು ಭೂಮಿಯ ಆದಾಯದ ಮೇಲೆ ನಿರ್ಧರಿಸಲ್ಪಡುತ್ತದೆ ಎಂಬುದಕ್ಕೂ ಭೂಮಿಯುತ್ಪತ್ತಿಯಲ್ಲಿ ಬೇಸಾಯದ ವೆಚ್ಚವನ್ನು ಕಳೆದುಳಿದ ಉತ್ಪತ್ತಿಯ ಭಾಗದ ಮೇಲೆ ಅದು ನಿರ್ಧರಿಸಲ್ಪಡುತ್ತದೆಂಬುದಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಆ ವೆಚ್ಚಕ್ಕೆ ತಕ್ಕ ಫಸಲನ್ನು ಸಾಗುವಳಿದಾರನು ತನ್ನ ಪಾಲಿಗೆ ಉಳಿಸಿಕೊಂಡು ಮಿಕ್ಕುದನ್ನು ನಾಣ್ಯರೂಪದಲ್ಲಿ ಅಥವಾ ಫಲರೂಪದಲ್ಲಿ, ಗೇಣಿ, ಯಾ, ಗುತ್ತಿಗೆಯಂತಲಾದರೂ ಅದರೊಂದಂಶದ ಫಲವನ್ನು ವಾರವೆಂತಲಾದರೂ ಮಾಲೀಕನಿಗೆ ಕೊಡುವನು. ಸಾಗುವಳಿದಾರನು ಮಾಲೀಕನಿಗೆ ಕೊಡುವ ಈ ಪ್ರತಿಫಲಕ್ಕೆ ಗೇಣಿ, ಯಾ, ಗುತ್ತಿಗೆ, ಯಾ, ರೆಂಟ್, ಯಾ ವಾರವೆಂದು ದೇಶಾನುಸಾರವಾದ ಭಾಷಾನುಸಾರವಾದ ಹೆಸರುಗಳು ಬಂದಿವೆ. ಈ ರೆಂಟ್ ಹೆಚ್ಚಾದರೆ ಕಂದಾಯವು ಹೆಚ್ಚುವುದು, ಕಡಮೆಯಾದರೆ ಕಂದಾಯವು ಕಡಮೆಯಾಗುವುದು. ಅದುಕಾರಣ ಯಾವ ಆ ಬಾದಿನ ಕಾರ್ಯದಿಂದ ಭೂಮಿಯು ಫಲವತ್ತರವಾಗಿ ಅದರ ರೆಂಟ್ ಹೆಚ್ಚುವುದೋ ಅಂತಹ ಕಾರ್ಯಕ್ಕೆ ಸರ್ಕಾರದವರು ಸಾಲವನ್ನು ಕೊಡುವರು.

ಕೆಳಗೆ ವಿವರಿಸಲ್ಪಡುವ ಕಾರ್ಯಗಳು ಆಬಾದಿನ ಕಾರ್ಯಗಳೊಳಗೆ ಬರುವುವು.

(1) ಕೃಷಿಯುದ್ದಿಶ್ಯವಾಗಿಯೂ, ಕೃಷಿಯುದ್ಯುಕ್ತವಾದ ಜನಗಳ ಮತ್ತು ರಾಸುಗಳ ಉಪಯೋಗ ಉದ್ದಿಶ್ಯವಾಗಿಯೂ ನೀರನ್ನು ತುಂಬಲೂ, ಜಮಾಯಿಸಲೂ, ಹಂಚಲೂ ಉಪಯುಕ್ತವಾದ ಬಾವಿಗಳನ್ನೂ, ಕೆರೆಗಳನ್ನೂ ಇತರ ಕಾರ್ಯಗಳನ್ನೂ ಮಾಡಿಸುವುದು.

(2) ತರಿ ಸಾಗುವಳಿಗೆ ಭೂಮಿಯನ್ನು ಹದಪಡಿಸಿಕೊಳ್ಳುವುದು.

(3) ಕೃಷಿಗುಪಯುಕ್ತವಾಗುತ್ತಿರುವ, ಯಾ, ಕೃಷಿಯುಪಯೋಗಕ್ಕೆ ಬರುವ ಭೂಮಿಯಿಂದ ನೀರನ್ನು ಹೊರಡಿಸುವುದು, ಭೂಮಿಯಮೇಲೆ ನಿಂತಿರುವ, ನದಿಯ ಅಥವಾ ಇತರ ನೀರನ್ನು ಹೊರಡಿಸಲಿಕ್ಕಾಗಿ ಭೂಮಿಗೆ ಭರ್ತಿ ಹಾಕುವುದು, ನೀರಿನ ಪ್ರವಾಹ, ಕೊರೆಯುಏಕೆ, ಇತರ ನಷ್ಟ, ಇವುಗಳಿಂದ ಸದರಿ ಭೂಮಿಗಳಿಗುಂಟಾಗುತ್ತಿರುವ ಇಜವನ್ನು ತಪ್ಪಿಸುವುದು.

(4) ಭೂಮಿಯನ್ನು ಕೃಷಿಯುಪಯೋಗಕ್ಕೆ ತರಲು, ಅದನ್ನು ಕೃಷಿಕಂಟಕಗಳಿಂದ ಪರಿಹಾರ ಮಾಡುವುದು, ಹಸನು ಮಾಡುವುದು, ಯಾ, ಅದನ್ನು ಸ್ಥಿರವಾಗಿ ಅಭಿವೃದ್ಧಿಪಡಿಸುವುದು.

(5) ಮೇಲೆಕಂಡ ಕಾರ್ಯಗಳನ್ನು ಹೊಸದು ಮಾಡುವುದು, ಪುನಃ ಮಾಡುವುದು, ಅವುಗಳಿಗೆ ವ್ಯತ್ಯಾಸಮಾಡುವುದು, ಅವುಗಳನ್ನು ಅಧಿಕಮಾಡುವುದು, ಮತ್ತು

(6) ಗವರ್ನಮೆಂಟಿನವರು ಗೆಜಿಟ್ಟಿನಲ್ಲಿ ಆಗಾಗ್ಗೆ ಪ್ರಕಟಿಸುವ ಇತರ ಅಬಾದಿನ ಕಾರ್ಯಗಳು.

ಟಿಪ್ಪಣಿ.

ಈ ಸೆಕ್ಷನಿನ ಸಂಗತಿಗಳೆಲ್ಲ ರೂಲುಗಳಲ್ಲಿ ವಿಸ್ತರಿಸಲ್ಪಡುತ್ತವೆ. ಯಾವಯಾವ ಅಧಿಕಾರಿಗಳು ಯಾವಯಾವ ಉದ್ದೇಶಗಳಿಗೆ ಎಷ್ಟುಎಷ್ಟು ಸಾಲಗಳನ್ನು ಕೊಡಬೇಕೆಂಬುದು ರೂಲ್ಸುಗಳಿಂದ ವಿಶದವಾಗುತ್ತದೆ.

6. ನೆಯ ಸೆಕ್ಷನು: ಸಾಲತೀರಿಸುವ ವಾಯಿದೆ.

(1) ರೂಲುಗಳಲ್ಲಿ ಉಕ್ತವಾಗುವ ಕಿಸ್ತುಗಳಲ್ಲೂ, ಕಂತುವಾರಾಗಿಯೂ ಸಾಲವು ತೀರಿಸಲ್ಪಡಬೇಕು.

(2) ರೂಲುಗಳಲ್ಲಿ ನಿಷ್ಕರ್ಷಿಸಲ್ಪಡುವ ವಾಯಿದೆಯು ಸಾಧಾರಣವಾಗಿ 35 ವರ್ಷಕ್ಕೆ ಮೀರಕೂಡದು.

(3) ಸರ್ಕಾರದವರು 35 ವರ್ಷದ ವರೆಗಿನ, ಅಥವಾ ಹೆಚ್ಚಿನ ವಾಯಿದೆಯನ್ನು ಕೊಡಬೇಕಾದ ಸಂದರ್ಭಗಳಲ್ಲಿ ಯಾವ ಕಾರ್ಯಕ್ಕಾಗಿ ಸಾಲವು ಕೊಡಲ್ಪಡುತ್ತದೋ ಅಂತಹ ಕಾರ್ಯವು ಎಷ್ಟುಕಾಲ ಫಲಕಾರಿಯಾಗಿರುತ್ತದೆಂಬುದನ್ನೂ, ಆ ಕಾರ್ಯಗಳು ಮುಗಿಯುತ್ತಲೇ ಅವುಗಳಿಂದ ಯಾರು ಪ್ರಯೋಜನವನ್ನು ಹೊಂದುತ್ತಾರೋ ಅಂಥವರ ಸಂತತಿಯವರು ಆ ಕಾರ್ಯಗಳ ವೆಚ್ಚವನ್ನು ಕೊಡಬೇಕಾದುದುಚಿತವೇ ಎಂಬದನ್ನೂ ಯೋಚಿಸಬೇಕು.

ಟಿಪ್ಪಣಿ.

ಸಾಲವನ್ನು ತೀರಿಸಲು ಬಹು ದೀರ್ಘವಾದ ವಾಯಿದೆ ಕೊಡುವಲ್ಲಿ, ಋಣಿಗಳೇ ಸಾಲವನ್ನೆಲ್ಲಾ ತೀರಿಸದೆ ಮೃತಪಟ್ಟು, ಅವರ ಸಂತತಿಯವರಿಂದಲೂ ಬಾಕಿಯು ವಸೂಲ್ಮಾಡಲ್ಪಡಬೇಕಾಗು

ತ್ತದೆ. ಆಬಾದಿನ ಕಾರ್ಯಗಳು ಋಣಿಗಳ ಜೀವಿತಕಾಲದಲ್ಲಿ ಮಾತ್ರ ಫಲಕಾರಿಗಳಾಗಿ ಅವರ ಸಂತತಿಯವರಿಗೆ ಅವುಗಳಿಂದ ಪ್ರಯೋಜನವಿಲ್ಲದಿದ್ದಲ್ಲಿ ಅವರು ಆ ಸಾಲವನ್ನು ಕೊಡಲು ನ್ಯಾಯವಿಲ್ಲ. ಹಾಗಲ್ಲದೆ ಅಂತಹ ಕಾರ್ಯಗಳು ಆ ಸಂತತಿಯವರಿಗೂ ಫಲಕಾರಿಗಳಾಗಿದ್ದಲ್ಲಿ ಅವರೂ ಸಾಲ ತೀರಿಸಲು ಬದ್ಧರಾಗಿರುತ್ತಾರೆ. ಅದುಕಾರಣ ಮೇಲಿನ ವಿಧಿಯು ಉಕ್ತವಾಗಿದೆ. ಯಾವಯಾವ ಸಾಲಕ್ಕೆ ಎಷ್ಟು ವಾಯಿದೆ ಎಂಬೀ ಮೊದಲಾದ ತಪ್ಸೀಲುಗಳೆಲ್ಲವೂ ರೂಲುಗಳಿಂದ ಸ್ಪಷ್ಟವಾಗುತ್ತದೆ.

7 ನೆಯ ಸೆಕ್ಷನು. ಈ ಸಂಬಂಧದ ಸಾಲಗಳನ್ನು ಕಲೆಕ್ಟರು (ಯಾ, ಡೆಪ್ಯುಟಿಕಮ್ಮೀಷನರು) ವಸೂಲ್ಮಾಡುವ ವಿಧಾನಗಳು :—

(ಕ) ಸಾಲದ ಬಾಕಿಯು, ಋಣಿಯಿಂದ ಬರಬೇಕಾಗಿದ್ದ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಆ ಸಾಲದ ಬಾಕಿಯನ್ನು ಋಣಿಯಿಂದ ವಸೂಲ್ಮಾಡಿಕೊಳ್ಳಬಹುದು.

(ಖ) ಜಾಮೀನುದಾರನಿದ್ದರೆ ಇವನಿಂದಲೂ ಇದೇ ರೀತಿಯಲ್ಲಿ ವಸೂಲ್ಮಾಡಿಕೊಳ್ಳಬಹುದು.

(ಗ) ಬಾಕಿಯಾಗುವ ಸಾಲವು ಯಾವ ಭೂಮಿಯ ಆಬಾದಿಗಾಗಿ ಕೊಡಲ್ಪಟ್ಟಿತ್ತೋ, ಆ ಬಾಕಿಯು ಆ ಭೂಮಿಯ ಮೇಲಿನ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಅದನ್ನು ಆ ಭೂಮಿಯಿಂದ ವಸೂಲ್ಮಾಡಿಕೊಳ್ಳಬಹುದು.

(ಘ) ಸಾಲದ ಖಾತರಿಗಾಗಿ ಇತರರ ಸೊತ್ತು ಈಡುಮಾಡಲ್ಪಟ್ಟಿದ್ದರೆ, ಆ ಸೊತ್ತಿನಿಂದ ಈ ವಿಧಾನದಲ್ಲಿ ವಸೂಲ್ಮಾಡಬಹುದು :—ಒಂದಾನೊಂದು ಜಮೀನಿನ ಮೇಲೆ ಬರಬೇಕಾದ ಕಂದಾಯದ ಬಾಕಿಯನ್ನು ಮತ್ತೊಂದು ಜಮೀನಿನಿಂದ ಯಾವ ವಿಧಾನದಲ್ಲಿ ವಸೂಲ್ಮಾಡಬಹುದೋ ಆ ವಿಧಾನದಲ್ಲಿ ವಸೂಲ್ಮಾಡಬಹುದು.

ನಿಯಮ : ಆದರೆ—(ಗ) ಪರಿಚ್ಛೇದದ ಮೇರೆ ನಡೆಯಿಸುವ ಕ್ರಮದಿಂದ ಯಾರ ಹಕ್ಕಿಗೆ ಬಾಧಕವುಂಟಾಗುತ್ತದೆ, ಯಾರ ಹಕ್ಕಿಗೆ ಬಾಧಕವುಂಟಾಗುವುದಿಲ್ಲವೆಂದರೆ :—ಸಾಲಕೊಡಲು ಆರ್ಜರಾಗುವುದಕ್ಕೆ ಮೊದಲು ಆ ಭೂಮಿಯ ಮೇಲೆ ಋಣಿಗಿದ್ದ ಹಕ್ಕೂ, ಆ ಹಕ್ಕನ್ನು ಆಧಿಯನ್ನಾಗಲಿ, ಈಡನ್ನಾಗಲಿ ಮಾಡಿಕೊಂಡಿರುವವರ ಹಕ್ಕೂ, ಮತ್ತೂ, ಆ ಸಾಲವು ಇತರರ ಅನುಮತಿಯಮೇರೆ ಕೊಡಲ್ಪಟ್ಟಿದ್ದರೆ, ಅಂತಹವರಿಗೆ ಆ ಭೂಮಿಯಮೇಲೆ ಇರುವ ಹಕ್ಕೂ, ಅಂತಹ ಹಕ್ಕನ್ನು ಆಧಿಯನ್ನಾಗಲಿ, ಈಡನ್ನಾಗಲಿ ಮಾಡಿಕೊಂಡಿರುವವರ ಹಕ್ಕೂ, ಈ ಹಕ್ಕುಗಳಿಗೆ ಮಾತ್ರ ಬಾಧಕವುಂಟಾಗುತ್ತದೆಯೇ ಹೊರತು, ಆ ಭೂಮಿಯಮೇಲೆ ಇತರರಿಗಿರುವ ಹಕ್ಕಿಗೆ ಬಾಧಕವಿಲ್ಲ.

ಈಮೇರೆ ಸಾಲದ ಬಾಕಿ, ಬಡ್ಡಿ, ಆ ಸಾಲಕೊಡಲು ತಗಲಿರಬಹುದಾದ ವೆಚ್ಚ ಇವುಗಳನ್ನೆಲ್ಲವನ್ನೂ ವಸೂಲ್ಮಾಡಿಕೊಳ್ಳಬಹುದು.

(೨) ಆ ಸಾಲಕ್ಕಾಗಲಿ, ಅದರ ಬಡ್ಡಿಗಾಗಲಿ, ವೆಚ್ಚಕಾಗಲಿ ಬರಬೇಕಾದ ಬಾಕಿಯನ್ನು ಕಲೆಕ್ಟರಿಗೆ (ಯಾ, ಡೆಪ್ಯುಟಿಕಮಿಷನರಿಗೆ) ಜಾಮಿನುದಾರನಾಗಲಿ, ಖಾತರಿ ಪತ್ರದಲ್ಲಿ ಈಡುಮಾಡಲ್ಪಟ್ಟಿರುವ ಭೂಮಿಯ ಮಾಲೀಕನಾಗಲಿ ಕೊಟ್ಟು ಬಿಟ್ಟರೆ, ಅಥವಾ, ಅಂತಹ ಬಾಕಿಯು ಜಾಮಿನುದಾರನಿಂದಾಗಲಿ, ಅಂತಹ ಭೂಮಿಯಿಂದಾಗಲಿ ವಸೂಲ್ಮಾಡಲ್ಪಟ್ಟರೆ, ಆ ಜಾಮಿನುದಾರನ, ಅಥವಾ ಮಾಲೀಕನ ಮನುವೆಯುಮೇಲೆ, ಹಾಗೆ ವಸೂಲಾದ ಮೊಬಲಗನ್ನು ಅವರಿಗೋಸ್ಕರ, ಕಲೆಕ್ಟರು (ಯಾ, ಡೆಪ್ಯುಟಿಕಮಿಷನರು) ಋಣಿಯಿಂದಾಗಲಿ, ಯಾವ ಜಮೀನಿನ ಆಬಾದಿಗಾಗಿ ಸಾಲವು ಕೊಡಲ್ಪಟ್ಟಿತ್ತೋ, ಅಂತಹ ಜಮೀನಿನಿಂದಾಗಲಿ ವಸೂಲ್ಮಾಡಿ ಕೊಡಬೇಕು.

(3) ಈ ಸೆಕ್ಷನು ಅನುಜ್ಞಿಸುವ ವಿಧಾನಗಳೊಳಗೆ ಯಾವನ್ನು ಅನುಸರಿಸಬೇಕು, ಯಾವ ಕ್ರಮದಲ್ಲನುಸರಿಸಬೇಕೂ ಎಂಬುದು ಮೇಲೆ ಕಂಡ ಅಧಿಕಾರಿಗಳ ವಿಚಕ್ಷತೆಗೊಳಪಟ್ಟಿದೆ.

ಈ ವಿಧಿಗಳಮೇಲೆ ಗೌವರ್ನಮೆಂಟಿನವರು ಉಪವಿಧಿಗಳನ್ನೂ ಮಾಡಬಹುದು.

ವಿವರಣೆ.

ಇದರ ವ್ಯಾಖ್ಯಾನವು ಮುಂದೆ ತಖಾವಿರೂಲ್ಸಿನ 51–55 ನೇ ಪುಟಗಳಲ್ಲಿರುವ ಅನುಶಾಸನಗಳ 5, 7, 8, 9 ನೆಯ ವಿಧಿಗಳಲ್ಲಿ ಕೊಡಲ್ಪಟ್ಟಿದೆ. ಈ ಸಂಬಂಧದಲ್ಲಿ ಅವನ್ನೂ ಓದಿಕೊಳ್ಳುವುದು.

12 ನೆಯ ಸೆಕ್ಷನು : ಭೂಮಿಯಾಬಾದಿನ ಸಾಲದ ಈ ಖಾನೂನಿನ ಮೇರೆ ಮಾಡುವ ಸಾಲಗಳ ಸಹಾಯದಿಂದ ಭೂಮಿಯು ಆಬಾದು ಮಾಡಲ್ಪಟ್ಟು, ಅದರಿಂದ ಆ ಭೂಮಿಯ ಬೆಲೆಯು ಹೆಚ್ಚಿದರೆ ಹಾಗೆ ಹೆಚ್ಚಿದ ಬೆಲೆಯನ್ನು ಪುನಃ ಮಾಡುವ ಸರ್ವೆ ಜಮಾಬಂದಿಯಲ್ಲಿ ಲೆಕ್ಕಕ್ಕೆ ತೆಗದುಕೊಳ್ಳಕೂಡದು.

ನಿಯಮ.

1. ಬಂಜರು ಜಮೀನನ್ನು ಕೃಷಿ ಯೋಗ್ಯತೆಗೆ, ಅಥವಾ ಖುಷ್ಕಿ ಕಂದಾಯದ ಜಮೀನನ್ನು ತರೀ ಯೋಗ್ಯತೆಗೆ ತಂದುಕೊಳ್ಳುವುದೇ ಆಬಾದಿನ ಕಾರ್ಯವಾಗಿದ್ದರೆ ಹಾಗೆ ಹೆಚ್ಚಾದ ಬೆಲೆಯನ್ನು ಗೌವರ್ನಮೆಂಟಿನವರು ರೂಲುಗಳಿಂದ ಗೊತ್ತುಮಾಡುವ ಅವಧಿಯು ಮುಗಿದಬಳಿಕ ಲೆಕ್ಕಕ್ಕೆ ತೆಗದುಕೊಳ್ಳಬಹುದು.

2. ಈ ಖಾನೂನು ಇಲ್ಲದಿದ್ದರೆ ಕಂದಾಯದ ಮೊಕರೂರಾತಿಗೆ ಯಾವ ಆಕ್ಷೇಪಣೆಯು ಮಾಡಲ್ಪಡಬಹುದಾಗಿದ್ದಿತೊ, ಅದನ್ನು ಹೊರತು ಇತರ ಆಕ್ಷೇಪಣೆಯನ್ನು ಮಾಡುವ ಅಧಿಕಾರವು ಯಾವನಿಗೂ ಈ ಸೆಕ್ಷನಿನಿಂದ ಉಂಟಾಗುವುದಿಲ್ಲ.

ಟಿಪ್ಪಣಿ.

ಸರ್ವೆ ಜಮಾಬಂದಿಯಲ್ಲಿ ಸರ್ಕಾರದವರು ರೈತವಾರಿ ಜಮೀನುಗಳಿಗೆ ಮಾಡುವ ಕಂದಾಯದ ಮೊಕರೂರಾತಿಯು ಸಾಧಾರಣವಾಗಿ, ಸಾರ್ವಕಾಲಿಕವಾದುದಲ್ಲ. 30 ವರ್ಷದವರೆಗೆ ಅಥವಾ ಇತರ ಹಂಗಾಮಿಯಾದ ಮತ್ತೊಂದವಧಿಯವರೆಗೆ ಮಾತ್ರ ಕಂದಾಯವನ್ನು ಮೊಕರೂರು ಮಾಡುವರು. ಆ ಅವಧಿಯು ಮುಗಿದಬಳಿಕ ಕಂದಾಯದ ನಿರ್ಣಯವನ್ನು ಪುನರ್ವಿಮರ್ಶೆಮಾಡಿ ಭೂಮಿಯು ಬೆಲೆಯು ಆಗ್ಗೆ ಮೊದಲಿಗಿಂತಲೂ ಹೆಚ್ಚಿದರೆ ಕಂದಾಯವನ್ನು ಹೆಚ್ಚಿಸುವರು ; ಕಡಮೆಯಾಗಿದ್ದರೆ ಕಂದಾಯವನ್ನು ಕಡಮೆಮಾಡುವರು. ಕೆಳಗೆ ವಿವರಿಸುವಂತಹ ಕಾರಣಗಳು ಹೆಚ್ಚಿದಹಾಗೆಲ್ಲಾ ಭೂಮಿಯ ಬೆಲೆಯು ಹೆಚ್ಚಾಗುವದು. ಅವು ಕಡಮೆಯಾದಹಾಗೆಲ್ಲಾ ಆ ಬೆಲೆಯು ಕಡಮೆಯಾಗುವುದು.

1. ಭೂಮಿಯ ಹೊರು ಹೆಚ್ಚುವುದು.

2. ಭೂಮಿಯ ಸನ್ನಿವೇಶವು ಉತ್ತಮವಾಗುವುದು.

3. ಧಾನ್ಯದ ಧಾರಣೆಯು ಹೆಚ್ಚುವುದು.

4. ರಸ್ತೆಗಳು ಅಥವಾ ರೇಲುಗಳು ಭೂಮಿಯ ಹತ್ತಿರ ಮಾಡಲ್ಪಟ್ಟು ಭೂಮಿಯನ್ನು ವ್ಯವಸಾಯ ಮಾಡುವುದಕ್ಕೂ ಫಲವನ್ನು ಸಾಗಿಸುವುದಕ್ಕೂ ಅನುಕೂಲ್ಯಗಳು ಹೆಚ್ಚುವುದು.

ಈ ಕಾರಣಗಳಿಂದ ಭೂಮಿಯ ಬೆಲೆಯು ಹೆಚ್ಚುವುದು. ಭೂಮಿಯ ಬೆಲೆಯು ಹೀಗೆ ಹೆಚ್ಚಿದರೆ ಆ ಹೆಚ್ಚಿಗೆಗೆ ತಕ್ಕಂತೆ ಕಂದಾಯವನ್ನು ಹೆಚ್ಚಿಸಲು ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಆ ಹೆಚ್ಚಿನ ಬೆಲೆಗೆರೈತನ ಸ್ವಂತಹಣವಂದೇ ಕಾರಣವಾಗಿದ್ದರೆ ಮಾತ್ರ ಆ ಹೆಚ್ಚಿಗೆಗೆ ತಕ್ಕಂತೆ ಕಂದಾಯವನ್ನು ಹೆಚ್ಚಿಸುವುದಿಲ್ಲವೆಂದು ಸರ್ಕಾರದವರು ಸರ್ವೆ ರೂಲ್ಸುಗಳಿಂದ ವಿತರಣೆಯನ್ನು ತೋರಿಸಿದ್ದಾರೆ. ಅದುಕಾರಣ ರೈತನು ತನ್ನ ಹಣದಿಂದ ವಿಶೇಷ ಗೊಬ್ಬರವನ್ನು ಕೊಂಡು ಭೂಮಿಗೆ ಹಾಕಿ ಅದರ ಹೊರುವನ್ನು ಆ ಮೂಲಕ ಅದರ ಬೆಲೆಯನ್ನು ಹೆಚ್ಚಿಸಿದರೆ ಕಂದಾಯವು ಹೆಚ್ಚಿಸಲ್ಪಡುವುದಿಲ್ಲ. ಆದರೆ ಸರ್ಕಾರದ ಸ್ವತ್ವಕ್ಕೆ ಒಳಪಟ್ಟ ಭೂಮಿಯನ್ನೂ ನೀರನ್ನೂ ಖಾಸ್ ಜನರು ಸೊಂತ ಹಣದಿಂದ ಕೃಷಿಯುಪಯೋಗಕ್ಕೆ ತಂದುಕೊಡರೆ, ಅವುಗಳನ್ನು ಕಂದಾಯವಿಲ್ಲದೇ ಅನುಭವಿಸಲು ಅವರಿಗೆ ಹಕ್ಕಿಲ್ಲ. ಎಂದರೆ, ಮೇಲಿನ ಸೆಕ್ಷನ್ನಿನ 2 ನೇ ನಿಯಮದಲ್ಲಿ ಕಂಡಂತೆ ಕಂದಾಯಯುತ್ಪತ್ತಿಯಾಗದ ಬಂಜರು ಜಮೀನನ್ನು ಸೊಂತ ಲಾಗುವಡಿನಿಂದ ಕೃಷಿ ಯೋಗ್ಯವಾಗಿ ಮಾಡಕೊಂಡರೂ, ಖುಷ್ಕಿ ದರದ ಕಂದಾಯ ಮಾತ್ರ ಉತ್ಪತ್ತಿಯಾಗುವ ಖುಷ್ಕಿ ಜಮೀನಿಗೆ ನೀರನ್ನು ಸೊಂತ ಲಾಗುವಡಿನಿಂದ ಒದಗಿಸಿಕೊಂಡು ತರಿ ಸಾಗುವಳಿ ಮಾಡಿದರೂ, ಮೊದಲನೆಯದನ್ನೂ ಕಂದಾಯವಿಲ್ಲದೆಯೇ, ಎರಡನೆಯದನ್ನು ಖುಷ್ಕಿ ದರದ ಕಂದಾಯಕ್ಕಾಗಿಯೇ ಅನುಭವಿಸಿಕೊಳ್ಳಲು ಹಕ್ಕಿರುವುದಿಲ್ಲ. ಪ್ರಕೃತದ ಸಾಲದ ವಿಷಯಕವಾದ ಖಾನೂನುಗಳ ಮೇಲೆ ಸರ್ಕಾರದಿಂದ ಪಡೆಯುವ ಹಣವು ಸಾಲವಾಗಿ ಪಡೆದುಕೊಂಡ ಹಣವಾಗಿ

ರುತ್ತದೆಯಾಗಿ ಇದು ಋಣಿಗಳ ಸ್ವಂತ ಹಣವೇ ಆಗಿರುತ್ತದೆ. ಆದುಕಾರಣ ಈ ಪ್ರಕಾರದ ಆಬಾದಿನಿಂದ ಬೆಲೆಯುಳ್ಳದಾಗಿ, ಯಾ, ಬೆಲೆ ಹೆಚ್ಚಿಸಲ್ಪಟ್ಟದಾಗಿ ಮಾಡಲ್ಪಟ್ಟ ಜಮೀನಿಗೆ ಕೂಡಲೆ ಅದಕ್ಕೆ ತಕ್ಕ ಕಂದಾಯವನ್ನು ಸರ್ಕಾರದವರು ಹಾಕಬಹುದಾದರೂ, ಇಲ್ಲಿ ಸ್ವಲ್ಪ ವಿತರಣೆ ತೋರಿಸುತ್ತಾರೆ. ಹೇಗೆಂದರೆ:—ಮೇಲ್ಕಂಡಂತೆ ಬೆಲೆಯುಂಟಾದ, ಅಥವಾ ಬೆಲೆ ಹೆಚ್ಚಿದ ಜಮೀನನ್ನು, ಬೆಲೆಗೆ ತಕ್ಕ ಕಂದಾಯವನ್ನು ಕೊಡದೆ ಇಂತಿಷ್ಟು ಕಾಲದವರೆಗೆ ಅನುಭವಿಸಬಹುದು. ಎಂಬುದಾಗಿ, ಸಾಲ ಕೊಡುವಾಗಲೇ ಸಮಯಗಳನ್ನು ಕಲ್ಪಿಸುತ್ತಾರೆ. ಈ ವಿತರಣೆಯನ್ನು ತೋರಿಸುವುದಕ್ಕೆ ಕಾರಣವೇನಂದರೆ,—ರೈತರು ತಮ್ಮ ಭೂಮಿಯ ಆಬಾದಿನ ವಿಷಯದಲ್ಲಿ ಸರ್ಕಾರದವರಮೇಲೆ ಅಧೀನವಾಗದೆ ತಮ್ಮ ಸೊಂತ ಹಣದಿಂದ ಆಬಾದನ್ನು ಮಾಡಿಕೊಳ್ಳುವಹಾಗೆ ಅವರನ್ನು ಪ್ರೋತ್ಸಾಹಿಸುವುದಕ್ಕಾಗಿ ಅವರು ಸೊಂತದಿಂದ ವೆಚ್ಚಮಾಡಿರುವ ಹಣದ ಪೂರ್ಣಪ್ರತಿಫಲವನ್ನು ಕೆಲವು ಕಾಲ ಅವರು ಅನುಭವಿಸಿಕೊಳ್ಳಲು ಅವರಿಗೆ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಮತ್ತು ಸರ್ಕಾರದವರು ತಮ್ಮ ಉಪಯೋಗಕ್ಕೆ ಬಹುಶಃ ತಂದುಕೊಳ್ಳದ, ಸ್ವಾಭಾವಿಕವಾಗಿರುವ ನೀರಿನ ವಿಷಯದಲ್ಲಿ ಪೂರ್ಣ ವಿನಾಯತಿಯು ಸಹ ಇರುತ್ತದೆ. ರೈತರು ತಮ್ಮ ಸೊಂತ ಜಮೀನುಗಳಲ್ಲಿ ಬಾವಿಯನ್ನು ತೆಗೆದು, ಅದರ ಸಹಾಯದಿಂದ ತರಿ ಸಾಗುವಳಿ ಮಾಡಿದರೂ, ಸರ್ಕಾರದವರು ಯಾವ ಕಾರ್ಯವನ್ನೂ ಯಾವ ವೆಚ್ಚವನ್ನೂ ಮಾಡಿಸದೆ ಸ್ವಾಭಾವಿಕವಾಗಿರುವ ಹೊಂಡ ಜಂಗ್ಲಿ ಹಳ್ಳ ಕೊಳ್ಳ ಇವುಗಳ ನೀರಿನಿಂದ ತರಿ ಸಾಗುವಳಿ ಮಾಡಿಕೊಂಡರೂ ಹೀಗೆ ನೀರನ್ನು ಉಪಯೋಗಿಸಿಕೊಂಡ ಕಾರಣದಮೇಲೇ ಸರ್ಕಾರದವರು ಕಂದಾಯವನ್ನು ಹೆಚ್ಚಿಸುವುದಿಲ್ಲ. ಸ್ಟಾ. ಆ. 6, 10.

ಖರ್ಚು ಕಳೆದು ಉಳಿಯುವ ಭೂಮಿಯ ಉತ್ಪತ್ತಿಯಮೇಲೆ ಸರ್ಕಾರಿ ಕಂದಾಯವು ನಿರ್ಧರಿಸಲ್ಪಡಬೇಕಾದ ರಾಜನೀತಿ ಯಿರುತ್ತದೆಯಾಗಿ ರೈತರು ಸೊಂತ ಬಂಡವಾಳವನ್ನು ಮುಟ್ಟಿಸಿದರೆ ಅದರ ಬಡ್ಡಿಯರೂಪವಾದ ಜಮೀನಿನ ಫಲವನ್ನು ಅವರೇ ಅನುಭವಿಸಲಿ ಯೆಂದು ಈ ಪ್ರಕಾರದ ಸೌಲಭ್ಯಗಳನ್ನು ಉಂಟುಮಾಡಿ ಕೊಟ್ಟಿರುತ್ತಾರೆ. ಈ ಸೌಲಭ್ಯಗಳೆಲ್ಲವನ್ನೂ ರೆವಿನ್ಯೂ ಸರ್ವೆ ಲಾ ಗಳೇ ಉಂಟು ಮಾಡಿಕೊಟ್ಟಿರುತ್ತವೆ. ಅವುಗಳೇ ಇಲ್ಲಿಯೂ ಪುನರುಕ್ತವಾಗಿವೆ.

ಜಮೀನಾಬಾದಿನ ಆಕ್ಟಿನ ಉಪಯುಕ್ತತೆ.

ರೈತಾಪಿ ಋಣಿಗಳು ಋಣದಿಂದ ನಾಶಿತರಾಗದೆ ಋಣಮುಕ್ತರಾಗಬೇಕಾದರೆ ಅವರಿಗೆ ಈ ಕೆಳಗಿನ ಸೌಕರ್ಯಗಳನ್ನು ದೊರಕಿಸಿ ಕೊಡುವುದವಶ್ಯಕ.

1. ಸಾಲ ತೀರಿಸಲು ದೀರ್ಘಕಾಲ ವಾಯಿದೆ.

. ಕಂತುಗಳಾಗಿ ಸಾಲ ತೀರಿಸುವ ವಿತರಣೆ.

3. ಸುಲಭಬಡ್ಡಿ.

4. ಅಸಲಿನೊಡನೆ ಬಡ್ಡಿಯೂ ಇಳಿಯುವುದು, ಎಂದರೆ ಅಸಲಿಗೆ ಕಂತು ವಾರಾಗಿ ವಸೂಲಾಗುವ ಮೊಬಲಗನ್ನು ಅಸಲಿನಲ್ಲಿ ಕಳೆದು ಉಳಿಯುವ ಅಸಲಿಗೆ ಮಾತ್ರ ಬಡ್ಡಿಯನ್ನು ತೆಗೆದುಕೊಳ್ಳುವುದು.

5. ಅನಾವೃಷ್ಟಿ ಇತ್ಯಾದಿ ಕಾರಣಗಳಿಗಾಗಿ ಫಸಲಾಗದಿರುವ ವರ್ಷಗಳಲ್ಲಿ ಕಂತು ವಸೂಲಿಗಳನ್ನು ಮಾಡದೆ ನಿಲ್ಲಿಸಿ ಕೊಡುವುದು.

ಜಮೀನಿನ ಆಬಾದಿಗಾಗಿ ರೈತರು ವೆಚ್ಚಮಾಡುವ ಹಣವೆಲ್ಲವೂ ಉತ್ಪತ್ತಿಯಾಗಬೇಕಾದರೆ ಅನೇಕ ವರ್ಷಗಳಾಗಬೇಕು. ಅದುಕಾರಣ ಸಾಲದ ಹಣದಿಂದ ಆಬಾದುಮಾಡಲ್ಪಟ್ಟಿದ್ದರೆ ಆ ಸಾಲವನ್ನು ತೀರಿಸಲಿಕ್ಕೆ ಅವನಿಗೆ ಅನೇಕ ವರ್ಷಗಳು ಬೇಕು. ತೆಗೆದುಕೊಂಡ ಸಾಲವನ್ನೆಲ್ಲಾ ಒಂದೇ ಆವೃತ್ತಿ ತೀರಿಸಬೇಕಾದಲ್ಲಿ ಆಬಾದಿನಿಂದ ಹೆಚ್ಚಿದ ಫಸಲನ್ನು ವರ್ಷೇವರ್ಷೇ ಮಾರಿ ಮಾರಿ, ಬಂದ ಹಣವನ್ನು ಖರ್ಚುಮಾಡಿಕೊಳ್ಳದೆ ಅನೇಕ ವರ್ಷಗಳು ಜಮಾಯಿಸುತ್ತ ಇಟ್ಟಿದ್ದು ಸಾಲದ ಮೊಬಲಗಿನಷ್ಟು ಅದು ಆದಕೂಡಲೆ, ಅದರಿಂದ ಸಾಲತೀರಿಸಬೇಕಾಗುತ್ತದೆ. ದೂರದೃಷ್ಟಿ ಮಿತವ್ಯಯಗಳಿಲ್ಲದ ಇಂಡಿಯ ದೇಶದ ರೈತರಿಂದ ಎಂದಿಗೂ ಇದು ಆಗತಕ್ಕದಲ್ಲ. ಅದುಕಾರಣ ರೈತರು ಹೆಚ್ಚು ಫಸಲನ್ನು ಮಾರಿ ಬಂದ ಹಣವನ್ನು ತಮ್ಮ ಕೈಲಿಟ್ಟುಕೊಳ್ಳದೆ ಸಾಲಕ್ಕಾಗಿ ಕೊಟ್ಟುಬಿಡುವಂತೆ ಕಂತುವಾರಾಗಿ ಸಾಲ ತೀರಿಸುವ ಸೌಲಭ್ಯವು ಅವರಿಗೆ ಬೇಕು; ವ್ಯಾಪಾರ ಇತ್ಯಾದಿ ವೃತ್ತಿಗಳಂತೆ ವ್ಯವಸಾಯವು ವಿಶೇಷ ಲಾಭಕರವಾದ ವೃತ್ತಿಯಲ್ಲ. ಅದುಕಾರಣ ವಿಶೇಷ ಬಡ್ಡಿಯನ್ನು ರೈತರು ಕೊಡಲಾರರು. ಆಬಾದುಮಾಡಿದ ಭೂಮಿಯ ಸಾರವು ಪುನಃ ಆಬಾದು ಮಾಡುವವರೆಗೂ ಕ್ರಮೇಣ ಇಳಿಯುತ ಬರುವುದರಿಂದ, ಅವನು ಕೊಡಬೇಕಾದ ಬಡ್ಡಿಯು ಸಹ ಇಳಿಯುತಲೇ ಬರಬೇಕು.

ಈ ಸೌಕರ್ಯಗಳು ಸರ್ಕಾರದಿಂದ ಅಥವಾ ಹಿಂದೆ ವಿವರಿಸಲ್ಪಟ್ಟ ಅನ್ಯೋನ್ಯ ಸಹಾಯಕ ಸಂಘ ಇಂಥುವುಗಳಿಂದ ಉಂಟಾಗಬೇಕು. ಲೇವಾದೇವಿ ಮಾಡುವ ಖಾಸ್ಗಿ ಮನುಷ್ಯನಾವನೂ ಈ ವಿತರಣೆಯನ್ನು ತೋರಿಸಲಾರನು. ಏಕೆಂದರೆ, ಸಾಲವನ್ನು ವಸೂಲಿ ಮಾಡುವುದು ಅವನಿಗೆ ಬಹು ಕಠಿಣ. ಕೊಟ್ಟ ಹಣವು ಪುನಃ ಅವನ ಕೈ ಸೇರಲು ಅನೇಕ ಪ್ರತಿಬಂಧಕಗಳಿವೆ. ಅದುಕಾರಣ ಕೊಟ್ಟ ಸಾಲಗಳನ್ನು ಅತಿ ಜಾಗ್ರತೆಯಾಗಿ ವಸೂಲಿ ಮಾಡಿಕೊಳ್ಳಲೂ, ಅಸಾಧ್ಯವಾದ ಸಂದರ್ಭಗಳಲ್ಲಿ ತಾನು ಪಡುವ ನಷ್ಟಗಳನ್ನು ಸಾಧ್ಯವಾದ ಸಂದರ್ಭಗಳಲ್ಲಿ ವಿಶೇಷ ಲಾಭ ಪಡೆದು ಎತ್ತಿಕೊಳ್ಳಲೂ ಅವನು ಪ್ರಯತ್ನಿಸುವನು.

ಇಂತಹ ಕಾಠಿಣ್ಯಗಳು ಸರ್ಕಾರಕ್ಕಿಲ್ಲ. ಸಾಲಕ್ಕೀಡಾಗುವ ಜಮೀನುಗಳಿಗೆ ಸರ್ಕಾರದವರೇ ಮಹಾಧಿಕಾರಿಗಳಾಗಿರುವುದರಿಂದಲೂ, ಅನ್ಯರನ್ನು ಪ್ರಾರ್ಥಿಸಿಕೊ

ಳ್ಳುವ ಅವಶ್ಯಕತೆಯಿಲ್ಲದೆ ಸ್ವಸಾಮರ್ಥ್ಯದಿಂದಲೇ ಅವರು ಸಾಲವನ್ನು ವಸೂಲ್ಮಾಡಿಕೊಳ್ಳಬಹುದಾದುದರಿಂದಲೂ, ದೀರ್ಘಕಾಲದ ವಾಯಿದೆ ಕೊಡುವುದರಲ್ಲೂ ಕಂತುಗಳಲ್ಲಿ ಸಾಲವನ್ನು ವಾಪಸು ತೆಗೆದುಕೊಳ್ಳುವುದರಲ್ಲೂ, ಅವಶ್ಯಕವಾದ ಸಂದರ್ಭಗಳಲ್ಲಿ ವಾಯಿದೆಗಳನ್ನು ಹೆಚ್ಚಿಸುವುದರಲ್ಲೂ ಅವರು ಎಷ್ಟು ಬೇಕಾದರೂ ವಿತರಣೆಗಳನ್ನು ಖಾಸ್ಗಿ ಜನರಹಾಗೆ ನಷ್ಟಕ್ಕೊಳಗಾಗದೆ ತೋರಿಸಬಹುದು.

ಮತ್ತೂ ರಾಜ್ಯದ ಜಮೀನುಗಳಿಗೆಲ್ಲಾ ಸರ್ಕಾರದವರೇ ವರಿಷ್ಠಾಧಿಕಾರಿಗಳಾಗಿರುವುದರಿಂದಲೂ, ಜಮೀನುಗಳು ಫಲವತ್ತಾಗಿದ್ದರೆ ಸರ್ಕಾರಕ್ಕೆ ಆದಾಯವೂ,ಫಲಹೀನವಾಗಿದ್ದರೆ ನಷ್ಟವೂ ವಸ್ತುತಃ ಉಂಟಾಗುವುದರಿಂದಲೂ, ಜಮೀನನ್ನು ಆಬಾದು ಮಾಡುವುದರಲ್ಲಿ ರೈತರಿಗೆ ಎಷ್ಟು ಆಸಕ್ತಿ ಇದೆಯೋ ಸರ್ಕಾರಕ್ಕೂ ಅಷ್ಟು ಆಸಕ್ತಿ ಇದೆ. ಆದುಕಾರಣ ಬಡ್ಡಿ ವಿಷಯಕವಾದ ವಿತರಣೆಗಳನ್ನು ಸರ್ಕಾರದವರು ಎಷ್ಟು ಬೇಕಾದರೂ ತೋರಿಸಬಹುದು. ಈ ವಿತರಣೆಗಳೆಲ್ಲವೂ ರೂಲುಗಳಲ್ಲಿ ಸ್ಪಷ್ಟೀಕರಿಸಲ್ಪಟ್ಟಿವೆ.

ಬಿ. ಬೇಸಾಯಗಾರರ ಸಾಲದ ಆಕ್ಟ್.

ಮೈ. ಲ್ಯಾಂಡ್ ರೆವಿನ್ಯೂ ಕೋಡು 194 ನೆಯ ಸೆಕ್ಷನು.

ಭೂಮಿಯ ಆಬಾದಿನ ಆಕ್ಟಿಗನುಸಾರವಾಗಿ, ಹೆಚ್ಚು ಮೊಬಲಗಿನ ಸಾಲಗಳು ಭೂಸೊತ್ತಿನ ಈಡಿನಮೇಲೆ ಕೊಡಲ್ಪಡುತ್ತವೆ. ಬೇಸಾಯಕಾಗಿ, ಎಂದರೆ, ಮುಟ್ಟುಗಳನ್ನೂ, ಗೊಬ್ಬರವನ್ನೂ, ದನಕರುಗಳನ್ನೂ ಕೊಂಡುಕೊಳ್ಳಲೋಸುಗವೂ ಕ್ಷಾಮಗಾಲದಲ್ಲಿ ಪ್ರಾಣ ಉಳಿಸಿಕೊಳ್ಳಲೋಸುಗವೂ ಚಿಲ್ಲಚಿಲ್ಲರೆ ಮೊಬಲಗುಗಳು ರೈತರಿಗೆ ಬೇಕಾಗುತ್ತದೆ. ಮತ್ತೂ ಗ್ರಾಮಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಎಂದರೆ, ಊರಿನ ಹಳ್ಳಕೊಳ್ಳಗಳನ್ನು ಮುಚ್ಚುವುದೂ, ಹಾದಿಬೀದಿಗಳನ್ನು ಸರಿಮಾಡುವುದು, ಕೆರೆಕಟ್ಟೆಗಳನ್ನು ಜೀರ್ಣೋದ್ಧಾರಮಾಡುವುದೂ, ಈ ತರದ ಸಾರ್ವಜನಿಕ ಕಾರ್ಯಗಳಿಗೆ ಗ್ರಾಮಸ್ಥರೆಲ್ಲರೂ ಒಟ್ಟು ಸಾಲಗಳನ್ನು ಪಡೆಯಬೇಕಾಗಿ ಬರುತ್ತದೆ. ಈ ಸಾಲಗಳೆಲ್ಲವೂ ಖುದ್ದು ಜವಾಬ್ದಾರಿಯಮೇಲೆ ಕೊಡಲ್ಪಡತಕ್ಕವಾಗಿವೆ. ಈ ತರದ ಸಾಲಗಳನ್ನು ಕೊಡಲು ಸರ್ಕಾರದವರು ಈ ಕಾನೂನನ್ನು ನಿರ್ಮಿಸಲ್ಪಡಿಸಿದ್ದಾರೆ. ಯಾವ ಉದ್ದೇಶಗಳಿಗಾಗಿ ಈ ಕಾನೂನಿನ ಮೇರೆ ಸಾಲಗಳು ಕೊಡಲ್ಪಡಬೇಕೋ ಆ ಉದ್ದೇಶಗಳೂ, ಮತ್ತು ವಾಯಿದೆ, ಬಡ್ಡಿ, ವಸೂಲ್ಮಾಡುವ ವಿಧಾನ ಈ ಮೊದಲಾದ ವಿವರವಾದ ಸಂಗತಿಗಳು ರೂಲುಗಳಲ್ಲಿ ಸ್ಪಷ್ಟಪಡಿಸಲ್ಪಟ್ಟಿವೆ.

ಬೇಸಾಯಗಾರರ ಸಾಲದ ಲಾ ದ ಉಪಯುಕ್ತತೆ.

ಜಮೀನಾಬಾದಿನ ಆಕ್ಟಿನ ಉಪಯುಕ್ತತೆ ವಿಷಯದಲ್ಲಿ ಹಿಂದೆ ಕೊಟ್ಟಿರುವ ವಿವರಣೆಯು ಇಲ್ಲಿಯೂ ಸಂಬಂಧಿಸುತ್ತದೆ. ಖಾಸ್ಗಿ ಋಣದಾತರಲ್ಲಿ ಸಾಲ ಮಾಡಬೇಕಾದರೆ ಚಿಲ್ಲರೆ ಸಾಲಗಳಿಗೂ ಸ್ಟಾಂಪಿನ ಕಾಗದಗಳನ್ನು ಬರೆದು ಕೊಡಬೇಕಾಗಿ ಬರುತ್ತದೆ. ಮತ್ತು ಸಾಧಾರಣವಾಗಿ ಜಮೀನನ್ನು ಈಡುಮಾಡಿ ಪತ್ರವನ್ನು ರಿಜಿಸ್ಟರ್ ಮಾಡಿಸಿ ಕೊಡದಿದ್ದರೆ ಅವರು ಸಾಲವನ್ನು ಕೊಡಲೊಲ್ಲರು. ಇದರಿಂದ ಋಣಿಗಳಿಗೆ ಬಹು ನಷ್ಟವುಂಟಾಗುತ್ತದೆ. ಮತ್ತೂ ಸ್ಥಿರಸೊತ್ತು ಇಲ್ಲದಿರುವವರಿಗೆ ಸಾಲ ದೊರೆಯುವುದು ಕಠಿಣ. ಬೇಸಾಯಗಾರರು ಈ ವಿಧವಾಗಿ ನಷ್ಟಪಡುವುದು ಸಾರ್ವಜನಿಕಾರ್ಥಕ್ಕೆ ಬಹು ಅಹಿತವಾಗಿರುತ್ತದೆ. ಎಷ್ಟು ಒಳ್ಳೆಯ ಭೂಮಿಗಳಿದ್ದರೂ ಬೇಸಾಯಮಾಡುವ ರೈತರೂ, ಬೇಸಾಯಕ್ಕೆ ಬೇಕಾದ ಮುಟ್ಟುಗಳೂ ಗೊಬ್ಬರವೂ ಇತರ ಸೌಕರ್ಯಗಳೂ ಇಲ್ಲದಿದ್ದಲ್ಲಿ ಆ ಭೂಮಿಗಳಿದ್ದುದರಿಂದ ಪ್ರಯೋಜನವಾಗುವುದಿಲ್ಲ. ಸರ್ಕಾರಕ್ಕೆ ಕಂದಾಯವೂ ಹುಟ್ಟುವುದಿಲ್ಲ. ಬೇಸಾಯಗಾರರು ನಾಶವಾದರೆ, ಇತರ ಕಸಬುದಾರರೊಳಗನೇಕರು ತಂತಮ್ಮ ಕಸಬನ್ನು ಬಿಟ್ಟು ಬೇಸಾಯವನ್ನೇ ಮಾಡಬೇಕಾಗಿ ಬರುತ್ತದೆ. ಆದುಕಾರಣ ಬೇಸಾಯಕಾಗಿಯೂ, ಕ್ಷಾಮಗಾಲದಲ್ಲಿ ಬೇಸಾಯಗಾರರ ಪ್ರಾಣ ಉಳುಹಲೂ, ಬಿತ್ತನೆ ಬೀಜರಾಸುಗಳನ್ನು ಒದಗಿಸಿ ಕೊಡಲೂ ಬೇಸಾಯಗಾರರಿಗೆ ಮತ್ತೆಲ್ಲೂ ಸುಲಭವಾಗಿ ಸಾಲ ಹುಟ್ಟದಿದ್ದರೆ ಸರ್ಕಾರದವರೇ ಸಾಲವನ್ನು ಕೊಡಬೇಕಾಗಿ ಬರುತ್ತದೆ. ಪ್ರಜೆಗಳ ಪ್ರಾಣ ರಕ್ಷಕವಾದ ಅನ್ನವಸ್ತುತ್ಪತ್ತಿ ಮಾಡುವ ಬೇಸಾಯಗಾರರಲ್ಲಿ ಸರ್ಕಾರದವರಿಗೆ ಪಕ್ಷಪಾತವಿರುವುದು ಸಮಸ್ತ ಪ್ರಜೆಗಳಿಗೂ ಹಿತಕರವಾಗಿರುತ್ತದೆ.

ತಖಾವಿರೂಲ್ಸು

I. ಮೈಸೂರು ಪ್ರಾವಿನ್ಸಿನವುಗಳು

ತಾರೀಖು 2 ನೇ ಜನವರಿ, 1909.

ನಂ. ರೆವಿನ್ಯೂ 4319—ವ್ಯವಸಾಯ 91-08-4.

ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ಯಾನೇ ಜಮೀನ್ ಆಬಾದಿನ ಬಗ್ಗೆ ಪಡೆಯುವ ಸಾಲಗಳ (1890 ನೆ ಇಸವಿ 4 ನೆ ನಂಬರ್) ರೆಗ್ಯುಲೇಷನಿನ 10 ನೆ ಪ್ರಕರಣಾನುಸಾರವೂ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ (1888 ನೆ ಇಸವಿ 4 ನೆ ನಂಬರ್ ರೆಗ್ಯುಲೇಷನ್) 194 ನೆ ಪ್ರಕರಣಾನುಸಾರವಾಗಿಯೂ ಏರ್ಪಟ್ಟ ಸಾಮಾನ್ಯ ನಿಬಂಧನೆಗಳು.

ಜಮೀನ್ ಆಬಾದಿನ ಬಗ್ಗೆ ಪಡೆಯುವ ಸಾಲಗಳ (1890 ನೆ ಇಸವಿ 4 ನೆ ನಂಬರ್) ರೆಗ್ಯುಲೇಷನಿನ 10 ನೆ ಪ್ರಕರಣದಿಂದಲೂ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ (1888 ನೆ ಇಸವಿ 4 ನೆ ನಂಬರ್ ರೆಗ್ಯುಲೇಷನ್) 194 ನೆ ಪ್ರಕರಣದಿಂದಲೂ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸುವಲ್ಲಿ ಮೈಸೂರು ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರ್ರವರ ಸರ್ಕಾರದವರು 1908 ನೆ ಇಸವಿ ನವಂಬರ್ 18 ನೆ ತಾರೀಖಿನ ರೆವಿನ್ಯೂ 3057–ವ್ಯವಸಾಯ 135–0–8 ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟವಾದ ನಿಬಂಧನೆಗಳನ್ನು ರದ್ದುಮಾಡಿ ಈ ಕೆಳಗೆ ಕಂಡ ತಿದ್ದುಪಾಟಾದ ನಿಬಂಧನೆಗಳನ್ನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ.

ಯಾವ ಯಾವ ಉದ್ದೇಶಗಳಿಗೆ ಎಷ್ಟು ಪರಿಮಿತಿಯೊಳಗಾಗಿ ಸಾಲಗಳನ್ನು ಕೊಡಬಹುದು.

1. ಈ ಕೆಳಗೆ ಕಂಡ ಉದ್ದೇಶಗಳಿಗಾಗಿ ಆಯಾ ಕೆಲಸಕ್ಕೆ ಎಷ್ಟು ಮಟ್ಟಿಗೆ ಕೊಡಬಹುದೆಂದು ವಿಧಿಸಿರುತ್ತದೆಯೋ ಅಷ್ಟು ಮಟ್ಟಿಗೆ ಹಿಡುವಳೀದಾರರಿಗೆ ಸಾಲಗಳನ್ನು ಕೊಡಬಹುದು :—

ಯಾವ ಯಾವ ಉದ್ದೇಶಗಳಿಗೆ ಸಾಲಗಳನ್ನು ಕೊಡಬಹುದು?	ಎಷ್ಟು ಸಾಲ ಕೊಡಬಹುದು?	
	ಪರಮಾವಧಿ.	ಕನಿಷ್ಠಪಕ್ಷ.
(A) 1890ನೆ ಇಸವಿ 1ನೆ ನಂಬರ್ ಜಮೀನ್ ಆಬಾದಿನ ಬಗ್ಗೆ ಪಡೆಯುವ ಸಾಲಗಳ ರೆಗ್ಯುಲೇಷನಿಗನುಸಾರವಾಗಿ.	ರೂ.	ರೂ.
ಭಾವಿಗಳನ್ನು ಯಾ ಕೆರೆಗಳನ್ನು ಕಟ್ಟಿಸುವುದಕ್ಕೆ ಯಾ ದುರಸ್ತು ಮಾಡಿಸುವುದಕ್ಕೆ; ಸಾಗುವಳಿಗೆ ಕೊಡುವುದಕ್ಕಾಗಿ ಜಮೀನಿನ ಮೌಲ್ಯವನ್ನುಕಾಯವಾಗಿ ವೃದ್ಧಿಪಡಿಸುವ ರೀತಿಯಲ್ಲಿ ಬಂಜರ್ ಯಾ ಇತರ ಜಮೀನನ್ನು ಆಬಾದು ಮಾಡುವುದಕ್ಕೆ; ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿನ 4ನೆ ಪ್ರಕರಣದ (*a*) ಕಲಮಿನಲ್ಲಿ "ಆಬಾದು" ಎಂಬುದರಲ್ಲಿ ಯಾವ ಯಾವ ವಿಷಯಗಳು ಸೇರುತ್ತವೆಯೋ ಅವಕ್ಕೆ; ಅಥವಾ ಮೇಲ್ಕಂಡ ರೆಗ್ಯುಲೇಷನಿನ ಉದ್ದೇಶಕ್ಕಾಗಿ ಸರ್ಕಾರದವರು ಆಗಿಂದಾಗ ಗೆಜಟ್ಟಿನಲ್ಲಿ ಇಸ್ತಿಹಾರ್ನಾಮೆಯ ಮೂಲಕ ಯಾವ ಯಾವ ವಿಷಯಗಳನ್ನು "ಆಬಾದು" ಎಂಬುದರಲ್ಲಿ ಸೇರಿಸುವರೋ ಅವಕ್ಕೆ.	ಪರಿಮಿತಿ ಇಲ್ಲ.	50
(B) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣಕ್ಕನುಸಾರವಾಗಿ.		
(i) ಈ ಕೆಳಗೆ ಕಂಡವುಗಳನ್ನು ಕೊಂಡುಕೊಳ್ಳುವುದಕ್ಕಾಗಿ :--	200	ಪರಿಮಿತಿ ಇಲ್ಲ.
(*a*) ಬಿತ್ತನೆಯ ಕಾಳುಗಳು (ಇದರಲ್ಲಿ ಬಿತ್ತನೆಯ ಕಬ್ಬು, ಬಿತ್ತನೆಯ ಬಾಳೆಯೂ ಸೇರುತ್ತವೆ) ;		
(*b*) ಉಳುಮೆಯ ಎತ್ತುಗಳು (ಇದರಲ್ಲಿ ಕಪಿಲೆ ಹೊಡೆಯುವುದಕ್ಕೂ ಗೊಬ್ಬರ ಸಾಗಿಸುವುದಕ್ಕೂ ಬೇಕಾದ ರಾಸುಗಳು ಸೇರುತ್ತವೆ) ;		
(*c*) ಬೀಜದ ಕುದುರೆಗಳು, ಟಾಕಣಾಗಳು ಮತ್ತು ಬೀಜದ ಹೋರಿಗಳು ;		
(*d*) ರಾಸುಗಳಿಗೆ ಮೇವು ;		
(*e*) ಗೊಬ್ಬರ.		
(ii) ಈ ಕೆಳಗೆ ನಿರ್ದೇಶಿಸಿರುವಂಥಾ ಇತರ ವ್ಯವಸಾಯೋದ್ದೇಶಗಳಿಗೆ :—	1,000	ಪರಿಮಿತಿ ಇಲ್ಲ.
(*a*) ಹೊಸದಾಗಿ ಹಿಡುವಳಿಗೆ ಅವಕಾಶಕೊಟ್ಟ ಸ್ಥಳಗಳಲ್ಲಿ ಮನೆಗಳನ್ನು ಯಾ ಜೋಪಡಿಗಳನ್ನು ಕಟ್ಟಿಸುವುದು ;		
(*b*) ಬೆಂಕಿಯಿಂದ ಯಾ ನೀರಿನ ಪ್ರವಾಹದಿಂದ ನಾಶವಾದ ಮನೆಗಳನ್ನು ಪುನಃ ಕಟ್ಟಿಸುವುದು ;		

ಯಾವ ಯಾವ ಉದ್ದೇಶಗಳಿಗೆ ಸಾಲಗಳನ್ನು ಕೊಡಬಹುದು?	ಎಷ್ಟು ಸಾಲ ಕೊಡಬಹುದು?	
	ಪರಮಾವಧಿ.	ಕನಿಷ್ಠ ಪಕ್ಷ.
(*c*) ವ್ಯವಸಾಯದ ಮುಟ್ಟುಗಳು (ಬಂಡಿಗಳೂ ಸೇರಿ);	ರೂ.	ರೂ.
(*d*) ವ್ಯವಸಾಯ ಪದಾರ್ಥಗಳನ್ನು ಸರಿಪಡಿಸುವುದಕ್ಕನು ಕೂಲವಾದ ನೀಲಿಯ ತೊಟ್ಟಿಗಳೇ ಮುಂತಾದ ಸಾಧನಗಳನ್ನು ಕಟ್ಟಿಸುವುದು ;	1,000	ಪರಿಮಿತಿ ಇಲ್ಲ.
(*e*) ಜೋಡು ಮೋಹಟೇ ಯಾ ನೀರು ಎತ್ತುವ ಇತರ ಸಾಧನಗಳು.		
(iii) (*a*) ಕಬ್ಬಿನ ಆಲೆಗಳನ್ನು ಹೂಡುವುದಕ್ಕೆ ; ಅಥವಾ	5,000	ಪರಿಮಿತಿ ಇಲ್ಲ.
(*b*) ಬಾಯಿಲರುಗಳು, ಆಯಿಲ್‌ಗ್ಯಾಸ್ ಎಂಜಿನಗಳು ಈ ಮುಂತಾದ ಮೇಲೆ ನಮೂದಿಸದೆ ಇರುವ ವ್ಯವಸಾಯ ಸಂಬಂಧವಾದ ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ.		
(iv) ದುರ್ಭಿಕ್ಷವು ಪ್ರಾಪ್ತವಾಗಿದೆ ಎಂದು ಸರ್ಕಾರದವರಿಗೆ ದೃಢವಾಗಿ ಕಂಡುಬಂದಾಗ ಮುಂದಣ ಸುಗ್ಗಿಯಲ್ಲಿ ಫಸಲು ಆಗುವ ವರೆಗೂ ಜಮಿನ್ ಹಿಡುವಳಿದಾರರೂ ಅವರ ಆಶ್ರಿತರೂ ಜೀವನಮಾಡಿಕೊಳ್ಳಲು ಅನುಕೂಲವಾಗಿರುವಂತೆ ದುರ್ಭಿಕ್ಷವನ್ನು ನಿವಾರಣೆ ಮಾಡುವುದಕ್ಕಾಗಿ.	200	ಪರಿಮಿತಿ ಇಲ್ಲ.

2. ಈ ಕೆಳಗೆ ನಮೂದಿಸಿರುವ ಆಫೀಸರುಗಳು ಅವರವರ ಹೆಸರಿಗೆ ಎದುರಾಗಿ ಕಾಣಿಸಿರುವ ಮೊಬಲಗಿಗೆ ಮೀರದಷ್ಟು ಸಾಲಗಳನ್ನು ಮಂಜೂರ್ ಮಾಡಲು ಅಧಿಕಾರವುಳ್ಳವರಾಗಿರತಕ್ಕದ್ದು :—

ಅಮಲ್ದಾರರುಗಳು, ಡೆಪ್ಯುಟಿ ಅಮಲ್ದಾರರುಗಳು	ರೂ. 250
ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರುಗಳು	500
ಡೆಪ್ಯುಟಿ ಕಮಿಷನರವರು	1,000
ರೆವಿನ್ಯೂ ಕಮಿಷನರವರು	2,500

ಟಿಪ್ಪಣಿ—ಯಾರೊಬ್ಬ ಆಫೀಸರಾಗಲೀ ಒಂದೇ ಇಸಮಿಗೆ ಒಂದಕ್ಕಿಂತ ಹೆಚ್ಚು ಸಾಲಗಳನ್ನು ಕೊಡಕೂಡದೆಂದು ಈ ನಿಬಂಧನೆಯಿಂದ ನಿರೋಧಿಸಲ್ಪಟ್ಟಿಲ್ಲ. ಹಾಗೆ ಕೊಡುವುವರಿಂದ ಒಟ್ಟು ಮೊಬಲಗು ಮೇಲೆ ವಿಧಿಸಲ್ಪಟ್ಟಿರುವ ಪರಮಾವಧಿಯನ್ನು ಮೀರಿದರೂ ಚಿಂತೆಯಿಲ್ಲ. ಪರಂತು ಹಾಗೆ ಕೊಡಬಹುದಾದ ಪ್ರತಿಯೊಂದು ಸಾಲವೂ ಪ್ರತ್ಯೇಕವಾದ ಉದ್ದೇಶಗಳಿಗೆ ಸಂಬಂಧಪಟ್ಟುದಾಗಿರಬೇಕಲ್ಲದೆ ಅಂಥಾ ಪ್ರತಿಯೊಂದು ಸಾಲಕ್ಕೂ ಪ್ರತ್ಯೇಕವಾದ ಆಧಾರಗಳು ಇರಬೇಕು.

3. ದುರ್ಭಿಕ್ಷದ ನಿವಾರಣೆಗೋಸ್ಕರ ಕೊಟ್ಟ ಸಾಲಗಳು ವಿನಾ ಉಳಿದ ಎಲ್ಲಾ ಸಾಲಗಳ ಮೇಲೆಯೂ ಶೇಕಡಾ 5 ರಂತೆ ಬಡ್ಡಿಯನ್ನು ವಿಧಿಸತಕ್ಕದ್ದು. ದುರ್ಭಿಕ್ಷದ ನಿವಾರಣೆಯ ಸಾಲಗಳಿಗೆ ಶೇಕಡಾ 3 ರಂತೆ ಮಾತ್ರವೇ ಬಡ್ಡಿಯನ್ನು ವಿಧಿಸಬೇಕು; ಈ ಪೈಕಿ ಸಾಲವನ್ನು ತೆಗೆದುಕೊಂಡವರು ಬಡವರೆಂದು ಕಂಡುಬಂದಪಕ್ಷ ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಲ್ಲಿ ಬಡ್ಡಿಯನ್ನು ಮಾಫ್ ಮಾಡಬಹುದು.

ಬಡ್ಡಿಯ ದರ.

ಸರ್ಕಾರದವರು ತಮಗೆ ಸೂಕ್ತವೆಂದು ತೋರಿದಲ್ಲಿ ಯಾವುದಾದರೂ ವಿಶೇಷ ಕಾರಣಗಳಿದ್ದರೆ ಕಮ್ಮಿ ಬಡ್ಡಿಗಾಗಲೀ ಬಡ್ಡಿ ಇಲ್ಲದೆಯೇ ಆಗಲಿ ಸಾಲಗಳನ್ನು ಮಂಜೂರ್ ಮಾಡಬಹುದು.

4. ಸಾಲದ ಏರ್ ಪಾವತಿ ತಾರೀಖಿನ ಲಾಗಾಯಿತು ಬಡ್ಡಿಯು ಷುರುವಾಗತಕ್ಕದ್ದು. ಸಾಲವನ್ನು ಕಂತುವಾರಾಗಿ ತೆಗೆದುಕೊಂಡಿದ್ದಲ್ಲಿ ಪ್ರತಿ ಕಂತಿನ ಮೇಲಣ ಬಡ್ಡಿಯು ಆಯಾ ಕಂತಿನ ಏರ್ ಪಾವತಿ ತಾರೀಖಿನ ಲಾಗಾಯಿತು ಷುರುವಾಗತಕ್ಕದ್ದು.

ಸಾಲಗಳನ್ನು ತೀರಿಸುವದಕ್ಕೆ ವಾಯಿದೆ ಮತ್ತು ಸಾಲಗಳನ್ನು ವಸೂಲ್ಮಾಡುವ ರೀತಿ.

5. ಈ ನಿಬಂಧನೆಗಳಿಗೆ ಲಗತ್ತಿಸಿರುವ ತಃಖ್ತೆಯ ಮೇರೆಗೆ ಆಗುವಷ್ಟು ಬಡ್ಡಿಯನ್ನೂ ಅಸಲನ್ನೂ ಸೇರಿಸಿ ಗೊತ್ತಾದ ಸಾಲೀಯಾನಾ ಕಂತುಗಳ ಮೇರೆಗೆ ಸಾಲಗಳನ್ನು ತೀರಿಸಿತಕ್ಕದ್ದು.

ಸಾಲ ತೀರಿಸುವುದಕ್ಕೆ ಷುರು ಮಾಡಲು ಗೊತ್ತಾದ ತಾರೀಖಿಗಿಂತ ಒಂದು ವರ್ಷದ ಹಿಂದಣ ತಾರೀಖಿನ ಲಾಗಾಯಿತು ಸಾಲದ ಮೇಲೆ ಅಥವಾ ಸಾಲವನ್ನು ಕಂತುವಾರಾಗಿ ಕೊಟ್ಟಿದ್ದಲ್ಲಿ ಸದರೀ ಕಂತುಗಳ ಮೇಲೆ ಸರಳಬಡ್ಡಿಯನ್ನು ವಸೂಲ್ ಮಾಡತಕ್ಕದ್ದು; ಮತ್ತು ಸಾಲದ ಮೊಬಲಗನ್ನೂ ಅದರ ಮೇಲಣ ಬಡ್ಡಿಯನ್ನೂ ಮೇಲೆ ಹೇಳಿದ ತಃಖ್ತೆಯ ಮೇರೆಗೆ ನಿರ್ಧರಿಸಿದ ಸಾಲೀಯಾನಾ ಕಂತುಗಳಿಗನುಸಾರವಾಗಿ ವಸೂಲ್ ಮಾಡತಕ್ಕದ್ದು.

ಸಾಲಗಳನ್ನು ತೀರಿಸುವುದಕ್ಕೆ ವಾಯಿದೆಯನ್ನೂ, ಕಂತುಗಳ ಮೊಬಲಗನ್ನೂ ಡೆಪ್ಯುಟಿ ಕಮಿಷನರವರು (ಯಾ ಸಾಲವನ್ನು ಮಂಜೂರ್ಮಾಡಿದ ಇತರ ಆಫೀಸರವರು) ನಿರ್ಧರಿಸುವಲ್ಲಿ ಸಾಲ ತೆಗೆದುಕೊಂಡವನ ಸ್ಥಿತಿಗತಿಗಳನ್ನೂ, ಸಾಲದ ಉದ್ದೇಶವನ್ನೂ ಮಾಡಿಸಬೇಕೆಂದು ಉದ್ದೇಶಿಸಿರುವ ಕಾಮುಗಾರಿಗಳು ಎಷ್ಟರಮಟ್ಟಿಗೆ ಸ್ಥಿರವಾಗಿರಬಹುದೆಂಬ ಅಂಶವನ್ನೂ, ಏರ್ಪಡಿಸಬೇಕೆಂದಿರುವ ಯಂತ್ರಸಾಧನಗಳ ಸ್ವಭಾವವನ್ನೂ, ಸಾಲಕ್ಕೆ ಆಧಾರವಾಗಿ ಕೊಡತಕ್ಕ ಸೊತ್ತು ಎಷ್ಟು ಬಾಳುವುದು ಮತ್ತು ಅದು ಸಾಕೇ ಎಂಬ ಈ ಅಂಶಗಳನ್ನೂ ಪರ್ಯಾಲೋಚಿಸತಕ್ಕದ್ದು. ಪರಂತು ಹಾಗೆ ನಿರ್ಧರಿಸಿದ ವಾಯಿದೆಯಾಗಲೀ ಕಂತುಗಳಾಗಲೀ ಈ ಕೆಳಗೆ ಸೂಚಿಸುವ ಪರಮಾವಧಿಯನ್ನು ಮೀರಕೂಡದು—

(A) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನ್ಸಿಗನುಸಾರವಾದ ಸಾಲಗಳ ವಿಷಯದಲ್ಲಿ—

(i) ಭಾವಿಗಳನ್ನು ಕಟ್ಟಿಸುವುದಕ್ಕೆ ಅಥವಾ ದುರಸ್ತು ಮಾಡಿಸುವುದಕ್ಕೆ ... ... 30 ವರ್ಷಗಳು.

(ii) ಇತರ ಉದ್ದೇಶಗಳಿಗೆ:—

ಸಾಲವು 500 ರೂಪಾಯಿಗೆ ಮೀರದೆ ಇದ್ದಲ್ಲಿ 10 ,,

ಸಾಲವು 500 ರೂಪಾಯಿಗಳಿಗೆ ಮೀರಿ 1,000 ರೂಪಾಯಿಗಳಿಗೆ ಮೀರದೆ ಇದ್ದಲ್ಲಿ ... 15 ,,

ಸಾಲವು 1,000 ರೂಪಾಯಿಗಳಿಗೆ ಮೀರಿ ಇದ್ದಲ್ಲಿ 20 ,,

(B) ಲ್ಯಾಂಡ್ ರೆವಿನ್ಯೂ ಕೋಡಿನ 194 ನೇ ಪ್ರಕರಣಾನುಸಾರ ವಾದ ಸಾಲಗಳ ವಿಷಯದಲ್ಲಿ—

(i) ಬಿತ್ತನೆಯ ಕಾಳುಗಳನ್ನು ಕೊಂಡುಕೊಳ್ಳುವುದಕ್ಕೆ 1 ವರ್ಷ.

(ii) ದುರ್ಭಿಕ್ಷವನ್ನು ನಿವಾರಣೆ ಮಾಡುವುದಕ್ಕೆ ಮತ್ತು ವ್ಯವಸಾಯದ ಮುಟ್ಟುಗಳನ್ನು ಯಾ ಯಂತ್ರ ಗಳನ್ನು ಕೊಂಡುಕೊಳ್ಳುವುದಕ್ಕೆ ... 3 ವರ್ಷಗಳು.

(iii) ಇತರ ಯಾವುದಾದರೂ ಉದ್ದೇಶಕ್ಕೆ ... 10 ,,

ಸಾಲವನ್ನು ತೀರಿಸುವುದಕ್ಕಾಗಿ ಮೇಲೆ ನಿರ್ದೇಶಿಸಿರುವ ಅವಧಿಯು ಸಾಲದ ಏಕ್ ಪಾವತಿಯ ತಾರೀಖಿನಿಂದ ಅಥವಾ ಆ ಸಾಲವು ಕಂತುಗಳಾಗಿ ಕೊಡಲ್ಪಟ್ಟಿ ರುವ ಸಂದರ್ಭದಲ್ಲಿ ಆಖೈರು ಕಂತಿನ ಏಕ್ ಪಾವತಿಯ ತಾರೀಖಿನಿಂದ ಷುರುವಾಗತ ಕ್ಕದ್ದು; ಅಲ್ಲದೆ 13 ನೇ ಮತ್ತು 32 ನೇ ನಿಬಂಧನೆಗಳಿಗನುಸಾರವಾಗಿ ತಿದ್ದುಪಾಟು ಆಗಲು ಒಳಗಾಗಿರತಕ್ಕದ್ದು.

ಪರಂತು ಈ ನಿಬಂಧನೆಯಲ್ಲಿರುವ ಯಾವ ಅಂಶದಿಂದಾಗಲೀ ಸಾಲವನ್ನು ತೆಗೆ ದುಕೊಂಡವನು ಮೇಲ್ಕಂಡ ಅವಧಿಗಿಂತ ಮುಂಚೆಯೆ ಅದನ್ನು ತೀರಿಸಕೂಡದೆಂತಾಗಲಿ, ಸಾಲೀಯಾನಾ ಕಂತಿಗಿಂತ ಹೆಚ್ಚು ಮೊಬಲಗನ್ನು ಪಾವತಿ ಮಾಡಕೂಡದೆಂತಾಗಲಿ ಭಾವಿಸಕೂಡದು. ಹಾಗೆ ಹೆಚ್ಚಾಗಿ ಪಾವತಿ ಮಾಡಿದ ಮೊಬಲಗನ್ನು ಅಸಲಿಗೆಜಮಾ ಕಟ್ಟಿಕೊಳ್ಳಬೇಕಲ್ಲದೆ ಅವಶ್ಯಕವಿದ್ದಲ್ಲಿ ಮುಂದಣ ಕಂತುಗಳ ಸಂಖ್ಯೆಯನ್ನು ಕಡವೆ ಮಾಡಬೇಕು; ಆದರೆ ಈ ನಿಬಂಧನೆಯ 2 ನೇ ಪ್ಯಾರಾ ಮೇರೆಗೆ ವಿಧಿಸೋಣವಾದ ಕಂತುಗಳ ಮೊಬಲಗನ್ನು ಈ ಕಾರಣದಿಂದ ಕಡಮೆ ಮಾಡಕೂಡದು.

6. ಪ್ರತಿಯೊಂದು ಕಂತನ್ನೂ ಆಯಾ ತಾಲ್ಲೂಕಿನ ಜಮೀನ್ ಕಂದಾಯದ ಖಿಸ್ತಿನ ಪಾವತಿಯ ದಿವಸವೇ ವಾಪಸ್ ಕೊಡುವಂತೆ ಏರ್ಪಾಟು ಮಾಡಬೇಕು. ಆದರೆ ಮೊದಲನೆ ಕಂತಿನ ಪಾವತಿ ತಾರೀಖನ್ನು ಹೇಗೆ ಗೊತ್ತುಮಾಡಬೇಕೆಂದರೆ— ತಕ್ಕ ಜಾಗರೂಕತೆಯಿಂದ ಕೆಲಸ ಮಾಡಿಸಿದಲ್ಲಿ ಜಮೀನು ಆಬಾದಿನಿಂದ ಮೊದಲನೇ ಕಂತಿನಷ್ಟು ಮೊಬಲಗು ಎಷ್ಟು ಕಾಲದಲ್ಲಿ ಉತ್ಪತ್ತಿಯಾಗುತ್ತದೆಯೋ ಅದಕ್ಕೆ

ಮುಂಚೆಯೇ ಸದರೀ ಕಂತನ್ನು ಬಲಾತ್ಕಾರವಾಗಿ ವಸೂಲ್ ಮಾಡದಂತೆ ಸದರಿ ದಿವಸವನ್ನು ಗೊತ್ತುಮಾಡಬೇಕು ಮತ್ತು ಸಾಲದ ಏಕ್ ಪಾವತಿಯು ತಾರೀಖಿನಿಂದ ಅಥವಾ ಸಾಲವನ್ನು ಕಂತುವಾರಾಗಿ ಕೊಟ್ಟಿದ್ದಲ್ಲಿ ಆಖೈರ್ ಕಂತಿನ ಏಕ್ ಪಾವತಿಯು ತಾರೀಖಿನಿಂದ 12 ತಿಂಗಳಿಗಿಂತ ಮುಂಚೆ ಸದರೀ ಕಂತಿಗಾಗಿ ತಗಾದೆ ಮಾಡಕೂಡದು ; ಅಲ್ಲದೆ 2½ ವರ್ಷಗಳಿಗಿಂತ ಹೆಚ್ಚಾಗಿ ವಸೂಲ್ ಮಾಡದೆ ಬಿಡಕೂಡದು.

ಯಾವುದಾದರೂ ವಿಶೇಷ ಸಂದರ್ಭದಲ್ಲಿ ಸಾಲವನ್ನು ಮಂಜೂರ್ಮಾಡುವ ಆಫಿಸರು ಆಬಾದಿನ ಕಾಮಗಾರಿಯಿಂದ 2½ ವರ್ಷಗಳೊಳಗಾಗಿ ಫಾಯಿದೆ ಏನೂ ಬರಲಾರದೆಂದು ಅಭಿಪ್ರಾಯಪಡುವ ಪಕ್ಷ ಐದು ವರ್ಷಗಳಿಗೆ ಮೀರದೆ ಇರುವ ಹೆಚ್ಚು ಅವಧಿಯನ್ನು ಕೊಡಬಹುದು. ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರರಿಂದಲಾಗಲೀ ಅಸಿಸ್ಟೆಂಟ್ ಕಮಿಷನರಿಂದಲಾಗಲೀ ಸಾಲಗಳು ಮಂಜೂರ್ ಮಾಡಲ್ಪಟ್ಟಿರುವ ಸಂದರ್ಭದಲ್ಲಿ ಮೇಲ್ಕಂಡಂತೆ ಕಾಲಾವಧಿಯನ್ನು ಹೆಚ್ಚಿಸಬೇಕಾದರೆ ಡೆಪ್ಯುಟಿ ಕಮಿಷನರವರ ಮಂಜೂರಾತಿಯನ್ನು ಪಡೆಯಬೇಕು

ಯಾವ ಸಂದರ್ಭದಲ್ಲಿಯೇ ಆಗಲಿ ಆಖೈರ್ ಕಂತನ್ನು ಪಾವತಿಮಾಡಿದ ತಾರೀಖು ಲಾಗಾಯಿತು 5 ನೆ ನಿಬಂಧನೆಯಲ್ಲಿ ವಿಧಿಸಿರುವ ಪರಮಾವಧಿಯ ಕಾಲದೊಳಗಾಗಿ ಒಟ್ಟು ಸಾಲವೂ ಬಡ್ಡಿಯೂ ಸಹ ವಾಪಸ್ ಪಾವತಿಯಾಗುವುದಕ್ಕೆ ಅನುಕೂಲವಾಗುವಂತೆ ಸಾಲೀಯಾನಾ ಕಂತು ಮೊಬಲಗನ್ನು ಗೊತ್ತು ಮಾಡಬೇಕು.

ಸಾಲ ತೀರಿಸುವ ಕಾಲವನ್ನು ಹೆಚ್ಚು ಮಾಡುವುದು ಮತ್ತು ಸಾಲಗಳನ್ನು ಮಾಫ್ ಮಾಡುವುದು.

ಸಾಲ ತೀರಿಸುವುದನ್ನು ನಿಲ್ಲಿಸುವುದು.

7. ಸಾಲ ತೆಗೆದುಕೊಂಡವನ ಬೆಳೆಯು ಆತನಿಂದ ಯಾವ ಲೋಪವೂ ಇಲ್ಲದೆ ದೈವವಶಾತ್ ಕೆಟ್ಟುಹೋಗಿ ಆತನು ಒಂದು ಕಂತನ್ನೂ ಕೊಡಲು ಶಕ್ತಿಯಿಲ್ಲದೆ ಹೋದರೆ, ಅಥವಾ ವಿಶೇಷವಾದ ಬೇರೆ ಯಾವುದಾದರೊಂದು ವಿಪತ್ತು ಸಂಭವಿಸಿದಲ್ಲಿ 5 ನೆ ಮತ್ತು 6 ನೆ ನಿಬಂಧನೆಗಳಲ್ಲಿ ಏನಿದ್ದರೂ ಸಿರಿಯೇ ಸದರೀ ಕಂತನ್ನೂ ಆದರಾಚೆಯ ಕಂತುಗಳನ್ನೂ ಒಂದು ಕಂತಿನ ಅವಧಿಯ ವರೆಗೆ ನಿಲ್ಲಿಸಬಹುದು.

ಸಾಲಗಳನ್ನು ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರರಾಗಲೀ, ಅಸಿಸ್ಟೆಂಟ್ ಕಮಿಷನರಾಗಲೀ ಅಥವಾ ಡೆಪ್ಯುಟಿ ಕಮಿಷನರಾಗಲೀ ಮಂಜೂರ್ಮಾಡಿರುವಾಗ ಡೆಪ್ಯುಟಿ ಕಮಿಷನರವರು ತಾವೇ ಆಗಲಿ, ತಮ್ಮ ತಾಬೇಯಲ್ಲಿರುವ ಆಫೀಸರುಗಳ ಸಿಫಾರಸಿನ ಮೇಲಾಗಲೀ ಮಂಜೂರ್ ನಿರೀಕ್ಷಣೆಯ ಮೇಲೆ ಆ ರೀತಿ ನಿಲ್ಲಿಸಿ ಹುಕುಂ ಕೊಡಬಹುದು. ಆದರೆ ಅವರು ಅಂಥಾ ಸಂದರ್ಭಗಳನ್ನೆಲ್ಲಾ ರೆವಿನ್ಯೂ ಕಮಿಷನರವರಿಗೆ ರಿಪೋರ್ಟ್ ಮಾಡಬೇಕು ; ರೆವಿನ್ಯೂ ಕಮಿಷನರವರು ಅವುಗಳ ವಿಷಯದಲ್ಲಿ ತಮಗೆ ಸೂಕ್ತ ತೋರುವಂತೆ ಹುಕುಂ ಮಾಡಬಹುದು. ಇತರ ಸಂದರ್ಭಗಳನ್ನೆಲ್ಲ ಹುಕುಂ ಬಗ್ಗೆ

ರೆವಿನ್ಯೂ ಕಮಿಷನರವರಿಗೆ ಜಾಹಿರ್ ಮಾಡಬೇಕು; ಅವುಗಳ ಮೇಲೆ ಅವರು ತಮಗೆ ಯುಕ್ತ ತೋರುವಂತೆ ಹುಕುಂ ಕೊಡಲು ಅಧಿಕಾರವುಳ್ಳವರಾಗಿರತಕ್ಕದ್ದು.

ಸಾಲ ತೀರಿಸದೆ ನಿಲ್ಲಿಸುವ ಕಂತುಗಳ ಮೇಲೆಲ್ಲಾ ಹಾಗೆ ನಿಂತಿದ್ದ ಕಾಲಕ್ಕೆ ಶೇಕಡಾ 5 ರಂತೆ ಸರಳಬಡ್ಡಿಯನ್ನು ವಸೂಲ್ ಮಾಡಬೇಕು.

ಸಾಲವನ್ನು ಮಾಫ್ ಮಾಡುವುದು.

8. ಯಾವುದಾದರೊಂದು ಆಬಾದ್ ಕಾಮಗಾರಿಯು ಕೆಟ್ಟುಹೋಗುವುದರಿಂದುಂಟಾಗುವ ನಷ್ಟವನ್ನು ಸಾಲ ತೆಗೆದುಕೊಂಡವರೂ ಅವರ ಜಾಮೀನುದಾರರೂ ವಹಿಸಬೇಕು; ಅಲ್ಲದೆ ಈ ನಿಬಂಧನೆಗಳಿಗನುಸಾರವಾಗಿ ಕೊಟ್ಟ ಸಾಲವನ್ನು ಮುಂದಣ ಷರತ್ತುಗಳಿಗೊಳಪಟ್ಟು ಮಾಫ್ ಮಾಡತಕ್ಕದ್ದು.

9. ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿಗನುಸಾರವಾಗಿ ಸಾಲ ಕೊಟ್ಟಿರುವ ಸಂದರ್ಭದಲ್ಲಿ ಆಯಾ ಕೆಲಸವು ಸಾಲ ತೆಗದುಕೊಂಡವನಿಂದ ಯಾವ ಲೋಪವೂ ಇಲ್ಲದೆ ದೈವವಶಾತ್ ಕೆಟ್ಟುಹೋದರೆ, ಮತ್ತು ಕಂತನ್ನು ಪೂರ್ತಿಯಾಗಿ ವಸೂಲ್ ಮಾಡುವುದರಿಂದ ಸಾಲ ತೆಗೆದುಕೊಂಡವನಿಗೆ ತುಂಬಾ ತೊಂದರೆಯುಂಟಾದರೆ ಬಾಕಿ ಇರುವ ಕಂತುಗಳನ್ನಾಗಲೀ ಅಥವಾ, ಅವುಗಳಲ್ಲಿ ಒಂದು ಭಾಗವನ್ನಾಗಲೀ 100 ರೂಪಾಯಿಗಳಿಗೆ ಮೀರದೆ ಇದ್ದರೆ ಮಾಫ್ ಮಾಡಲು ರೆವಿನ್ಯೂ ಕಮಿಷನರವರು ಅಧಿಕಾರವುಳ್ಳವರಾಗಿರತಕ್ಕದ್ದು. ಮೇಲ್ಕಂಡ ಮೊಬಲಗಿಗಿಂತ ಹೆಚ್ಚಾಗಿ ಮಾಫ್ ಮಾಡಬೇಕಾದಲ್ಲಿ ಸರ್ಕಾರದವರ ಹುಕುಂ ಪಡೆಯಬೇಕು.

10. ರೆವಿನ್ಯೂ ಸಾಲಿನ ಆಖೈರಿನೊಳಗಾಗಿ ತೀರಿಸಲ್ಪಡದೆ ಇರುವ ಪ್ರತಿ ಕಂತಿನ ಮೇಲೆಯೂ ಯಾವಾಗ ಕಂತು ಪಾವತಿಯಾಗಬೇಕಾಗಿತ್ತೋ ಆ ತಾರೀಖಿನ ಲಾಗಾಯಿತು ಶೇಕಡಾ 6¼ ರ ಮೇರೆಗೆ ಬಡ್ಡಿ ವಸೂಲ್ ಮಾಡಬೇಕು. ಈ ನಿಬಂಧನೆಯ ಮೇರೆಗೆ ಒಂದು ತಿಂಗಳಿಗಿಂತ ಕಡಮೆಯಾದ ಕಾಲಕ್ಕೆ ಬಡ್ಡಿ ಲೆಕ್ಕ ಮಾಡಬೇಕಾದರೆ 15 ದಿನಗಳಿಗಿಂತ ಕಡಮೆಯಾದ ಕಾಲವನ್ನು ½ ತಿಂಗಳಂತೆಯೂ, 15 ದಿವಸವನ್ನೂ ಮತ್ತು ಜಾಸ್ತಿ ಕಾಲವನ್ನೂ ಪೂರಾ ತಿಂಗಳಂತೆಯೂ ಭಾವಿಸಿಕೊಳ್ಳಬೇಕು; ಅಲ್ಲದೆ ಒಂದು ರೂಪಾಯಿಯ ಭಿನ್ನಾಂಶವು 3 ಆಣೆಗಿಂತ ಕಡಮೆಯಾಗಿದ್ದಲ್ಲಿ ಅದನ್ನು ಅರ್ಧ ರೂಪಾಯಿಯಂತೆಯೂ 8 ಆಣೆ ಮತ್ತು ಅದಕ್ಕಿಂತ ಜಾಸ್ತಿಯನ್ನು ಪೂರಾ ರೂಪಾಯಿಯಂತೆಯೂ ಭಾವಿಸಿಕೊಳ್ಳಬೇಕು.

11. ಸಾಲ ತೀರಿಸಬೇಕಾದರೆ ಆಬಾದ್ ಆಗಬೇಕಾದ ಜಮೀನು ಯಾವ ತಾಲ್ಲೂಕಿನಲ್ಲಿದೆಯೋ ಅಥವಾ ಸಾಲವನ್ನು ಯಾವ ತಾಲ್ಲೂಕಿನಲ್ಲಿ ಉಪಯೋಗಿಸಬೇಕಾಗಿದೆಯೋ ಆ ತಾಲ್ಲೂಕಿನ ಖಜಾನೆಗಾಗಲೀ, ಸಾಲದ ಬಾಕಿಯು ಸಾಲಗಾರನ ಖಾತೆಯಲ್ಲಿ ಸೇರಿಸಲ್ಪಟ್ಟಿದ್ದಲ್ಲಿ ಸದರೀ ಗ್ರಾಮಾಧಿಕಾರಿಗಳಿಗಾಗಲೀ ಸಲ್ಲಿಸಬಹುದು.

ಡೆಪ್ಯುಟಿ ಕಮೀಷನರವರು, ತಮಗೆ ಯುಕ್ತವೆಂದು ಕಂಡುಬಂದಲ್ಲಿ, ಸದರೀ ಡಿಸ್ಟ್ರಿಕ್ಟಿನೊಳಗಾಗಿ ಬೇರೆ ಯಾವುದಾದರೂ ಖಜಾನೆಗೆ ಸಾಲದ ಮೊಬಲಗನ್ನು ಪಾವತಿ ಮಾಡಬೇಕೆಂದೂ ಅಪ್ಪಣೆ ಮಾಡಬಹುದು. ಆಬಾದ್ ಆಗಬೇಕಾದ ಜಮೀನು

ಯಾವ ತಾಲ್ಲೂಕಿನಲ್ಲಿದೆಯೋ ಅಥವಾ ಸಾಲದ ಮೊಬಲಗನ್ನು ಯಾವ ತಾಲ್ಲೂಕಿನಲ್ಲಿ ಉಪಯೋಗಿಸಬೇಕಾಗಿದೆಯೋ ಆ ತಾಲ್ಲೂಕಿನ ಖಜಾನೆಯಲ್ಲದೆ ಬೇರೆ ಖಜಾನೆಗೆ ಸಾಲದ ಮೊಬಲಗನ್ನು ಪಾವತಿ ಮಾಡಿದಲ್ಲಿ ಹಾಗೆ ಪಾವತಿ ಮಾಡುವ ಹಣದ ಜತೆಯಲ್ಲಿ, ಬಾಕಿ ಇರುವ ಮೊಬಲಗು, ಸಾಲ ಮಂಜೂರಾದ ಹುಕುಮಿನ ನಂಬರು ಮತ್ತು ತಾರೀಖು, ಸಾಲವನ್ನು ತೆಗೆದುಕೊಂಡುದು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನ್ ಮೇರೆಗೋ ಅಥವಾ ಲ್ಯಾಂಡ್ ರೆವಿನ್ಯೂ ಕೋಡಿನ 194 ನೇ ಪ್ರಕರಣದ ಮೇರೆಗೋ—ಈ ವಿವರಗಳನ್ನೆಲ್ಲಾ ಒಳಗೊಂಡ ಒಂದು ಮೆಮೋರ್‍ಯಾಂಡಮನ್ನು ಕಳುಹಿಸಿಕೊಡಬೇಕು.

ಆಧಾರ ಯಾ ಜಾಮೀನು.

12. ಎಷ್ಟು ಮೊಬಲಗು ಸಾಲಬೇಕಾಗಿದೆಯೋ ಅದಕ್ಕಿಂತ ಕನಿಷ್ಠ ಪಕ್ಷ ಕಾಲು ಭಾಗ ಹೆಚ್ಚಾದ ಬೆಲೆಯುಳ್ಳ ಸೊತ್ತನ್ನು ಆಧಾರಮಾಡಿದರೆ ಹೊರ್ತು ಯಾವ ಸಾಲವನ್ನಾಗಲೀ ಮಂಜೂರ್ ಮಾಡಕೂಡದು.

ಆಧಾರ ಯಾ ಜಾಮೀನು.

ಜಮೀನು ಈ ಕೆಳಗೆ ಸೂಚಿಸಿರುವಂತೆ ಇರತಕ್ಕದ್ದು:—

(A) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿಗನುಸಾರವಾಗಿ ತೆಗೆದುಕೊಂಡ ಸಾಲಗಳ ವಿಚಾರವಾಗಿ—ಆಬಾದಿಗೆ ತರಬೇಕಾದ ಜಮೀನು; ಇದರಲ್ಲಿ ಕಟ್ಟಬೇಕಾಗಿರುವ ನಿವೇಶನವೂ ಸೇರಿರಬೇಕು.

ಆಬಾದಿಗೆ ತರಬೇಕಾದ ಜಮೀನಿನಲ್ಲಿ ಅರ್ಜಿದಾರನಿಗೆ ಇರುವ ಹಕ್ಕಿನ ಬೆಲೆಯು ಕೇಳುವ ಸಾಲಕ್ಕಿಂತ ಕಾಲುಭಾಗ ಹೆಚ್ಚಾಗಿಲ್ಲದೆ ಇದ್ದಲ್ಲಿ ಬೇರೆ ಒಂದು ಆಧಾರವನ್ನು ಕೊಡಬೇಕು.

ಅಂಥಾ ಪ್ರತ್ಯೇಕವಾದ ಆಧಾರವು ಯಾವುದೆಂದರೆ:—

(i) ಅರ್ಜಿದಾರನಿಗೆ ಸೇರಿದ ಇತರ ಜಮೀನುಗಳು; ಅಥವಾ

(ii) ಆತನ ಜಾಮೀನ್‌ದಾರರಾಗಲು ಇಷ್ಟಪಡುವ ಜನರಿಗೆ ಸೇರಿದ ಜಮೀನುಗಳು; ಅಥವಾ

(iii) ಮೇಲ್ಕಂಡ ಎರಡು ತರಹೆಯ ಜಮೀನುಗಳೂ.

(B) ಲ್ಯಾಂಡ್ ರೆವಿನ್ಯೂ ಕೋಡಿನ 194 ನೆ ಪ್ರಕರಣಾನುಸಾರ ತೆಗೆದುಕೊಂಡ ಸಾಲಗಳ ವಿಚಾರವಾಗಿ—

ಅರ್ಜಿದಾರನ ಹಿಡುವಳಿಯಲ್ಲಿರುವ ಜಮೀನುಗಳಲ್ಲಿ ಆತನಿಗಿರುವ ವಿಕ್ರಯದ ಹಕ್ಕು ಆಧಾರವಾಗಿರತಕ್ಕದ್ದು. ಪರಂತು ಸದರೀ ಹಕ್ಕಿನ ಬೆಲೆಯು ಆತನು ಕೇಳಿರುವ ಸಾಲಕ್ಕಿಂತ ಕಾಲುಭಾಗದಷ್ಟು ಹೆಚ್ಚಾಗಿಲ್ಲದೆ ಹೋದ

ಪಕ್ಷ ಬೇರೆ ಆಧಾರವನ್ನು ತೆಗೆದುಕೊಳ್ಳಬೇಕು ; ಸದರೀ ಆಧಾರವು ಸ್ಥಿರ ಸ್ವತ್ತಾಗಿರಬೇಕು.

(C) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋರ್ನ್ಸ್ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಬಹುದಾದ ಸಾಲವನ್ನು ಯಾವುದಾದರೊಂದು ಗ್ರಾಮಕ್ಕೆ ಸೇರಿದವರೆಲ್ಲರೂ ಆಗಲೀ ಬೇಸಾಯಗಾರರ ಒಂದು ಮಂಡಲಿಯವರಾಗಲೀ ತಮ್ಮಗಳ ಜಂಟಿ ಜಾಮೀನಿನ ಮೇಲೆ ಸಾಲವನ್ನು ಅಪೇಕ್ಷಿಸಿದಲ್ಲಿ ಡೆಪ್ಯುಟಿ ಕಮಿಷನರವರು ತಮಗೆ ಸೂಕ್ತತೋರಿದಲ್ಲಿ ಸದರೀ ಜಾಮೀನಿನ ಮೇಲೆ ಸದರೀ ಅರ್ಜಿದಾರರುಗಳ ಹೆಸರುಗಳಲ್ಲಿ ದಾಖಲಾಗಿರುವ ಜಮೀನುಗಳ ಸಾಲಿಯಾನ ಕಂದಾಯದ ಐದರಷ್ಟಕ್ಕೆ ಮೀರದೆ ಇರುವ ಮೊಬಲಗನ್ನು ಸಾಲವಾಗಿ ಕೊಡಬಹುದು.

ಲ್ಯಾಂಡ್ ರೆವಿನ್ಯೂ ಕೋಡಿನ 194 ನೆ ಪ್ರಕರಣಾನುಸಾರ ಡೆಪ್ಯುಟಿ ಕಮಿಷನರವರು 100 ರೂಪಾಯಿಗೆ ಮೀರದೆ ಇರುವ ಸಾಲವನ್ನು ಎರಡು ವರ್ಷಗಳೊಳಗಾಗಿ ತೀರಿಸಬೇಕೆಂಬ ಷರತ್ತಿನ ಮೇಲೆ ಬೇಸಾಯಗಾರರ ಒಂದು ಮಂಡಲಿಗೆ ಅವರ ಜಂಟಿ ಜಾಮೀನಿನ ಮೇಲೆ ಮಂಜೂರ್ ಮಾಡಬಹುದು ; ಪರಂತು ಅರ್ಜೀದಾರರ ಜಮೀನುಗಳ ಸಾಲಿಯಾನಾ ಕಂದಾಯವು ಅವರು ಅಪೇಕ್ಷಿಸುವ ಸಾಲದಲ್ಲಿ $\frac{1}{5}$ ಭಾಗಕ್ಕಿಂತ ಕಡಮೆಯಾಗಿರಕೂಡದು ; ಮತ್ತು ವಿಶೇಷ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರವರು ಮೇಲ್ಕಂಡ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಇಂಥಾ ಸಾಲಗಳನ್ನು ಒಬ್ಬೊಬ್ಬ ಅರ್ಜೀದಾರನಿಗೂ ಆತನ ಖುದ್ ಜಾಮೀನಿನ ಮೇಲೆ ಮಂಜೂರ್ ಮಾಡಬಹುದು.

13. ಡೆಪ್ಯುಟಿ ಕಮಿಷನರಿಗಾಗಲೀ ಅಥವಾ ಸಾಲವನ್ನು ಮಂಜೂರ್ ಮಾಡುವ ಬೇರೊಬ್ಬ ಆಫಿಸರಿಗಾಗಲೀ ಸಾಲಪಡೆದುಕೊಂಡವರ್‍ಯಾರಾದರೂ ಯಾವ ಷರತ್ತುಗಳಿಗನುಸಾರವಾಗಿ ಸಾಲವನ್ನು ಕೊಡಲಾಯಿತೋ ಆ ಷರತ್ತುಗಳಲ್ಲಿ ಯಾವುದನ್ನಾದರೂ ನಡೆಸದೆ ತಪ್ಪಿದಂತೆ ಕಂಡುಬಂದರೆ ಅವರು ಅಂಥಾ ಮನುಷ್ಯನಿಂದಾಗಲೀ ಆತನ ಜಾಮೀರ್ನದಾರರುಗಳ ಪೈಕಿ ಯಾರೊಬ್ಬರಿಂದಾಗಲೀ ಅದುವರೆಗೆ ಬಾಕಿಯಲ್ಲಿರುವ ಮೊಬಲಗನ್ನೂ, ಅದರ ಮೇಲೆ ಬಡ್ಡಿಯು ಏನಾದರೂ ಬರಬೇಕಾಗಿದ್ದಲ್ಲಿ ಸದರೀ ಬಡ್ಡಿಯನ್ನೂ, ಇದಕ್ಕೆ ಖರ್ಚೇನಾದರೂ ತಗಲಿದರೆ ಅದನ್ನೂ ಜಮೀರ್ನ ಕಂದಾಯದ ಬಾಕಿಯ ಹಾಗೆ ತಕ್ಷಣವೇ ವಸೂಲ್ ಮಾಡಿಸಬಹುದು. ಅವರು ಹೀಗೆ ಹುಕುಂ ಮಾಡಿದ್ದಕ್ಕೆ ಕಾರಣಗಳನ್ನು ಬರಹ ಮೂಲಕವಾಗಿ ರೆಕಾರ್ಡು ಮಾಡಬೇಕು. ಪರಂತು ಅಂಥಾ ಆಫಿಸರು ತಮಗೆ ಸೂಕ್ತ ತೋರಿದ ಪಕ್ಷ ಸಾಲದ ಪೈಕಿ ಒಟ್ಟು ಬಾಕಿಗಿಂತ ಕಡಮೆಯಾದ ಯಾವುದಾದರೊಂದು ಮೊಬಲಗನ್ನು ವಸೂಲ್ ಮಾಡಬಹುದು ; ಹೀಗೆ ಮಾಡಿದ ಮಾತ್ರಕ್ಕೇನೇ ಬಾಕಿ ಮೊಬಲಗನ್ನು ಮುಂದೆ ಯಾವಾಗಲಾದರೂ ಅವರು ವಸೂಲುಮಾಡತಕ್ಕ ಅಧಿಕಾರಕ್ಕೆ ಯಾವ ಕುಂದುಕವೂ ಇರುವುದಿಲ್ಲ.

ಈ ನಿಬಂಧನೆಗನುಸಾರವಾಗಿ ಸದರೀ ಆಫಿಸರು ಕೊಡುವ ತೀರ್ಪನ್ನು ಯಾ ಹುಕುಮನ್ನು ರೆವಿನ್ಯೂ ಕಮಿಷನರವರು ಬದಲಾಯಿಸಬಹುದು. ರೆವಿನ್ಯೂ ಕಮಿಷನರವರ ಇಂತಹ ಹುಕುಮೇ ಆಖೈರಾಗಿರತಕ್ಕದ್ದು.

ಅರ್ಜಿಹಾಕಿಕೊಳ್ಳುವ ವಿಧಾನ.

14 ಸಾಲವನ್ನು ಅಪೇಕ್ಷಿಸತಕ್ಕವನು ಶೇಕದಾರೀಗೆ ಕಮ್ಮಿಯಾಗಿಲ್ಲದ ದರ್ಜೆಯ ಯಾರೊಬ್ಬ ರೆವಿನ್ಯೂ ಆಫಿಸರವರಲ್ಲಿಯಾಗಲೀ ರೂಬರೂಬ್ ಕೇಳಿಕೊಳ್ಳಬಹುದು. ಅಥವಾ ಬರಹಮೂಲಕ ಅರ್ಜಿಹಾಕಿಕೊಳ್ಳಬಹುದು. ಬರಹಮೂಲಕ ಅರ್ಜಿಹಾಕಿಕೊಂಡಪಕ್ಷದಲ್ಲಿ ಸದರೀ ಅರ್ಜಿಯನ್ನು ಇದಕ್ಕೆ ಲಗತ್ತಿಸಿರುವ 1 ನೆ ನಂಬರ್ ನಮೂನೆಯ ಮೇರೆಗೆ ಬರೆದಿರಬೇಕು. (ಸದರೀ ನಮೂನೆಯ ಅಚ್ಚಾದ ಪ್ರತಿಗಳನ್ನು ಎಲ್ಲಾ ತಾಲ್ಲೂಕು ಆಫೀಸುಗಳಲ್ಲಿಯೂ, ಶೇಕದಾರರು, ಶ್ಯಾನುಭೋಗರುಗಳ ಬಳಿಯಲ್ಲಿಯೂ ಉಚಿತವಾಗಿ ಪಡೆಯಬಹುದು.) ಸದರೀ ಅರ್ಜಿಯನ್ನು ರೂಬರೂಬ್ ಕೊಡಬಹುದು; ಅಥವಾ ಟಪ್ಪಾಲ್ ಮೂಲಕವಾಗಿಯಾಗಲೀ ಗ್ರಾಮದ ಪಟೇಲ ಯಾ ಶ್ಯಾನುಭೋಗರ ಮುಖಾಂತರವಾಗಿಯಾಗಲೀ ಕಳುಹಿಸಬಹುದು. ರೂಬರೂಬ್ ಅರ್ಜಿಮಾಡಿಕೊಂಡಲ್ಲಿ ಯಾವ ಆಫಿಸರ ಮುಂದೆ ಅರ್ಜಿ ಮಾಡಿಕೊಳ್ಳಲಾಯಿತೋ ಆ ಆಫಿಸರು ಸದರೀ ಅರ್ಜಿ ಮೇಲ್ಕಂಡ ನಮೂನೆಯಲ್ಲಿ ದಾಖಲ್‌ಮಾಡಿಸಿ ಅದಕ್ಕೆ ಅರ್ಜಿ ಮಾಡಿಕೊಂಡವನ ದಸ್ತ್‌ಖತ್ತನ್ನು ಹಾಕಿಸಬೇಕು. ಯಾವನೊಬ್ಬ ಅರ್ಜಿದಾರನಾಗಲೀ ಅರ್ಜಿ ಬರೆದುಕೊಡಬೇಕೆಂದು ಶ್ಯಾನುಭೋಗರನ್ನು ಕೇಳಿಕೊಂಡಲ್ಲಿ ಅವರು ಯಾವ ವಿಧವಾದ ರುಸುಮನ್ನೂ ತೆಗೆದುಕೊಳ್ಳದೆ ಅದನ್ನು ಬರೆದುಕೊಡಬೇಕು.

ಯಾವುದಾದರೊಂದು ಸಾಲಕ್ಕೆ ಜಮೀನನ್ನಾಗಲೀ ಇತರ ಸ್ಥಿರಸ್ವತ್ತನ್ನಾಗಲೀ ಆಧಾರ ಮಾಡುವುದಾಗಿ ಅರ್ಜಿಯಲ್ಲಿ ನಮೂದಿದ್ದರೆ ಸದರೀ ಅರ್ಜಿಯಲ್ಲಿ ಅರ್ಜಿದಾರನಾಗಲೀ ಅಥವಾ ಸಂದರ್ಭಾನುಸಾರ ಆತನ ಜಾಮೀನ್‌ದಾರನಾಗಲೀ ತನಗೆ ತಿಳಿದಿರುವ ಮಟ್ಟಿಗೆ ಆಧಾರವಾಗಿ ಕೊಡುವಂತೆ ನಮೂದಿಸಿರುವ ಸ್ವತ್ತಿನ ವಿಚಾರವಾಗಿ ಸದರಿ ಅರ್ಜಿಯಲ್ಲಿ ನಮೂದಿಸಿರುವುದೆಲ್ಲ ವಾಸ್ತವವೆಂಬುದಾಗಿಯೂ, ಸದರೀ ಸ್ವತ್ತಿನ ಮೇಲೆ ಇನ್ಯಾವುದೂ ಇತರ ಸಾಲಗಳಿಲ್ಲವೆಂಬುದಾಗಿಯೂ ನಮೂದಿಸಿ ದಸ್‌ಖತ್ ಹಾಕಬೇಕು. ಇದಲ್ಲದೆ 1 ನೆ ನಂಬರ್ ನಮೂನೆಯ "ಷರಾ" ಕಲಮಿನಲ್ಲಿ ಈ ಕಳಗೆ ಸೂಚಿಸುವ ಅಂಶಗಳನ್ನೂ ನಮೂದು ಮಾಡಬೇಕು:—

(i) ಅರ್ಜಿದಾರನು ತೆಗೆದುಕೊಳ್ಳುವ ಸಾಲದ ಜತೆಗೆ ಸ್ವಂತ ಬಂಡವಾಳವನ್ನೇನಾದರೂ ಉಪಯೋಗಿಸಿಕೊಳ್ಳುತ್ತಾನೆಯೋ ? ಹಾಗೆ ಉಪಯೋಗಿಸಿಕೊಳ್ಳುವ ಪಕ್ಷ ಎಷ್ಟರ ಮಟ್ಟಿಗೆ ?

(ii) ನಡೆಸಬೇಕಾಗಿರುವ ಕಾಮಗಾರಿಗೆ ತಗಲಬಹುದೆಂದು ಅಂದಾಜಾಗಿರುವ ಒಟ್ಟು ಖರ್ಚು ಎಷ್ಟು ? ಅದನ್ನು ಕಟ್ಟಿಸಬೇಕಾದರೆ ಸುಮಾರು ಎಷ್ಟುಕಾಲ ಹಿಡಿಯಬಹುದು ?

(iii) ಸದರೀ ಕಾಮುಗಾರಿಯಿಂದ ಯಾವ ಯಾವ ಪ್ರಯೋಜನಗಳು ಉಂಟಾಗ ಬಹುದು ?

(iv) ಸದರೀ ಕಾಮುಗಾರಿಯಿಂದ ಬಾಜೂದಲ್ಲಿರುವ ಯಾ ಇತರ ಜಮೀನು ಗಳಿಗೆ ಯಾವ ರೀತಿಯಲ್ಲಿ ಎಷ್ಟರಮಟ್ಟಿಗೆ ಪ್ರಯೋಜನವಾಗಬಹುದು ಯಾ ನಷ್ಟವಾಗಬಹುದು ?

ಮೇಲ್ಕಂಡ ಅಂಶಗಳು ಅರ್ಜಿಯಲ್ಲಿ ನಮೂದಿಲ್ಲದೆ ಹೋದಪಕ್ಷ ಅರ್ಜಿಯನ್ನು ತೆಗೆದುಕೊಳ್ಳುವ ಆಫಿಸರವರು ಅರ್ಜೀದಾರನನ್ನು ವಿಚಾರಿಸುವುದರ ಮೂಲಕವಾಗಿ ಯಾಗಲೀ ಬೇರೆ ವಿಧವಾಗಿಯಾಗಲೀ ಸದರೀ ಅಂಶಗಳನ್ನು ತಿಳಿದುಕೊಂಡು ಅವುಗಳ ನ್ನು ಸದರೀ ಅರ್ಜಿಯ ಮೇಲೆ ಅಥವಾ ಅದಕ್ಕೆ ಲಗತ್ತಿಸುವ ಒಂದು ಕಾಗದದಲ್ಲಿ ದಾಖಲ್ ಮಾಡಬೇಕು; ಅಲ್ಲದೆ ಅವುಗಳನ್ನು ಅರ್ಜೀದಾರನಿಗೆ ಓದಿಹೇಳಿ ಎಲ್ಲವೂ ಸರಿಯಾಗಿರುವುದೆಂಬ ಬಗ್ಗೆ ಆತನ ದಸ್ತ್‌ಖತ್ತನ್ನು ಪಡೆಯಬೇಕು.

15. ಸ್ಥಳೀಯ ವಿಚಾರಣೆ ಇಲ್ಲದೆ ಯಾವ ಸಾಲವನ್ನಾಗಲೀ ಮಂಜೂರ್ ಮಾಡಕೂಡದು. 500 ರೂಪಾಯಿಗಳಿಗಿಂತ ಜಾಸ್ತಿ ಮೊಬಲಗಿನ ಬಗ್ಗೆ ಅರ್ಜಿ ಬಂದಾಗ ಅಮಲ್ದಾರರ ಯಾ ಡೆಪ್ಯುಟಿ ಅಮಲ್ದಾರರ ದರ್ಜೆಗಿಂತ ಕಮ್ಮಿ ದರ್ಜೆಯವರಲ್ಲದ ಆಫಿಸರು ಸ್ಥಳೀಯ ವಿಚಾರಣೆಯನ್ನು ನಡೆಸಬೇಕು. ಒಂದು ಅರ್ಜಿಯು ತಮಗೆ ತಲ ಪಿದನಂತರ ಅಥವಾ ಒಂದು ಅರ್ಜಿಯು ತಮ್ಮ ಹುಕುಂ ಬಗ್ಗೆ ಕಳುಹಿಸಲ್ಪಟ್ಟನಂತರ ಶೇಕದಾರರಾಗಲೀ ಅಥವಾ ಅವರ ಮೇಲ್ಪಟ್ಟ ಆಫಿಸರರಾಗಲೀ ಸದರೀ ಅರ್ಜಿಯ ವಿಷಯವಾಗಿ ವಿಚಾರಣೆ ನಡೆಸುವುದಾಗಿಯೂ, ಸದರೀ ಸಾಲವನ್ನು ಮಂಜೂರ್ ಮಾಡು ವ ವಿಚಾರದಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ತಿಳಿಸಿದರೆ ಆ ವಿಷಯ ವಾಗಿ ವಿಚಾರಣೆ ನಡಿಸುವುದಾಗಿಯೂ ಸದರೀ ಗ್ರಾಮದಲ್ಲಿ ದಂಡೋರೆಯ ಮೂಲಕ ಪ್ರಸಿದ್ಧಪಡಿಸತಕ್ಕದ್ದು. ಈ ರೀತಿ ಪ್ರಸಿದ್ಧಪಡಿಸಿದ ನಂತರ ಸಾಧ್ಯವಾದಷ್ಟು ಜಾಗ್ರತೆ ಯಾಗಿ ಸದರೀ ಆಫಿಸರವರು ಜಮೀನು ಯಾವುದಾದರೂ ಇದ್ದರೆ ಅದನ್ನು ಅಜಮಾ ಯಿಷಿ ಮಾಡಿ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳೆಲ್ಲವೂ ವಾಸ್ತವವಾದುವುಗಳೇ ಎಂಬ ವಿಚಾರದಲ್ಲಿ ಸದರೀ ಗ್ರಾಮದಲ್ಲಿ ಫೂಟ್ ವಿಚಾರಣೆ ನಡೆಸತಕ್ಕದ್ದು.

16. ಅರ್ಜೀದಾರನು ಖುದ್ದಾಗಿ ಹಾಜರಾಗಬೇಕಾದುದು ಅವಶ್ಯಕವಿಲ್ಲ; ಆದರೆ ಯಾವ ಸಮಯದಲ್ಲಾಗಲೀ ಆತನ ಇಷ್ಟಾನುಸಾರ ಖುದ್ದಾಗಿ ಯಾ ಅಧಿಕಾರ ಹೊಂದಿದ ಮುತಾಲೀಕನ ಮೂಲಕ ಆತನು ಹಾಜರಾಗಬೇಕೆಂದು ಇದಕ್ಕೆ ಲಗತ್ತಿಸಿ ರುವ 4 ನೆ ನಂಬರ್ ನಮೂನೆಯ ಮೂಲಕ ಅಥವಾ ಅದೇ ತರಹೆಯ ಬೇರೆ ನಮೂನೆ ಯಲ್ಲಿ ಆತನಿಗೆ ನೋಟಿಸ್ ಜಾರೀ ಮಾಡಬಹುದು; ಅಲ್ಲದೆ ಅದರಂತೆ ಆತನು ಹಾಜ ರಾಗಲು ತಪ್ಪಿದಪಕ್ಷ ಅರ್ಜಿಯನ್ನು ತಿರಸ್ಕರಿಸಬಹುದು.

17. ಅರ್ಜೀದಾರನು ವಾಜಬಿಯಾಗಿ ಜಮೀನ್ ಆಬಾದಿಗಾಗಿಯೇ ಸಾಲವನ್ನು ಕೇಳುತ್ತಾನೆಯೇ ಎಂಬುದನ್ನೂ, ಆತನು ದಸವತ್ತು ಆಸಾಮಿಯೇ ಅಲ್ಲವೇ ಎಂಬುದ

ನ್ನೂ, ಆತನು ಕೊಡುವುದಾಗಿ ತಿಳಿಸಿರುವ ಆಧಾರವು ಸಾಕೇ ಅಲ್ಲವೇ ಎಂಬುದನ್ನೂ ತಿಳಿದುಕೊಳ್ಳುವ ವಿಚಾರದಲ್ಲಿ ವಿಶೇಷವಾಗಿ ಗಮನ ಕೊಡಬೇಕು. ಆಧಾರವಾಗಿ ಕೊಡುವಂತೆ ಹೇಳುವ ಜಮೀನುಗಳು ಅರ್ಜೀದಾರನ ಸ್ವಂತ ಜಮೀನುಗಳೇ ಅಲ್ಲವೇ ಎಂಬುದನ್ನೂ, ಸದರೀ ಜಮೀನು ಬೇರೆ ವಿಧವಾಗಿ ಅಡಮಾನವಾಗಿಲ್ಲವೆಂಬುದನ್ನೂ, ಅದರ ಮೇಲೆ ಕಂದಾಯದ ಬಾಕಿಯು ಯಾವುದೂ ಇಲ್ಲವೆಂಬುದನ್ನೂ, ಇದಕ್ಕೆ ಮುಂಚೆಯೇ ಪಡೆದುಕೊಂಡಿದ್ದ ಯಾವುದೋ ಒಂದು ಸಾಲಕ್ಕಾಗಿ ಸದರೀ ಜಮೀನು ಸರ್ಕಾರಕ್ಕೆ ಆ ಮುಂಚೆಯೇ ಅಡಮಾನವಾಗಿಲ್ಲವೆಂಬುದನ್ನು ದೃಢಪಡಿಸಿಕೊಳ್ಳತಕ್ಕ ಬಗ್ಗೆ ಜಮೀನಿನಲ್ಲಿ ಅರ್ಜೀದಾರನಿಗೆ ಎಷ್ಟರಮಟ್ಟಿಗೆ ಹಕ್ಕು ಇದೆ ಎಂಬ ವಿಷಯ ವನ್ನೂ ತುಂಬಾ ಎಚ್ಚರಿಕೆಯೊಡನೆ ವಿಚಾರ ಮಾಡಬೇಕು. ಜಾಮೀನ್ದಾರರು ಆಧಾರ ವಾಗಿ ಕೊಡುವಂತೆ ತಿಳಿಸುವ ಜಮೀನುಗಳ ವಿಷಯದಲ್ಲಿಯೂ ಇದೇ ವಿಧವಾದ ವಿಚಾರಣೆಯನ್ನು ನಡೆಸಬೇಕು; ಅಲ್ಲದೆ ಜಾಮೀನ್ದಾರನು ಸದರೀ ಜಮೀನಿನ ಪಟ್ಟೇದಾರನಾಗಿರುವುದು ಮಾತ್ರವೇ ಅಲ್ಲ; ಜಮೀನು ಆತನ ಸ್ವಂತಕ್ಕೆ ಸೇರಿದೆ— ಎಂಬ ವಿಚಾರದಲ್ಲಿಯೂ, ಒಂದುವೇಳೆ ಸದರಿ ಜಮೀನಿನಲ್ಲಿ ಇತರ ಹಕ್ಕುದಾರರೊಂದಿಗೆ ಆತನಿಗೂ ಒಂದು ಭಾಗದ ಹಕ್ಕು ಮಾತ್ರವೇ ಇದ್ದಪಕ್ಷ ಜಂಟಿ ಜಮೀನ್ದಾರರ ಬರಹಮೂಲಕವಾದ ಸಮ್ಮತಿ ಇಲ್ಲದೆ ತನ್ನ ಸ್ವಂತ ಹಕ್ಕಿಗಿಂತ ಜಾಸ್ತಿಯಾದ ಭಾಗವನ್ನು ಆಧಾರ ಮಾಡಿಲ್ಲವೆಂಬ ವಿಚಾರದಲ್ಲಿಯೂ ಸರಿಯಾಗಿ ವಿಚಾರಿಸಬೇಕು. ಜಮೀನನ್ನಾಗಲೀ ಅಥವಾ ಇತರ ಸ್ಥಿರಸ್ವತ್ತನ್ನಾಗಲೀ ಜಮೀನ್ ಆಬಾದಿಗಾಗಿ ಕೊಡ ತಕ್ಕ ಸಾಲಗಳಿಗೆ ಸಂಬಂಧಪಟ್ಟ ಕಾನೂನಿನ ಮೇರೆಗೆ ಸಾಲಪಡೆಯುವ ಬಗ್ಗೆ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 194 ನೆ ಪ್ರಕರಣಕ್ಕನುಸಾರವಾಗಿ ಸಾಲ ಪಡೆಯುವ ಬಗ್ಗೆ ಜಾಮೀನ್ ಕೊಡುವುದಾಗಿ ತಿಳಿಸಿದಾಗ, ಡೆಪ್ಯುಟಿ ಕಮಿಷನರಾಗಲೀ ಅಥವಾ ಸದರೀ ಸಾಲವನ್ನು ಕೊಡಲು ಅಧಿಕಾರವುಳ್ಳ ಇತರ ಆಫೀಸರಾಗಲೀ ತಮಗೆ ಅಗತ್ಯ ಯಾ ಸೂಕ್ತ ಕಂಡುಬಂದರೆ ಕಾರಣಗಳನ್ನು ಬರಹ ಮೂಲಕ ರಿಕಾರ್ಡ್ ಮಾಡಿ ಇದಕ್ಕೆ ಲಗತ್ತಿಸಿರುವ 7 ನೆ ನಂಬರ್ ನಮೂನೆಯಲ್ಲಿ ಯಾ ಅದೇ ತರಹೆಯ ಇತರ ನಮೂನೆಯಲ್ಲಿ ಯಾರ ಸ್ವತ್ತನ್ನು ಜಾಮೀನಾಗಿ ಕೊಡಲು ಒಪ್ಪಿಗೆಯಾಗಿದೆಯೋ ಅಂತಹ ಸ್ವತ್ತಿನ ವಿಚಾರವಾಗಿ ಅದು ಪರಾಧೀನವಾಗಿದೆಯೋ ಇಲ್ಲವೇ ಎಂಬ ಬಗ್ಗೆ ಸರ್ಟಿಫಿಕೇಟ್ ಪಡೆಯುವುದಕ್ಕೋಸ್ಕರ ರಿಜಿಸ್ಟ್ರೇಷನ್ ಇಲಾಖೆಗೆ ಬರೆಸಬಹುದು. ಹಾಗಿಲ್ಲದೆ, ಆಬಾದುಮಾಡತಕ್ಕ ಜಮೀನೇ ಜಾಮೀನಾಗಿ ಅಂಗೀಕರಿಸಲ್ಪಟ್ಟ ಸಂದರ್ಭಗಳಲ್ಲೆಲ್ಲಾ ಹಾಗೆ ಬರೆಸಬೇಕಾದುದಿಲ್ಲ. ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ದಾಖಲೆಗಳನ್ನು ಹುಡುಕಬೇಕಾದರೆ ಸಾಲಕ್ಕಾಗಿ ದರಖಾಸ್ತು ಬಂದ ತಾರೀಖಿನ ಹಿಂದೆ 12 ವರ್ಷಗಳ ದಾಖಲೆಗಳಲ್ಲಿ ಮಾತ್ರ ಹುಡುಕಬೇಕು.

18. ಸ್ಥಳೀಯ ವಿಚಾರಣೆ ನಡೆಸುವುದರಲ್ಲಿ ಸಹಾಯ ಮಾಡುವುದಕ್ಕಾಗಿ ಸಾಧ್ಯವಾಗುವ ಕಡೆಗಳಲ್ಲೆಲ್ಲಾ ಸರ್ಕಾರಿ ಉದ್ಯೋಗಸ್ಥರಲ್ಲದಿರುವ ಖಾಸಗೀ ಜನ ರನ್ನೂ ನಿಯಮಿಸಿಕೊಳ್ಳಬಹುದು.

19. ಸಾಲಕ್ಕಾಗಿ ಬಂದ ಅರ್ಜಿಯ ವಿಚಾರವಾಗಿ ಸ್ಥಳೀಯ ವಿಚಾರಣೆಯನ್ನು ನಡೆಸುವ ಆಫಿಸರು ತಾವು ನಡೆಸಿದ ವಿಚಾರಣೆಯ ಫಲಿತಾಂಶವನ್ನೂ, ತಮ್ಮ ರೂಬರೂಬ್ ಬಂದ ಆಕ್ಷೇಪಣೆಗಳನ್ನು ಒಪ್ಪಿಕೊಂಡ ಬಗ್ಗೂ ಅಥವಾ ತಿರಸ್ಕರಿಸಿದ ಬಗ್ಗೂ ಇದಕ್ಕೆ ಲಗತ್ತಿಸಿರುವ 6 ನೆ ನಂಬರ್ ನಮೂನೆಯಲ್ಲಿ ಅಥವಾ ಅದಕ್ಕೆ ಸಮನಾದ ಬೇರೊಂದು ನಮೂನೆಯಲ್ಲಿ ರಿಕಾರ್ಡು ಮಾಡಬೇಕು; ಅಲ್ಲದೆ ಸದರೀ ಆಫೀಸರಿಗೆ ಸದರೀ ಅರ್ಜಿಯನ್ನು ತಾವೇ ವ್ಯವಸ್ಥೆಮಾಡಲು ಅಧಿಕಾರವಿಲ್ಲದಿದ್ದರೆ ಹಾಗೆ ವ್ಯವಸ್ಥೆ ಮಾಡಲು ಅಧಿಕಾರವಿರುವ ಆಫಿಸರಿಗೆ ಮೇಲ್ಕಂಡ ನಮೂನೆಯಲ್ಲಿ ಒಂದು ರಿಪೋರ್ಟನ್ನು ಜಾಹಿರ್ ಮಾಡಬೇಕು.

20. ಭೋಗ್ಯದಾರರುಗಳು ಭೋಗ್ಯದ ಸ್ವತ್ತಿನ ಸ್ವಾಧೀನವನ್ನು ಪಡೆದಿದ್ದರೂ ಕೂಡ ಅಂಥಾವರು ಜಮೀನಿನ ಆಬಾದಿಗಾಗಿ ಸಾಲಗಳನ್ನು ಕೊಡಿಸಬೇಕೆಂದು ಅರ್ಜಿಗಳನ್ನು ಹಾಕಿಕೊಂಡಲ್ಲಿ ಅವರ ಕೋರಿಕೆ ಪ್ರಕಾರ ಸಾಲಕೊಡಕೂಡದು.

21. ಜಮೀನಿನ ಆಬಾದಿಗಾಗಿ ಅರ್ಜಿ ಹಾಕಿಕೊಂಡಿರತಕ್ಕವನು ಗೇಣಿದಾರನಾಗಿದ್ದು ಆಬಾದಾಗಬೇಕಾದ ಜಮೀನಿನಲ್ಲಿ ಅದನ್ನು ವರ್ಗ ಪಡಿಸಲು ಹಕ್ಕು ತನಗೆ ಇರುವುದೆಂತಲೂ, ಸದರೀ ಸಾಲಕ್ಕೆ ತನ್ನ ಹಕ್ಕನ್ನು ಅಥವಾ ಬೇರೊಂದು ಯೋಗ್ಯವಾದ ಸ್ವತ್ತನ್ನು ಆಧಾರ ಮಾಡುವುದಾಗಿಯೂ ತಿಳಿಸಿದಲ್ಲಿ ಡೆಪ್ಯುಟಿ ಕಮಿಷನರವರು ಅಥವಾ ಸಾಲವನ್ನು ಮಂಜೂರ್ಮಾಡುವ ಬೇರೊಬ್ಬ ಆಫಿಸರು ಅರ್ಜಿಯು ಬಂದಿರುವ ವಿಚಾರವಾಗಿ ಇದಕ್ಕೆ ಲಗತ್ತಿಸಿರುವ 3 ನೆ ನಂಬರ್ ನಮೂನೆಯಲ್ಲಿ ಯಾ ಅದಕ್ಕೆ ಸಮನಾದ ಬೇರೆ ನಮೂನೆಯಲ್ಲಿ ಜಮೀರ್ದಾರನಿಗೆ ಪ್ರತ್ಯೇಕವಾದ ಒಂದು ನೋಟಿಸನ್ನು ಜಾರೀಮಾಡಬೇಕು; ಹಾಗೆ ಖುದ್ದು ಜಾರಿ ಮಾಡುವುದು ಸಾಧ್ಯವಾಗದೆ ಹೋದಪಕ್ಷ ಸದರೀ ನೋಟೀಸನ್ನು ಆತನ ಹೆಸರಿಗೆ ಟಪಾಲ್ ಮೂಲಕ ಕಳುಹಿಸಬೇಕು; ಅಲ್ಲದೆ ಅದರ ನಕಲನ್ನು ಆತನ ಸಾಮಾನ್ಯ ವಾಸಸ್ಥಾನದಲ್ಲಿ ಎಲ್ಲರಿಗೂ ಕಾಣಬರುವ ಸ್ಥಳದಲ್ಲಿಯೂ ಡೆಪ್ಯುಟಿ ಕಮಿಷನರವರ ಯಾ ಹಿಂದೆ ಹೇಳಿದ ಬೇರೆಆಫೀಸರವರ ಕಚೇರಿಯಲ್ಲಿ ಎಲ್ಲರಿಗೂ ಕಾಣಬರುವ ಸ್ಥಳದಲ್ಲಿಯೂ ಚಿಕಟಾಯಿಸಬೇಕು; ಅಥವಾ ಆತನು ಯಾವ ಡಿಸ್ಟ್ರಿಕ್ಟಿನಲ್ಲಿ ಅರ್ಜಿ ಹಾಕಿಕೊಳ್ಳುತ್ತಾನೆಯೋ ಆ ಡಿಸ್ಟ್ರಿಕ್ಟಿನಲ್ಲಿ ವಾಸಿಸದೆ ಇದ್ದಲ್ಲಿ ಅಥವಾ ಆತನ ವಾಸಸ್ಥಾನವು ಗೊತ್ತಿಲ್ಲದೆ ಹೋದಲ್ಲಿ ಸದರೀ ನೋಟೀಸನ್ನು ಮೇಲ್ಕಂಡ ಜಮೀನಿನ ವಿಷಯದಲ್ಲಿ ಆತನಿಗೆ ಸ್ಥಳೀಯ ಮುತಾಲೀಕನಾಗಿರುವ ಮನುಷ್ಯನ ಮೇಲೆ ಜಾರಿ ಮಾಡಬೇಕು. ಅಲ್ಲದೆ ಸದರೀನೋಟೀಸಿನ ನಕಲನ್ನು ಜಮೀನಿನಮೇಲೆಯೂ, ಗ್ರಾಮಚಾವಡಿಯಲ್ಲಿಯೂ ಚಿಕಟಾಯಿಸಬೇಕು.

22. ಸದರೀ ನೋಟೀಸು ಜಾರಿಯಾಗಿರುತ್ತದೆಂದು ಜಮೀರ್ದಾರನಾಗಲೀ ಆತನ ಮುತಾಲೀಕನಾಗಲೀ ಒಪ್ಪಿಕೊಂಡರೆಹೊರ್ತು ಅಥವಾ ಮೇಲೆಹೇಳಿದ ಯಾವದಾದರೊಂದು ರೀತಿಯಲ್ಲಿ ಕ್ರಮವಾಗಿ ನೋಟೀಸು ಜಾರಿಯಾಗಿರುತ್ತದೆಂದು ಡೆಪ್ಯುಟಿ ಕಮಿಷನರವರಿಗೆ ಯಾ ಸಾಲವನ್ನು ಮಂಜೂರ್ಮಾಡುವ ಇತರ ಆಫಿಸರರಿಗೆ ತೃಪ್ತಿಕರವಾಗಿ ಕಂಡುಬಂದರೆ ಹೊರ್ತು ಸದರೀ ನೋಟೀಸು ಜಾರಿಯಾಗಿರುತ್ತದೆಂದು

ಭಾವಿಸಕೂಡದು. ಜಮೀನು ಒಬ್ಬ ಮನುಷ್ಯನಿಗಿಂತ ಹೆಚ್ಚು ಜನರಿಗೆ ಸೇರಿದ್ದು ಆ ಪೈಕಿ ಯಾವನೊಬ್ಬ ಹಿಸ್ಸೆದಾರನಾಗಲೀ ಯಾ ಬೇರೊಬ್ಬ ಮನುಷ್ಯನಾಗಲೀ ಹಿಸ್ಸೆದಾರರ ಪರವಾಗಿ ಕಾರ್ಯನಿರ್ವಾಹಕನಾಗಿದ್ದಲ್ಲಿ ಅಂಥಾ ಕಾರ್ಯನಿರ್ವಾಹಕನ ಮೇಲೆ ನೋಟೀಸು ಜಾರಿ ಮಾಡಿದಲ್ಲಿ ಪ್ರತಿಯೊಬ್ಬ ಹಿಸ್ಸೆದಾರನಮೇಲೆಯೂ ಜಾರಿಯಾದಂತೆ ಭಾವಿಸಬೇಕು.

೨೩. ಇಂಥಾ ಪ್ರತಿ ನೋಟೀಸಿನಲ್ಲಿಯೂ ಸಾಲವಾಗಿ ಅಪೇಕ್ಷಿಸಿರುವ ಮೊಬಲಗು ಇಷ್ಟೆಂಬುದನ್ನೂ, ಮಾಡಬೇಕಾದ ಆಬಾದಿನ ತರಹೆಯು ಇಂಥಾದ್ದೆಂಬುದನ್ನೂ, ಸಾಲಕ್ಕೆ ಆಧಾರಮಾಡುವ ಅಡಮಾನವು ಇಂಥಾದ್ದೆಂಬುದನ್ನೂ ಸ್ಪಷ್ಟಪಡಿಸಬೇಕಲ್ಲದೆ ಸಾಲವನ್ನು ಮಂಜೂರ್ಮಾಡುವ ವಿಚಾರವಾಗಿ ಜಮೀನ್ ಹಿಡುವಳೀದಾರನು ಆಕ್ಷೇಪಣೆಗಳನ್ನೇನಾದರೂ ತರುವ ಇಷ್ಟವಿದ್ದಲ್ಲಿ ನೋಟೀಸ್ ಜಾರಿಯಾದ ಒಂದು ತಿಂಗಳೊಳಗಾಗಿ ಡೆಪ್ಯುಟಿ ಕಮಿಷನರವರಲ್ಲಿಗೆ ಯಾ ಸಾಲವನ್ನು ಮಂಜೂರ್ಮಾಡುವ ಇತರ ಆಫೀಸರವರಲ್ಲಿಗೆ ಸದರೀ ಆಕ್ಷೇಪಣೆಗಳನ್ನು ಬರಹಮೂಲಕವಾಗಿ ತಿಳಿಯಪಡಿಸಬೇಕು.

ಜಮೀನ್ ಹಿಡುವಳೀದಾರನಾಗಲೀ, ಆತನ ಸ್ಥಳೀಯ ಮುತಾಲೀಕನಾಗಲೀ, ಕಾರ್ಯನಿರ್ವಾಹಕನಾಗಲೀ ಆಕ್ಷೇಪಣೆಗಳನ್ನು ತಿಳಿಸದೆಹೋದಲ್ಲಿ ಅಥವಾ ಡೆಪ್ಯುಟಿ ಕಮಿಷನರವರು ಯಾ ಸಾಲವನ್ನು ಮಂಜೂರ್ಮಾಡುವ ಇತರ ಆಫೀಸರರು ಸದರೀ ಆಕ್ಷೇಪಣೆಗಳನ್ನು ಪರ್ಯಾಲೋಚಿಸಿದನಂತರ ಅರ್ಜಿದಾರನು ತನ್ನ ಅರ್ಜಿಯಲ್ಲಿ ನಮೂದಿಸುವ ಜಮೀನನ್ನು ವರ್ಗಪಡಿಸುವ ಹಕ್ಕು ಆತನಿಗೆ ಉಂಟೆಂತಲೂ, ಆತನ ಹಕ್ಕಿನ ಜಮೀನಿನ ಬೆಲೆಯೊಂದೇ ಆಗಲಿ ಅಥವಾ ಅದರ ಜೊತೆಗೆ ಆತನು ಆಧಾರವಾಗಿ ಕೊಟ್ಟಿರುವ ಇತರ ಸ್ವತ್ತುಗಳ ಬೆಲೆಯೇ ಆಗಲಿ ಸಾಲಕ್ಕೆ ಸಾಕಾದಷ್ಟಾಗಿದ್ದರೆ ಸದರೀ ಆಫೀಸರು ಸಾಲವನ್ನು ಮಂಜೂರ್ಮಾಡಬಹುದು; ಅಥವಾ ಅರ್ಜಿಯನ್ನು ಫೈಸಲ್ಮಾಡಲು ಅಧಿಕಾರವುಳ್ಳ ಮೇಲ್ಪಟ್ಟ ಆಫೀಸರಲ್ಲಿಗೆ ಮಂಜೂರಿಬಗ್ಗೆ ರಿಕಾರ್ಡೆಲ್ಲವನ್ನೂ ಕಳುಹಿಸಿಕೊಡಬಹುದು.

ಅರ್ಜಿದಾರನಿಗೆ ಜಮೀನನ್ನು ವರ್ಗಪಡಿಸುವ ಹಕ್ಕು ಇಲ್ಲದೆಹೋದಲ್ಲಿ ಮತ್ತು ಆಬಾದನ್ನು ಮಾಡಿಸುವ ಹಕ್ಕನ್ನು ಗೇಣೀದಾರನು ಹೊಂದಬೇಕೇ ಜಮೀನ್ ಹಿಡುವಳೀದಾರನು ಹೊಂದಬೇಕೇ ಎಂಬ ವಿಚಾರವಾಗಿ ಅವರಲ್ಲಿ ಒಪ್ಪಂದವೇನೂ ಇಲ್ಲದೆಹೋದಲ್ಲಿ ಸಾಲವನ್ನು ಮಂಜೂರ್ಮಾಡಬಹುದೆಂದು ಜಮೀನ್ ಹಿಡುವಳೀದಾರನು ಒಪ್ಪಿದರೆ ಹೊರತು ಸಾಲವನ್ನು ಮಂಜೂರ್ಮಾಡುವುದಿಲ್ಲವೆಂದು ತಿರಸ್ಕರಿಸಬೇಕು.

24. ಕಾಮಗಾರಿಯನ್ನು ನಡೆಸಬೇಕಾದರೆ ಇಂಜಿನಿಯರ್ ಮುಂತಾದವರ ಬುದ್ಧಿಕುಶಲತೆಯನ್ನು ಉಪಯೋಗಿಸುವುದು ಅವಶ್ಯಕವಿರುವ ಸಂದರ್ಭದಲ್ಲಿ ಅರ್ಜಿದಾರನು ಸ್ಥಳೀಯ ವಿಚಾರಣೆಯನ್ನು ನಡೆಸುವ ಆಫೀಸರವರಲ್ಲಿಗೆ ಸದರೀ ಕಾಮಗಾರಿಯ ಯಥಾರ್ಥವಾದ ಒಂದು ನಕ್ಷೆಯನ್ನೂ, ವಿವರವನ್ನೂ, ಅಂದಾಜನ್ನೂ ಹಾಜರ್ಮಾಡಿಕೊಳ್ಳಬೇಕೆಂದು ಅಪೇಕ್ಷಿಸಬಹುದು. ಅಂಥಾ ನಕ್ಷೆ, ಅಂದಾಜು ಯಾ ವಿವರವನ್ನು ಅರ್ಜಿದಾ

ರನು ಹಾಜರ್ಪಡಿಸಲಾರದೆ ಹೋದಲ್ಲಿ ಡೆಪ್ಯುಟಿ ಕಮಿಷನರವರು ಅವುಗಳನ್ನು ತಯಾರ್ಮಾಡುವುದಕ್ಕೆ ಸಾಕಾಗುವಷ್ಟು ಮೊಬಲಗನ್ನು ಅರ್ಜಿದಾರನು ಠೇವಣಾತಿ ಇಡಬೇಕೆಂತಲಾಗಲೀ ಅಥವಾ ಅವರಿಗೆ ಸೂಕ್ತತೋರುವಪಕ್ಷ ಸದರೀ ಮೊಬಲಗನ್ನು ಪಾವತಿ ಮಾಡುವ ಬಗ್ಗೆ ಜಾಮೀನ್ ಕೊಡಬೇಕೆಂತಲಾಗಲೀ ನಿರ್ಬಂಧಪಡಿಸಿದನಂತರ ಅರ್ಜೀದಾರನಪರವಾಗಿ ತಾವೇ ಅವುಗಳನ್ನು ತಯಾರ್ಮಾಡಿಸಬಹುದು. ವಿಶೇಷ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಸೂಕ್ತ ತೋರುವಪಕ್ಷ ಸದರೀ ಮೊಬಲಗನ್ನು ಮಾಫ್ ಮಾಡಬಹುದು.

25 ಮಂಜೂರ್ ಮಾಡಬೇಕಾಗಿರುವ ಸಾಲವು 500 ರೂಪಾಯಿಗಳಿಗೆ ಮೀರಿದರೆ ನಡೆಸಬೇಕಾಗಿರುವ ಕಾಮಗಾರಿಯು ಸಾಧ್ಯವೇ ಎಂಬ ವಿಷಯದಲ್ಲಿಯೂ, ಅದಕ್ಕಾಗಿ ತಗಲುವ ಸುಮಾರು ಖರ್ಚಿನ ವಿಷಯದಲ್ಲಿಯೂ, ಸಾಮಾನ್ಯವಾದ ಇತರ ವಿವರಗಳ ವಿಷಯದಲ್ಲಿಯೂ ಡೆಪ್ಯುಟಿ ಕಮಿಷನರವರು ಎಗ್ಜಿಕ್ಯೂಟಿವ್ ಇಂಜಿನಿಯರವರ ಅಭಿಪ್ರಾಯವನ್ನು ಪಡೆಯಬೇಕು. ಬೇರೆ ಸಂದರ್ಭದಲ್ಲಿಯೂ ಕೂಡ ಅವಶ್ಯವಿದ್ದರೆ ಅರ್ಜಿಯನ್ನು ವ್ಯವಸ್ಥೆ ಮಾಡುವ ಆಫೀಸರವರು ಮೇಲ್ಕಂಡಂತೆ ಇಂಜಿನಿಯರವರ ಅಭಿಪ್ರಾಯವನ್ನು ಪಡೆಯಲು ಅಧಿಕಾರವುಳ್ಳವರಾಗಿರತಕ್ಕದ್ದು.

ಸಾಲದ ಮಂಜೂರೀ ಬಗ್ಗೆ ಹುಕುಂ.

26. ಸ್ಥಳೀಯ ವಿಚಾರಣೆಯನ್ನೂ, ಅವಶ್ಯಕವೆಂದು ತೋರುವ ಇತರ ತನಿಖೆಯನ್ನೂ ನಡಿಸಿದ ನಂತರ ಸದರೀ ಸಾಲವನ್ನು ಮಂಜೂರ್ಮಾಡಬಹುದೆಂದು ಡೆಪ್ಯುಟಿ ಕಮಿಷನರಾಗಲೀ, ಸಾಲವನ್ನು ಮಂಜೂರ್ ಮಾಡುವ ಇತರ ಆಫಿಸರಾಗಲೀ ಅಭಿಪ್ರಾಯಪಟ್ಟಲ್ಲಿ ಎಷ್ಟು ಮೊಬಲಗು ಬೇಕೆಂದು ಕೇಳಿರುತ್ತದೆಯೋ ಅಷ್ಟು ಮೊಬಲಗನ್ನಾಗಲಿ, ಅದಕ್ಕಿಂತ ಕಮ್ಮಿ ಮೊಬಲಗನ್ನಾಗಲಿ ಸಾಲ ಕೊಡಬಹುದೆಂದು ರಿಕಾರ್ಡುಮಾಡಿ ಸದರಿ ಸಾಲವನ್ನು ಮಂಜೂರ್ಮಾಡಿದ ಬಗ್ಗೆ ಕೂಡಲೇ ಹುಕುಂ ಕೊಡಬೇಕು. ಸಾಲವು 1,000 ರೂಪಾಯಿಗೆ ಮೀರಿದ್ದರೆ, ಡೆಪ್ಯುಟಿ ಕಮಿಷನರವರು 2 ನೆ ನಿಬಂಧನೆಯ ಮೇರೆಗೆ ಆಯಾ ಸಂದರ್ಭಾನುಸಾರ ರೆವಿನ್ಯೂ ಕಮಿಷನರವರ ಅಥವಾ ಸರ್ಕಾರದವರ ಮಂಜೂರ್ ಹುಕುಮನ್ನು ಪಡೆದು ಸಾಲವನ್ನು ಮಂಜೂರ್ಮಾಡಬಹುದು.

27. ಸಾಲವನ್ನು ಮಂಜೂರ್ಮಾಡುವ ಹುಕುಮು ಇದಕ್ಕೆ ಲಗತ್ತಿಸಿರುವ 8 ನೆ ನಂಬರ್ ನಮೂನೆಯಂತೆ ಇರತಕ್ಕದ್ದು; ಅಲ್ಲದೆ ಇದರಲ್ಲಿನ ಷರತ್ತುಗಳನ್ನೆಲ್ಲಾ ಅರ್ಜೀದಾರನು ತಿಳಿದುಕೊಂಡು ಅವುಗಳಿಗೆ ಒಪ್ಪಿರುತ್ತಾನೆಂಬ ಬಗ್ಗೆ ಸದರೀ ಹುಕುಮಿನಲ್ಲಿ ಆತನ ದಸ್ತಖತ್ತನ್ನು ಹಾಕಿಸತಕ್ಕದ್ದು. ಸಾಲವನ್ನು ತೆಗೆದುಕೊಳ್ಳುವವರು ಅಥವಾ ಜಾಮೀನ್ದಾರರು ಜಾಮೀನನ್ನಾಗಲೀ, ಜಮೀನ್ ಯಾ ಇತರ ಸ್ಥಿರಸ್ವತ್ತಿನ ಆಧಾರವನ್ನಾಗಲೀ ಕೊಡುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಆಧಾರಪತ್ರವು ಇದಕ್ಕೆ ಲಗತ್ತಿಸಿರುವ 9 ಎ, 9 ಬಿ, 10 ಎ, 10 ಬಿ — ಈ ನಮೂನೆಗಳ ಪೈಕಿ ಯಾವುದಾದರೂ ಒಂದರ ಮೇರೆಗಾಗಲೀ, ಅಥವಾ ಅದಕ್ಕೆ ಸಮನಾದ ಬೇರೊಂದು ನಮೂನೆಯ ಮೇರೆಗಾಗಲೀ ಇರತಕ್ಕದ್ದು.

ಸಾಲಕ್ಕಾಗಿ ಬಂದ ಅರ್ಜಿಯನ್ನು ತಿರಸ್ಕರಿಸಿ ಹುಕುಂ ಕೊಡಬೇಕಾದರೆ ಇದಕ್ಕೆ ಲಗತ್ತಿಸಿರುವ 5 ನೆ ನಂಬರ್ ನಮೂನೆಯ ಮೇರೆಗಾಗಲೀ, ಅಥವಾ ಅದಕ್ಕೆ ಸಮನಾದ ಬೇರೊಂದು ನಮೂನೆಯ ಮೇರೆಗಾಗಲೀ ಅರ್ಜೀದಾರನಿಗೆ ಸದರಿ ಸಂಗತಿಯನ್ನು ತಿಳಿಯ ಪಡಿಸತಕ್ಕದ್ದು.

ಸಾಲದ ಮೊಬಲಗನ್ನು ಪಾವತೀಮಾಡುವುದು

28. ದುರ್ಭಿಕ್ಷದ ನಿವಾರಣೆಗಾಗಿ ಕೊಡುವ ಸಾಲಗಳ ವಿಷಯದಲ್ಲಿ ತಿಂಗಳಿಗೊಂದುಸಾರಿಯಂತೆಯಾಗಲೀ, ಎರಡು ತಿಂಗಳುಗಳಿಗೊಂದುಸಾರಿಯಂತೆಯಾಗಲೀ ಪಾವತಿಮಾಡಬೇಕು. ಇತರ ಸಾಲಗಳ ವಿಷಯದಲ್ಲಿ ಸಾಧಾರಣವಾಗಿ ಎರಡು ಕಂತುಗಳಲ್ಲಿ ಪಾವತಿಮಾಡಬೇಕು ; ಪರಂತು ಅಂಥಾ ಸಾಲದ ಮೊಬಲಗು 100 ರೂಪಾಯಿಗಳಿಗೆ ಮೀರದೆ ಇದ್ದರೆ ಮಂಜೂರ್ಮಾಡುವ ಆಫಿಸರಿಗೆ ಸೂಕ್ತ ತೋರುವಪಕ್ಷ ಅದನ್ನು ಒಂದೇಸಲ ಒಟ್ಟಾಗಿ ಪಾವತಿ ಮಾಡಿಸಬಹುದು. ಯಾವುದಾದರೊಂದು ಸಾಲವನ್ನು ಮಂಜೂರ್ ಮಾಡಿರುವಬಗ್ಗೆ ಹುಕುಂ ಹುಟ್ಟಿದ್ದರೆ ಸದರೀ ಸಾಲವನ್ನು ಶೀಘ್ರವಾಗಿ ಪಡೆದುಕೊಳ್ಳುವುದಕ್ಕಾಗಿ ಬೇಕಾದ ಅನುಕೂಲತೆಗಳನ್ನೆಲ್ಲಾ ಕಲ್ಪಿಸಿಕೊಡಬೇಕು. ಸಾಲಗಳನ್ನು ಮಂಜೂರ್ ಮಾಡಲು ಅಧಿಕಾರ ಹೊಂದಿರುವ ಆಫಿಸರುಗಳು ಗ್ರಾಮಾಂತರಗಳಿಗೆ ಸಂಚಾರ ಹೊರಟಾಗ ಹಣವು ಯಾರಿಗೆ ಪಾವತಿಯಾಗಬೇಕಾಗಿದೆಯೋ ಅವರು ಫಲಾನೆಯವರೇ ಎಂಬುದನ್ನೂ, ಪಾವತಿಯಾಗಬೇಕಾಗಿರುವ ಸಾಲದ ಮೊಬಲಗನ್ನು ತಾವಾಗಲೀ, ಅಥವಾ ಅಂಥಾ ಸಾಲಗಳನ್ನು ಮಂಜೂರ್ಮಾಡಲು ಅಧಿಕಾರ ಹೊಂದಿರುವ ಬೇರೊಬ್ಬರಾಗಲೀ ಮಂಜೂರ್ಮಾಡಿರುತ್ತಾರೆಂಬುದನ್ನೂ, ಪಾವತಿಯಾಗಬೇಕಾಗಿರುವ ಮೊಬಲಗು ಮೊದಲನೇ ದಫ ಕೊಡತಕ್ಕದ್ದೇ ಅಥವಾ 2, 3 ವಗೈರೆ ದಫ ಕೊಡತಕ್ಕದ್ದೇ ಎಂಬುದನ್ನೂ ದೃಢಪಡಿಸಿಕೊಂಡು ಸದರಿ ಮೊಬಲಗನ್ನು ಪಾವತಿ ಮಾಡಿಸಬೇಕು.

29. ಕ್ರಮವಾಗಿ ಮಂಜೂರ್ ಆಗಿರುವ ಸಾಲಗಳ ಮೊಬಲಗುಗಳನ್ನು ಪಾವತಿ ಮಾಡುವುದರಲ್ಲಿ ಸಹಾಯ ಮಾಡುವುದಕ್ಕಾಗಿ ಸಾಧ್ಯವಾಗುವ ಕಡೆಗಳಲ್ಲೆಲ್ಲಾ ಸರ್ಕಾರೀ ಉದ್ಯೋಗಸ್ಥರಲ್ಲದಿರುವ ಖಾಸಗೀ ಜನಗಳನ್ನೂ ನಿಯಮಿಸಿಕೊಳ್ಳಬಹುದು.

ಸಾಲಗಳ ಫೂಟ್ ಮಂಜೂರಾತಿ.

30. ಇದಕ್ಕೆ ವಿರೋಧವಾಗಿ 12 ನೆ, 14 ನೆ, 15 ನೆ ನಿಬಂಧನೆಗಳಲ್ಲಿ ಏನಿದ್ದರೂ ಅಸಿಸ್ಟೆಂಟ್ ಕಮಿಷನರುಗಳು ಗ್ರಾಮಾಂತರ ಸಂಚಾರ ಹೊರಟಾಗ ತತ್ರಾಪಿ ದುರ್ಭಿಕ್ಷ ಯಾ ಕ್ಷಾಮಕಾಲದಲ್ಲಿ ಬಿತ್ತನೆಯ ಕಾಳು, ದನಗಳ ಮೇವು, ಉಳುಮೆಯ ರಾಸುಗಳು ಯಾ ವ್ಯವಸಾಯ ಸಂಬಂಧವಾದ ಮುಟ್ಟುಗಳು ಇವುಗಳನ್ನು ಕೊಂಡುಕೊಳ್ಳುವುದೇ ಮುಂತಾದ ಜರೂರು ಉದ್ದೇಶಗಳಿಗಾಗಿ ಸಾಲವನ್ನು ಕೊಡಿಸಬೇಕೆಂದು ರೈತರುಗಳು ಜಂಟಿಯಾಗಿ ಯಾ ಒಬ್ಬೊಬ್ಬರಾಗಿ ಅರ್ಜಿ ಹಾಕಿಕೊಂಡಲ್ಲಿ ಅವರು ಕೊಡಬಹು

ದಾದ ಆಧಾರವು ಸಾಕಾದುದೇ ಅಲ್ಲವೇ ಎಂಬ ವಿಚಾರವಾಗಿ ಆ ಸ್ಥಳದಲ್ಲಿಯೇ ಫ್ಲೂಟ್ ವಿಚಾರಣೆ ನಡೆಸಿ ಲ್ಯಾಂಡ್ ರೆವಿನ್ಯೂ ಕೋಡಿನ 194 ನೆ ಪ್ರಕರಣಾನುಸಾರ 50 ರೂಪಾಯಿಗಳಿಗೆ ಮೀರದೆ ಇರುವ ಜುಜುವಿ ಸಾಲಗಳನ್ನು ಮಂಜೂರ್ಮಾಡ ಬಹುದು. ಸದರೀ ಆಧಾರಗಳು ಸಾಕಾಗಿವೆ ಎಂದು ಅವರಿಗೆ ತೃಪ್ತಿಕರವಾಗಿ ಕಂಡು ಬಂದಲ್ಲಿ ಸಾಲ ತೆಗೆದುಕೊಳ್ಳುವವರಿಂದ ಕ್ರಮವಾದ ಆಧಾರಪತ್ರಗಳನ್ನೂ, ಹಣ ಸಂದ ಬಗ್ಗೆ ರಸೀದಿಗಳನ್ನೂ ಪಡೆದುಕೊಂಡು ಆ ಕೂಡಲೇ ಸದರೀಯವರಿಗೆ ಹಣವನ್ನು ಪಾವತಿ ಮಾಡಿಸಬಹುದು.

ಕಾಮಗಾರಿಗಳ ಮೇಲ್ವಿಚಾರಣೆ.

31. ಕಾಮಗಾರಿಗಳನ್ನೂ ಅವುಗಳಿಗಾಗಿ ಮುಟ್ಟಿಸಿದ ಖರ್ಚುಗಳಿಗಾಗಿ ಇಟ್ಟಿರುವ ಲೆಕ್ಕವನ್ನೂ ಡೆಪ್ಯುಟಿ ಕಮಿಷನರವರಾಗಲೀ, ಅವರಿಂದ ಆ ಬಗ್ಗೆ ಅಧಿಕಾರ ಹೊಂದುವ ಬೇರೊಬ್ಬ ಆಫಿಸರವರಾಗಲೀ ತನಿಖೆ ಮಾಡುವುದಕ್ಕೆ ಸಾರ್ವದಾ ಅವಕಾಶ ವಿರತಕ್ಕದ್ದು. ಸಾಲವು 5,000 ರೂಪಾಯಿಗಳಿಗೆ ಮೀರಿದ್ದರೆ ಸಾಲ ತೆಗೆದುಕೊಂಡವನು ಡೆಪ್ಯುಟಿ ಕಮಿಷನರವರು ವಿಧಾಯಕ ಮಾಡಬಹುದಾದ ನಮೂನೆಯಲ್ಲಿ ಲೆಕ್ಕವನ್ನು ಇಡತಕ್ಕದ್ದು.

32. ಈ ನಿಬಂಧನೆಗಳಿಗನುಸಾರವಾಗಿ ಕೊಡೋಣವಾದ ಸಾಲದ ಮೊಬಲಗುಗಳನ್ನು ಯಾವ ಉದ್ದೇಶಗಳಿಗಾಗಿ ತೆಗೆದುಕೊಂಡರೋ ಅದೇ ಉದ್ದೇಶಗಳಿಗೇ ಉಪಯೋಗಿಸುವರೆಂಬುದನ್ನು ದೃಢಪಡಿಸಿಕೊಳ್ಳುವುದಕ್ಕೂ, ಕಾಮಗಾರಿಗಳು ನಡೆಯುತ್ತಿರುವಾಗಲೇ ಅವುಗಳನ್ನು ಕ್ರಮವಾಗಿ ಮೇಲ್ವಿಚಾರಣೆ ತೆಗೆದುಕೊಳ್ಳುವುದಕ್ಕೂ ಡೆಪ್ಯುಟಿ ಕಮಿಷನರವರು ಅವಶ್ಯಕವಾದ ಏರ್ಪಾಡುಗಳನ್ನು ಮಾಡತಕ್ಕದ್ದು. ಸದರಿ ಸಾಲವನ್ನು ಯಾವ ಉದ್ದೇಶಗಳಿಗಾಗಿ ತೆಗೆದುಕೊಂಡರೋ ಆ ಉದ್ದೇಶಗಳಿಗಾಗಿ ಉಪಯೋಗಿಸಲಿಲ್ಲವೆಂದು ಕಂಡುಬಂದಲ್ಲಿ ಡೆಪ್ಯುಟಿ ಕಮಿಷನರವರಾಗಲೀ ಸಾಲವನ್ನು ಮಂಜೂರ್ ಮಾಡಿದ ಬೇರೊಬ್ಬ ಆಫಿಸರಾಗಲೀ 13 ನೆ ನಿಬಂಧನೆಯ ಮೇರೆಗೆ ಸದರೀ ಸಾಲದ ಮೊಬಲಗನ್ನು ವಸೂಲ್ ಮಾಡಲು ತಕ್ಕ ಕ್ರಮ ಜರುಗಿಸಬಹುದು.

ಯಾವ ಕಾಮಗಾರಿಗಳಿಗೋಸ್ಕರ ಕಂತುವಾರಾಗಿ ಸಾಲದ ಮೊಬಲಗನ್ನು ಪಾವತಿ ಮಾಡಲಾಗುತ್ತದೆಯೋ ಅಂಥಾ ಕಾಮಗಾರಿಗಳನ್ನೆಲ್ಲಾ ಮೊದಲನೆ ಕಂತು ವಿನಹಾ ಬಾಕಿ ಪ್ರತಿ ಒಂದು ಕಂತನ್ನು ಪಾವತಿ ಮಾಡುವುದಕ್ಕೆ ಮುಂಚೆ ಅಜಮಾಯಿಷಿಮಾಡಿ ಅದರ ವಿಷಯವನ್ನು ರಿಪೋರ್ಟ್ ಮಾಡಬೇಕು. ಮುಂದಣ ಕಂತಿನ ಪಾವತಿಯನ್ನು ಮಂಜೂರ್ಮಾಡುವ ಅಧಿಕಾರವುಳ್ಳ ಆಫಿಸರು ಅಜಮಾಯಿಷಿ ನಡಿಸಿದ ಪಕ್ಷದಲ್ಲಿ ತಮ್ಮ ತನಿಖೆಯಲ್ಲಿ ಕಂಡುಬಂದ ವಿಷಯವನ್ನು ರಿಕಾರ್ಡುಮಾಡಿ ಮುಂದಣ ಕಂತನ್ನು ಪಾವತಿ ಮಾಡಬಹುದೆಂದು ತೃಪ್ತಿಕರವಾಗಿ ತಮಗೆ ತೋರಬಂದರೆ 28 ನೆ ನಿಬಂಧನೆಯಲ್ಲಿ ವಿಧಿಸಿರುವ ಮೇರೆಗೆ ಸಾಧ್ಯವಾದರೆ ಆ ಕೂಡಲೇ ಸದರೀ ಕಂತಿನ ಮೊಬಲಗನ್ನು ಪಾವತಿ ಮಾಡತಕ್ಕದ್ದು.

ಸಾಲವನ್ನು ಮಂಜೂರ್ ಮಾಡುವ ಹುಕುಮಿನಲ್ಲಿ ಕಾಮಗಾರಿಯು ಪೂರೈಸುವುದಕ್ಕಾಗಿ ಗೊತ್ತುಮಾಡಿರುವ ತಾರೀಖಿನ ನಂತರ ಸಾಧ್ಯವಾದಷ್ಟು ಬೇಗನೆ ಕಾಮಗಾರಿಗಳನ್ನೆಲ್ಲಾ ಅಜಮಾಯಿಷಿಮಾಡಿ ಅವುಗಳ ವಿಷಯವಾಗಿ ರಿಪೋರ್ಟು ಕಳುಹಿಸಿಕೊಡಬೇಕು. ಬಹುಮಟ್ಟಿಗೆ ಮೊದಲು ಕೊಟ್ಟಿದ್ದ ಸಲಹೆಗಳ ಮೇರೆಗೆ ಕಾಮಗಾರಿಯನ್ನು ನಡೆಸಿಲ್ಲವೆಂದು ತಿಳಿಯಬಂದರೆ ಸಾಲವನ್ನು ಮಂಜೂರ್ ಮಾಡುವ ಆಫೀಸರು ಮೊದಲು ಮುಂಗಡವಾಗಿ ಕೊಟ್ಟಿದ್ದ ಸಾಲದ ಮೊಬಲಗೆಲ್ಲವನ್ನೂ, ಅದರ ಮೇಲೆ ಶೇಕಡಾ 5 ರಂತೆ ಬಡ್ಡಿಯನ್ನೂ, ಖರ್ಚುಗಳೇನಾದರೂ ಬಿದ್ದಿದ್ದಲ್ಲಿ ಅವನ್ನೂ ಆ ಕೂಡಲೇ ವಾಪಸ್‌ಕೊಡಬೇಕೆಂದು ಅಪ್ಪಣೆ ಮಾಡಬಹುದು; ಅಥವಾ ಕಾಮಗಾರಿಯು ಎಷ್ಟುಕಾಲ ನಡೆಯಬಹುದೋ ಅಷ್ಟು ಕಾಲದೊಳಗಾಗಿ ಸಾಲವೆಲ್ಲಾ ವಸೂಲಾಗುವಂತೆ 5 ನೆ ನಿಬಂಧನೆಯ ಮೇರೆಗೆ ಗೊತ್ತುಮಾಡಿದ ಕಂತಿನ ಮೊಬಲಗನ್ನು ವ್ಯತ್ಯಾಸಪಡಿಸಬಹುದು. ಇಂಥಾ ಸಂದರ್ಭಗಳಲ್ಲಿ ಸಾಧ್ಯವಾದರೆ ಸಾಲ ಪಡೆದುಕೊಂಡವನಿಂದ ಷುರೂ ಹುಕುಮನ್ನು ವಾಪಸ್ ತೆಗೆದುಕೊಂಡು ಅದನ್ನು ರದ್ದುಮಾಡಿ ಹೊಸ ಹುಕುಮನ್ನು ಕೊಡಬೇಕು.

ರೆಜಿಸ್ಟರುಗಳು ಮತ್ತು ಲೆಕ್ಕಗಳು.

33. ಸಾಲಗಳನ್ನು ಮಂಜೂರ್ ಮಾಡುವ ಪ್ರತಿಯೊಬ್ಬ ಆಫಿಸರೂ ತಮ್ಮಲ್ಲಿಗೆ ಬಂದು ತಮ್ಮಿಂದ ವ್ಯವಸ್ಥೆಯಾದ ಅರ್ಜಿಗಳ ರೆಜಿಸ್ಟರನ್ನು ಇದಕ್ಕೆ ಲಗತ್ತಿಸಿರುವ 2 ನೆ ನಂಬರ್ ನಮೂನೆಯಲ್ಲಿ ಇಡಬೇಕು.

34. ಪ್ರತಿಯೊಬ್ಬ ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರರೂ ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಸಾಲಗಳನ್ನೂ ಅವುಗಳು ವಾಪಸ್ ಪಾವತಿಯಾದುದನ್ನೂ ನಮೂದಿಸಿ ಇದಕ್ಕೆ ಲಗತ್ತಿಸಿರುವ 2 ನೆ ನಂಬರ್ ನಮೂನೆಯಲ್ಲಿ ಒಂದು ರೆಜಿಸ್ಟರನ್ನೂ, ಇದಲ್ಲದೆ ಸರ್ಕಾರದವರು ಆಗಿಂದಾಗ ವಿಧಿಸಬಹುದಾದ ಇತರ ಲೆಕ್ಕಗಳನ್ನೂ ತಃಖ್ತೆಗಳನ್ನೂ ಇಡಬೇಕು. ಈ ರೆಜಿಸ್ಟರಿನ ನಕಲುಗಳನ್ನು ಸದರೀ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ಆಫೀಸಿನಲ್ಲಿಯೂ, ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿಯೂ ಇಟ್ಟಿರತಕ್ಕದ್ದು.

ವಿಶೇಷತರಹೆ ಆಬಾದಿಗಾಗಿ ಕೊಡುವ ಸಾಲಗಳು.

35. ವಿಶೇಷತರಹೆ ಯಾ ತರಹೆಗಳ ಆಬಾದುಗಳ ವಿಷಯದಲ್ಲಿ ಸರ್ಕಾರದವರು ಅವುಗಳಿಗಾಗಿ ಸಾಲಗಳನ್ನು ಮಂಜೂರ್ಮಾಡಲು ಪ್ರತ್ಯೇಕವಾಗಿ ನಿಬಂಧನೆಗಳನ್ನು ಏರ್ಪಡಿಸಬಹುದು; ಅಲ್ಲದೆ, ಅಂಥಾ ವಿಶೇಷ ನಿಬಂಧನೆಗಳಲ್ಲಿ ಕಂಠೋಕ್ತವಾಗಿ ವಿಧಿಸಿರುವಷ್ಟರಮಟ್ಟಿಗೆಹೊರ್ತು ಈ ನಿಬಂಧನೆಗಳೆಲ್ಲವೂ ಅಂಥಾ ಸಾಲಗಳ ಮಂಜೂರಾತಿಗೂ ವಸೂಲಾತಿಗೂ ಅನ್ವಯಿಸತಕ್ಕದ್ದು.

ನಂಬರ್ 1. ಜಮೀನು ಅಭಿವೃದ್ಧಿ ಸಾಲಗಳ ರೆಗ್ಯುಲೇಷನು—ಲ್ಯಾಂಡ್ ರೆವಿನ್ಯು ಕೋಡ್ 194 ನೆ ಪ್ರಕರಣದ ಮೇರಿಗೆ ಸಾಲಾ ಪಡೆಯುವ ಬಗ್ಗೆ ಬರುವ ದರಖಾಸ್ತು ನಮೂನೆ.

1. ದರಖಾಸ್ತುದಾರನ ಹೆಸರು, ತಂದೆ ಹೆಸರು ಮತ್ತು ವಾಸಸ್ಥಳ. 2. ಬೇಕಾಗಿರುವ ಸಾಲದ ಮೊಬಲಗು. 3. ಯಾವ ಉದ್ದೇಶಕ್ಕಾಗಿ ಸಾಲಾ ಕೇಳಿರುವುದು.

ಆಬಾದಿಗೆ ಬರುವ ಜಮೀನಿನ ತಪ್ಸೀಲ್.			ಜಮೀನಿನಲ್ಲಿ ದರಖಾಸ್ತುದಾರನಿಗೆ ಎಷ್ಟು ಮಟ್ಟಿನ ಹಕ್ಕು ಇದೆ ಮತ್ತು ಇತರ ಸ್ವಾಧೀನ ಮತ್ತು ಸದರಿ ಜಮೀನು ಇವನ ಹೆಸರಿನಲ್ಲಿ ರಿಜಿಸ್ಟರ್ ಆಗಿರುತ್ತದೆಯೇ ಅಥವಾ ಇವನ ಅನುಭವದಲ್ಲಿ ಇರುತ್ತದೆಯೇ.	ಈ ಜಮೀನಿನಲ್ಲಿ ಇತರರಿಗೆ ಇರುವ ಹಕ್ಕು.		ಕೊಡಬೇಕೆಂದಿರುವ ಆಧಾರ.							ಜಮೀನು ಆಧಾರ ಮಾಡಿಕೊಡುವುದಕ್ಕೆ ಒಪ್ಪಿರುವ ಮನುಷ್ಯನ ಹೆಸರು ಮತ್ತು ಸದರಿ ಜಮೀನಿನಲ್ಲಿ ಅವನಿಗೆ ಇರುವ ಹಕ್ಕಿನ ಸ್ವಭಾವ.	ಆಧಾರದಾರನ ಇತರ ಜಮೀನಿನ ಮೇಲೆ ಏನಾದರೂ ಸಾಲ ಸಂಬಂಧವಿದ್ದರೆ ಅಂಥಾ ಸಾಲದ ಸ್ವಭಾವ ವಗೈರೆ.	ಆಬಾದಿಗೆ ಬರುವ ಜಮೀನು, ಮತ್ತು ಆಧಾರ ಮಾಡುವ ಜಮೀನು, ಇವುಗಳ ಮೇಲೆ ಕಂದಾಯದ ಬಾಕಿ ಇರುತ್ತದೆಯೇ.	ಸಾಲ ತೀರಿಸಬೇಕೆಂದಿರುವ ಕಾಲ.	ಷರಾ.
						ಇಸಂ ಜಾಮೀನಾಗಿದ್ದರೆ.	ಜಮೀನಾಗಿದ್ದರೆ.				ಇತರ ಸ್ಥಿರಸ್ವತ್ತು.						
ಗ್ರಾಮ, ಸರ್ವೆ ನಂಬರ್ ಮತ್ತು ಪೈಕಿ ನಂಬರ್, ಖುಷ್ಕಿಯೇ ಅಥವಾ ತರಿಯೇ.	ವಿಸ್ತೀರ್ಣ.	ಆಕಾರ.		ಹೆಸರು.	ಹಕ್ಕಿನ ಸ್ವಭಾವ ಮತ್ತು ವಿಸ್ತೀರ್ಣ; ಈತನು ಜಮೀನು ಹಿಸ್ಸೆದಾರನೇ ಅಥವಾ ಭೋಗ್ಯದಾರನೇ.	ಜಾಮೀನುದಾರನ ಹೆಸರು, ತಂದೆ ಹೆಸರು ಮತ್ತು ವಾಸಸ್ಥಳ.	ಸರ್ವೆ ನಂಬರ್.	ವಿಸ್ತೀರ್ಣ.	ಆಕಾರ.	ಯಾರ ಹೆಸರಿನಲ್ಲಿ ರಿಜಿಸ್ಟರಾಗಿರುತ್ತೆ.	ವಿಸ್ತೀರ್ಣ.	ತಪ್ಸೀಲ್.					
1	2	3	4	5	6	7	8	9	10	11	12	13	14	15	16	17	18
	ಎ.	ರೂ.						ಎ.	ರೂ.		ಎ.						

ಟಿಪ್ಪಣಿ.—1. ಲ್ಯಾಂಡ್ ರೆವಿನ್ಯೂ ಕೋಡ್ ಅನುಸರಿಸಿ ಅಪೇಕ್ಷಿಸುವ ಸಾಲಗಳ ವಿಷಯದಲ್ಲಿ 1 ರ ಲಾಗಾಯಿತು 6 ನೇ ವರಿಗಿನ ಕಲಂಗಳಲ್ಲಿ ಭರ್ತಿ ಮಾಡಬೇಕಾದದ್ದೇನೂ ಇರುವದಿಲ್ಲ. ಮತ್ತು ಜಮೀನು ಅಭಿವೃದ್ಧಿ ಸಾಲದ ರೆಗ್ಯುಲೇಷನು ಪ್ರಕಾರ ಅಪೇಕ್ಷಿಸುವ ಸಾಲಗಳ ವಿಷಯದಲ್ಲ 7 ನೇ ಕಲಂ ಭರ್ತಿ ಮಾಡಬೇಕಾದದ್ದಿಲ್ಲವು.

2. ಜಮೀನು ಆಬಾದು ಮಾಡುವುದಕ್ಕೆ ದರಖಾಸ್ತುದಾರನಿಗೆ ಇರುವ ಹಕ್ಕು ವಿಷಯದಲ್ಲಿ 4 ನೇ ಕಲಂನಲ್ಲಿಯೂ, ಇತರ ಜಮೀನುಗಳನ್ನು ಆಧಾರಮಾಡಿ ಕೊಡುವುದಕ್ಕೆ ಕಬೂಲಾಗಿರುವ ಜನಗಳಿಗೆ ಅವುಗಳಲ್ಲಿ ಇರತಕ್ಕ ಹಕ್ಕು ವಿಷಯದಲ್ಲಿ 14 ನೇ ಕಲಂನಲ್ಲಿಯೂ ಪೂರಾ ತಪಶೀಲು ಬರೆಯಬೇಕು.

3. ಸಾಲದ ಮೊಬಲಗನ್ನು ಪಡೆದ ತಾರೀಖು ಲಾಗಾಯಿತು ಎಷ್ಟು ವರುಷಗಳಲ್ಲಿ ಸದರಿ ಮೊಬಲಗನ್ನು ತೀರಿಸಲು ಒಪ್ಪುತ್ತಾನೆಂಬುವದನ್ನು 17 ನೇ ಕಲಂನಲ್ಲಿ ನಮೂದಿಸಬೇಕು. ಇದರಿಂದ ಅವನಿಗೆ ಇಷ್ಟವಿದ್ದರೆ, ಇನ್ನೂ ಮುಂದಾಗಿಯೇ ಸಾಲವನ್ನು ತೀರಿಸುವುದಕ್ಕೆ ಯಾವ ಅಡ್ಡಿಯೂ ಇಲ್ಲ.

4. A. ಜಮೀನು ಆಬಾದು ಸಾಲದ ರೆಗ್ಯುಲೇಷನ್ ಪ್ರಕಾರ ಭಾವಿಗಳನ್ನು ಅಥವಾ ಕೆರೆಗಳನ್ನು ಹೊಸದಾಗಿ ಕಟ್ಟುವುದಕ್ಕೂ, ರಿಪೇರಿ ಮಾಡುವುದಕ್ಕೂ ಮತ್ತು ಬಂಜರು ಜಮೀನನ್ನು ಸಾಗುವಳಿ ಸ್ಥಿತಿಗೆ ತರುವದು, ಯಾ ಜಮೀನು ಸಾಗುವಳಿಗೆ ಲಾಯಖಾಗಿ ಅದರ ಬೆಲೆಯು ಕಾಯಮಾಗಿ ವೃದ್ಧಿಯಾಗತಕ್ಕ ಇತರ ಕೆಲಸಗಳು.

B. ಲ್ಯಾಂಡ್ ರೆವಿನ್ಯೂ ಕೋಡ್ 194 ನೇ ಪ್ರಕರಣದ ಮೇರೆಗೆ, ಬಿತ್ತನೆ ಕಾಳು, ಉಳುಮೆ ಎತ್ತುಗಳು, ಬೀಜದ ಕುದುರೆ ಮತ್ತು ಟಾಕಣಾ, ಬೀಜದ ಗೂಳಿಗಳು, ಇವುಗಳನ್ನು ಖರೀದಿಗೆ ತೆಗೆದುಕೊಳ್ಳುವುದಕ್ಕೂ, ದನಗಳ ಮೇವನ್ನು ಕೊಂಡುಕೊಳ್ಳುವುದಕ್ಕೂ, ಮತ್ತು ಇತರ ವ್ಯವಸಾಯ ಸಂಬಂಧ ಕೆಲಸಗಳು ಎಂದರೆ, ಬೆಂಕಿ ಅಥವಾ ನೀರಿನ ಪ್ರವಾಹದಿಂದ ನಾಶವಾದ ಮನೆಗಳನ್ನು (ಮತ್ತು ಷೆಡ್ಡುಗಳನ್ನು) ಪುನಃ ಕಟ್ಟುವುದಕ್ಕೂ, ಕಬ್ಬಿನ ಗಾಣಗಳನ್ನು ಹೂಡುವುದಕ್ಕೂ, ವ್ಯವಸಾಯ ಸಂಬಂಧ ಹಸೀ ಪದಾರ್ಥಗಳನ್ನು ಸರಿಪಡಿಸುವುದಕ್ಕೆ, ಅನುಕೂಲವಾದ ನೀಲಿತೊಟ್ಟಿ ಮುಂತಾದ ಸಾಧನೆಗಳಿಗಾಗಿಯೂ, ಜೋಡುಮೊಹಟೆ ಯಾ ನೀರು ಎತ್ತುವ ಇತರ ಸಾಧನಗಳನ್ನು ಕಟ್ಟಿಸುವುದಕ್ಕೂ, ದುರ್ಭಿಕ್ಷವು ಪ್ರಾಪ್ತವಾಗಿರುತ್ತದೆಂದು ಸರ್ಕಾರದವರು ಅಂಗೀಕರಿಸಿದಾಗ ಮುಂದಿನ ಫಸಲು ಆಗುವ ವರೆಗೆ ಜಮೀನು ಹಿಡುವಳಿದಾರರು ಮತ್ತು ಅವರ ಆಶ್ರಿತರು ಜೀವನ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ದುರ್ಭಿಕ್ಷ ನಿವಾರಣಾರ್ಥ ಅವರಿಗೆ ತಕ್ಕ ಸಹಾಯವನ್ನು ಮಾಡುವುದಕ್ಕೂ, ಸರ್ಕಾರದವರು ಜಮೀನು ಹಿಡುವಳಿದಾರರಿಗೆ ಸಾಲವನ್ನು ಕೊಡುತ್ತಾರೆ.

5. ಜಮೀನು ಆಬಾದು ಸಾಲಗಳ ರೆಗ್ಯುಲೇಷನಿನಲ್ಲಿ ಇಷ್ಟು ಮೊಬಲಗಿಗಿಂತ ಹೆಚ್ಚಾಗಿ ಸಾಲ ಕೊಡಕೂಡದೆಂತ ನಿರ್ಧರಿಸಿ ಇರುವುದಿಲ್ಲ. ಆದರೆ ಕನಿಷ್ಠ ಪಕ್ಷ 50 ರೂಪಾಯಿಗಳಿಗೆ ಕಮ್ಮಿಯಾಗಿ ಸಾಲ ಕೊಡುವುದಿಲ್ಲ. ರೆವಿನ್ಯೂಕೋಡು ಪ್ರಕಾರ ಕೊಡಲ್ಪಡುವ ಸಾಲಗಳ ವಿಷಯದಲ್ಲಿ, ದುರ್ಭಿಕ್ಷ ನಿವಾರಣೆಗಾಗಿಯೂ, ಬಿತ್ತನೆ ಕಾಳು, ಉಳುಮೆ ಎತ್ತು, ಬೀಜದ ಕುದುರೆ ಮತ್ತು ಟಾಕಣಾ, ಬೀಜದ ಗೂಳಿಗಳು, ಇವುಗಳನ್ನು ಕೊಂಡುಕೊಳ್ಳುವುದಕ್ಕಾಗಿಯೂ. ಮತ್ತು ಬೆಂಕಿ ಮತ್ತು ನೀರಿನ ಪ್ರವಾಹದಿಂದ ನಾಶವಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೂ ಸಹ

200 ರೂಪಾಯಿಗಳಿಗೆ ಮೀರದಂತೆಯೂ, ಇತರ ವ್ಯವಸಾಯ ಸಂಬಂಧ ಕೆಲಸಗಳಿಗೆ 1,000 ರೂಪಾಯಿಗಳಿಗೆ ಮೀರದಂತೆಯೂ, ಕಬ್ಬಿನ ಗಾಣಗಳನ್ನು ಹೂಡಿಸುವುದಕ್ಕಾಗಿ 5,000 ರೂಪಾಯಿಗಳಿಗೆ ಮೀರದಂತೆಯೂ ಕ್ಲುಪ್ತಪಡಿಸಿರುತ್ತದೆ. ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ಕೊಡುವ ಸಾಲಗಳ ವಿಷಯದಲ್ಲಿ ಕನಿಷ್ಠ ಪಕ್ಷ ಮೊಬಲಗನ್ನು ಗೊತ್ತುಮಾಡಿ ಇರುವುದಿಲ್ಲ.

6. ಸಾಲದ ಬಗ್ಗೆ ಕೊಡುವ ದರಖಾಸ್ತುಗಳು ಡೆಪ್ಯುಟಿ ಅಮಲ್ದಾರ್ರ ದರ್ಜೆಗೆ ಕಮ್ಮಿ ಇಲ್ಲದ ಯಾವ ರೆವಿನ್ಯೂ ಆಫೀಸರುಗಳಿಗೇನೇ ಆಗಲಿ ಖುದ್ದಾಗಿ ಟಪ್ಪಾಲ್ ಯಾ ಇತರ ಮೂಲಕವಾಗಿ ಕೊಡಲ್ಪಡಬಹುದು, ಜುಬಾನಿಯಾಗಿಯೂ ಕೇಳಿಕೊಳ್ಳಬಹುದು. ಈ ದರಖಾಸ್ತಿಗೆ ಸ್ಟಾಂಪು ಡ್ಯೂಟಿ ಕೊಡಬೇಕಾದದ್ದಿಲ್ಲ.

7. ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ದುರ್ಭಿಕ್ಷ ನಿವಾರಣೆಗಾಗಿ ಕೊಡುವ ಸಾಲಗಳ ವಿನಾ ಬಾಕಿ ಸಾಲಗಳ ಮೇಲೆ ವರುಷಕ್ಕೆ ಶೇಕಡಾ 5 ರಂತೆ ಬಡ್ಡಿ ವಸೂಲ್ಮಾಡಲ್ಪಡುತ್ತದೆ. ದುರ್ಭಿಕ್ಷ ನಿವಾರಣೆ ಸಾಲಗಳ ವಿಷಯದಲ್ಲಿ ಶೇಕಡಾ 3 ರಂತೆ ವಸೂಲ್ಮಾಡಲ್ಪಡುತ್ತದೆ. ಸಾಲಾ ಪಡೆದವರು ಬಹಳ ಬಡವರೆಂದು ತಿಳಿಯಬಂದಾಗ ಈ ಸ್ವಲ್ಪ ಬಡ್ಡಿಯನ್ನು ಕೂಡ ಮಾಫ್ ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಕೊಟ್ಟು ಇರುತ್ತದೆ.

8. ಕ್ಲುಪ್ತವಾದ ಕಾಲದ ಒಳಗಾಗಿ ಸಾಲದ ಅಸಲ್ ಮತ್ತು ಬಡ್ಡಿಯನ್ನು ಸಾಲೀಯಾನಾ ಗೊತ್ತು ಮಾಡಲ್ಪಡುವ ಕಂತುಗಳ ಮೂಲಕ ಕೊಟ್ಟು ತೀರಿಸತಕ್ಕದ್ದಾಗಿ ಇದೆ.

9. ಪೂರೈಸಲ್ಪಟ್ಟ ಕಾಮಗಾರಿಯು ತಕ್ಕಮಟ್ಟಿಗೆ ಮಜಬೂತಾಗಿ ನಡೆಸಲ್ಪಡಲಿಲ್ಲವೆಂದು ಕಂಡು ಬಂದಲ್ಲಿ ಮೊಬಲಗು ವಾಪಸು ಸಂದಾಯಮಾಡುವ ಕಾಲದ ಅವಧಿಯನ್ನು ಕಮ್ಮಿ ಮಾಡಲಾಗುತ್ತದೆ.

10. ಸಾಲಾ ಪಡೆದವನು ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರ ಒಂದು ಭಾಗವನ್ನಾಗರೂ ಸರಿಯೇ ದುರುಪಯೋಗಪಡಿಸಿಕೊಂಡರೂ, ಸಾಲದ ಯಾವ ನಿಬಂಧನೆಗೆ ಆದರೂ ಸರಿಯೇ ತಪ್ಪಿ ನಡೆದರೂ, ಸಾಲದ ಪೈಕಿ ಸಂದಾಯವಾಗದೆ ಉಳಿದು ಇರುವ ಪೂರಾ ಮೊಬಲಗನ್ನು ಬಡ್ಡಿ ಮತ್ತು ಖರ್ಚು ಸಹಿತ ಘೂಟಾಗಿ ವಸೂಲ್ ಮಾಡಲಾಗುತ್ತದೆ.

ಜಮೀನು ಅಥವಾ ಇತರ ಸ್ಥಿರಸ್ವತ್ತುಗಳನ್ನು ಜಂಟಿ ಆಧಾರ ಮಾಡಿದ್ದಲ್ಲಿ, ಅದು ಸರಿಯಾದದ್ದೆಂತ ದೃಢಪಡಿಸತಕ್ಕ ನಮೂನೆ.

ಮೇಲೆ ನಮೂದಿಸಿರುವ ಸಾಲದ ವಿಷಯದಲ್ಲಿ ದರಖಾಸ್ತುದಾರನಾದ—ಜಮೀನುದಾರನಾದ ನಾನು ಆಧಾರ ಮಾಡಲ್ಪಟ್ಟ ಸ್ವತ್ತುಗಳ ಮೇಲೆ ಇರುವ ಸಾಲ ಸೋಲ ವಗೈರೆಗಳ ಸ್ವಭಾವ ಮತ್ತು ಪರಿಮಿತಿಗಳ ವಿಷಯದಲ್ಲಿ, ಮೇಲ್ಕಂಡ ದರಖಾಸ್ತಿನಲ್ಲಿ ನಮೂದಿಸಿರುವ ಸಂಗತಿ ಯಾವತ್ತೂ ನನಗೆ ಚೆನ್ನಾಗಿ ತಿಳಿದು ನಂಬಿಕೆ ಇರುವ ಮಟ್ಟಿಗೆ ವಾಸ್ತವವಾದುದೆಂತಲೂ, ಸದರೀ ಸ್ವತ್ತಿನ ಮೇಲೆ ಮತ್ಯಾವ ಸಾಲ ವಗೈರೆ ಇರುವುದಿಲ್ಲವೆಂದು ಸಂಬಯಿಸಿರುತ್ತೇನೆಂತಲೂ ಪ್ರಮಾಣಪೂರ್ವಕವಾಗಿ ಹೇಳುತ್ತೇನೆ.

ನಂ. 2. ಜಮೀನು ಆಬಾದು ಸಾಲಗಳ ರೆಗ್ಯುಲೇಷನ್ / ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ ಪ್ರಕಾರ ಸಾಲಗಳ ಬಗ್ಗೆ ಬಂದ ದರಖಾಸ್ತುಗಳನ್ನು ತೋರಿಸುವ ರಿಜಿಸ್ಟರ್.

ಡಿಸ್ಟ್ರಿಕ್ಟ ತಾಲ್ಲೂಕು ಬಗೆ ನೆ ಸರ್ಕಾರಿ ಸಾಲ್‌ನಲ್ಲಿ.

ದರಖಾಸ್ತಿನ ಜಂಜರು ನಂಬರು	ತಾಲ್ಲೂಕಿನಲ್ಲಿ ದರಖಾಸ್ತು ಅರ್ಜಿ ಬಂದ ತಾರೀಖು	ಇತರ ಆಫೀಸರುಗಳ ಮೂಲಕ ದರಖಾಸ್ತು ಅರ್ಜಿ ಬಂದು ಇದ್ದಲ್ಲಿ: ಯಾವ ಆಫೀಸರ ಮೂಲಕ ಬಂತು	ಇತರ ಆಫೀಸರುಗಳ ಮೂಲಕ ದರಖಾಸ್ತು ಅರ್ಜಿ ಬಂದು ಇದ್ದಲ್ಲಿ: ನಂಬರ್, ತಾರೀಖಿನ ಸಹಿತಲು	ಅರ್ಜದಾರನ ಹೆಸರು, ತಂದೆ ಹೆಸರು ಮತ್ತು ವಾಸಸ್ಥಳ	ಯಾವ ಗ್ರಾಮದಲ್ಲಿ ಸಾಲಾ ಸಹಿತ ಯಾವ ಮೊಬಲಗು ಉಪಯೋಗಿಸಲ್ಪಡುತ್ತದೆ ಅಂಥಾ ಗ್ರಾಮದ ಹೆಸರು	ಸಾಲದ ಮೊಬಲಗು			ಯಾವ ಕಾರ್ಯಗಳಿಗಾಗಿ ಸಾಲಾ ಬೇಕಾಗಿರುತ್ತೆ	ದಾಖಲೆಗಳು: ಯಾರಿಗೆ	ದಾಖಲೆಗಳು: ದಾಖಲೆಯ ತಾರೀಖು	ದಾಖಲೆಗಳು: ವಾಪಾಸು ಬಂದ ತಾರೀಖು	ಅರ್ಜದಾರನಿಗೆ ಮಾಡಿದ ಆಫೀಸರ ಹೆಸರು ಮತ್ತು ಅವರ ಅಧಿಕಾರದ ಸಂಖ್ಯೆ (ಸೆಕ್ಷನ್)	ಸಾಲಾ ತೀರಿಸಲ್ಪಟ್ಟಿತೇ ಅಥವಾ ಮಂಜೂರಾಯಿತೇ (ತಿರಸ್ಕರಿಸಲ್ಪಟ್ಟದ್ದರೆ ಅದಕ್ಕೆ ಕಾರಣಗಳು ಸಂಕ್ಷೇಪವಾಗಿ) ಫೈಸಲಾದ ತಾರೀಖು ಮತ್ತು ನಂಬರು, ಕೇಳಿದ ಸಾಲಾ ಮಂಜೂರಾಗಿದ ಅಥವಾ ತಿರಸ್ಕರಿಸಿದ ಆಫೀಸರ ಹೆಸರು	ಮಂಜೂರಾದ ಮೊಬಲಗು ಲೋನ್ ಅರ್ಡರ್ ನಂಬರು ಮತ್ತು ತಾರೀಖು, ಡಿಸ್ಬರ್ಸ್‌ಮೆಂಟ್ ರಿಜಿಸ್ಟರ್ ಪ್ರಕಾರ, (11 ನೆ ನಂ. ನಮೂನೆ)	ಶೆರಾ
1	2	3	4	5	6	7			8	9	10	11	12	13	14	15
						ಪೈ.	ಆ.	ರೂ.								

ದರಖಾಸ್ತು ಅರ್ಜಿಗಳ ರಜಿಸ್ಟರಿನ ಇಂಡೆಕ್ಸ್—ಕೆಳಭಾಗದಲ್ಲಿ.

ಷರಾ :—ಫೈಸಲಾದ ದರಖಾಸ್ತುಗಳನ್ನು (19) ಇಂಥಾ ಮಂಡಲಾಕಾರದಲ್ಲಿ ಸಂಖ್ಯೆ ಹಾಕಿ ತೋರಿಸಬೇಕು.

ನಂ.	ಅಕ್ಷರಮಾಲೆ ಪ್ರಕಾರ ಗ್ರಾಮಗಳ ಹೆಸರುಗಳು.	ದರಖಾಸ್ತು ರಿಜಿಸ್ಟರಿನಲ್ಲಿ ಅರ್ಜಿಯ ಸಂಖ್ಯೆಗಳು.	ಪ್ರತಿ ಒಂದು ಗ್ರಾಮದ ಒಟ್ಟು
1	2	3	4

ಷರಾ :—ಈ ರಿಜಿಸ್ಟರನ್ನು ಎರಡು ಭಾಗವಾಗಿ ಇಟ್ಟುಕೊಳ್ಳಬೇಕು. (ಆದರೆ ಒಂದೇ ಬೈಂಡುಬುಕ್ಕಿನಲ್ಲಿ ಇರಬೇಕು). ಪ್ರತಿ ಒಂದು ಕಾನೂನು ಪ್ರಕಾರ ಕೊಡುವ ಸಾಲಗಳಿಗೂ ಒಂದೊಂದು ಭಾಗದ ಮೇರೆಗೆ.

ನಂ. 3. ಜಮೀನು ಅಬಾದು ಸಾಲಗಳ ವಿಷಯ 1890ನೇ ಇಸವಿಯ 4ನೇ ನಂ. ರೆಗ್ಯುಲೇಷನ್ ಅಥವಾ 1888ನೇ ಇಸವಿಯ 4ನೇ ನಂಬರ್ ಲ್ಯಾಂಡ್ ರೆವಿನ್ಯು ಕೋಡ್ ರೆಗ್ಯುಲೇಷನ್.

21ನೆ ನಂಬರು ನಿಬಂಧನೆ ಅನುಸರಿಸಿ ಜಮೀನುದಾರರಿಗೆ ಕೊಡಬೇಕಾದ ನೋಟೀಸ್.

ಹೆಸರು. ತಂದೆ ಹೆಸರು. ವಾಸಸ್ಥಳ.

ಇದರಿಂದ ನಿಮಗೆ ತಿಳಿಯಪಡಿಸುವದೇನಂದರೆ— ಗ್ರಾಮದಲ್ಲಿ ವಾಸ ಮಾಡುವ ಎಂಬುವನ ಮಗನಾದ ಎಂಬುವನು, ನಿಮಗೆ ಪಿಕ್ಮಿದಾರನಾಗಿ ಕೆಳಗೆ ವಿವರಿಸಿರುವ ಜಮೀನುಗಳಲ್ಲಿ ತನಗೆ ವರ್ಗದ ಹಕ್ಕು ಇರುತ್ತೆಂತ ತಿಳಿಯಬರುವದಲ್ಲದೆ, ಸರ್ಕಾರದಿಂದ ಮೊಬಲಗು ಕೆಲಸಕ್ಕೋಸ್ಕರ ಸಾಲಾ ಕೊಡಬೇಕೆಂದುನ್ನು, ಸದರಿ ಸಾಲಕ್ಕಾಗಿ ಸದರಿ ಜಮೀನುಗಳಲ್ಲಿ ತನಗೆ ಇರುವ ಹಕ್ಕನ್ನು ಆಧಾರ ಮಾಡಿಕೊಡುವದಾಗಿಯೂ ಸಹಾ ನಮೂದಿಸಿ ಅರ್ಜಿ ಕೊಟ್ಟಿರುವದರಿಂದ, ಈ ಸಾಲಾ ಕೊಡತಕ್ಕ ವಿಷಯದಲ್ಲಿ ನಿಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ನೋಟೀಸು ಜಾರಿಯಾದ ಲಾಗಾಯಿತು ಒಂದು ತಿಂಗಳ ಒಳಗಾಗಿ ಅಂಥಾ ಆಕ್ಷೇಪಣೆಗಳನ್ನು ಬರಹಮೂಲಕವಾಗಿ ಕೆಳಗೆ ದಸ್ಕತ್ತು ಮಾಡಿರುವವರಿಗೆ ತಿಳಿಸಬೇಕು. ಇದಕ್ಕೆ ತಪ್ಪಿದರೆ, ಈಗ ಕೊಟ್ಟಿರುವ ಆಧಾರದ ಮೇಲೆ ಸದರಿ ಯವನಿಗೆ ಸಾಲಾಕೊಡಲ್ಪಡುತ್ತೆ.

ಗ್ರಾಮ	ಜಮೀನು ಹೆಸರು ಮತ್ತು ನಂಬರು	ಖುಸ್ಕಿ ಯಾ ತರಿ	ವಿಸ್ತೀರ್ಣ		ಆಕಾರ			ಷರಾ
			ಎಕರೆ.	ಗುಂಟೆ.	ರೂ.	ಆ.	ಪೈ.	

ಮೊಕ್ಕಾಂ. ತಾರೀಖು.

ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರ್.

ಷರಾ.—ಈ ನೋಟೀಸ್ ಜಾರೀ ಮಾಡುವವರು, ಜಾಮೀನುದಾರನಿಗೆ ಒಂದು ಕಾಪಿಯನ್ನು ಕೊಡಬೇಕು; ಒಬ್ಬರಿಗಿಂತಲೂ ಹೆಚ್ಚಾದ ಹಿಸ್ಸೇದಾರರು ಇದ್ದರೆ, ಆ ಪೈಕಿ ಒಬ್ಬರಿಗೆ ಕಾಪಿ ಕೊಡಬೇಕು. ಈ ರೀತಿ ಜಾರಿ ಮಾಡುವದಕ್ಕಾಗದೆ ಇದ್ದರೆ ಟಪ್ಪಾಲು ಮೂಲಕ ಒಂದು ಕಾಪಿಯನ್ನು ಸದರಿಯವನಿಗೆ ಕಳುಹಿಸಬೇಕು. ಮತ್ತೊಂದು ಕಾಪಿಯನ್ನು ಡೆಪ್ಯುಟಿ ಕಮಿಷನರವರ ಕಚೇರಿಯಲ್ಲಿಯೂ ಮತ್ತು ಜಮೀನುದಾರ ವಾಸಮಾಡುವ ಮನೆಯ ಮೇಲೂ ಬಹಿರಂಗವಾದ ಸ್ಥಳದಲ್ಲಿ ಚಿಕಟಾಯಿಸಬೇಕು. ಈತನು ಒಂದು ಗ್ರಾಮದಲ್ಲಿ ವಾಸಮಾಡದೆಯೂ ಅಥವಾ ಆತನ ವಾಸಸ್ಥಳ ಗೊತ್ತಾಗದೆಯೂ ಇದ್ದಲ್ಲಿ, ಈ ನೋಟೀಸನ್ನು, ಸದರಿ ಜಮೀನುಗಳ ವಿಷಯದಲ್ಲಿ, ಜಮೀನುದಾರನ ಸ್ಥಳೀಕ ಮುತಾಲೀಕನ ಮೇಲೆ ಜಾರಿ ಮಾಡತಕ್ಕದ್ದು. ನೋಟೀಸಿನ ಒಂದು ಕಾಪಿಯನ್ನು ಜಮೀನಿನ ಮೇಲೂ ಗ್ರಾಮದ ಚಾವಡಿಯಲ್ಲಿಯೂ ಸಹಾ ಚಿಕಟಾಯಿಸಬೇಕು.

ನಂ. 4. ಜಮಿಾನು ಆಬಾದು ಸಾಲಗಳ ರೆಗ್ಯುಲೇಷನ್ ಅಥವಾ ಲ್ಯಾಂಡ್ ರೆವಿನ್ಯು ಕೋಡ್ 194ನೆ ಪ್ರಕರಣ ಪ್ರಕಾರ ಅರ್ಜಿದಾರನಿಗೆ ಕೊಡಬೇಕಾದ ನೋಟೀಸ್.

ಎಂಬ ಗ್ರಾಮ ಯಾ ಹಳ್ಳಿಯಲ್ಲಿ ವಾಸಮಾಡುವ ಎಂಬುವನ ಮಗನಾದ ಎಂಬುವನಿಗೆ ನೀವು (ಇಲ್ಲಿ ತಪಶೀಲ್ ನಮೂದಿಸಬೇಕು.)

ಮೊಬಲಗು ಸಾಲಾ ಕೊಡಬೇಕೆಂದು ಬರೆದುಕೊಂಡ ಅರ್ಜಿ ವಿಷಯದಲ್ಲಿ ನೀವು ಖುದ್ದು ಅಥವಾ ಏಜಂಟ್ ಮೂಲಕ ಹಾಜರಾಗಿ ಇದರಡಿ ಕಂಡ ಸಂಗತಿಯನ್ನು ತಿಳಿಸ ಬೇಕಾಗಿ ಇರುವದರಿಂದಲೂ, ಅಥವಾ ಆವಶ್ಯಕವಾದ ದಸ್ತಾವೇಜುಗಳನ್ನು ಬರೆದು ಕೊಟ್ಟು ಅಪೇಕ್ಷಿಸಿದ ಸಾಲದ ಮೊಬಲಗನ್ನು ಪಡೆಯಬೇಕಾಗಿರುವದರಿಂದಲೂ, ನೀವು ಸ್ಥಳದಲ್ಲಿ ನೆ ತಾರೀಖಿನಲ್ಲಿ ರ ಸಮಕ್ಷಮ ಹಾಜರಾಗಬೇಕಾಗಿ ಇದೆ.

ನೀವು ಇದರಂತೆ ಹಾಜರಾಗದೆ ತಪ್ಪಿದರೆ ನಿಮ್ಮ ಅರ್ಜಿ ತಿರಸ್ಕರಿಸಲ್ಪಡುತ್ತೆ.

ಮೊಕ್ಕಾಂ. **ತಾರೀಖು.**

ನೋಟೀಸ್ ಕೊಡತಕ್ಕ ಆಫಿಸರ ಹುದ್ದೆ ಮತ್ತು ದಸ್ಕತ್ತು.

ಷರಾ :—ಈ ನೋಟೀಸನ್ನು ದ್ವಿಪ್ರತಿಯಾಗಿ ಕಳುಹಿಸಬೇಕು. ಒಂದು ಕಾಪಿಯನ್ನು ಅರ್ಜಿ ದಾರನಿಗಾಗಲಿ ಅಥವಾ ಅವನು ವಾಡಿಕೆಯಾಗಿ ವಾಸಮಾಡುವ ಸ್ಥಳದಲ್ಲಿ ಅವನ ಕುಟುಂಬಕ್ಕೆ ಸೇರಿದ ವಯಸ್ಸಾದ ಗಂಡಸರ ಪೈಕಿ ಯಾರಿಗಾಗಲಿ ಅಥವಾ ಅವನಿಂದ ನಿಯಮಿಸಲ್ಪಟ್ಟ ಏಜಂಟಿಗಾಗಲಿ ಕೊಡಬೇಕು; ಮತ್ತೊಂದು ಕಾಪಿಯನ್ನು, ಅರ್ಜಿದಾರನ ಅಥವಾ ಅವನ ಏಜಂಟಿನ ರುಜುವು ಸಹಿತ ನೋಟೀಸ್ ಕೊಟ್ಟ ಆಫಿಸರಿಗೆ ವಾಪಸು ಕಳುಹಿಸಬೇಕು. ನೋಟೀಸು ಜಾರಿ ಆಗದಿದ್ದರೆ ಹಾಗೆ ಜಾರಿ ಮಾಡದೆ ತಪ್ಪಿದ್ದಕ್ಕೆ ಕಾರಣವನ್ನು ನಮೂದುಮಾಡಿ ಅದನ್ನು ವಾಪಸು ಕಳುಹಿಸಬೇಕು. ಅನುಕೂಲ ವಿದ್ದ ಸ್ಥಳದಲ್ಲೆಲ್ಲಾ ಈ ನೋಟೀಸನ್ನು ಟಪ್ಪಾಲು ಮೂಲಕ ಸದರಿ ಜನಗಳಿಗೆ ಕಳುಹಿಸಬಹು ದಾಗಿ ಇರುತ್ತೆ.

ನಂ. 5. ಜಮಿಾನು ಆಬಾದು ಬಗ್ಗೆ ಕೊಡುವ ಸಾಲಗಳ ರೆಗ್ಯುಲೇಷನ್ ಅಥವಾ ಲ್ಯಾಂಡ್ ರೆವಿನ್ಯು ಕೋಡ್ 194ನೆ ಪ್ರಕರಣ.

ಅರ್ಜಿದಾರನಿಗೆ ತನ್ನ ಅರ್ಜಿ ತಿರಸ್ಕರಿಸಲ್ಪಟ್ಟತೆಂದು ತಿಳಿಯಪಡಿಸುವ ಬಗ್ಗೆ ಕೊಡಬೇಕಾದ ನೋಟೀಸ್.

ಡಿಸ್ಟ್ರಿಕ್ಟು ತಾಲ್ಲೂಕ್ ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್ ಆಫೀಸಿನಲ್ಲಿ ದರಖಾಸ್ತು ಅರ್ಜಿಗೆ ಕೊಟ್ಟ ನೆ ಇಸವಿ ಯ ನೆ ನಂಬರ್ ಎಂಬ ಗ್ರಾಮದ ಎಂಬುವನಿಗೆ ತಿಳಿಯಪಡಿಸುವದೇನಂದರೆ:—ಜಮಿಾನು ಆಬಾ ದು ಸಾಲದ ರೆಗ್ಯುಲೇಷನಿನ ಅಥವಾ ಲ್ಯಾಂಡ್ ರೆವಿನ್ಯು ಕೋಡು 194 ನೆ ಪ್ರಕರಣ

ಪ್ರಕಾರ ಮೊಬಲಗು ಸಾಲಾ ಕೊಡಿಸಬೇಕೆಂದು ಬರೆದುಕೊಂಡ ಅರ್ಜಿಯನ್ನು ಕಾರಣಗಳ ಮೇಲೆ ತಿರಸ್ಕರಿಸಿ ಇದೆ.

ನೆ ನಂಬರ್ ಅರ್ಜಿಮೇಲೆ ನೆ ತಾರೀಖಿನಲ್ಲಿ ಈ ಆಫೀಸಿನಿಂದ ಕೊಟ್ಟ ಹುಕುಮನ್ನು ನೋಡತಕ್ಕದ್ದು.

ಮೊಕ್ಕಾಂ. ತಾರೀಖು.

ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್.

ಷರಾ:—ಇದನ್ನು ಎರಡು ಪ್ರತಿ ತಯಾರ್ಮಾಡಿ ಆ ಪೈಕಿ ಒಂದನ್ನು ಪಾರ್ಟಿಗೆ ಕೊಡಬೇಕು; ಅವನು ಸಿಕ್ಕದಿದ್ದರೆ, ಅವನ ಪರವಾಗಿ ಅವನ ಸಂಸಾರದಲ್ಲಿ ವಾಸಮಾಡುವ ವಯಸ್ಸಾದ ಒಬ್ಬ ಗಂಡಸಿನ ವಶಕ್ಕಾಗಲಿ, ಅಥವಾ ಅವನು ವಾಸಮಾಡುವ ಗ್ರಾಮದ ಮುಖ್ಯಸ್ಥನ ವಶಕ್ಕಾಗಲಿ ಕೊಡಬೇಕು. ಮತ್ತೊಂದು ಕಾಪಿಯನ್ನು ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್ರಿಗೆ ವಾಪಸು ಕಳುಹಿಸಬೇಕು. ಇದರಲ್ಲಿ ನೋಟೀಸು ಯಾವರೀತಿ ಜಾರಿ ಮಾಡಿರುತ್ತೆಂಬ ಬಗ್ಗೆ ನೋಟೀಸು ಜಾರಿ ಮಾಡಿದವನ ಸ್ವಹಸ್ತದಲ್ಲಿ ಸರ್ಟಿಫಿಕೇಟಾಗಿರಬೇಕು. ಅನುಕೂಲವಿದ್ದ ಸ್ಥಳದಲ್ಲಿ, ಈ ನೋಟೀಸನ್ನು ಟಪಾಲು ಮೂಲಕ ಕಕ್ಷಿಗೆ ಕಳುಹಿಸಬಹುದಾಗಿರುತ್ತೆ.

ನಂ. 6. ಸ್ಥಳೀಕ ತನಿಖೆ ಮಾಡಿದ ಆಫೀಸರವರ ರಿಪೋರ್ಟು ಯಾ ರಿಕಾರ್ಡು.

ಅರ್ಜಿಯು ಜಮೀನು ಆಬಾದು ಸಾಲಗಳ ರೆಗ್ಯುಲೇಷನಿನ ಪ್ರಕಾರ
ಅಥವಾ ಲ್ಯಾಂಡ್ ರೆವಿನ್ಯೂ ಕೋಡ್ 194 ನೆ ಪ್ರಕರಣ
ಪ್ರಕಾರ ಬಂದಿರುತ್ತದೆಯೇ.

1. ಅರ್ಜಿಯ ಜಂಜರ್ ನಂಬರು.

2. (1) ಅರ್ಜಿದಾರನ ಗ್ರಾಮ ಮತ್ತು ಅವನ ಹೆಸರು. (2) ಸಾಲದ ಮೊಬಲಗು.

3. (1) ಆಬಾದು ಮಾಡಬೇಕೆಂದಿರುವ ಜಮೀನು ಇರತಕ್ಕ ಗ್ರಾಮ, ಸರ್ವೆ ನಂಬರು, ಅದರ ವಿವರಣೆ (ಖುಷ್ಕಿಯೆ, ತರಿಯೆ), ವಿಸ್ತೀರ್ಣ, ಆಕಾರ. (2) ಸಾಲ ಕೇಳುವ ಉದ್ದೇಶಗಳು.

4. (1) ಅರ್ಜಿದಾರನು ಒಬ್ಬನೇ ಜಮೀನಿನ ಪೂರಾ ಸ್ವಂತಕರ್ತನೇ, ಅಥವಾ ಇವನೂ ಅಲ್ಲದೆ ಇನ್ನೂ ಇತರರು ಈ ಜಮೀನಿಗೆ ಮಾಲೀಕರಿರುತ್ತಾರೆಯೇ; ಇನ್ನೂ ಇತರರು ಇದ್ದ ಪಕ್ಷದಲ್ಲಿ, ಇವನು ಆ ಕುಟುಂಬದ ಯಜಮಾನನೇ? (2) ಅರ್ಜಿದಾರನು ಜಂಟಿ ಹಿಡುವಳೀದಾರನಾಗಿದ್ದಲ್ಲಿ, ಇತರ ಜಂಟಿ ಹಿಡುವಳೀದಾರರು ಜಮೀನು ಆಬಾದು ವಿಷಯದಲ್ಲಿ ಬರಹ ಮೂಲಕ ಒಪ್ಪಿ ಇರುತ್ತಾರೆಯೇ? ಜಂಟಿ ಹಿಡುವಳಿಯಲ್ಲಿ ಅರ್ಜಿದಾರನಿಗೆ ಎಷ್ಟರಮಟ್ಟಿಗೆ ಹಕ್ಕು ಇರುತ್ತದೆ? ಮತ್ತು ಅವರುಗಳು ಅರ್ಜಿದಾರನ ಹಿಸ್ಸೆ ಭೋಗ್ಯಮಾಡುವ ವಿಷಯದಲ್ಲಿ ಒಪ್ಪುತ್ತಾರೆಯೇ? (3) ಅರ್ಜಿದಾರನು

ಪಿಕ್ಕಿದಾರನಾಗಿದ್ದ ಪಕ್ಷದಲ್ಲಿ ಅವನಿಗೆ ಜಮೀನಿನಲ್ಲಿ ವರ್ಗ ಹಕ್ಕು ಏನಾದರೂ ಇರುತ್ತದೆಯೇ? ಹಾಗಿದ್ದರೆ, ಅದು ಎಂಥಾದ್ದು? ಮತ್ತು 21 ನೆ ನಿಬಂಧನೆ ಪ್ರಕಾರ ಜಮೀನುದಾರನಿಗೆ ಕೊಟ್ಟ ನೋಟೀಸು ಜಾರಿಯಾಗಿರುತ್ತೆಯೇ? ಮತ್ತು ಇಬ್ಬರು ಸಾಕ್ಷಿಗಳಿಂದ ರುಜು ಹಾಕಿಸಿ ಬರಹ ಮೂಲಕ ತನ್ನ ಒಪ್ಪಿಕೆಯನ್ನು ಇದಕ್ಕೆ ಕೊಟ್ಟಿರುತ್ತಾನೆಯೇ? (4) ಮೈನರ್ ಪರವಾಗಿ ಅರ್ಜಿ ದಾಖಲಾಗಿದ್ದಲ್ಲಿ, ಆ ಅರ್ಜಿಗೆ ನ್ಯಾಯವಾಗಿ ಮೊಕರರಾದ ಗಾರ್ಡಿಯರ್ನ ರ ಸೈನು ಆಗಿರುತ್ತೆಯೇ? ಈ ಜಮೀನಿನಲ್ಲಿ ಮೈನರಿಗೆ ಇರುವ ಹಕ್ಕಿನ ಸ್ವಭಾವ ಮತ್ತು ಪರಿಮಿತಿ ವಿಷಯದಲ್ಲಿ ಮೇಲಿನ 3 (1) ನೆ ಕಲಂನಲ್ಲಿ ಕಂಡ ತಪಶೀಲುಗಳನ್ನು ಇಲ್ಲಿ ಬರೆಯಬೇಕು. (5) ಅರ್ಜಿದಾರಳು ಹಿಂದೂ ವಿಧವೆಯಾಗಿದ್ದ ಪಕ್ಷದಲ್ಲಿ, ಅವಳ ಉತ್ತರ ವಾರಸುದಾರರು ಈ ಆಬಾದಿಗೆ ಒಪ್ಪಿರುತ್ತಾರೆಯೇ?

5. ಅರ್ಜಿಯು ವಾಜಬಿಯಾದದ್ದೇ? ಅರ್ಜೀದಾರನು ಧಡವತ್‌ದಾರನೇ?

6. ಅರ್ಜಿದಾರನು ಸರ್ಕಾರಕ್ಕೆ ಕೊಡಬೇಕಾದ ಜಮೀನಿನ ಕಂದಾಯವನ್ನು ಬಾಕಿಯಲ್ಲಿಟ್ಟುಕೊಂಡಿರುತ್ತಾನೆಯೇ? ಅಥವಾ ಹಿಂದೆ ಪಡೆದ ಸಾಲದ ಕಂತು ಬಾಕಿ ಇಟ್ಟುಕೊಂಡಿದ್ದಾನೆಯೇ?

7. ಆಧಾರ.—(*a*) ಆಬಾದಿಗೆ ತರುವದು ಜಮೀನಾಗಿದ್ದ ಪಕ್ಷದಲ್ಲಿ—(1) ಆಬಾದಿಗೆ ಬರುವ ಜಮೀನಿನಲ್ಲಿಯೇ ಉದ್ದೇಶಿಸಿರುವ ಅಭಿವೃದ್ಧಿಗೆ ಜಾಗಾ ಇರುತ್ತೆಯೇ? (2) ಸದರಿ ಜಮೀನಿನಲ್ಲಿ ಅರ್ಜಿದಾರನಿಗೆ ಇರುವ ಹಕ್ಕು ಹಾಲಿ ಎಷ್ಟು ಬಾಳುತ್ತದೆ? ಇದಕ್ಕೆ ಕಾರಣಗಳು. (3) ಇದರ ಮೇಲೆ ಹಿಂದಿನ ಸಾಲಗಳು ಏನಾದರೂ ಇರುತ್ತವೆಯೇ? ಭೋಗ್ಯದಾರರ ಹೆಸರು ಮತ್ತು ಅವರಿಗೆ ಸಲ್ಲಬೇಕಾದ ಮೊಬಲಗು ಎಷ್ಟು?

(*b*) ಆಸಾಮಿ ಜಾಮೀನಾಗಿದ್ದಲ್ಲಿ—(1) ಜಾಮೀನುದಾರರ ಹೆಸರುಗಳು, ಹುದ್ದೆ, ಅವರ ಆಸ್ತಿ ವಸೈರೆ. (2) ಎಷ್ಟು ಮೊಬಲಗಿಗೆ ಜಾಮೀನು?

(*c*) ಆಬಾದಿಗೆ ಬರುವ ಜಮೀನಲ್ಲದೆ ಇತರ ಜಮೀನುಗಳು ಆಧಾರವಾಗಿದ್ದರೆ, (1) ಅಂಥಾ ಜಮೀನಿನ ಸರ್ವೆ ನಂಬರು, ವಿವರಣೆ, ವಿಸ್ತೀರ್ಣ, ಆಕಾರ, ಮತ್ತು ಅದರಲ್ಲಿ ಜಾಮೀನುದಾರನಿಗೆ ಅಥವಾ ಅರ್ಜಿದಾರನಿಗೆ ಇರುವ ಹಕ್ಕು ಎಷ್ಟರ ಮೌಲ್ಯ ಬಾಳತಕ್ಕದ್ದು, ಇದಕ್ಕೆ ಕಾರಣಗಳು. (2) ಈ ಜಮೀನುಗಳು ಅರ್ಜಿದಾರನ ಅಥವಾ ಜಾಮೀನುದಾರನ ಹೆಸರಿನಲ್ಲಿ ರಿಜಿಸ್ಟರಾಗಿರುತ್ತವೆಯೆ? ಮತ್ತು ಅವರ ಸ್ವಾಧೀನದಲ್ಲಿರುತ್ತೆಯೆ? ಇವುಗಳ ಮೇಲೆ ಸಾಲಸೋಲಗಳು ಏನೂ ಇರುವದಿಲ್ಲವೆ? ಈ ಜಮೀನುಗಳಲ್ಲಿ ಇವರಿಗೆ ಇರುವ ಹಕ್ಕಿನ ಸ್ವಭಾವ ಮತ್ತು ಪರಿಮಿತಿ. (3) ಜಮೀನಿನ ಮೇಲೆ ಸಾಲ ಸೋಲ ಇದ್ದರೆ, ಭೋಗ್ಯದಾರರು ಯಾರು? ಮೊಬಲಗು ಎಷ್ಟು? ಜಮೀನಿನ ಬೆಲೆಯಲ್ಲಿ ಸಾಲದ ಮೊಬಲಗು ವಜಾ ಮಾಡಿದರೆ ಉಳಿಯುವುದು ಕೊಡಬೇಕೆಂದಿರುವ ಅಡ್ವಾನ್ಸು ಮೊಬಲಗಿಗೆ ಸರಿಯಾಗಿರುತ್ತೆಯೆ?

(*d*) ಜಮೀನಲ್ಲದೆ ಇತರ ಸ್ವತ್ತು ಆಧಾರ ಮಾಡಿದ್ದರೆ—ಅದರ ವಿವರಣೆ, ಇರತಕ್ಕ ಸ್ಥಳ, ಕಟ್ಟಡದ ಭಾಗಗಳು, ಭಾವಿ, ಮರ ವಗೈರೆ ಸೇರಿ ಆಗುವ ಅದರ ಬೆಲೆ. ಅದರ ಮೇಲೆ ಹಿಂದಿನ ಸಾಲಸೋಲಗಳು ಇದ್ದರೆ ಅವುಗಳ ಸ್ವಭಾವ ಮತ್ತು ಪರಿಮಿತಿ.

ಷರಾ.—ಅರ್ಜಿದಾರನಿಗೆ ಸೇರಿದ ಜಮೀನು ಆಧಾರಮಾಡಿ ಕೊಡುವದಕ್ಕೂ, ಜಾಮೀನುದಾರರು ಇತರ ಆಧಾರವನ್ನೂ ಕೊಟ್ಟಲ್ಲಿ, ಅಂಥಾ ಜಾಮೀನುದಾರರಿಗೆ ಸೇರಿದ ಜಮೀನು ಆಧಾರಮಾಡಿ ಕೊಡುವದಕ್ಕೂ ಭೇದವಿರುವದರಿಂದ ಅದನ್ನು ಸ್ಪಷ್ಟಪಡಿಸಬೇಕು. ಇಂಥಾ ಜಮೀನು ಒಂದು ಹೊಲದಲ್ಲಿ ಒಂದು ಭಾಗವಾಗಿದ್ದರೆ ಅದನ್ನು ಪೋಡು ಮಾಡಬೇಕು.

8. ಈ ಆಬಾದಿಗೆ 3 ನೆ ಪಕ್ಷದವರ ಆಕ್ಷೇಪಣೆ ಏನಾದರೂ ಇದ್ದರೆ ಅಂಥಾ ಆಕ್ಷೇಪಣೆ.

9. ಜಮೀನಿನ ಆಬಾದಿನಿಂದ ಯಾವ ತಾರೀಖಿನ ಲಾಗಾಯಿತು ಆದಾಯ ಉಂಟಾಗಬಹುದು ?

10. ಶಿಫಾರಸು ಮಾಡಲ್ಪಟ್ಟ ಸಾಲದ ಮೊಬಲಗಿನ ವಿಷಯದಲ್ಲಿ ಅಜಮಾಯಿಷಿ ಮಾಡಿದ ಆಫಿಸರುಗಳ ಅಭಿಪ್ರಾಯ.

ಆಧಾರ ಮಾಡಲ್ಪಟ್ಟ ಜಮೀನುಗಳ ವಿಷಯದಲ್ಲಿ ತಾಲ್ಲೂಕಿನ ರಿಜಿಸ್ಟ್ರೇಷನ್ ಮತ್ತು ರೆವಿನ್ಯು ಆಫೀಸುಗಳಲ್ಲಿ ಏನಾದರೂ ದಾಖಲೆ ನೋಡಿ ದೃಢಪಡಿಸಿದ್ದರೆ ಅದರ ಫಲಿತಾಂಶ.

ಈ ಸಾಲವನ್ನು ಮಂಜೂರ್ಮಾಡುವದಕ್ಕೆ ಅಧಿಕಾರಹೊಂದಿದ ಆಫೀಸರ ಫೈಸಲು ; ಅಮಲ್ದಾರ್ರಿಗೆ ಈ ಅಧಿಕಾರವಿಲ್ಲದಿದ್ದರೆ ಅವರ ಶಿಫಾರಸು.

ಶೇಕದಾರ್ ಅಥವಾ ಅಜಮಾಯಿಷಿ ಮಾಡುವ ಇತರ ಆಫಿಸರ ದಸ್ಕತ್ತು.

ಶೇಕದಾರ್ ಅಥವಾ ಸಾಲಾ ಮಂಜೂರ್ಮಾಡುವ ಲಾಯಖು ಅಧಿಕಾರಿಯ ದಸ್ಕತ್ತು.

ಜಮೀನು ಆಬಾದು ಸಾಲಗಳ ರೆಗ್ಯುಲೇಷನ್

ಲ್ಯಾಂಡ್ ರೆವಿನ್ಯು ಕೋಡ್ 194 ನೆ ಪ್ರಕರಣ

ಸಾಲದ ಬಗ್ಯೆ ಬಂದ ಅರ್ಜಿ.

ನಂಬರ್...............

ಗ್ರಾಮ

ರಿಂದ

ನಂಬರು

ತಾರೀಖು

ಅಜಮಾಯಿಷಿ ವಿಷಯದ ರಿಕಾರ್ಡು

ತನಿಖೆಯಿಂದ ಬರೆದ ರಿಪೋರ್ಟು

ನಂ. 7.—ಸಾಲಗಳಿಗಾಗಿ ಸ್ವತ್ತು ಪರಾಧೀನವಾಗಿರುತ್ತದೆಯೇ ಇಲ್ಲವೇ ಎಂಬ ವಿಷಯದಲ್ಲಿ ಸರ್ಟಿಫಿಕೇಟು ಕಳುಹಿಸತಕ್ಕ ಬಗ್ಗೆ ರಿಜಿಸ್ಟ್ರೇಷನ್ ಇಲಾಖೆಗೆ ಬರೆಯತಕ್ಕ ಕ್ರಮ.

ನಂ.

ತಾರೀಖು

ಸಬ್ ರಿಜಿಸ್ಟ್ರಾರ್ರವರಿಗೆ

ಅರ್ಜಿದಾರನ ಹೆಸರು

ಅಪೇಕ್ಷಿಸುವ ಸಾಲದ ಮೊಬಲಗು

ಯಾವ ಜಮೀನಿನ* ವಿಷಯದಲ್ಲಿ ಪರಾಧೀನತೆ ಸರ್ಟಿಫಿಕೇಟ್ ಬೇಕಾಗಿರುತ್ತದೆಯೋ ಅಂಥಾ ಜಮೀನಿನ ತಪಶೀಲು.

ಗ್ರಾಮದ ಹೆಸರು	ತರಿಯೇ ಖುಷ್ಕಿಯೇ	ಸರ್ವೆ ನಂಬರು ಮತ್ತು ಪೈಕಿ ನಂಬರು ಅಕ್ಷರ	ವಿಸ್ತೀರ್ಣ		ಆಕಾರ			ಷರಾ
			ಎಕರೆ	ಗುಂಟೆ	ರೂ.	ಆ.	ಪೈ.	

ಷರಾ.

ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್.

*ಇತರ ಸ್ಥಿರಸ್ವತ್ತಾಗಿದ್ದರೆ ಅದರ ತಪ್ಶೀಲನ್ನು ಸರಿಯಾಗಿ ವಿವರಿಸಬೇಕು.

ನಂ. 7.—ಸಾಲಗಳಿಗಾಗಿ ಸ್ವತ್ತು ಪರಾಧೀನವಾಗಿರುತ್ತದೆಯೇ ಇಲ್ಲವೇ ಎಂಬ ವಿಷಯದಲ್ಲಿ ಸರ್ಟಿಫಿಕೇಟು ಕಳುಹಿಸತಕ್ಕ ಬಗ್ಗೆ ರಿಜಿಸ್ಟ್ರೇಷನ್ ಇಲಾಖೆಗೆ ಬರೆಯತಕ್ಕ ಕ್ರಮ.

ತಾಲ್ಲೂಕು ಆಫೀಸು.

ನಂ.

ತಾಲ್ಲೂಕು ಅಮಲ್ದಾರರಿಂದ.

ತಾರೀಖು

ಸಬ್ ರಿಜಿಸ್ಟ್ರಾರ್ರವರಿಗೆ

ಇದರಡಿ ಕಂಡ ರೈತನು ಕಾನೂನು ಅನುಸರಿಸಿ ಸರ್ಕಾರದಿಂದ ಮೊಬಲಗು ಸಾಲಾ ಕೊಡಬೇಕೆಂದು ಅರ್ಜಿ ಕೊಟ್ಟಿರುವುದರಿಂದ, ಇದರಡಿ ನಮೂದಾಗುವ ಜಮೀನುಗಳ* ಮೇಲೆ ಸಾಲಗಳು ಆಗಿ ಪರಾಧೀನವಾಗಿರುತ್ತವೆಯೆಂಬ ಅಂಶವನ್ನು ಕಂಡುಹಿಡಿಯುವುದಕ್ಕೆ ಅವಶ್ಯಕವಾದ ದಾಖಿಲೆಗಳನ್ನು ದಯವಿಟ್ಟು ಹುಡುಕಿಸಿ ಆ ಬಗ್ಗೆ ಸರ್ಟಿಫಿಕೇಟನ್ನು ಜಾಗ್ರತೇಲಿ ಕಳುಹಿಸಿಕೊಡಬೇಕೆಂದು ಕೋರಿದೆ.

ನಂಬರು ಮತ್ತು ಗ್ರಾಮದ ಹೆಸರು	ಅರ್ಜಿದಾರನ ಹೆಸರು	ಆಧಾರ ಮಾಡುವ ಜಮೀನಿನ ತಪಶೀಲು								ಷರಾ
		ಖುಷ್ಕಿಯೇ ತರಿಯೇ	ಸರ್ವೆ ನಂಬರ್		ವಿಸ್ತೀರ್ಣ		ಆಕಾರ			
			ನಂಬರ್	ಅಕ್ಷರ						
					ಎಕರೆ	ಗುಂಟೆ	ರೂ.	ಆ.	ಪೈ.	

ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್.

* ಇತರ ಸ್ಥಿರಸ್ವತ್ತಾಗಿದ್ದರೆ ಅದರ ತಪ್ಶೀಲನ್ನು ಸರಿಯಾಗಿ ವಿವರಿಸಬೇಕು.

ತಾಲ್ಲೂಕು ಅಮಲ್ದಾರರಿಂದ ಸಬ್ ರಿಜಿಸ್ಟ್ರಾರರವರಿಗೆ

ತಾರೀಖು

ನಂ.

ಸಂಗತಿ

ಇದರಲ್ಲಿ ಕಂಡ ಜಮೀನಿನ ವಿಷಯದಲ್ಲಿ ಪರಾಧೀನತೆ ಸರ್ಟಿಫಿಕೇಟ್ ಕಳುಹಿಸಬೇಕೆಂಬ ವಿಷಯು.

ನಂ. 8. ಜಮೀನು ಆಬಾದು ಸಾಲಗಳ ರೆಗ್ಯುಲೇಷನ್ ಅಥವಾ ಲ್ಯಾಂಡ್ ರೆವಿನ್ಯೂ ಕೋಡ್ 194 ನೆ ಪ್ರಕರಣದ ಪ್ರಕಾರ ಸಾಲ ಮಂಜೂರ್ಮಾಡತಕ್ಕ ಹುಕುಂ.

ನೆ ಇಸವಿ ನಂಬರ್

1. ಸ್ಥಳದಲ್ಲಿ ವಾಸಮಾಡುವ ಎಂಬುವನ ಮಗನಾದ ಜಾತಿಗೆ ಸೇರಿದ ಕಸಬು ಮಾಡುವ ಎಂಬುವನಿಗೆ ರೂಪಾಯಿಗಳನ್ನೂ ಎಂಬುವರ ಸಮ್ಮತಿ ಮೇಲೆ (ಸಂಬಂಧಪಟ್ಟ ರಿಕಾರ್ಡನ್ನು ಇದಕ್ಕೆ ಸೇರಿಸಿದೆ.*) ಜಮೀನು ಆಬಾದು ಸಾಲಗಳ ರೆಗ್ಯುಲೇಷನ್ / ಲ್ಯಾಂಡ್ ರೆವಿನ್ಯೂ ಕೋಡು 194 ನೆ ಪ್ರಕರಣ ಅನುಸರಿಸಿ ಕೆಲಸಕ್ಕೋಸ್ಕರ (†) ಆಬಾದಿಗಾಗಿ (‡) ಇದರಡಿ ಕಂಡ ಷರತ್ತುಗಳ ಮೇಲೆ ಸಾಲವಾಗಿ ಮಂಜೂರ್ಮಾಡಿ ಇರುತ್ತದೆ.

2. ಸದರೀ ಷರತ್ತುಗಳನ್ನು ಇದರಡಿ ನಮೂದಿಸಿರುತ್ತದೆ:—

(*a*) ಈ ಸಾಲದ ಮೊಬಲಗನ್ನು (ಸಾಲ ತೆಗೆದುಕೊಳ್ಳುವವನ ಹೆಸರು) ಎಂಬುವನಿಗೆ ಕಂತುಗಳಾಗಿ ಅವಶ್ಯಕವಾದ ಆಧಾರ ದಸ್ತಾವೇಜುಗಳನ್ನು ಅವನಿಂದ ಬರೆಸಿಕೊಂಡನಂತರ ಪಾವತಿ ಮಾಡತಕ್ಕದ್ದು. ಮೊದಲನೆ ಕಂತು ಈ ಹುಕುಂ ಹಾಜರ್ಮಾಡಿದ ಒಡನೆಯೇ (ಮೊಬಲಗು ಪಾವತಿ ಬಗ್ಗೆ ಈ ಹುಕುಂ ಹಾಜರ್ಮಾಡಬೇಕಾದ ಸ್ಥಳವನ್ನು ಇಲ್ಲಿ ಬರೆಯಬೇಕು) ಸ್ಥಳದಲ್ಲಿ ಕೊಡಲ್ಪಡುತ್ತದೆ. ಮೊದಲನೆ ಕಂತಿನ ಮೊಬಲಗನ್ನು ಸರಿಯಾಗಿ ಉಪಯೋಗಿಸಿರುತ್ತದೆಂದು ರುಜುವಾತು ಕೊಟ್ಟನಂತರ ಎರಡನೆ ಕಂತಿನ ಮೊಬಲಗು ಕೊಡಲ್ಪಡುತ್ತದೆ.

---

* ಜಮೀನನ್ನು ಅಭಿವೃದ್ಧಿಗೆ ತರುವುದಕ್ಕೆ ಹಕ್ಕುಳ್ಳವನ ಅನುಮತಿಯಿಂದ ಅಂಥಾ ಹಕ್ಕು ಇಲ್ಲದವನಿಗೆ ಸಾಲಾ ಕೊಡುವ ಸಂದರ್ಭದಲ್ಲಿ ನಮೂದಿಸತಕ್ಕದ್ದು.

† ಸಾಲಾ ಯಾವ ಕೆಲಸಕ್ಕೋಸ್ಕರ ಕೊಡಲ್ಪಡುತ್ತದೆಯೋ ಅದನ್ನು ಇಲ್ಲಿ ಚೆನ್ನಾಗಿ ವಿವರಿಸಬೇಕು.

‡ ಆಬಾದಿಗೆ ಬರುವ ಜಮೀನಿನ ತಪಸೀಲನ್ನು ಇಲ್ಲಿ ಬರೆಯಬೇಕು.

(*b*) (1) ಮೊದಲನೆ ಕಂತಿನ ಮೊಬಲಗನ್ನು (ಮೊದಲನೆ ಕಂತಿನ ಮೊಬಲಗು ಎಷ್ಟು ಕಾಲದ ಒಳಗಾಗಿ ಉಪಯೋಗಿಸಬೇಕೆಂದು ಕ್ಲುಪ್ತಪಡಿಸಿರುತ್ತದೆಯೋ ಆ ಕಾಲವನ್ನು ಇಲ್ಲಿ ಬರೆಯಬೇಕು) ಕಾಲದ ಒಳಗಾಗಿ ಕೆಲಸಕ್ಕೆ ಉಪಯೋಗಿಸದೆ ಇದ್ದ ಪಕ್ಷದಲ್ಲಿ; ಅಥವಾ (2) ಸಾಲದ ಮೊಬಲಗಿನ ಪೈಕಿ ಯಾವ ಭಾಗವನ್ನಾದರೂ ಸರಿಯೇ ನಿಯಮಿತ ಕೆಲಸಕ್ಕಲ್ಲದೆ ಬೇರೆ ಕೆಲಸಗಳಿಗೆ ದುರುಪಯೋಗಪಡಿಸಿರುತ್ತದೆಂದಾಗಲೀ, ಅಥವಾ ಸಾಲದ ಪೂರಾ ಮೊಬಲಗನ್ನು ನಿಯಮಿತ ಕೆಲಸಕ್ಕೆ ಸಂಪೂರ್ಣವಾಗಿ (ಪೂರಾ ಸಾಲದ ಮೊಬಲಗು ಎಷ್ಟು ಕಾಲದ ಒಳಗಾಗಿ ನಿಯಮಿತ ಕೆಲಸಕ್ಕೆ ಉಪಯೋಗಿಸಬೇಕೆಂದು ಗೊತ್ತಾಗಿರುತ್ತದೆಯೋ ಆ ಕಾಲವನ್ನು ಇಲ್ಲಿ ನಮೂದಿಸಬೇಕು) ಕಾಲದ ಒಳಗೆ ಉಪಯೋಗಿಸಿ ಇರುವುದಿಲ್ಲವೆಂತಾಗಲೀ, ಡೆಪ್ಯುಟಿ ಕಮಿಷನರವರಿಗೆ ತೃಪ್ತಿಕರವಾಗಿ ರುಜುವಾತಾದಲ್ಲಿ ಸಾಲದ ಪೈಕಿ ಪಾವತಿ ಮಾಡದೆ ನಿಂತ ಪೂರಾ ಮೊಬಲಗನ್ನಾಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರು ಗೊತ್ತುಮಾಡುವ ಒಂದು ಭಾಗದ ಮೊಬಲಗನ್ನಾಗಲಿ ಶೇಕಡಾ 6¼ ರಂತೆ ಬಡ್ಡಿ ಮತ್ತು ಖರ್ಚೇನಾದರು ಬಿದ್ದು ಇದ್ದಲ್ಲಿ ಅಂಥಾ ಖರ್ಚು ಸಹಿತ ಸರ್ಕಾರಕ್ಕೆ ತಕ್ಷಣವೇ ವಸೂಲಾಗತಕ್ಕ ಬಾಕಿಯಂತೆ ಭಾವಿಸಬೇಕು. (3) ಆದರೆ, ಸಾಲಾ ತೆಗೆದುಕೊಳ್ಳುವವನ ಹತೋಟಿಗೆ ಮೀರಿದ ಕಾರಣಗಳಿಂದ ಎಂದರೆ ಅವನಿಂದ ಯಾವ ಲೋಪವೂ ಇಲ್ಲದೆ ದೈವವಶಾತ್ ಕೆಲಸವು ಸಂಪೂರ್ಣವಾಗಿ ಕೆಟ್ಟುಹೋದರೆ, ಆ ಸಂಗತಿಯನ್ನು ರೆವಿನ್ಯೂ ಕಮಿಷನರವರಿಗೆ ರಿಪೋರ್ಟು ಮಾಡಿ ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರಲ್ಲಿ ಒಂದು ಭಾಗವನ್ನಾಗಲಿ ವಸೂಲ್ಮಾಡಬೇಕೆಂಬ ವಿಷಯದಲ್ಲಿ ಅವರ ಅಪ್ಪಣೆಯನ್ನು ಪಡೆಯಬೇಕು.

(*c*) (1) ಈ ಸಾಲದ ಮೊಬಲಗನ್ನು ಶೇಕಡಾ (¶) ರಂತೆ ಆಗುವ ಬಡ್ಡಿ (§) ಸಹಿತ ಸಾಲೀಯಾನಾ ರೂಪಾಯಿಗಳ ಕಂತು ಪ್ರಕಾರ 190 –190 ನೆ ರೆವಿನ್ಯೂ ಸಾಲಿನ ಖಿಸ್ತಿನಿಂದ ಪ್ರಾರಂಭಿಸಿ 190 –190 ನೆ ಸಾಲಿಗೆ ಪೂರೈಸುವ ಹಾಗೆ ಕೊಡುತ್ತಾ ಬರಬೇಕು. ಪೂರೈಸಲ್ಪಟ್ಟ ಕೆಲಸವು ಲೋನು ಆರ್ಡರಿನಲ್ಲಿ ನಮೂದಿಸಿರುವ ಕಾಲದವರೆಗೆ ಶಾಶ್ವತವಾಗಿರತಕ್ಕಷ್ಟು ಮಜಬೂತಾಗಿ ಇಲ್ಲವೆಂದು ಡೆಪ್ಯುಟಿ ಕಮಿಷನರವರಿಗಾಗಲಿ ಅಥವಾ ಸಾಲಾ ಮಂಜೂರ್ಮಾಡಿದ ಆಫೀಸರಿಗಾಗಲಿ ಕಂಡುಬಂದಲ್ಲಿ ಅಂಥಾ ಸಾಲದ ಮೊಬಲಗನ್ನು ಕೊಡಲ್ಪಟ್ಟ ವಾಯಿದೆಗಿಂತಲೂ ಮುಂಚಿತವಾಗಿಯೇ ವಸೂಲ್ಮಾಡುವುದಕ್ಕೋಸ್ಕರ ಸಾಲೀಯಾನಾ ಕೊಡಬೇಕಾದ ಮೊಬಲಗನ್ನು ಹೆಚ್ಚಿಸುವುದೂ ಅಥವಾ ಖಿಸ್ತುಗಳನ್ನು ಕಮ್ಮಿಮಾಡುವುದೂ ಸದರೀ ಆಫೀಸರುಗಳ ಸೂಕ್ತಾನುಸಾರವಾದ ಆಲೋಚನೆಗೆ ಸೇರುತ್ತವೆ. (2) ಈ ರೀತಿ

¶ ಇಲ್ಲಿ ಬಡ್ಡೀ ದರವನ್ನು ಬರೆಯಬೇಕು. ಸಾಧಾರಣವಾಗಿ ದುರ್ಭಿಕ್ಷ ನಿವಾರಣೆಗಾಗಿ ಸಾಲಾ ಕೊಟ್ಟು ಇದ್ದ ಪಕ್ಷದಲ್ಲಿ ಶೇಕಡಾ 3 ರಂತೆಯೂ, ಇತರ ಸಂದರ್ಭಗಳಲ್ಲಿ ಶೇಕಡಾ 5 ರಂತೆಯೂ ಬಡ್ಡಿ ದಾಖಲ್ಮಾಡಬೇಕು.

§ ಬಡ್ಡಿ ಇಲ್ಲದೆ ಸಾಲಾ ಕೊಡುವ ಸಂದರ್ಭದಲ್ಲಿ ಇದನ್ನು ಬಿಟ್ಟುಬಿಡಬೇಕು.

ಸಾಲೀಯಾನಾ ಕೊಡಬೇಕಾದ ಮೊಬಲಗನ್ನು ಸಾಲಗಾರನ ಖಾತೆಗೆ ಸೇರಿಸಿ ಇದ್ದರೆ, ಅದನ್ನು ಗ್ರಾಮನೌಕರರಿಗೂ ಇಲ್ಲವಾದರೆ ಅಮಲ್‌ದಾರರಿಗೂ ಪಾವತಿಮಾಡಬೇಕು. ಈ ಮೊಬಲಗು ಕಂದಾಯದ ಜತೆಗೆ ಹೆಚ್ಚಾಗಿ ಕೊಡಬೇಕಾದದ್ದಾಗಿರುತ್ತದೆ. ಪರಂತು ಜಮೀನು ಆಬಾದು ** ಸಾಲಗಳ ರೆಗ್ಯುಲೇಷನಿನ 11 ನೆ ಪ್ರಕರಣದಲ್ಲಿ ನಮೂದಾಗುವ ಮೇರೆಗೆ ಅಲ್ಲದೆ, ಈ ಆಬಾದಿನಿಂದ ಜಮೀನಿನ ಬೆಲೆಯು ಹೆಚ್ಚಾಗಿರುತ್ತದೆಂಬ ಕಾರಣದ ಮೇಲೆ, ಮುಂದೆ ನಡೆಯುವ ರಿವಿಜನ್ ಸರ್ವೇ ಕಾಲದಲ್ಲಿ ಜಮೀನು ಕಂದಾಯವನ್ನು ಹೆಚ್ಚಿಸುವುದಿಲ್ಲ. (3) ಸಾಲೀಯಾನಾ ಕೊಡಬೇಕಾದ ಸಾಲದ ಕಂತಿನ ಮೊಬಲಗನ್ನು ಕೊಡದೆ ತಪ್ಪಿ, ಸದರೀ ಮೊಬಲಗಿನ ವಸೂಲಿಗೆ ಮತ್ಯಾವ ವಿಧದಿಂದಲೂ ರಹಾ ಇಲ್ಲದೆ ಇದ್ದರೆ, ಪಾವತಿ ಮಾಡದೆ ಉಳಿದಿರುವ ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರಲ್ಲಿ ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವ ಒಂದು ಭಾಗವನ್ನಾಗಲಿ ತಕ್ಷಣ ಸರ್ಕಾರಕ್ಕೆ ಬರಬೇಕಾದ ಬಾಕಿಯಂತೆ ಎಣಿಸತಕ್ಕದ್ದಾಗಿದೆ. ಮತ್ತು (*d*) ಷರತ್ತಿನಲ್ಲಿ ಕಂಡ ಪೂರಾ ಜಮೀನನ್ನಾಗಲಿ ಅಥವಾ ಅದರಲ್ಲಿ ಡೆಪ್ಯುಟಿ ಕಮಿಷನರವರಿಗೆ ಯುಕ್ತತೋರುವ ಒಂದು ಭಾಗವನ್ನಾಗಲಿ ಹರಾಜ್ ಮಾಡಿ ಸಾಲದ ಮೊಬಲಗನ್ನು ಬಡ್ಡಿ ಖರ್ಚು ದೇಖೀಲು ವಸೂಲ್ಮಾಡಿಕೊಳ್ಳಬೇಕು.

(*d*) †† ಸಾಲದ ಮೊಬಲಗನ್ನು ಬಡ್ಡಿ ಮತ್ತು ಖರ್ಚುಗಳು ಏನಾದರೂ ಇದ್ದರೆ ಅಂಥಾ ಖರ್ಚು ದೇಖೀಲು ವಾಪಸ್ ಪಾವತಿ ಮಾಡುವ ಬಗ್ಗೆ ಇದರಡಿ ಕಂಡ ಸ್ಥಿರಸ್ವತ್ತುಗಳನ್ನು (ಯಾವ ಜಮೀನಿನ ಆಬಾದಿಗಾಗಿ ಸಾಲಾ ಕೊಟ್ಟು ಇರುತ್ತದೆಯೋ ಅಂಥಾ ಜಮೀನಿನ ಜತೆಗೆ) ‡‡ ಸರ್ಕಾರಕ್ಕೆ ಆಧಾರ ಮಾಡಿರುತ್ತದೆ.

ಸಾಲಾ ಕೊಡತಕ್ಕ ಆಫಿಸರವರ ರುಜು.

ಮೇಲೆ ನಮೂದಿಸಿರುವ ಷರತ್ತುಗಳನ್ನು ಚೆನ್ನಾಗಿ ತಿಳಿದುಕೊಂಡು ಇರುತ್ತೇನೆ. ಮತ್ತು ಆ ಷರತ್ತುಗಳಿಗೆಲ್ಲಾ ಒಪ್ಪಿ ಇರುತ್ತೇನೆ.

ಸಾಲಾ ತೆಗೆದುಕೊಳ್ಳುವವನ ರುಜು.

** ಜಮೀನು ಆಬಾದಿಗಾಗಿ ಕೊಡತಕ್ಕ ಸಾಲಗಳ ವಿಷಯದಲ್ಲಿ ಮಾತ್ರ ಇದನ್ನು ಬರೆಯಬೇಕು.

†† ಟಿಪ್ಪಣಿ.—ಸಾಲಾ ತೆಗೆದುಕೊಳ್ಳುವವನಿಂದ ಅಥವಾ ಜಾಮೀನುದಾರ್ ಯಾ ಜಾಮೀನುದಾರರುಗಳಿಂದ ಸಾಲಕ್ಕಾಗಿ ಆಧಾರವಾಡಲ್ಪಡುವ ಸ್ಥಿರಸ್ವತ್ತುಗಳ ತಪಶೀಲನ್ನು ಲೋನ್ ಆರ್‌ಡರ್ (*d*) ಉಪಕಲಂ ಇರೇಬಿಯಲ್ಲಿ ಬರೆಯಬೇಕು. ಅಲ್ಲದೆ ಆಬಾದಿಗೆ ಬರುವ ಜಮೀನಿನ ತಪಶೀಲನ್ನು ಸಹಾ 1877 ನೆ ಇಸವಿಯ ರಿಜಿಸ್ಟ್ರೇಷನ್ ಆಕ್ಟ್ 21 ನೆ ಪ್ರಕರಣದಲ್ಲಿ ಹೇಳಿರುವ ಪ್ರಕಾರ ಬರೆಯಬೇಕು. ದುರ್ಭಿಕ್ಷ ನಿವಾರಣೆಗಾಗಿ ಸಾಲಾ ಕೊಟ್ಟದ್ದರೆ (*d*) ಷರತ್ತಿನಲ್ಲಿ ಬರೆದಿರುವ "ಮೊದಲನೆ ಕಂತನ್ನು" ಎಂಬ ಲಾಗಾಯಿತು ಕೊನೆವರೆಗಿನ ಮಾತುಗಳನ್ನು ಬಿಟ್ಟು, ಇವುಗಳಿಗೆ ಬದಲಾಗಿ "ತಿಂಗಳಿಗೆ ಒಂದಾವರ್ತಿ ಅಥವಾ ಎರಡು ತಿಂಗಳಿಗೆ ಒಂದಾವರ್ತಿ ಕೊಡಬೇಕು" ಎಂಬ ಪದಗಳನ್ನು ಉಪಯೋಗಿಸಬೇಕು.

‡‡ ಆವರಣ ಚಿಹ್ನೆಯಲ್ಲಿ ಇರುವ ಮಾತುಗಳನ್ನು ಲ್ಯಾಂಡ್ ರೆವಿನ್ಯು ಕೋಡ್ 194 ನೆ ಪ್ರಕರಣದ ಪ್ರಕಾರ ಕೊಡುವ ಸಾಲಗಳ ವಿಷಯದಲ್ಲಿ ಬಿಟ್ಟುಬಿಡತಕ್ಕದ್ದು.

8 ನೆ ನಂಬರ್ ನಮೂನೆ (ಪೂರ್ವಣಿ).

ಸಾಲದ ವಸೂಲಾತಿಗಳು.

ಪಾವತಿ ಮಾಡಬೇಕಾದ ಮೊಬಲಗು		ಗೊತ್ತಾಗಿರುವ ಕಂತಿನ ಪೈಕಿ ಬಡ್ಡಿ ಎಷ್ಟು, ಅಸಲು ಎಷ್ಟು ಎಂಬ ಬಗ್ಗೆ ವಿವರ		ವಾಪಸ್ ಪಾವತಿ ಮಾಡಿದ ಮೊಬಲಗು			ಬಾಕಿ ವಸೂಲಾಗಬೇಕಾಗಿರುವುದು			
					ಜಮಾ ಹಿಡಿದಿರುವುದು					
ರೆವಿನ್ಯೂ ಸಾಲ್	ಮೊಬಲಗು	2 ನೆ ಕಲಮಿನಲ್ಲಿ ನಮೂದಿಸಿ ರುವ ಮೊಬಲಗಿನ ಮೇಲೆ ಸಾಲದ ತಾರೀಖು ಲಾಗಾಯ್ತು ಮೊದಲನೆ ಕಂತಿನ ತಾರೀಖು ವರೆಗೆ, ಆಚೆ ವರ್ಷಗಳಲ್ಲಿ ಒಂದು ವರ್ಷದ ವರೆಗೆ ಶೇಕಡಾ . . . . ರಂತೆ ಆಗುವ ಬಡ್ಡಿ	ಅಸಲು	ಈ ಸಾಲಿನಲ್ಲಿ ಪಾವತಿ ಮಾಡಿದ ಮೊಬಲಗು	ಬಡ್ಡಿಯ ಬಾಬಿಗೆ ಎಷ್ಟು ?	ಅಸಲ್ ಬಾಬಿಗೆ ಎಷ್ಟು ?	ಬಡ್ಡಿ (ಎಂದರೆ 3, 4 ನೆ ಕಲಮುಗಳ ಒಟ್ಟಿನಲ್ಲಿ 5 ನೆ ಕಲಮನ್ನು ಕಳೆದುದರಿಂದ ಬಂದ ಮೊಬಲಗು)	ಅಸಲು (ಎಂದರೆ 2 ನೆ ಕಲಮುಗಳು 7 ನೆ ಕಲಮುಗಳ ಇರುವ ವ್ಯತ್ಯಾಸ)	ಅಮಲ್ದಾರ್ರವರ ಸಂಕ್ಷಿಪ್ತ ಸೈನು	ಷರಾ
1	2	3	4	5	6	7	8	9	10	11
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.		

ನಂಬರ್ ೨ (a)—ಸಾಲಾ ತೆಗೆದುಕೊಂಡವರು ಬರೆದುಕೊಡಬೇಕಾದ ಆಧಾರ ಪತ್ರ.

ಈ ಪತ್ರ ಅಥವಾ ದಸ್ತಾವೇಜು ನೆ ಇಸವಿ ನೆ ತಾರೀಖಿನಲ್ಲಿ (ಭೋಗ್ಯ ಅಥವಾ ಆಧಾರ ಮಾಡಿದವರೆಂದು ನಮೂದಿಸಲ್ಪಡುವ) ಗ್ರಾಮದ ಎಂಬುವರಿಂದ (ಭೋಗ್ಯಕ್ಕೆ ಅಥವಾ ಆಧಾರಕ್ಕೆ ಇಟ್ಟುಕೊಂಡವರು ಎಂದು ನಮೂದಿಸಲ್ಪಡುವ) ಮೈಸೂರು ದಿವಾನರವರ ಪರವಾಗಿ ಬರೆದುಕೊಟ್ಟು ಇರುತ್ತೆ. ಎಂಬವನು ನೇ ಇಸವಿ ನೇ ತಾರೀಖಿನಲ್ಲಿ ಭೋಗ್ಯ ಅಥವಾ ಆಧಾರ ಮಾಡಿಕೊಂಡವರ ಕರ್ಫು ಡೆಪ್ಯುಟಿ ಕಮಿಷನರವರಿಂದ, 1890 ನೇ ಇಸವಿ ಜಮೀನು ಅಭಿವೃದ್ಧಿ ರೆಗ್ಯುಲೇಷನು ಪ್ರಕಾರ ಹುಕುಂ ಪಡೆದು ಇರುವದರಿಂದ, ಆ ಹುಕುಂ ಅನುಸರಿಸಿ, 1888 ನೇ ಇಸವಿ ಲ್ಯಾಂಡ್ ರೆವಿನ್ಯೂ ಕೋಡ್ 194 ನೇ ಪ್ರಕರಣ ಸದರಿ ಎಂಬುವರು (ಇಲ್ಲಿ ಕೆಲಸದ ತಪಶೀಲು ಅಥವಾ ಸಾಲದ ಉದ್ದೇಶವನ್ನು ಬರೆಯಬೇಕು.) ಕೆಲಸಕ್ಕೋಸ್ಕರ ಭೋಗ್ಯಕ್ಕೆ ಇಟ್ಟುಕೊಂಡವರ ಕಡೆಯಿಂದ ಒಟ್ಟು ರೂಪಾಯಿಗಳು ಸಾಲವಾಗಿ ಪಡೆಯುವದಕ್ಕೆ ಬಾಧ್ಯತೆವುಳ್ಳವರಾಗಿ ಇರುತ್ತಾರೆ. ಸದರಿ ಸಾಲದ ಮೊಬಲಗನ್ನು ಸರಿಯಾಗಿ ನಿಯಮಿತ ಕೆಲಸಕ್ಕೆ ವಿನಿಯೋಗಿಸುವ ವಿಷಯದಲ್ಲಿಯೂ, ಸದರಿ ಸಾಲವನ್ನು ಸದರಿ ಹುಕ್ಕುಂನಲ್ಲಿ ಕಂಡ ಷರತ್ತುಗಳ ಪ್ರಕಾರ ಸರಿಯಾಗಿ ಕ್ಲುಪ್ತಕಾಲಗಳಲ್ಲಿ ವಾಪಸು ಸಂದಾಯ ಮಾಡುವ ವಿಷಯದಲ್ಲಿಯೂ ಸಹಾ, ಭೋಗ್ಯ ತೆಗೆದುಕೊಂಡವರು ಅಥವಾ ಅವರ ಕಡೆಯವರು ಸರಿಯಾದ ಆಧಾರ ಯಾ ಜಾಮೀನು ಅಪೇಕ್ಷಿಸುವದರಿಂದ, ಅಂಥಾ ಜಾಮೀನು ಯಾ ಆಧಾರ ಕೊಡುವದಕ್ಕಾಗಿ, ಭೋಗ್ಯ ಮಾಡಿದವರು ಈ ಕಾಗದ ಪತ್ರಗಳನ್ನು ದಸ್ಕತ್ತುನಿಶಿ ಬರೆದುಕೊಡಲು ಒಪ್ಪಿ ಇರುತ್ತಾರೆ.

ಈ ಕಾಗದ ಪತ್ರಗಳಲ್ಲಿ ಏನು ಹೇಳಿರುತ್ತೆಯಂದರೆ, ಭೋಗ್ಯ ಅಥವಾ ಆಧಾರ ಮಾಡಿದವರು ಸದರಿ ಸಾಲವನ್ನು ತೆಗೆದುಕೊಂಡು ಇರುವ ಕಾರಣದಿಂದಲೂ ಮತ್ತು ಸದರಿ ಕರಾರನ್ನು ಬರೆದುಕೊಟ್ಟು ಇರುವದರಿಂದಲೂ ಸಹಾ, ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ಥಿರಸ್ವತ್ತುಗಳನ್ನು ಅವುಗಳಿಗೆ ಲಗತ್ತಾಗಿ ಇರುವ ಕಟ್ಟಡ ಭಾವಿ ವಗೈರೆಗಳ ಸಮೇತ, ಮುಂದೆ ಹೇಳುವ ರೀತಿಯಲ್ಲಿ ಭೋಗ್ಯದಿಂದ ಬಿಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು, ಭೋಗ್ಯಕ್ಕೆ ತೆಗೆದುಕೊಂಡವರಿಗೂ, ಅವರ ಉತ್ತರಾಧಿಕಾರಿಗಳಿಗೂ ಮತ್ತು ಅವರಿಂದ ನಿಯಮಿಸಲ್ಪಟ್ಟವರಿಗೂ, ಈ ಪತ್ರಗಳ ಮೂಲಕ ವರ್ಗ ಮಾಡಿಕೊಟ್ಟು ಇರುತ್ತಾರೆ.

ಭೋಗ್ಯ ಮಾಡಿದವರು, ಅವರ ಕಡೆ ನ್ಯಾಯವಾದ ಪ್ರತಿನಿಧಿಗಳು, ಮತ್ತು ಅವರಿಂದ ನೇಮಿಸಲ್ಪಟ್ಟವರು, ಸಾಲದ ಷರತ್ತುಗಳ ಪ್ರಕಾರ ನಡೆದುಕೊಂಡು, ಸಾಲದ

ಪೂರಾ ಮೊಬಲಗನ್ನು ಸಾಲದ ಹುಕ್ಕುಂನಲ್ಲಿ ನಮೂದಾಗುವ ರೀತಿಯಲ್ಲಿ ಉಪಯೋಗಿಸಿ ಸದರಿ ಭೋಗ್ಯ ಮಾಡಿದವರು, ಅವರ ಕಡೆ ನ್ಯಾಯವಾದ ಪ್ರತಿನಿಧಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಸದರಿ ಸಾಲದ ಅಸಲ್ ಮೊಬಲಗನ್ನು, ಅದರ ಮೇಲೆ ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿಯನ್ನು, ಮತ್ತು ಈ ಸಾಲ ಕೊಡುವದಕ್ಕಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಕೆಲಸಕ್ಕಾಗಲಿ ಭೋಗ್ಯಕ್ಕೆ ತೆಗೆದುಕೊಂಡವರಿಗೆ, ಇವರ ಉತ್ತರಾಧಿಕಾರಿಗಳಿಗೆ, ಮತ್ತು ಇವರಿಂದ ನೇಮಕವಾದವರಿಗೆ ಏನಾದರು ಖರ್ಚು ತಗಲಿದ್ದರೆ ಅಂಥಾ ಖರ್ಚನ್ನು ಸಹಾ ಸರಿಯಾಗಿ ವಾಪಸು ಸಂದಾಯ ಮಾಡಿದ ಪಕ್ಷದಲ್ಲಿ ಭೋಗ್ಯಕ್ಕೆ ತೆಗೆದುಕೊಂಡವರು, ಅವರ ಉತ್ತರಾಧಿಕಾರಿಗಳು ಅಥವಾ ಅವರಿಂದ ನೇಮಿಸಲ್ಪಟ್ಟವರು ಸದರಿ ಸ್ಥಿರಸ್ವತ್ತುಗಳನ್ನು ಭೋಗ್ಯ ಮಾಡಿದವರಿಗಾಗಲಿ ಅವರ ನ್ಯಾಯವಾದ ಪ್ರತಿನಿಧಿಗಳಿಗಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟವರಿಗಾಗಲಿ ಅಥವಾ ಇವರು ಯಾರಿಗೆ ಒಪ್ಪಿಸಿಕೊಡಬೇಕೆಂದು ಹೇಳುತ್ತಾರೆಯೋ ಅವರಿಗಾಗಲಿ ವಾಪಸು ವರ್ಗಾಯಿಸಲು ಬದ್ಧರಾಗಿರುತ್ತಾರೆಂತ ಇದರಿಂದ ಒಪ್ಪಿಕೊಂಡಿರುತ್ತದೆ.

ಪರಂತು ಭೋಗ್ಯ ಮಾಡಿದವರು, ಅವರ ನ್ಯಾಯವಾದ ಪ್ರತಿನಿಧಿಗಳು, ಅಥವಾ ಅವರಿಂದ ನಿಯಮಿತರಾದವರು ಸಾಲದ ಷರತ್ತುಗಳಿಗೆ ತಪ್ಪಿ, ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರ ಒಂದು ಭಾಗವನ್ನಾಗಲಿ ಸಾಲದ ಹುಕ್ಕುಂಗೆ ವಿರೋಧವಾಗಿ ಉಪಯೋಗಿಸಿದರೂ, ಅಥವಾ ಸದರಿಯವರು ಸದರಿ ಸಾಲದ ಪೂರಾ ಮೊಬಲಗನ್ನಾಗಲಿ ಅದರ ಒಂದು ಭಾಗವನ್ನಾಗಲಿ ಅಥವಾ ಅದರ ಮೇಲೆ, ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿ ಅಥವಾ ತಗಲಿದ ಖರ್ಚುಗಳನ್ನಾಗಲಿ ಕೊಡದೆ ತಪ್ಪಿದರೂ ಮತ್ತು ಇಂಥಾ ಇತರ ಸಂದರ್ಭದಲ್ಲಿಯೂ ಕೂಡಾ, ಭೋಗ್ಯ ಮಾಡಿಕೊಂಡವರು, ಅವರ ಉತ್ತರಾಧಿಕಾರಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಅಥವಾ ತತ್ಕಾಲದ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರು ಸದರಿ ಸ್ಥಿರಸ್ವತ್ತುಗಳನ್ನು ಅಥವಾ ಅವುಗಳ ಪೈಕಿ ಒಂದು ಭಾಗವನ್ನು ಹರಾಜು ಮಾಡಿಸುವದು ನ್ಯಾಯವಾಗಿರುವದಲ್ಲದೆ ಸದರಿ ಹರಾಜಿನಲ್ಲಿ ಬಂದ ಮೊಬಲಗನ್ನು ಭೋಗ್ಯ ಮಾಡಿದವರ, ಅವರ ನ್ಯಾಯವಾದ ಪ್ರತಿನಿಧಿಗಳ ಅಥವಾ ಅವರಿಂದ ನೇಮಿಸಲ್ಪಟ್ಟವರ ತಪ್ಪಿತದಿಂದ ಭೋಗ್ಯ ಮಾಡಿಕೊಂಡವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ಅವರಿಂದ ನೇಮಿಸಲ್ಪಟ್ಟವರಿಗೆ ಉಂಟಾಗುವ ನಷ್ಟಕ್ಕೆ ಉತ್ತಾರ ಹಾಕತಕ್ಕದ್ದೆಂದು ಇದರಿಂದ ಒಪ್ಪಿಕೊಂಡಿರುತ್ತದೆ.

ಇದಕ್ಕೆ ಸಾಕ್ಷಿಯಾಗಿ ಭೋಗ್ಯ ಮಾಡಿರುವವನು ಅಥವಾ ಭೋಗ್ಯ ಮಾಡಿರುವವರು ಮೇಲೆ ನಮೂದಾಗಿರುವ ಸಾಲು, ಮಾಹೆ, ತಾರೀಖುಗಳಲ್ಲಿ ಈ ಕಾಗದ ಪತ್ರಗಳಿಗೆ ರುಜು ಮಾಡಿ ಇರುತ್ತಾರೆ.

ಮೇಲೆ ನಮೂದಿಸಿರುವ ಷೆಡ್ಯೂಲು.

ರಿಜಿಸ್ಟ್ರೇಷನ್ ಡಿಸ್ಟ್ರಿಕ್ಟು	ರಿಜಿಸ್ಟ್ರೇಷನ್ ಸಬ್ ಡಿಸ್ಟ್ರಿಕ್ಟು	ಗ್ರಾಮ	ಸ್ವತ್ತು ಮನೆಯಾಗಿದ್ದಲ್ಲಿ				ಸಾಗುವಳಿಯಾಗತಕ್ಕ ಜಮೀನಾಗಿದ್ದರೆ				
			ಸ್ವತ್ತಿನ ಎಲ್ಲೆಗಳು	ಕಟ್ಟಡಗಳ ತಪಶೀಲು ಮತ್ತು ಬೆಲೆ ಮತ್ತು ಎಷ್ಟು ಕಾಲದ ಪರಿಯಂತರ ಮಜಬೂತಾಗಿರಬಹುದು	ಕಟ್ಟಡ ನಿವೇಶನದ ವಿಸ್ತೀರ್ಣ ಮತ್ತು ಖಾಲಿಜಾಗಾ ಅಥವಾ ಕಂಪೌಂಡಿನ ವಿಸ್ತೀರ್ಣ	ಮರಗಳು ಭಾವಿಗಳು, ವಗೈರೆ	ಸರ್ವೆ ನಂಬರು	ತರಿ ಅಥವಾ ಖುಷ್ಕಿಯೇ	ವಿಸ್ತೀರ್ಣ	ಅಕಾರ	ಮರ, ಭಾವಿ ವಗೈರೆ
1	2	3	4	5	6	7	8	9	10	11	12

ಸಾಕ್ಷಿ ಸಾಲ ತೆಗೆದುಕೊಳ್ಳುವವನ ರುಜು

(1) ಮಗ ಗ್ರಾಮ

(2) ಮಗ ಗ್ರಾಮ

ರ ಸಮಕ್ಷಮ ಮೇಲೆ ನಮೂದಾಗುವ

ರಿಂದ ಸೈನಾಗಿರುತ್ತೆ.

ನಂ. 9 (*b*)—ಸಾಲ ತೆಗೆದುಕೊಳ್ಳುವವನಿಗಾಗಿ ಅವನ ಜಾಮೀನುದಾರನಿಂದ ಬರೆಸಿಕೊಳ್ಳಬೇಕಾದ ದಸ್ತಾವೇಜು.

190 ನೇ ಇಸವಿ ನೇ ತಾರೀಖಿನಲ್ಲಿ ಈ ದಸ್ತಾವೇಜು (ಭೋಗ್ಯ ಮಾಡಿದವರೆಂದು ನಮೂದಿಸಲ್ಪಡುವ) ಎಂಬುವರಿಂದ (ಭೋಗ್ಯಕ್ಕೆ ತೆಗೆದುಕೊಂಡವರೆಂದು ನಮೂದಿಸಲ್ಪಡುವ) ಮೈಸೂರು ದಿವಾನರವರ ಪರವಾಗಿ ಬರೆದು ಕೊಟ್ಟು ಇರುತ್ತೆ.

ಎಂಬುವನು ನೇ ಇಸವಿ ನೇ ತಾ|| ನಲ್ಲಿ ಭೋಗ್ಯ ಮಾಡಿಕೊಂಡವರ ತರ್ಫ್ ಡೆಪ್ಯುಟಿ ಕಮಿಷನರವರಿಂದ 1890 ನೆ ಇಸವಿ ಜಮೀನು ಆಬಾದು ರೆಗ್ಯುಲೇಷನ್

1888ನೇ ಇಸವಿ ಲ್ಯಾಂಡ್ ರೆವಿನ್ಯೂಕೋಡ್ 194ನೇ ಪ್ರಕರಣ

ಪ್ರಕಾರ ಹುಕುಂ ಪಡೆದು ಇರುವದರಿಂದ, ಆ ಹುಕುಂ ಅನುಸರಿಸಿ ಸದರಿ ಎಂಬುವರು (ಇಲ್ಲಿ ಕೆಲಸದ ತಪಶೀಲು ಅಥವಾ ಸಾಲದ ಉದ್ದೇಶವನ್ನು ಬರೆಯುಬೇಕು) ಕೆಲಸಕ್ಕೋಸ್ಕರ ಭೋಗ್ಯಕ್ಕೆ ತೆಗೆದುಕೊಂಡವರ ಕಡೆಯಿಂದ ಒಟ್ಟು ರೂಪಾಯಿಗಳು ಸಾಲವಾಗಿ ಪಡೆಯುವದಕ್ಕೆ ಬಾಧ್ಯತೆ ಉಳ್ಳವರಾಗಿ ಇರುತ್ತಾರೆ. ಸದರಿ ಸಾಲದ ಮೊಬಲಗನ್ನು ಸರಿಯಾಗಿ ನಿಯಮಿತ ಕೆಲಸಕ್ಕೆ ಉಪಯೋಗಿಸುವ ವಿಷಯದಲ್ಲಿಯೂ, ಸದರಿ ಸಾಲವನ್ನು ಸದರಿ ಹುಕುಮಿನಲ್ಲಿ ಕಂಡ ಷರತ್ತುಗಳ ಪ್ರಕಾರ ಸರಿಯಾಗಿ ಕ್ಲುಪ್ತ ಕಾಲಗಳಲ್ಲಿ ವಾಪಸು ಸಂದಾಯ ಮಾಡುವ ವಿಷಯದಲ್ಲಿಯೂ ಸಹಾ, ಭೋಗ್ಯಕ್ಕೆ ತೆಗೆದುಕೊಂಡವರು ಅಥವಾ ಅವರ ಕಡೆಯವರು ಸರಿಯಾದ ಆಧಾರ ಯಾ ಜಾಮೀನು ಅಪೇಕ್ಷಿಸುವದರಿಂದ, ಅಂಥಾ ಜಾಮೀನು ಯಾ ಆಧಾರ ಕೊಡುವುದಕ್ಕಾಗಿ ಭೋಗ್ಯ ಮಾಡಿದವರು ಈ ಕಾಗದ ಪತ್ರಗಳನ್ನು ದಸ್ಕತು ನಿಶಿ ಬರೆದುಕೊಡಲು ಒಪ್ಪಿರುತ್ತಾರೆ.

ಈ ಕಾಗದ ಪತ್ರಗಳಲ್ಲಿ ಏನು ಹೇಳಿರುತ್ತೆ ಎಂದರೆ—ಭೋಗ್ಯ ಅಥವಾ ಆಧಾರಮಾಡಿದವರು ಸದರಿ ಸಾಲವನ್ನು ತೆಗೆದುಕೊಂಡು ಇರುವ ಕಾರಣದಿಂದಲೂ ಮತ್ತು ಸದರಿ ಕರಾರನ್ನು ಬರೆದುಕೊಟ್ಟು ಇರುವದರಿಂದಲೂ ಸಹಾ, ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ಥಿರ ಸ್ವತ್ತುಗಳನ್ನು ಅವುಗಳಿಗೆ ಲಗತ್ತಾಗಿ ಇರುವ ಕಟ್ಟಡ, ಭಾವಿ ವಗ್ಯೆರೆಗಳ ಸಮೇತ, ಮುಂದೆ ನಮೂದಾಗಿರುವ ರೀತಿಯಲ್ಲಿ ಭೋಗ್ಯದಿಂದ ಬಿಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಭೋಗ್ಯಕ್ಕೆ ತೆಗೆದುಕೊಂಡವರಿಗೂ, ಅವರ ಉತ್ತರಾಧಿಕಾರಿಗಳಿಗೂ ಮತ್ತು ಅವರಿಂದ ನೇಮಿಸಲ್ಪಟ್ಟವರಿಗೂ, ಈ ಪತ್ರಗಳ ಮೂಲಕ ವರ್ಗ ಮಾಡಿಕೊಟ್ಟು ಇರುತ್ತಾರೆ.

ಸದರಿ ಯವರು, ಅವರ ಕಡೆ ನ್ಯಾಯವಾದ ಪ್ರತಿನಿಧಿಗಳು, ಮತ್ತು ಅವರಿಂದ ನೇಮಿಸಲ್ಪಟ್ಟವರು, ಸಾಲದ ಷರತ್ತುಗಳ ಪ್ರಕಾರ ನಡೆದುಕೊಂಡು ಸಾಲ ಪೂರಾ ಮೊಬಲಗನ್ನು ಸಾಲದ ಹುಕುಂನಲ್ಲಿ ನಮೂದಾಗುವ ರೀತಿಯಲ್ಲಿ ಉಪಯೋಗಿಸಿ ಸದರಿ ಯವರು ಅವರ ಕಡೆ ನ್ಯಾಯವಾದ ಪ್ರತಿನಿಧಿಗಳು ಮತ್ತು ಅವರಿಂದ ನೇಮಿಸಲ್ಪಟ್ಟಿರುವ ಸದರಿ ಸಾಲದ ಅಸಲ್ ಮೊಬಲಗನ್ನು, ಅದರ ಮೇಲೆ ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿಯನ್ನು, ಮತ್ತು ಈ ಸಾಲ ಕೊಡುವುದಕ್ಕಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಕೆಲಸಕ್ಕಾಗಲಿ ಭೋಗ್ಯಕ್ಕೆ ತೆಗೆದುಕೊಂಡವರಿಗೆ, ಅವರ ಉತ್ತರಾಧಿಕಾರಿಗಳಿಗೆ ಮತ್ತು ಇವರಿಂದ ನೇಮಿಸಲ್ಪಟ್ಟವರಿಗೆ ಏನಾದರೂ ಖರ್ಚು ತಗಲಿದ್ದರೆ ಅಂಥಾ ಖರ್ಚನ್ನು ಸಹಾ ಸರಿಯಾಗಿ ವಾಪಸು ಸಂದಾಯ ಮಾಡಿದ ಪಕ್ಷದಲ್ಲಿ, ಭೋಗ್ಯಕ್ಕೆ ತೆಗೆದುಕೊಂಡವರು, ಅವರ ಉತ್ತರಾಧಿಕಾರಿಗಳು ಅಥವಾ ಅವರಿಂದ ನೇಮಿಸಲ್ಪಟವರು ಸದರಿ ಸ್ಥಿರಸ್ವತ್ತುಗಳನ್ನು ಭೋಗ್ಯ ಮಾಡಿದವರಿಗಾಗಲಿ, ಅವರ ನ್ಯಾಯವಾದ ಪ್ರತಿನಿಧಿಗಳಿಗಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟವರಿಗಾಗಲಿ ಅಥವಾ ಇವರು ಯಾರಿಗೆ ಒಪ್ಪಿಸಿಕೊಡಬೇಕೆಂದು ಹೇಳುತ್ತಾರೆಯೋ

ಅವರಿಗಾಗಲಿ ಪುನಃ ವರ್ಗಾಯಿಸಲು ಬದ್ಧರಾಗಿರುತ್ತಾರೆಂತ ಇದರಿಂದ ಅಂಗೀಗರಿಸ ಲ್ಪಟ್ಟು ಇರುತ್ತೆ.

ಪರಂತು ಸದರಿ ಯವರು, ಅವರ ನ್ಯಾಯವಾದ ಪ್ರತಿನಿಧಿಗಳು ಅಥವಾ ಅವರಿಂದ ನಿಯಮಿತರಾದವರು ಸಾಲದ ಷರತ್ತುಗಳಿಗೆ ತಪ್ಪಿ, ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರ ಒಂದು ಭಾಗವನ್ನಾಗಲಿ ಸಾಲದ ಹುಕುಮಿಗೆ ವಿರೋಧವಾಗಿ ಉಪಯೋಗಿಸಿದರೂ, ಅಥವಾ ಸದರಿ ಸಾಲದ ಪೂರಾ ಮೊಬಲಗನ್ನಾಗಲಿ ಅದರ ಒಂದು ಭಾಗವನ್ನಾಗಲಿ ಅಥವಾ ಅದರ ಮೇಲೆ ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿ ಅಥವಾ ತಗಲಿದ ಸದರಿ ಖರ್ಚನ್ನಾಗಲಿ ಕೊಡದೆ ತಪ್ಪಿದರೂ ಮತ್ತು ಇಂಥಾ ಇತರ ಸಂದರ್ಭದಲ್ಲಿಯೂ ಕೂಡ ಭೋಗ್ಯ ಮಾಡಿಕೊಂಡವರು ಅವರ ಉತ್ತರಾಧಿಕಾರಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಅಥವಾ ತತ್ಕಾಲದ ಡೆಪ್ಯುಟಿ ಕಮಿಷನರವರು ಸದರಿ ಸ್ಥಿರ ಸ್ವತ್ತುಗಳನ್ನು ಅಥವಾ ಅವುಗಳ ಪೈಕಿ ಒಂದು ಭಾಗವನ್ನು ಹರಾಜು ಮಾಡಿಸುವದು ನ್ಯಾಯವಾಗಿರುವದಲ್ಲದೆ ಸದರಿ ಹರಾಜಿನಲ್ಲಿ ಹುಟ್ಟಿದ ಮೊಬಲಗನ್ನು ಸದರಿ ಯವರ, ಅವರ ನ್ಯಾಯವಾದ ಪ್ರತಿನಿಧಿಗಳ ಅಥವಾ ಅವರಿಂದ ನೇಮಿಸಲ್ಪಟ್ಟವರ ತಪ್ಪಿತದಿಂದ, ಭೋಗ್ಯ ಮಾಡಿಕೊಂಡವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ಅವರಿಂದ ನೇಮಿಸಲ್ಪಟ್ಟವರಿಗೆ ಉಂಟಾಗಬಹುದಾದ ನಷ್ಟಕ್ಕೆ ಯಾವಾಗಲಾದರೂ ಉತ್ತಾರ ಹಾಕತಕ್ಕದ್ದೆಂದು ಇದರಿಂದ ಒಪ್ಪಲ್ಪಟ್ಟು ಇರುತ್ತದೆ.

ಇದೂ ಅಲ್ಲದೆ, ಸದರಿ ಮತ್ತು ಭೋಗ್ಯಮಾಡಿದವರು ಈ ಉಭಯತ್ರರಲ್ಲಿ ಭೋಗ್ಯಮಾಡಿದವರು ಸದರಿ ಗೆ ಜಾಮೀನಾಗಿದ್ದಾಗ್ಯೂ, ಭೋಗ್ಯ ಮಾಡಿದವರು ಮತ್ತು ಭೋಗ್ಯಕ್ಕೆ ತೆಗೆದುಕೊಂಡವರು ಈ ಉಭಯತ್ರರಲ್ಲಿ, ಭೋಗ್ಯ ಮಾಡಿದವರು, ಈ ಮೂಲಕ ಆಧಾರಮಾಡಲ್ಪಟ್ಟ ಅಸಲು ಮೊಬಲಗಿಗೂ, ಬಡ್ಡಿಗೂ, ಖರ್ಚುಗಳಿಗೂ ಮುಖ್ಯ ಸಾಲಗಾರರಾಗಿ ಎಣಿಸಲ್ಪಡತಕ್ಕದ್ದು. ಮತ್ತು ಸದರಿ ಯವರಿಗೂ ಅವರ ನ್ಯಾಯವಾದ ಪ್ರತಿನಿಧಿಗಳಿಗಾಗಲಿ ವಾಯಿದೆ ಕೊಟ್ಟಮಾತ್ರಕ್ಕೇ ಆಗಲಿ ಅಥವಾ ಭೋಗ್ಯಮಾಡಿದವನು ಅಥವಾ ಅವರ ಕಡೆ ನ್ಯಾಯವಾದ ಪ್ರತಿನಿಧಿಗಳು ಸದರಿ ಯವರಿಗೆ ಮತ್ತು ಅವರ ನ್ಯಾಯವಾದ ಪ್ರತಿಧಿಗಳಿಗೆ ಜಾಮೀನಾಗಿ ಇರುವ ಜವಾಬ್ದಾರಿಯನ್ನು ತಪ್ಪಿಸುವುದಕ್ಕಾಗಿ ನಡೆಸಲ್ಪಡತಕ್ಕ ಯಾವ ಪ್ರಯತ್ನ ಯಾ ಕೆಲಸಗಳು ಭೋಗ್ಯದಾರರಿಗೆ ಅವರ ನ್ಯಾಯವಾದ ಪ್ರತಿನಿಧಿಗಳಿಗೆ ಅಸಲ್ ಹಣ, ಬಡ್ಡಿ ಖರ್ಚು ವಗೈರೆ ವಿಷಯದಲ್ಲಿ ಇರುವ ಜವಾಬ್ದಾರಿಯು ತಪ್ಪಿಸಲಾರವು. ಇದಕ್ಕೆ ಸಾಕ್ಷಿಯಾಗಿ ಮೇಲೆ ನಮೂದಾಗುವ ಸಾಲು, ಮಾಹೆ, ತಾರೀಖುಗಳಲ್ಲಿ ಭೋಗ್ಯದಾರನು ಇದಕ್ಕೆ ತನ್ನ ಕೈ ಬರಹದಿಂದ ರುಜು ಮಾಡಿರುತ್ತಾನೆ.

ಮೇಲೆ ನಮೂದಿಸಿರುವ ಷೆಡ್ಯೂಲು.

ರಿಜಿಸ್ಟ್ರೇಷನ್ ಡಿಸ್ಟ್ರಿಕ್ಟ್.	ರಿಜಿಸ್ಟ್ರೇಷನ್ ಸಬ್ ಡಿಸ್ಟ್ರಿಕ್ಟ್.	ಗ್ರಾಮ.	ಸ್ವತ್ತು ಮನೆಯಾಗಿದ್ದರೆ				ಸಾಗುವಳಿ ಜಮೀನಾಗಿದ್ದರೆ				
			ಸ್ವತ್ತಿನ ಚಕ್ಕುಬಂದಿ.	ಕಟ್ಟಡಗಳ ವಿವರ ಮತ್ತು ಗಜ ಎಷ್ಟು ಕಾಲದ ರಿಗೆ ಸೇರಿದ ಮುನಿಸಿಪಾಲಿಟಿ ನಂಬರು.	ನಿವೇಶನದ ಉದ್ದ ಅಗಲ ಅಥವಾ ಕಂಪೌಂಡಿನ ವಿಸ್ತೀರ್ಣ.	ಗಡಿ, ಭಾಗ, ನಗ್ಗರೆ.	ಸರ್ವೆ ನಂ.	ಹಿಸ್ಸಾ ಯಾ ತುಂಡಿಯೇ.	ವಿಸ್ತೀರ್ಣ.	ಆಕಾರ.	ಗಡಿ, ಭಾಗ, ನಗ್ಗರೆ.

ಸಾಕ್ಷಿಗಳು.— ಜಾಮೀನುದಾರನ ರುಜು.

(1) ತಂದೆ ಹೆಸರು. ಗ್ರಾಮದ ಹೆಸರು.

(2) „

ವರ

ಸಮಕ್ಷಮದಲ್ಲಿ ಮೇಲ್ಕಂಡವರು ರುಜು ಮಾಡಿರುತ್ತಾರೆ.

ನಂ. 10. (*a*)—ಸಾಲಗಾರನಿಂದ ಬರೆಸಿಕೊಳ್ಳತಕ್ಕ ಅಸಾಮಿ ಜಾಮೀನು ಪತ್ರ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ :— ಗ್ರಾಮದಲ್ಲಿ ವಾಸ ಮಾಡುತ್ತಿರುವ ಜಾತಿಗೆ ಸೇರಿದ ಎಂಬುವನ ಮಗನಾದ ನಾನು ಮೈಸೂರು ದೇಶದ ದಿವಾನರವರಿಂದ ಪಡೆದ ಸಾಲದ ಮೊಬಲಗು ರೂಪಾಯಿಗಳ ವಿಷಯದಲ್ಲಿ ಸದರಿ ದಿವಾನರಿಗಾಗಲಿ ಅಥವಾ ಅವರ ಏಟರನಿಗಾಗಲಿ, ಉತ್ತರಾಧಿಕಾರಿಗಳಿಗಾಗಲಿ ಅಥವಾ ಅವರಿಂದ ಗೊತ್ತು ಮಾಡಲ್ಪಡುವವರಿಗಾಗಲಿ ಸದರಿ ಮೊಬಲಗನ್ನು ವಾಪಸು ಸಂದಾಯ ಮಾಡುವ ವಿಷಯದಲ್ಲಿ ಬದ್ಧನಾಗಿರುತ್ತೇನೆ. ಸದರಿ ಮೊಬಲಗು ಪಾವತಿ ವಿಷಯದಲ್ಲಿ ನಾನುನ್ನು, ನನ್ನ ಹಕ್ಕುದಾರರಾದ ಎಗ್ಜಿಕ್ಯೂಟರುಗಳು, ಅಡ್ಮಿನಿಸ್ಟ್ರೇಟರುಗಳೂ, ಮತ್ತು ನ್ಯಾಯವಾದ ಪ್ರತಿನಿಧಿಗಳೂ ಕೂಡ ಬದ್ಧರಾಗಿರುತ್ತೇವೆಂದು ಈ ಪತ್ರಗಳ ಮೂಲಕ ಬರೆದುಕೊಟ್ಟು ಇರುತ್ತೇನೆ.

ತಾರೀಖು. ಇಸವಿ.

ಸಾಲ ತೀರಿಸುವುದಕ್ಕೆ ಬದ್ಧನಾಗಿರುವ ಎಂಬುವನು ಸೇ ಇಸವಿ ಸೇ ತಾರೀಖಿನಲ್ಲಿ, ಲ್ಯಾಂಡ್ ರೆವಿನ್ಯೂ ಕೋಡ್ 194 ನೇ ಪ್ರಕರಣ ಪ್ರಕಾರ ಡೆಪ್ಯುಟಿ ಕಮಿಷನರವರಿಂದ ಹುಕುಂ ಪಡೆದು ಇರುವದರಿಂದ ಒಟ್ಟು ಮೊಬಲಗು ರೂಪಾಯಿಗಳನ್ನು ಮೈಸೂರು ಸರ್ಕಾರದಿಂದ

(ಇಲ್ಲಿ ಸಾಲದ ಉದ್ದೇಶವನ್ನು ಬರೆಯಬೇಕು) ಕೆಲಸಕ್ಕಾಗಿ ಸಾಲವಾಗಿ ಪಡೆಯಲು ಅರ್ಹನಾಗಿ ಇರುತ್ತಾನೆ. ಹಾಲಿ ಮೇಲೆ ಕಂಡ ಪತ್ರದ ಷರತ್ತು ಪ್ರಕಾರ ಸಾಲದಿಂದ ಬದ್ಧನಾದ ಸದರಿ ಎಂಬುವನು ಅವನ ವಾರಸುದಾರರು, ಅವನ ಎಗ್ಸಿಕ್ಯೂಟರ್ ಯಾ ಅಡ್ಮಿನಿಸ್ಟ್ರೇಟರುಗಳು ಮತ್ತು ನ್ಯಾಯವಾದ ಪ್ರತಿನಿಧಿಗಳು ಯಾವ ಷರತ್ತುಗಳ ಮೇಲೆ ಸಾಲಾ ಕೊಡಲ್ಪಟ್ಟು ಇರುತ್ತೆಯೋ ಅಂಥ ಷರತ್ತುಗಳ ಮೇರೆಗೆ ನಡೆದುಕೊಂಡು, ಆ ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಒಂದು ಭಾಗವನ್ನಾಗಲಿ ಸಾಲಾ ಕೊಡಲ್ಪಟ್ಟ ಕೆಲಸಗಳಿಗಲ್ಲದೆ ಇತರ ಕೆಲಸಗಳಿಗೆ ಉಪಯೋಗಿಸದೆ ಸದರಿ ಸಾಲದ ಮೊಬಲಗನ್ನು ಅದರ ಮೇಲೆ ಆಗುವ ಬಡ್ಡಿಯನ್ನು ನೇಮಕವಾದ ಕಂತುಗಳ ಮೇರಿಗೆ ಆಯಾಯ ಕಂತುಗಳ ಪಾವತಿಗೆ ಗೊತ್ತಾದ ತಾರೀಖುಗಳಲ್ಲಿ ಪಾವತಿ ಮಾಡತಕ್ಕದಾಗಿ ಇರುತ್ತೆ. ಅಥವಾ ಈ ರೀತಿ ಯಾವ ಸಂದರ್ಭದಲ್ಲಿಯಾಗಲಿ ನಡೆಯದೆ ತಪ್ಪಿದ ಪಕ್ಷದಲ್ಲಿ ಮೈಸೂರು ಸರ್ಕಾರಕ್ಕೆ ಇಂಥಾ ತಪ್ಪಿತಕ್ಕಾಗಿ ಸದರಿ ಯವರು ಸದರಿ ಮೊಬಲಗು ರೂಪಾಯಿಗಳಿಗೆ ಮಿಾರದಂತೆ ಕೊಡಬೇಕು. ಅಂಥಾ ಕಾಲದಲ್ಲಿ ಮೇಲೆ ಬರೆಯಲ್ಪಟ್ಟ ಪತ್ರವು ರದ್ದಾಗುತ್ತೆಯೇ ಹೊರ್ತು ಇತರ ಸಂದರ್ಭಗಳಲ್ಲಿ ಈ ಪತ್ರವು ರದ್ದಾಗದೆ ಜಾರಿಯಲ್ಲಿಯೆ ಇರುತ್ತೆ.

ಯವರ

ಸಮಕ್ಷಮ ಮೇಲೆ ನಮೂದಾಗುವವರಿಂದ ರುಜುವಾಗಿರುತ್ತದೆ.

10 ನೆ (ಬಿ) ನಂಬರ್ ನಮೂನೆ.

ಸಾಗುವಳೀದಾರರ ಗುಂಪುಗಳಿಗೆ ಜಮಿಾನ್ ಆಬಾದಿಗಾಗಿ ಕೊಡುವ ಸಾಲಗಳ ರೆಗ್ಯುಲೇಷನ್ ಮೇರೆಗೆ / ಲ್ಯಾಂಡ್ ರೆವಿನ್ಯೂ ಕೋಡಿನ 194 ನೆ ಪ್ರಕರಣದ ಮೇರೆಗೆ ಸಾಲವನ್ನು ಕೊಟ್ಟಲ್ಲಿ ಅವರುಗಳಿಂದ ಬರೆಯಿಸಿಕೊಳ್ಳಬೇಕಾದ ಜಾಮಿಾನ್ ಪತ್ರ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ:—(ಇಲ್ಲಿ ಗ್ರಾಮದ ಹೆಸರನ್ನು ಬರೆಯಬೇಕು) ಗ್ರಾಮದಲ್ಲಿ ವಾಸಮಾಡುವ (ಇಲ್ಲಿ ಪ್ರತಿಯೊಬ್ಬರ ತಂದೆ ಹೆಸರನ್ನೂ ಬರೆಯಬೇಕು) ಇವರುಗಳ ಮಕ್ಕಳಾದ (ಇಲ್ಲಿ ಪ್ರತಿಯೊಬ್ಬರ ಸಾಗುವಳೀದಾರನ ಕಸಬನ್ನು ಬರೆಯಬೇಕು) ಕಸಬುಗಳನ್ನು ಮಾಡುವ (ಇಲ್ಲಿ ಪ್ರತಿಯೊಬ್ಬರ ಜಾತಿಯನ್ನೂ ಹೆಸರನ್ನೂ ಬರೆಯಬೇಕು) ಎಂಬ ನಾವುಗಳು ಮೈಸೂರು ಸೀಮೆಯ ದಿವಾರ್ ಸಾಹೇಬರವರಿಗೆ (ಇಲ್ಲಿ ಸಾಲದ ಮೊಬಲಗನ್ನು ಬರೆಯಬೇಕು) ರೂಪಾಯಿಗಳಿಗೆ ಈ ಮೂಲಕ ಜಾಮಿಾರ್ ಕೊಟ್ಟಿರುತ್ತೇವೆ. ಸದರೀ ಮೊಬಲಗನ್ನು ಮೇಲ್ಕಂಡ ಮೈಸೂರು ಸೀಮೆಯ ದಿವಾರ್ ಸಾಹೇಬರಿಗಾಗಲೀ, ಅವರ ಅಟಾರ್ನಿಯವರಿಗಾಗಲೀ, ಉತ್ತರಾಧಿಕಾರಿಗಳಿಗಾಗಲೀ, ಹವಾಲ್ತೆದಾರರುಗಳಿಗಾಗಲೀ ಪಾವತಿ ಮಾಡಬೇಕಾಗಿದೆ. ಸದರೀ ಮೊಬಲಗಿನ ಪಾವತಿಯ ಬಗ್ಗೆ ಖುದ್ ನಮ್ಮಗಳನ್ನೂ, ನಮ್ಮಲ್ಲಿ ಪ್ರತಿಯೊಬ್ಬರನ್ನೂ, ನಮ್ಮ ಮತ್ತು ನಮ್ಮಲ್ಲಿ ಪ್ರತಿಯೊಬ್ಬರ ವಾರಸ್‌ದಾರರುಗಳನ್ನೂ, ಎಗ್ಸಿಕ್ಯೂಟರುಗಳನ್ನೂ, ಅಡ್ಮಿನಿಸ್ಟ್ರೇಟರುಗಳನ್ನೂ, ಕಾನೂನಿಗನುಸಾರವಾದ ಪ್ರತಿನಿಧಿಗಳನ್ನೂ ಜಂಟಿಯಾಗಿಯೂ ಪ್ರತ್ಯೇಕವಾಗಿಯೂ ಒಂದು ಸಾವಿರದ

ಒಂಭೈನೂರ....ನೆ ಇಸವಿ..................ಮಾಹೆ....ನೇ ತಾರೀಖಾದ ಈ ದಿನ ಈ ಮೂಲಕ ಬದ್ಧಪಡಿಸಿರುತ್ತೇವೆ.

ಮೇಲ್ಕಂಡಂತೆ ಬದ್ಧರಾಗಿರುವ (ಇಲ್ಲಿ ಸಾಗುವಳೀದಾರರ ಗುಂಪಿಗೆ ಸೇರಿದ ಪ್ರತಿಯೊಬ್ಬರ ಹೆಸರನ್ನೂ ನಮೂದಿಸಬೇಕು) ಎಂಬುವರುಗಳು ಒಂದು ಸಾವಿರ ಒಂಭೈ ನೂರ..ನೆ ಇಸವಿ....ಮಾಹೆ..ನೆ ತಾರೀಖಿನಲ್ಲಿ......ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಜಮೀನ್ ಆಬಾದಿನ ಬಗ್ಗೆ ಕೊಡುವ ಸಾಲಗಳ ರೆಗ್ಯುಲೇಷನ್ ಮೇರೆಗೆ / ಲ್ಯಾಂಡ್ ರೆವಿನ್ಯೂ ಕೋಡಿನ 194 ನೆ ಪ್ರಕರಣದ ಮೇರೆಗೆ ಒಂದು ಹುಕುಮನ್ನು ಪಡೆದಿರುವುದರಿಂದಲೂ, ಸದರೀ ಹುಕುಮಿಗನುಸಾರವಾಗಿ ಅವರುಗಳು ಮೈಸೂರು ಸರ್ಕಾರದವರಿಂದ (ಇಲ್ಲಿ ಯಾವ ಕಾಮಗಾರಿ ನಡೆಸುವುದಕ್ಕಾಗಿ ಅಥವಾ ಯಾವ ಉದ್ದೇಶಕ್ಕಾಗಿ ಸಾಲವನ್ನು ತೆಗೆದುಕೊಳ್ಳಲಾಯಿತೆಂಬುದನ್ನು ವಿವರಿಸಬೇಕು) ಎಂಬ ಉದ್ದೇಶಕ್ಕಾಗಿ (ಇಲ್ಲಿ ಸಾಲದ ಮೊಬಲಗನ್ನು ನಮೂದಿಸಬೇಕು) ರೂಪಾಯಿಗಳನ್ನು ಪಡೆಯಲು ಹಕ್ಕುಳ್ಳವರಾಗಿರುವದರಿಂದಲೂ ಮೇಲ್ಕಂಡ ಪತ್ರದ ಷರತ್ತುಗಳು ಯಾವುವೆಂದರೆ :—

ಮೇಲ್ಕಂಡಂತೆ ಬದ್ಧರಾಗಿರುವ (ಇಲ್ಲಿ ಸಾಗುವಳೀದಾರರ ಗುಂಪಿಗೆ ಸೇರಿದ ಪ್ರತಿಯೊಬ್ಬರ ಹೆಸರನ್ನೂ ನಮೂದಿಸಬೇಕು) ಎಂಬುವರುಗಳೂ, ಅವರುಗಳ ಪೈಕಿ ಪ್ರತಿಯೊಬ್ಬರೂ, ಅವರುಗಳ ಮತ್ತು ಅವರುಗಳ ಪೈಕಿ ಪ್ರತಿಯೊಬ್ಬರ ವಾರಸ್‌ದಾರರುಗಳೂ, ಎಗ್ಸಿಕ್ಯೂಟರುಗಳೂ, ಅಡ್ಮಿನಿಸ್ಟ್ರೇಟರುಗಳೂ, ಪ್ರತಿನಿಧಿಗಳೂ, ಮೇಲ್ಕಂಡ ಸಾಲವು ಯಾವ ಷರತ್ತುಗಳ ಮೇಲೆ ಕೊಡಲ್ಪಟ್ಟಿರುತ್ತದೆಯೋ ಅಂಥಾ ಪ್ರತಿಯೊಂದು ಷರತ್ತಿನ ಮೇರೆಗೂ ನಡೆಯತಕ್ಕದ್ದು ; ಮತ್ತು ಸದರೀ ಸಾಲವನ್ನಾಗಲೀ ಅದರ ಪೈಕಿ ಯಾವುದೊಂದು ಭಾಗವನ್ನಾಗಲೀ ಸದರೀ ಸಾಲವನ್ನು ಯಾವ ಉದ್ದೇಶಕ್ಕಾಗಿ ಕೊಡಲಾಗಿರುತ್ತದೆಯೋ ಅದು ಹೊರತು ಬೇರೆ ಯಾವುದೊಂದು ಉದ್ದೇಶಕ್ಕಾಗಲೀ ಉಪಯೋಗಿಸಕೂಡದು ; ಮತ್ತು ಸದರೀ ಸಾಲವನ್ನು ತೀರಿಸಬೇಕಾಗಿರುವ ಕಂತುಗಳ ಮೇರೆಗೆ ಆಯಾ ಕಂತಿನ ಪಾವತಿಯ ಬಗ್ಗೆ ನಿರ್ಧರವಾಗಿರುವ ಬೇರೆ ಬೇರೆ ತಾರೀಖುಗಳಲ್ಲಿ ಯಾ ತತ್ಪೂರ್ವವೇ ತೀರಿಸತಕ್ಕದ್ದು ; ಅಥವಾ ಹಾಗೆ ಯಾವ ಕಂತನ್ನಾದರೂ ತೀರಿಸದೆ ತಪ್ಪಿದಲ್ಲಿ ಮೇಲ್ಕಂಡ (ಇಲ್ಲಿ ಸಾಗುವಳೀದಾರರ ಗುಂಪಿಗೆ ಸೇರಿದ ಪ್ರತಿಯೊಬ್ಬರ ಹೆಸರನ್ನೂ ನಮೂದಿಸಬೇಕು) ಎಂಬುವರುಗಳಾಗಲೀ ಅವರುಗಳಲ್ಲಿ ಯಾರೊಬ್ಬರಾಗಲೀ ಅಂಥಾ ತಪ್ಪಿತಕ್ಕೋಸ್ಕರ ಮೇಲ್ಕಂಡ..........ರೂಪಾಯಿಗಳಿಗೆ ಜಾಸ್ತಿಯಲ್ಲದ ಮೊಬಲಗನ್ನು ಪಾವತಿ ಮಾಡಲು ಬದ್ಧರಾಗಿರುತ್ತಾರೆ. ಹಾಗೆ ಪಾವತಿಯಾದ ಮೇಲೆ ಮೇಲ್ಕಂಡಂತೆ ಬರೆದುಕೊಟ್ಟ ಪತ್ರವು ರದ್ದಾಗತಕ್ಕದ್ದು, ಹಾಗಿಲ್ಲದ ಪಕ್ಷ ಸದರೀ ಪತ್ರವು ಜಾರಿಯಲ್ಲಿರತಕ್ಕದ್ದು.

ಮೇಲ್ಕಂಡ

ಎಂಬವರುಗಳಿಂದ

ಇವರುಗಳ ರೂಬರೂಬ್ ದಸ್ಕತ್ ಮಾಡಲ್ಪಟ್ಟಿರುತ್ತದೆ.

(ಸಾಲ ತೆಗೆದುಕೊಳ್ಳುವವರ ಪ್ರತಿ ದಸ್ಕತ್ತಿಗೂ ಸಾಕ್ಷಿ ದಸ್ಕತ್ತನ್ನು ಏಕರೀತಿ ಮಾಡಿಸಬೇಕು.)

11 ನೆ ನಂಬರ್ ನಮೂನೆ.

ಸಾಲದ ವಾಪಸ್ ಪಾವತಿ ರಿಜಿಸ್ಟರು.

(ಪ್ರತಿ ಸಾಲಕ್ಕೂ ಪ್ರತ್ಯೇಕವಾದ ಒಂದು ಪುಟವನ್ನು ಉಪಯೋಗಿಸಬೇಕು.)

ಸಾಲವನ್ನು ಮಂಜೂರುಮಾಡಿದ ದರಖಾಸ್ತಿನ ನಂಬರು ಮತ್ತು ತಾರೀಖು	ಸಾಲವನ್ನು ಮಂಜೂರುಮಾಡಿದ ದರಖಾಸ್ತನ್ನು ಪಡೆದುಕೊಂಡಿರುವಾತನ ಹೆಸರು ಮತ್ತು ವಾಸಸ್ಥಳ	ಮಂಜೂರಾದ ಸಾಲದ ಮೊಬಲಗು	ಸಾಲದ ವಾಪಸ್ ಪಾವತಿ						ಷರಾ
			ಸಾಲವನ್ನು ಎಷ್ಟು ಕಂತುಗಳಲ್ಲಿ ತೀರಿಸಬೇಕು?	ಕಂತಿನ ತಖ್ತೆಯಲ್ಲಿ ವಿಧಿಸಿರುವಂತೆ ನಿರ್ಧರಿಸೋಣವಾದ ಪ್ರತಿಯೊಂದು ಕಂತಿನ ಮೊಬಲಗು	ಪ್ರತಿಯೊಂದು ಕಂತು ಪಾವತಿಯಾಗಬೇಕಾಗಿರುವ ತಾರೀಖು	ಕಂತು ಪಾವತಿ ಆದ ತಾರೀಖು	ಪಾವತಿಯಾದ ಕಂತಿನ ಮೊಬಲಗು	ಕಂತಿನ ಬಾಕಿಯ ಮೇಲೆ ಪಾವತಿಯಾದ ಬಡ್ಡಿ	
1	2	3	4	5	6	7	8	9	10

ಟಿಪ್ಪಣಿ :—7 ನೆ ನಿಬಂಧನೆಯ ಮೇರೆಗೆ ಕಂತಿನ ಪಾವತಿಗೆ ಕ್ಲುಪ್ತಕಾಲಕ್ಕಿಂತ ಹೆಚ್ಚು ವಾಯಿದೆಯನ್ನು ಕೊಟ್ಟಲ್ಲಿ ಅದನ್ನು, 9 ನೆ ನಿಬಂಧನೆಯ ಮೇರೆಗೆ ಕಂತನ್ನೇನಾದರೂ ವ. ಫ್ ಮಾಡಿದ್ದಲ್ಲಿ ಅದನ್ನು, 10 ನೆ ಕಲಮಿನಲ್ಲಿ ನಮೂದಿಸಬೇಕು.

ವರ್ಷಗಟ್ಲೆ ಕಂತಿನ ತಃಖ್ತೆ—(5 ನೆ ನಿಬಂಧನೆ).

ವರ್ಷಗಳು	ಬಡ್ಡಿಯ ದರ		ವರ್ಷಗಳು	ಬಡ್ಡಿಯ ದರ	
	ಶೇಕಡಾ 5 ರಂತೆ	ಶೇಕಡಾ 3 ರಂತೆ		ಶೇಕಡಾ 5 ರಂತೆ	ಶೇಕಡಾ 3 ರಂತೆ
1	2	3	1	2	3
1	105.000	103.000	16	9.227	...
2	53.781	52.261	17	8.870	...
3	36.727	35.363	18	8.555	...
4	28.201	...	19	8.274	...
5	23.097	...	20	8.024	...
6	19.703	...	21	7.800	...
7	17.282	...	22	7.597	...
8	15.473	...	23	7.414	...
9	14.068	...	24	7.247	...
10	12.950	...	25	7.095	...
11	12.039	...	26	6.956	...
12	11.282	...	27	6.829	...
13	10.645	...	28	6.712	...
14	10.102	...	29	6.605	...
15	9.634	...	30	6.506	...

ಟಿಪ್ಪಣಿ :—(1) 100 ರೂಪಾಯಿಗಳ ಸಾಲವನ್ನು ಶೇಕಡಾ 5 ರಂತೆ ಬಡ್ಡಿಯ ಸಮೇತ ವಾಪಸ್ ಪಾವತಿ ಮಾಡಬೇಕಾದರೆ ಸಾಲಿಯಾನ ಕಂತನ್ನು 2 ನೆ ಕಲಮಿನಲ್ಲಿ ಸೂಚಿಸಿದೆ. ಈ ತಃಖ್ತೆಯಲ್ಲಿ ಮೊದಲನೆ ಕಂತನ್ನು ಸಾಲದ ಐವ್‌ಜ್ ಪಾವತಿಯ ತಾರೀಖು ಲಾಗಾಯಿತು ಒಂದು ವರ್ಷದ ನಂತರ ವಾಪಸ್ ಪಾವತಿ ಮಾಡತಕ್ಕದ್ದೆಂದು ಊಹಿಸಿಕೊಂಡಿರುತ್ತದೆ.

(2) ಅದೇ ರೀತಿ 100 ರೂಪಾಯಿಗಳ ಸಾಲವನ್ನು ಶೇಕಡಾ 3 ರಂತೆ ಬಡ್ಡಿಯ ಸಮೇತ ವಾಪಸ್ ಪಾವತಿ ಮಾಡಬೇಕಾದ ಸಾಲಿಯಾನ ಕಂತನ್ನು 3 ನೆ ಕಲಮಿನಲ್ಲಿ ಸೂಚಿಸಿದೆ. ಶೇಕಡಾ 3 ರಂತೆ ಬಡ್ಡಿ ಹಾಕಿ ಕೊಟ್ಟಿರುವ ಸಾಲವನ್ನು ವಾಪಸ್ ಪಾವತಿ ಮಾಡುವುದಕ್ಕೆ ಗೊತ್ತುಮಾಡಿರುವ ಪರಮಾವಧಿಯ ಕಾಲವು 3 ವರ್ಷಗಳು ಮಾತ್ರವೇ ಆಗಿರುತ್ತವೆ. (3 ನೆ ನಿಬಂಧನೆಯನ್ನು ನೋಡಿ)

(3) ಸಾಲವನ್ನು ಒಂದೇ ಮೊಬಲಗಿನಲ್ಲಿ ಕೊಡುವುದಕ್ಕೆ ಬದಲಾಗಿ ಕಂತುವಾರಾಗಿ ಕೊಟ್ಟಿದ್ದ ಪಕ್ಷದಲ್ಲಿ ಅಥವಾ ಸಾಲದ ಯಾ ಆಖೈರ್ ಕಂತಿನ ಪಾವತಿಯು ತಾರೀಖಿನ ಲಾಗಾಯಿತು ಒಂದು ವರ್ಷದ ನಂತರಕ್ಕೆ ಬದಲಾಗಿ ಇನ್ನೂ ಹೆಚ್ಚು ಕಾಲದ ನಂತರ ಕಂತಿನ ವಾಪಸ್ ಪಾವತಿಯನ್ನು ಆರಂಭ ಮಾಡಿರುವ ಪಕ್ಷದಲ್ಲಿ ಅಂಥಾ ಸಂದರ್ಭಗಳಲ್ಲಿಯೂ ಮೇಲ್ಕಂಡ ತಃಖ್ತೆಯನ್ನು ಉಪಯೋಗಿಸಬೇಕಾದರೆ ವಾಪಸ್ ಕೊಡುವುದಕ್ಕೆ ಗೊತ್ತುಮಾಡಿರುವ ತಾರೀಖಿಗಿಂತ ಒಂದು ವರ್ಷದ ಹಿಂದಣ ತಾರೀಖಿನ ವರೆಗೆ ಸರಳ ಬಡ್ಡಿಯ ಮೇರೆಗೆ ಸಾಲದ ಯಾ ಕಂತಿನ ಮೊತ್ತವು ಎಷ್ಟಾಗುವದೆಂದು ಲೆಕ್ಕಮಾಡಿ ಅನಂತರ ತ್ರೈರಾಶಿಯ ಮೂಲಕ ಮೇಲ್ಕಂಡ ತಃಖ್ತೆಯ ಸಹಾಯದಿಂದ ಸದರೀ ಮೊತ್ತಕ್ಕೆ ಆಗುವ ಕಂತಿನ ಮೊಬಲಗನ್ನು ಕಂಡುಹಿಡಿಯಬಹುದು.

ಹುಕುಂ ಬಮೋಜೀಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

2. ಮದ್ರಾಸ್ ಆಧಿಪತ್ಯದುಪ್ಪುಗಳು.

ಸ್ಟ್ಯಾಂಡಿಂಗ್ ಆರ್ಡರ್ ನಂ. 50. ಪ್ಯಾ. 1.

1883 ನೆಯ ಇಸವಿಯ 19 ನೆಯ ನಂಬರಿನ ಲ್ಯಾಂಡ್ ಇಂಪ್ರೂವ್‌ಮೆಂಟ್ಸ್ ಲೋನ್ಸ್ ಆಕ್ಟ್ ಎಂಬುದರ 10 ನೆಯ ಸೆಕ್ಷನ್ನಿನ ಮೇರೆಯೂ, 1884 ನೆಯ ಇಸವಿಯ 12 ನೆಯ ನಂಬರಿನ ಅಗ್ರಿಕಲ್ಚರಿಸ್ಟ್ಸ್ ಲೋನ್ಸ್ ಆಕ್ಟ್ ಎಂಬುದರ 4 ನೆಯ ಸೆಕ್ಷನ್ನಿನ ಮೇರೆಯೂ ಪ್ರವರ್ತಿಸಲ್ಪಟ್ಟ ರೂಲುಗಳು.

ವಿವೇಚನೆ.

(ಮದ್ರಾಸ್ ಆಧಿಪತ್ಯದ ತಖಾವಿ ರೂಲುಗಳಿಗೂ, ಹಿಂದೆ ಮುದ್ರಿತವಾಗಿರುವ ಮೈಸೂರು ಪ್ರಾವಿನ್ಸಿನ ರೂಲುಗಳಿಗೂ ಅಧಿಕಾರಿಗಳ ಅಧಿಕಾರ ನಾಮದಲ್ಲೂ, ಕೆಲ ರೂಲುಗಳ ಸಂಖ್ಯೆಯಲ್ಲೂ ಭೇದವಿರುವುದೇ ಹೊರತು, ಮಿಕ್ಕ ವಿಷಯಗಳಲ್ಲಿ ಇರುವ ಭೇದವು ಬಹಳ ಕಡಮೆ. ಅದುಕಾರಣ ಏಕರೂಪತೆಯಿರುವ ಕಡೆಗಳಲ್ಲೆಲ್ಲ, ಪುನರುಕ್ತಿನಿವಾರಣೆಗಾಗಿ, ಮೈಸೂರು ಪ್ರಾವಿನ್ಸಿನ ರೂಲುಗಳನ್ನೇ ಇಲ್ಲಿ ನಿರ್ದೇಶಿಸುವೆವು. ಹಾಗೆ ನಿರ್ದಿಷ್ಟವಾಗುವ ಆ ರೂಲುಗಳಲ್ಲಿ ಮೈಸೂರಿನ ಅಧಿಕಾರಿಗಳ ಹೆಸರಿಗೆ ಬದಲಾಗಿ ಅವರಿಗೆ ಇದಿರಿನಲ್ಲಿ ಕೆಳಗೆ ವಿವರಿಸಿರುವ ಮದ್ರಾಸಿನ ಅಧಿಕಾರಿಗಳನ್ನು ಓದಿಕೊಳ್ಳತಕ್ಕದು.)

ಮೈಸೂರು.		ಮದ್ರಾಸ್.	ಮೈಸೂರು.		ಮದ್ರಾಸ್.
ಶೇಕದಾರ್	=	ರೆವಿನ್ಯೂ ಇನ್‌ಸ್ಪೆಕ್ಟರ್	ರೆವಿನ್ಯೂ ಕಮಿಷನರ್	=	ರೆವಿನ್ಯೂ ಬೋರ್ಡ್
ಅಮಲ್‌ದಾರ್	=	ತಾಸಿಲ್‌ದಾರ್	ದಿವಾನರು	=	ಇಂಡಿಯದ ಸಭಾಪರಿವೃತರಾದ ಸೆಕ್ರೆಟರಿ ಆಫ್ ಸ್ಟೇಟ್ ರೈಟ್ ಆನರಬಲ್... ಇಂಡಿಯದ ಸಭಾಪರಿವೃತರಾದ ರೈಟ್ ಆನರಬಲ್ ಸ್ಟೇಟ್ ಸೆಕ್ರೆಟರಿಯವರು
ಡೆಪ್ಯುಟಿ ಅಮಲ್.	=	ಡೆಪ್ಯುಟಿ ತಾಸಿಲ್‌ದಾರ್			
ಸಬ್‌ಡಿವಿಷನ್ ಅ॥ ಕಮಿಷನರ್	=	ಸಬ್ ಡಿವಿಷನ್ ಆಫೀಸರ್			
ಡೆಪ್ಯುಟಿ ಕಮಿಷನರ್	=	ಕಲೆಕ್ಟರ್	ಗೌವರ್ನಮೆಂಟ್	=	ಸ್ಥಳೀಯ ಗೌವರ್ನಮೆಂಟ್

(ಮತ್ತೂ ಮೈಸೂರಿನ ಖಾನೂನುಗಳಿಗೆ ಬದಲಾಗಿ ಕೆಳಗೆ ತೋರಿಸುವಂತೆ ಮದ್ರಾಸಿನ ಖಾನೂನುಗಳನ್ನು ಓದಿಕೊಳ್ಳುವುದು.)

ಮೈಸೂರಿನ ಖಾನೂನುಗಳು.		ಮದ್ರಾಸಿನ ಖಾನೂನುಗಳು.
1890 ನೆಯ ಇಸವಿಯ 4 ನೆಯ ನಂಬರಿನ ಲ್ಯಾಂಡ್ ಇಂಪ್ರೂವ್‌ಮೆಂಟ್ಸ್ ಲೋನ್ಸ್ ರೆಗ್ಯುಲೇಷನ್	=	1883 ನೆಯ ಇಸವಿಯ 19 ನೆಯ ನಂಬರಿನ ಲ್ಯಾಂಡ್ ಇಂಪ್ರೂವ್‌ಮೆಂಟ್ಸ್ ಲೋನ್ಸ್ ಆಕ್ಟ್
ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 194 ನೆಯ ಸೆಕ್ಷನು	=	1884 ನೆಯ ಇಸವಿಯ 12 ನೆಯ ನಂಬರಿನ ಅಗ್ರಿಕಲ್ಚರಿಸ್ಟ್ಸ್ ಲೋನ್ಸ್ ಆಕ್ಟ್

ನೋಟ್.—ಮದ್ರಾಸಿನ ಆಧಿಪತ್ಯದವರು ಮೊದಲಾವೃತ್ತಿ ಓದುವಾಗಲೇ, ಈ ಎರಡನೆಯ ಭಾಗದಲ್ಲಿ ತೋರಿಸಿರುವ ವ್ಯತ್ಯಾಸಗಳ ರೀತ್ಯಾ, ಮೊದಲನೆಯ ಭಾಗದ ಮೈಸೂರಿನ ರೂಲುಗಳನ್ನು ಕೆಂಪು ಶಾಯಿಯಲ್ಲಿ ತಿದ್ದಿಕೊಳ್ಳುವುದು ಉತ್ತಮ. ಹಾಗೆ ತಿದ್ದುಕೊಂಡ ಬಳಿಕ ಈ 2 ನೆಯ ಭಾಗವನ್ನು ಬಿಟ್ಟೇಬಿಟ್ಟು 1 ನೆಯ ಭಾಗವನ್ನೇ ಮದ್ರಾಸಿನ ರೂಲುಗಳಂತೆ ಗಣಿಸಿ ಅವನ್ನೇ ಸಾಂಗವಾಗಿ ಓದಿಕೊಳ್ಳಬಹುದು.

1 ನೇ ರೂಲು :—ಯಾವ ಯಾವ ಉದ್ದೇಶಗಳಿಗೆ ಎಷ್ಟು ಪರಿಮಿತಿಯೊಳಗಾಗಿ ಸಾಲಗಳನ್ನು ಕೊಡಬಹುದು ?

ಈ ಕೆಳಗೆ ಕಂಡ ಉದ್ದೇಶಗಳಿಗಾಗಿ ಆಯಾ ಕೆಲಸಕ್ಕೆ ಎಷ್ಟುವುಟ್ಟಿಗೆ ಕೊಡಬಹುದೆಂದು ವಿಧಿಸಿರುತ್ತದೆಯೋ ಅಷ್ಟುವುಟ್ಟಿಗೆ ಹಿಡುವಳಿದಾರರಿಗೆ ಸಾಲಗಳನ್ನು ಕೊಡಬಹುದು :—

ಯಾವ ಯಾವ ಉದ್ದೇಶಗಳಿಗೆ ಸಾಲಗಳನ್ನು ಕೊಡಬಹುದು ?	ಎಷ್ಟು ಸಾಲ ಕೊಡಬಹುದು ?	
	ಪರಮಾವಧಿ	ಕನಿಷ್ಠಪಕ್ಷ
(A) 1883 ನೆಯ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್ಸ್ ಲೋನ್ಸ್ ಆಕ್ಟಿನ ಮೇರೆ :—	ರೂ.	ರೂ.
ಬಾವಿಗಳನ್ನು ಯಾ, ಕೆರೆಗಳನ್ನು ಕಟ್ಟಿಸುವುದಕ್ಕೂ, ಯಾ, ಜೀರ್ಣೋದ್ಧಾರಮಾಡುವುದಕ್ಕೂ, ಬಂಜರು ಭೂಮಿಯನ್ನು ಕೃಷಿ ಯೋಗ್ಯವಾಗಿ ಮಾಡುವುದಕ್ಕೂ, ಯಾ, ಯಾವ ಕಾರ್ಯದಿಂದ ಭೂಮಿಯ ಫಲವತ್ತತೆ ಸ್ಥಿರವಾಗಿ ಹೆಚ್ಚಿ, ಹೆಚ್ಚಿನ ಪ್ರತಿಫಲಕ್ಕಾಗಿ ಆ ಭೂಮಿಯು ಸಾಗುವಳಿಗೆ ಕೊಡಲ್ಪಡುವುದೋ ಅಂತಹ ಕಾರ್ಯವನ್ನು ಮಾಡಿಸುವುದಕ್ಕೂ.	ಪರಿಮಿತಿಯಿಲ್ಲ	50
(B) 1884 ನೆಯ ಇಸವಿಯ ಅಗ್ರಿಕಲ್ಚರಿಸ್ಟ್ಸ್ ಲೋನ್ಸ್ ಆಕ್ಟಿನ ಮೇರೆ :—		
(1) ಬಿತ್ತನೆಯ ಕಾಳುಗಳನ್ನೂ, ಉಳುಮೆಯ ಎತ್ತುಗಳನ್ನೂ, ಬೀಜದ ರಾಸುಗಳನ್ನೂ ಕೊಂಡುಕೊಳ್ಳಲೂ, ಬೆಂಕಿಯಿಂದಾಗಲಿ, ಪ್ರವಾಹದಿಂದಾಗಲಿ ನಾಶವಾದ ಮನೆಗಳನ್ನು ಕಟ್ಟಲೂ.	1,000	ಪರಿಮಿತಿಯಿಲ್ಲ
(2) ಮನೆಯ, ಅಥವಾ, ಕೃಷಿಯ ರಾಸುಗಳಿಗಾಗಿ ಮೇವನ್ನು ಕೊಂಡುಕೊಳ್ಳುವುದು; ಕಬ್ಬಿನ ಆಲೆಗಳನ್ನೂ, ನೀಲಿಯ ತೊಟ್ಟಿಗಳನ್ನೂ, ವ್ಯವಸಾಯದ ಪದಾರ್ಥಗಳನ್ನೂ, ಸರಿಪಡಿಸುವುದಕ್ಕನುಕೂಲವಾದ ಇತರ ಸಾಧನಗಳನ್ನೂ ಸ್ಥಾಪಿಸುವುದು ; ಜೋಡುಮೋಹಟೆ, ಯಾ, ನೀರನ್ನೆತ್ತುವ ಇತರ ಸಾಧನ ಇವುಗಳನ್ನು ಹಾಕುವುದು ; ಹಿಡುವಳಿಗೂ ಕೃಷಿಗೂ ಹೊಸದಾಗಿ ಅವಕಾಶಕೊಡಲ್ಪಟ್ಟ ಸ್ಥಳಗಳಲ್ಲಿ ಮನೆಗಳನ್ನು ಕಟ್ಟುವುದು ; ಇಂತಹ ಇತರ ಕೃಷಿಯುದ್ದೇಶಗಳಿಗಾಗಿ.	2,000	ಪರಿಮಿತಿಯಿಲ್ಲ
(3) ದುರ್ಭಿಕ್ಷವು ಪ್ರಾಪ್ತವಾಗಿದೆ ಎಂದು ಸರ್ಕಾರದವರು ಅಂಗೀಕರಿಸುವಾಗ್ಗೆ ಮುಂದಣ ಸುಗ್ಗಿಯ ಫಸಲಾಗುವ ವರೆಗೂ ಜಮೀನ್ ಹಿಡುವಳಿದಾರರಿಗೂ ಮತ್ತೂ ಅವರ ಆಶ್ರಿತರಿಗೂ ಜೀವನೋಪಾಯ ಕಲ್ಪಿಸಿಕೊಡುವುದರ ಮೂಲಕ ದುರ್ಭಿಕ್ಷನಿವಾರಣೆಯನ್ನು ಮಾಡುವುದಕ್ಕೆ.	200	ಪರಿಮಿತಿಯಿಲ್ಲ

2 ನೇ ರೂಲು :—ಸಾಲಗಳನ್ನು ಕೊಡಲಧಿಕೃತರಾದ ಅಧಿಕಾರಿಗಳೂ ಮತ್ತೂ ಅನುಜ್ಞಿತವಾದ ದ್ರವ್ಯಸಂಖ್ಯೆಯ ಪರಮಪರಿಮಿತಿ.

ತಾಸಿಲ್‌ದಾರರುಗಳೂ (ಸ್ವತಂತ್ರ ಚಾರ್ಜಿನಲ್ಲಿರುವ ಡೆಪ್ಯುಟಿ ತಾಸಿಲ್‌ದಾರರ ಸಹಿತ), ಡಿವಿಷನಲ್ ಆಫಿಸರುಗಳೂ, ಕಲೆಕ್ಟರುಗಳೂ ಕೆಳಗೆ ನಿರ್ದಿಷ್ಟವಾಗುವುದಕ್ಕಿಂತ ಹೆಚ್ಚಾಗದ ಸಾಲಗಳನ್ನು ಮಂಜೂರ್ಮಾಡಲು ಅರ್ಹರಾಗಿದ್ದಾರೆ :—

ತಾಸಿಲ್‌ದಾರರು	ರೂ. 250
ಡಿವಿಷನಲ್ ಆಫೀಸರು	,, 500
ಕಲೆಕ್ಟರು	,, 1,000

1,000 ರೂ. ಗಿಂತ ಹೆಚ್ಚಿನ ಸಾಲಗಳನ್ನು ರೆವಿನ್ಯೂ ಬೋರ್ಡಿನವರೂ, 5,000 ರೂ. ಗಿಂತ ಹೆಚ್ಚಿನ ಸಾಲಗಳನ್ನು ಸ್ಥಳೀಯ ಗವರ್ನಮೆಂಟಿನವರೂ ಮಂಜೂರ್ಮಾಡಬೇಕು.

ಟಿಪ್ಪಣಿ—(ಮೈ. 2 ನೇ ರೂ. ಟಿಪ್ಪಣಿಯಂತೆ).

3 ನೇ ರೂಲು :—ಬಡ್ಡಿಯ ದರ.

(ಮೈ. 3 ನೇ ರೂ. ನಂತೆ).

4 ನೇ ರೂಲು :—ಬಡ್ಡಿಯನ್ನು ಎಂದಿನಿಂದ ಲೆಕ್ಕಿಸತಕ್ಕದು ?

(ಮೈ. 4 ನೇ ರೂ. ನಂತೆ).

5 ನೇ ರೂಲು :—ಸಾಲಗಳನ್ನು ತೀರಿಸಲು ಕೊಡುವ ವಾಯಿದೆಗಳೂ, ಸಾಲಗಳನ್ನು ವಸೂಲ್ಮಾಡುವ ರೀತಿ.

ಬಡ್ಡಿಯನ್ನೂ ಅಸಲನ್ನೂ ಸೇರಿಸಿ ಸಮನಾದ ಸಾಲಿಯಾನಾ ಕಂತುಗಳ ಮೇರೆಗೆ ಸಾಲಗಳನ್ನು ತೀರಿಸತಕ್ಕದು.

(ಬಳಿಕ : ಮೈ. 5 ನೇ ರೂ. ನಲ್ಲಿ "ಸಾಲಗಳನ್ನು ತೀರಿಸುವುದಕ್ಕೆ" ಎಂದು ಪ್ರಾರಂಭಿಸಿ "ಮೀರಿರಕೂಡದು" ಎಂದು ಮುಗಿಯುವ ಪರಿಚ್ಛೇದವನ್ನೂ ಅದರ ಕೆಳಗಿನ (A) ಮತ್ತೂ (B) ಪಟ್ಟಿಗಳನ್ನೂ, ಅದರ ಕೆಳಗಿನ "ಸಾಲವನ್ನು ತೀರಿ" ಎಂದು ಪ್ರಾರಂಭಿಸಿ "ಒಳಗಾಗಿರತಕ್ಕದು" ಎಂದು ಮುಗಿಯುವ ಪರಿಚ್ಛೇದವನ್ನೂ ಓದಿಕೊಳ್ಳತಕ್ಕದು. ಕೊನೆಯ ಪರಿಚ್ಛೇದದಲ್ಲಿ 13 ನೇ ಮತ್ತೂ 32 ನೇ ನಿಬಂಧನೆ ಎಂಬುದಕ್ಕೆ ಬದಲಾಗಿ 26 ನೇ ರೂಲು ಎಂದು ಓದಿಕೊಳ್ಳಬೇಕು.

ಬಳಿಕ : ಮೈ. 5 ನೇ ರೂ. ನಲ್ಲಿ "ಪರಂತು" ಎಂದು ಪ್ರಾರಂಭಿಸಿ "ಕಡಮೆಮಾಡಕೂಡದು" ಎಂದು ಮುಗಿಯುವ ಪರಿಚ್ಛೇದವನ್ನು ಓದಿಕೊಳ್ಳಬೇಕು. ಅನಂತರ—'ಅನಂತರದ ಕಂತುಗಳ ಪಾವತಿಯ ಕಾಲವನ್ನು ಮುಂದರಿಸಲೂ ಕೂಡದು' ಎಂದು ಹೆಚ್ಚಾಗಿ ಓದಿಕೊಳ್ಳಬೇಕು.)

6 ನೆಯ ರೂಲು : — ಖಿಸ್ತ್ಪಾವತಿಯ ವಾಯಿದೆ.

ಆ ಆ ಡಿಸ್ಟ್ರಿಕ್ಟಿನ ಕಂದಾಯದ ಖಿಸ್ತುಗಳೊಳಗೊಂದು ಖಿಸ್ತನ್ನು ವಸೂಲ್ಮಾಡುವ ದಿವಸನೇ ಸಾಲದ ವರ್ಷದ ಕಂತುವಿನ ಪಾವತಿಯ ತಾರೀಖೂ ಬೀಳುವಂತೆ ಈ

ಕಂತು ಪಾವತಿಯ ತಾರೀಖನ್ನು ಗೊತ್ತುಮಾಡಬೇಕು. ಆದರೆ, ಅಸಲು ಬಡ್ಡಿಯು ಮೊದಲಾವೃತ್ತಿಯ ಪಾವತಿಯನ್ನು, ಸಾಲದ ಮೊದಲನೆಯ ಕಂತು ಖುಣಿಗೆ ಪಾವತಿಯಾದ 1 ವರ್ಷದೊಳಗೇ ತಗಾದೆ ಮಾಡಕೂಡದು. ಮತ್ತೂ 24 ತಿಂಗಳಿಗಿಂತ ಹೆಚ್ಚಾಗಿ ವಿಳಂಬವನ್ನೂ ಮಾಡಕೂಡದು. ಈ ಪ್ರಕಾರ, ಖುಣಶೋಧನದ ಪ್ರಾರಂಭ ಕಾಲವು 12 ತಿಂಗಳಿಗಿಂತ ಹೆಚ್ಚಾಗಿ ವಿಳಂಬಿಸಲ್ಪಟ್ಟರೆ, ಗೊತ್ತಾದ ಖಿಸ್ತಿನ ದಿವಸ ಬಂದಾಗ, ಆ ಮಧ್ಯಕಾಲಕ್ಕೆ ಸರಳ ಬಡ್ಡಿಯನ್ನು ವಸೂಲ್ಮಾಡಬೇಕು. ಆ ಸಾಲವು (ಅಥವಾ ಅದರ ಪ್ರತಿ ಕಂತೂ) ಖುಣಿಗೆ ಪಾವತಿಯಾದ ದಿವಸಕ್ಕೂ ಅಂತಹ ಖಿಸ್ತಿನ ತಾರೀಖಿಗೂ ಮಧ್ಯ ಇರುವ ವಿಚ್ಛೇದಕಾವಧಿಗೆ ಬಡ್ಡಿಯು ಮೊದಲಾವೃತ್ತಿ ಕೊಡಲ್ಪಡುವುದು.

ಯಾವ ಕಾರ್ಯಕ್ಕಾಗಿ ಸಾಲವು ಕೊಡಲ್ಪಟ್ಟಿತೋ, ಅಂತಹ ಕಾರ್ಯದಿಂದ ಪ್ರತಿಫಲವುಂಟಾಗಲಿಕ್ಕೆ 24 ತಿಂಗಳಿಗಿಂತಲೂ ಹೆಚ್ಚಾದ ಕಾಲವು ಬೇಕಾಗುತ್ತದೆಂದು ಸಾಲ ಮುಂಜೂರ್ಮಾಡುವ ಅಧಿಕಾರಿಯು ಯೋಚಿಸುವ ವಿಶೇಷ ಸಂದರ್ಭದಲ್ಲಿ, 5 ವರ್ಷಕ್ಕೆ ಮೀರದ ಹೆಚ್ಚಿನ ವಾಯಿದೆಯು ಕೊಡಲ್ಪಡಬಹುದು. ತಾಸಿಲ್‌ದಾರರಿಂದ ಕೊಡಲ್ಪಡುವ ಸಾಲಗಳ ವಿಷಯದಲ್ಲಿ ಈ ಪ್ರಕಾರ ಹೆಚ್ಚಿನ ವಾಯಿದೆಯನ್ನು ಕೊಡಲು ಡಿವಿಷನಲ್ ಅಧಿಕಾರಿಗಳ ಅನುಜ್ಞೆಬೇಕು. 5 ನೇ ರೂಲಿನಲ್ಲಿ ತೋರಿಸಿರುವಂತೆ, ಸಾಲದ ಕಡೆಯ ಕಂತು ಖುಣಿಗೆ ಸಂದಾಯವಾದಂದಿನಿಂದ ಪರಮಾವಧಿಯೊಳಗೇ ಒಟ್ಟು ಸಾಲವು ಬಡ್ಡಿಯೊಡನೆ ಪಾವತಿಮಾಡಲ್ಪಡುವಂತೆ ಪ್ರತಿ ಸಂದರ್ಭದಲ್ಲೂ ವರ್ಷದ ಖುಣಶೋಧನದ ಖಿಸ್ತನ್ನು ಗೊತ್ತುಮಾಡಬೇಕು.

7 ನೆಯ ರೂಲು :—ಸಾಲತೀರಿಸುವುದು ಯಾರಲ್ಲಿ ಅಥವಾ ಎಲ್ಲಿ ?

ಆಬಾದುಮಾಡಲ್ಪಡುವ ಭೂಮಿಯು ಇರುವ ತಾಲೂಕಿನ ಖಜಾನೆಯಲ್ಲಾಗಲಿ, ಗ್ರಾಮದ ಅಧಿಕಾರಿಗಳ ವಶಕ್ಕಾಗಲಿ ಸಾಲದ ಹಣವನ್ನು ವಾಪಸು ಕೊಡಬೇಕು. ಕಲೆಕ್ಟರಿಗೆ ಸೂಕ್ತ ತೋರಿದರೆ ಅವರು ಮತ್ತೊಂದು ಖಜಾನೆಯಲ್ಲಿ ಆ ಸಾಲವನ್ನು ವಾಪಸು ಕೊಡಲು ಅಪ್ಪಣೆ ಮಾಡಬಹುದು.

8 ನೆಯ ರೂಲು :—ಕಂತುಕೊಡದೆ ತಪ್ಪುವುದು.

(ಮೈ. 10 ನೇ ರೂಲಿನಂತೆ.)

9 ನೆಯ ರೂಲು :—ಖುಣಿಗೆ ವಿಪತ್ತು ಒದಗಿದರೆ ಹೇಗೆ ?

ಖುಣಿಯ ಬೆಳೆಯು ಕೆಟ್ಟು ಹೋಗುವುದು, ಅಥವಾ ಯಾವುದಾದರೊಂದು ಅಸಾಧಾರಣವಾದ ವಿಪತ್ತುಂಟಾಗುವುದು ಈ ಕಾರಣಗಳಿಗಾಗಿ ಕಲೆಕ್ಟರವರು ವರ್ಷದ ಕಂತಿನ ವಸೂಲಿಯನ್ನು ನಿಲ್ಲಿಸ ಬಹುದು. ಇಂತಹ ಸಂದರ್ಭಗಳನ್ನು ಇವರು ರೆವಿನ್ಯೂ ಬೋರ್ಡಿಗೆ ರಿಪೋರ್ಟ್ ಮಾಡಬೇಕು. ಬೋರ್ಡಿನವರು ಅದರ ಮೇಲೆ ಸೂಕ್ತ ತೋರಿದಂತೆ ಆರ್ಡರನ್ನು ಮಾಡಬಹುದು. ಹಾಗೆ ವಸೂಲಿಯನ್ನು ನಿಲ್ಲಿಸಿದ ಅವಧಿಯನಂತ

ರದ ವರ್ಷದಲ್ಲಿ ಆ ವರ್ಷದ ಕಂತನ್ನೂ ಮತ್ತು ನಿಲ್ಲಿಸಿಕೊಟ್ಟ ಕಂತನ್ನೂ ಸಹ ವಸೂಲ್ಮಾಡಬೇಕು. ಕಂತುಗಳ ಪಾವತಿಗೆ ಗೊತ್ತುಮಾಡಿದ್ದ ಪರಮಾವಧಿಯು ಯಾವ ಸಂದರ್ಭದಲ್ಲೂ ಹೆಚ್ಚಕೂಡದು; ನಿಲ್ಲಿಸಿದ ಅಸಲೂ ಮತ್ತೂ ಬಡ್ಡಿಯು ಕಂತಿನ ಮೇಲೆ ಸೇ. 5 ರೂ. ನಂತೆ ಸರಳ ಬಡ್ಡಿಯನ್ನು ವಸೂಲಾಗುವವರೆಗೂ ಹಾಕಬೇಕು.

10 ನೆಯ ರೂಲು :—ಕಾರ್ಯ ಫಲಿಸದಿದ್ದರೆ ಹೇಗೆ ?

ಬಾವಿಯನ್ನು ಕಟ್ಟುವುದಕ್ಕೂ ಯಾ, ಅದರ ಜೀರ್ಣೋದ್ಧಾರಕ್ಕೂ ಸಾಲ ಕೊಟ್ಟಿದ್ದು, ಖುಣಿಯಿಂದ ನಿವಾರಿಸಲಾಗದ ಕಾರಣಗಳಿಂದ ಬಾವಿಯಲ್ಲಿ ನೀರು ಬಾರದೆ ಹೋದರೂ, ಒಣಗಿಹೋದರೂ, ಅನ್ಯಥಾ ಅನುಪಯುಕ್ತವಾದರೂ, ಬೋರ್ಡಿನವರು ಹೀಗೆ ಮಾಡಬಹುದು. ಹೇಗೆಂದರೆ :—ಕಲೆಕ್ಟರಿಂದ ತಿಳಿಸಲ್ಪಟ್ಟ ಸತ್ಸಂಬಂಧದ ಸಂದರ್ಭಗಳನ್ನೆಲ್ಲ ಆಲೋಚಿಸಿ, ತಮಗೆ ಸೂಕ್ತ ತೋರುವಷ್ಟು ಕಂತುಗಳಲ್ಲಿ ಸಾಲವನ್ನು ವಸೂಲ್ಮಾಡುವಂತೆ ಆರ್ಡರ್ ಮಾಡಬಹುದು; ಅಂತಹ ಕಾರ್ಯ ಮಾಡಿಸಲು ಎಷ್ಟು ಕಾಲ ಕೊಡಲ್ಪಟ್ಟಿತ್ತೋ, ಆ ಅವಧಿಯು ಮುಗಿದ ಮೇಲೆ ಮೊದಲು ಗೊತ್ತುಮಾಡಿದ್ದ ಬಡ್ಡಿಯೇ ಹಾಕಲ್ಪಡಬೇಕು; ಅಥವಾ ಬಾಕಿಯಾಗುವ ಸಾಲದ ಪೈಕಿ ಎಲ್ಲವನ್ನಾದರೂ ಕೆಲಭಾಗವನ್ನಾದರೂ ಬಿಟ್ಟೇ ಬಿಡಬಹುದು.

11 ನೆಯ ರೂಲು :—ಸಾಲಕ್ಕೆ ಸೊತ್ತನ್ನು ಈಡುಮಾಡುವುದು.

(ಮೈ. 12 ನೇ ರೂಲಿನಲ್ಲಿ. ಪ್ರಾರಂಭದಿಂದ ೨ನೇ ಪುಟದ 1-2 ನೇ ಪಂಕ್ತಿಗಳ ವರೆಗೂ ಇಲ್ಲಿ ಓದಿಕೊಳ್ಳತಕ್ಕದು. ಬಳಿಕ :

ಆದರೆ ಸಾಲವು 2 ವರ್ಷದೊಳಗೇ ತೀರಿಸಲ್ಪಡುವುದಾಗಿದ್ದರೂ, ದುರ್ಗತಿಯ ನಿವಾರಣಾರ್ಥವಾಗಿ ಕೊಡಲ್ಪಟ್ಟಿದ್ದರೂ ಜಾಮೀನುದಾರರ ಖುದ್ದು ಜವಾಬ್ದಾರಿಯ ಮೇಲೆ ಸಾಲವನ್ನು ಕೊಡಬಹುದು.

ಬಳಿಕ: ಸದರಿ 12 ನೇ ರೂಲಿನ (C) ಪರಿಚ್ಛೇದವನ್ನು ಓದಿಕೊಳ್ಳತಕ್ಕದು.) ಬಳಿಕ :

ಅಗ್ರಿಕಲ್ಚರಿಸ್ಟ್ಸ್ ಲೋನ್ಸ್ ಆಕ್ಟ್ (ಬೇಸಾಯಗಾರರ ಸಾಲದ ಆಕ್ಟ್) ನ ಮೇರೆ ಕೊಡುವವೂ, 25 ವರ್ಷದೊಳಗೇ ತೀರಿಸಲ್ಪಡತಕ್ಕವೂ, 100 ರೂ. ಗಿಂತ ಹೆಚ್ಚಿಲ್ಲದುವೂ ಆಗಿರುವ ಸಾಲಗಳನ್ನು ಅರ್ಜಿದಾರನ ಖುದ್ ಜವಾಬ್ದಾರಿಯ ಮೇಲಾದರೂ, ಅವನ ಮತ್ತೂ ಮತ್ತೊಬ್ಬನ, ಅಥವಾ ಇತರರನೇಕರ ಒಟ್ಟಿನ ಜವಾಬ್ದಾರಿಯ ಮೇಲಾದರೂ ಕೊಡಬಹುದು. ಆದರೆ ಅರ್ಜಿದಾರನ ಭೂಮಿಯ ಕಂದಾಯವು, ಅಥವಾ ಅವನ ಮತ್ತೂ ಅವನ ಜಾಮೀನುದಾರನ ಒಟ್ಟು ಜಮೀನುಗಳ ಕಂದಾಯವು ಕೇಳುವ ಸಾಲದ ಪೈಕಿ 5 ನೇ 1 ಭಾಗ ($\frac{1}{5}$) ಕಿಂತ ಕಡಮೆಯಾಗಿರಕೂಡದು.

12 ನೆಯ ರೂಲು :—ಸಾಲದ ಷರತ್ತುಗಳಿಗೆ ತಪ್ಪಿದರೆ ಹೇಗೆ ?

(ಮೈಸೂರು 13 ನೆಯ ರೂಲಿನಂತೆ.)

13 ನೆಯ ರೂಲು :—ಅರ್ಜಿಮಾಡಿಕೊಳ್ಳುವ ರೀತಿ.

(ಮೈ. 14 ನೆಯ ರೂಲಿನಲ್ಲಿ ಪ್ರಾರಂಭದಿಂದ, 2 ನೇ ಪರಿಚ್ಛೇದಲ್ಲಿ “ ದಸ್ಕತ್ ಹಾಕಬೇಕು ” ಎಂಬುದರ ವರೆಗೆ ಓದಿಕೊಳ್ಳತಕ್ಕದು.)

14 ನೆಯ ರೂಲು :—ಸಾಲಕ್ಕೆ ಮನುವೆ ಮಾಡಿಕೊಂಡ ಮೇಲೆ ಮಾಡಬೇಕಾದ ಕಾರ್ಯ.

(ಮೈ. 15 ನೇ ರೂಲನ್ನು ಓದಿಕೊಳ್ಳಬೇಕು.) ಬಳಿಕ :

ಹಾಗೆ ಫೂಟ್ ವಿಚಾರಣೆ ಮಾಡಿದ ಬಳಿಕ ಸದರಿ ಅಧಿಕಾರಿಯು ಇದಕ್ಕೆ ಲಗತ್ತಿಸಿರುವ 6 ನೇ ನಂಬರ್ ನಮೂನೆಯಲ್ಲಾದರೂ, ಇಂತಹ ಮತ್ತೊಂದು ನಮೂನೆಯಲ್ಲಾದರೂ ರಿಪೋರ್ಟನ್ನು ಮಾಡಬೇಕು; ಸಾಲ ಕೊಡಕೂಡದೆಂದು ಬಂದಿರುವ ಆಕ್ಷೇಪಣೆಗಳನ್ನು ಅಂಗೀಕರಿಸಾದರೋ ತಿರಸ್ಕರಿಸಾದರೋ ಮಾಡಿರುವ ಆರ್ಡರುಗಳನ್ನು ಆ ರಿಪೋರ್ಟಿನಲ್ಲಿ ಗರ್ಭೀಕರಿಸಬೇಕು.

15 ನೆಯ ರೂಲು :—ಅರ್ಜಿದಾರನು ಹಾಜರಿರಬೇಕೇ ?

(ಮೈ. 16 ನೆಯ ರೂಲಿನಂತೆ.)

16 ನೆಯ ರೂಲು :—ವಿಚಾರಣೆಯ ವಿಧಾನ.

(ಮೈ. 17 ನೇ ರೂಲಿನಂತೆ. ಋಣಿಯು ಈಡುಮಾಡುವ ಜಮೀನಿನಂತೆ ಆಬಾದ್ ಮಾಡುವ ಜಮೀನಿನ ವಿಷಯದಲ್ಲೂ ವಿಚಾರಣೆಮಾಡಬೇಕು.)

17 ನೆಯ ರೂಲು :—ಭೋಗ್ಯದಾರರ ಮನುವೆ.

ಭೋಗ್ಯದಾರರು ಭೋಗ್ಯದ ಜಮೀನಿನ ಆಬಾದಿಗಾಗಿ ಸಾಲ ಕೇಳುವ ಮನುವೆಗಳನ್ನು ಸಾಧಾರಣವಾಗಿ ಅಂಗೀಕರಿಸಕೂಡದು.

18 ನೆಯ ರೂಲು :—ಗೇಣೀದಾರರ ಮನುವೆ.

(ಮೈ. 21 ನೆಯ ರೂಲಿನಂತೆ. "ನೋಟೀಸನ್ನು ಆತನ ಹೆಸರಿಗೆ ಟಪಾಲು ಮೂಲಕ ಕಳುಹಿಸಬೇಕು" ಎಂಬುದನ್ನು ಮಾತ್ರ ಬಿಟ್ಟು ಮಿಕ್ಕುದನ್ನು ಓದಿಕೊಳ್ಳುವುದು.)

19 ನೆಯ ರೂಲು :—ನೊಟೀಸನ್ನು ಜಾರಿ ಮಾಡುವ ವಿಧಾನ.

(ಮೈ. 22 ನೆಯ ರೂಲಿನಂತೆ.)

20 ನೆಯ ರೂಲು :—ನೋಟೀಸಿನಲ್ಲಿರಬೇಕಾದ ಸಂಗತಿಗಳು.

(ಮೈ. 23 ನೆಯ ರೂಲಿನ 1ನೇ ಪರಿಚ್ಛೇದದಂತೆ.)

21 ನೆಯ ರೂಲು :—ಅನಂತರ ಮಾಡಬೇಕಾದುದು.

(ಮೈ. 22 ನೆಯ ರೂಲಿನ 2, 3 ನೆ ಪರಿಚ್ಛೇದಗಳಂತೆ.)

22 ನೆಯ ರೂಲು :—ಆಬಾದಿನ ಕೆಲಸವು ವಿಶೇಷ ದೊಡ್ಡುದಾಗಿದ್ದರೆ ಹೇಗೆ ?

(ಮೈ. 24 ನೆಯ ರೂಲಿನಂತೆ. ಆದರೆ ವಿಶೇಷವೇನೆಂದರೆ:—

ನಕ್ಷೆ ಮೊದಲಾದುವುಗಳನ್ನು ಅಪೇಕ್ಷಿಸಬಹುದಾದ ಕಾರ್ಯವು ಕಲಾಕುಶಲತೆಗಳನ್ನಪೇಕ್ಷಿಸಬೇಕಾದುವುಗಳಾಗಿರಬೇಕಲ್ಲದೆ ಅವುಗಳ ವೆಚ್ಚವು 5,000 ರೂ. ಗಿಂತ ಹೆಚ್ಚಾಗಿರಬೇಕು.

"ನಕ್ಷೆ ಮೊದಲಾದುವುಗಳ ಖರ್ಚನ್ನು ಮಾಫ್ ಮಾಡಬೇಕು" ಎಂಬುದನ್ನು ಬಿಟ್ಟು ಓದಿಕೊಳ್ಳಬೇಕು.)

23 ನೆಯ ರೂಲು :—ಸಾಲ ಕೊಡಲು ಹುಕುಂ ಮಾಡುವುದು.

(ಮೈ. 26 ನೆಯ ರೂಲಿನಂತೆ.)

24 ನೆಯ ರೂಲು :—ಅಂತಹ ಹುಕುಮು ಯಾವ ರೂಪದಲ್ಲಿರಬೇಕು ?

(ಮೈ. 27 ನೆಯ ರೂಲಿನಂತೆ.)

26 ನೆಯ ರೂಲು :—ಆಬಾದಿನ ಕಾರ್ಯಗಳ ತನಿಖೆ.

(ಮೈ. 32 ನೆಯ ರೂಲಿನಂತೆ.)

27 ನೆಯ ರೂಲು :—ಲೆಕ್ಕಗಳು.

ಇದಕ್ಕೆ ಲಗತ್ತಿಸಿರುವ 2 ನೇ ನಂಬರ್ ನಮೂನೆಯಲ್ಲಾಗಲಿ, ಅಥವಾ ಅದಕ್ಕೆ ಸಮನಾದ ಮತ್ತೊಂದು ನಮೂನೆಯಲ್ಲಾಗಲಿ, ಪ್ರತಿ ತಾಸಿಲ್ದಾರರೂ ತಂತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಸಾಲಗಳ ಮತ್ತು ವಸೂಲಿಗಳ ರಿಜಿಸ್ಟರನ್ನು ಇಡಬೇಕು. ಮತ್ತೂ ರೆವಿನ್ಯೂ ಬೋರ್ಡಿನಿಂದ ಆಗಾಗ್ಗೆ ವಿಧಿತವಾಗುವ ಇತರ ಅಕೌಂಟುಗಳನ್ನೂ ಸ್ಟೇಟುಮೆಂಟುಗಳನ್ನೂ ಇಡಬೇಕು.

ಫಾರಮುಗಳು (ನಮೂನೆಗಳು).

(ಇವುಗಳೆಲ್ಲವೂ ಮೈಸೂರಿನವುಗಳಂತೆಯೇ.)

ಸಹಾಯಕಾನುಶಾಸನಗಳು.*

1. ಈ ಎರಡು ಬಗೆಯ ಸಾಲದ ಖಾನೂನುಗಳ ಉದ್ದಿಷ್ಯ ಪ್ರತಿಯೊಬ್ಬ ಕಲೆಕ್ಟರು ವಿನಿಯೋಗಿಸಬಹುದಾದ ವರ್ಷದ ಮೊಬಲಗನ್ನು ರೆವಿನ್ಯೂಬೋರ್ಡಿನವರು ಪ್ರತಿ ವರ್ಷವೂ ಕಲೆಕ್ಟರಿಗೆ ತಿಳಿಸುವರು. ತಮ್ಮ ಡಿಸ್ಟ್ರಿಕ್ಟಿನ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಬೇಕೆಂಬುದನ್ನರಿತು ಕಲೆಕ್ಟರು ಆ ಮೊಬಲಗನ್ನು ವಿನಿಯೋಗಿಸಬೇಕು. ಒಂದು ತಾಲ್ಲೂಕಿಗಾಗಿ ತಾವು ಬೇರ್ಪಡಿಸಿರುವ ಮೊಬಲಗನ್ನು ಮತ್ತೊಂದು ತಾಲ್ಲೂಕಿಗೆ ವರ್ಗಾಯಿಸಿಕೊಳ್ಳಲು ಇವರಿಗೆ ಅಧಿಕಾರವಿರತಕ್ಕದು. ಭೂಮಿಯ ಆಬಾದಿಗಾಗಿ ನಿಯುಕ್ತವಾದ ಹಣದೊಳಗೆ ಎಷ್ಟು ಭಾಗವು ಬಾವಿಗಳನ್ನು ತೋಡಿಸುವುದಕ್ಕೂ, ದುರಸ್ತುಮಾಡುವುದಕ್ಕೂ ಬೇಕೋ, ಎಷ್ಟು ಭಾಗವು ಇತರ ಉದ್ದೇಶಕ್ಕೆ ಬೇಕೋ ಎಂಬುದನ್ನು ನಿರ್ದೇಶಿಸಿ ಆ ಮೊಬಲಗನ್ನು ಹಂಚಬೇಕು. ಅನಾವೃಷ್ಟಿಯ ನಿವಾರಣಾರ್ಥವಾದ ಏರ್ಪಾಡುಗಳಿಂದ ಯಾವ ಪ್ರದೇಶವು ಮೊದಲೇ ಸುರಕ್ಷಿಸಲ್ಪಟ್ಟಿದೆಯೋ ಅಂತಹ ಪ್ರದೇಶದಲ್ಲಿ ಹಣವು ವ್ಯಯವಾಗದಂತೆಯೂ, ಎಲ್ಲಿ ಕ್ಷಾಮ ನಿವಾರಣೆಗಾಗಿ ಆಬಾದಿನ ಕಾರ್ಯಗಳು (ವಿಶೇಷತಃ ಬಾವಿಯ ಕಾರ್ಯಗಳು) ನಡೆಯಬೇಕೋ ಅಲ್ಲಿ ಅದು ವಿನಿಯೋಗವಾಗುವಂತೆಯೂ ಕಲೆಕ್ಟರುಗಳು ಎಚ್ಚರದಿಂದ

* ನೋಟ್ : ಸಾಲದ ವಿಷಯಕವಾದ ಈ ಖಾನೂನುಗಳ ಸುವ್ಯವಹರಣಕ್ಕೆ ಈ ಅನುಶಾಸನಗಳು ಬಹು ಅವಶ್ಯಕವಾಗಿಯೂ, ಸರ್ವಸಾಮಾನ್ಯ ನ್ಯಾಯವುಳ್ಳವುಗಳಾಗಿಯೂ ಇರುವುದರಿಂದ ಇವುಗಳು ಮೈಸೂರು ದೇಶದಲ್ಲಿಯೂ ಉಪಯೋಗಕ್ಕೆ ಬರುತ್ತವೆಯಾಗಿ, ಮೈಸೂರಿನವರೂ ಇವುಗಳನ್ನು ಓದಿಕೊಳ್ಳುವುದು.

ನೋಡಿಕೊಳ್ಳಬೇಕು. ಪ್ರತಿ ಡಿಸ್ಟ್ರಿಕ್ಟಿನ ವೆಚ್ಚವು ಆ ಆ ಡಿಸ್ಟ್ರಿಕ್ಟಿಗೆ ನಿಯುಜ್ಯವಾದ ಮೊಬಲಗಿನೊಳಗೇ ಇರಬೇಕು. ಹೆಚ್ಚು ಹಣ ಬೇಕಾದರೆ ಕೂಡಲೆ ಅದನ್ನು ಕೇಳ ಬೇಕು. ಒಂದಾನೊಂದು ಡಿಸ್ಟ್ರಿಕ್ಟಿಗೆ ನಿಯುಜ್ಯವಾದ ಹಣವೆಲ್ಲವೂ ಸಾಲಿನ ಆಖೈರಿ ನೊಳಗೇ ವಿನಿಯೋಗವಾಗದೆ ಅದರ ಕೆಲವು ಭಾಗವು ಉಳಿಯುವ ಸಂಭವವಿದ್ದರೆ ಹಾಗೆ ಉಳಿಯುವ ಮೊಬಲಗನ್ನು ಇತರ ಡಿಸ್ಟ್ರಿಕ್ಟಿಗೆ ಉಪಯೋಗವಾಗುವಂತೆ ಮಾಡಲು, ಹಾಗೆ ಉಳಿಯಬಹುದಾದ ಮೊಬಲಗನ್ನು ಬೋರ್ಡಿಗೆ ಮುಂದರಿದು ಮುಂಚಿತವಾಗಿ ತಿಳಿಸಬೇಕು.

2. ದೇಶಭಾಷೆಯಲ್ಲಿ ಮುದ್ರಿತವಾದ ಸಾಲ ಕೇಳುವ ಅರ್ಜಿಯು ನಮೂನೆಗಳನ್ನು ಶಾನಭಾಗರ ವಶಕ್ಕೆ ಕೊಡಬೇಕು. ಇವರು ಅವನ್ನು ಸಾಲವನ್ನಪೇಕ್ಷಿಸುವ ರೈತರಿಗೆ ಹಂಚಬೇಕು.

3. ಕೇಳುವ ಸಾಲವು 5,000 ರೂ. ಗೆ ಮೀರಿದ್ದರೆ, ಮಾಡಿಸಬೇಕೆಂದಿರುವ ಕಾರ್ಯದ ಸಾಧ್ಯತೆ, ಅಂದಾಜಾ, ಸಾಧಾರಣವಾಗಿ ಅದರ ಗುಣಾವಗುಣ ಈ ವಿಷಯಗಳಲ್ಲಿ ಎಗ್ಜಿಕ್ಯೂಟಿವ್ ಇಂಜಿನಿಯರ ತಾತ್ಪರ್ಯವನ್ನು ಕಲೆಕ್ಟರು ಕೇಳಬೇಕು. ಇತರ ಸಂದರ್ಭದಲ್ಲಿ ಅವಶ್ಯಕವಾಗಿ ತೋರಿದರೆ ಅರ್ಜಿಯನ್ನು ವ್ಯವಸ್ಥಿಸುವ ಅಧಿಕಾರಿ ಯು ಖಸಬದಾರರ ತಾತ್ಪರ್ಯವನ್ನು ವಾಡಿಕೆಯಾದ ಮಾರ್ಗದಲ್ಲಿ ಅಪೇಕ್ಷಿಸಬಹುದು.

4. 2 ನೆಯ ಮತ್ತೂ 23 ನೆಯ ರೂಲುಗಳ ಕೊನೆಯ ವಾಕ್ಯದೊಳಗೆ ಬರುವ ಸಾಲದ ಅರ್ಜಿಗಳನ್ನು ವ್ಯವಸ್ಥಿಸುವ ಅಧಿಕಾರಿಗಳು ಡಿಸ್ಟ್ರಿಕ್ಟ್ ಕಲೆಕ್ಟರಾಗಿಲ್ಲದಿದ್ದರೆ, ಅವರು ಆ ಕೇಸಿನ ರಿಕಾರ್ಡನ್ನು ಕಲೆಕ್ಟರಿಗೆ ಕಳುಹಬೇಕು. ಕಲೆಕ್ಟರು ಅದನ್ನು ತಮ್ಮ ಶಿಫಾರಿಸ್ಸಿನೊಡನೆ ಬೋರ್ಡಿಗೆ ರವಾನಿಸಬೇಕು.

5. ವರ್ಷದ ಕಂತನ್ನು ಕೊಡಲು ತಪ್ಪಿದಲ್ಲಿ ವಸೂಲಿಯ ಕ್ರಮವನ್ನು ಆಬಾದುಮಾಡಲ್ಪಟ್ಟ, ಅಥವಾ, ಈಡುಮಾಡಲ್ಪಟ್ಟ ಭೂಮಿಯ ಮೇಲೆ ಮೊಟ್ಟ ಮೊದಲೇ ಚಲಾಯಿಸಬೇಕಾದುದಿಲ್ಲ. ತಾಸಿಲ್‌ದಾರರು ಔಚಿತ್ಯವರಿತು ಬಾಕಿದಾರನ ಚರಸೊತ್ತಿನ ಮೇಲೆ ಮೊದಲು ಕ್ರಮಜರಿಗಿಸಬೇಕು. ಭೂಮಿಯ ಹರಾಜಿನಿಂದ, ಆ ಭೂಮಿಯಲ್ಲಿ ಋಣಿಗಿರುವ ಹಕ್ಕುಬಾಧ್ಯತೆಯು, ಅಥವಾ, ಅಂತಹ ಋಣಿಯ ಹಕ್ಕು ಬಾಧ್ಯತೆಯನ್ನು ಈಡುಮಾಡಿಕೊಂಡಿರುವವರ ಹಕ್ಕುಬಾಧ್ಯತೆಗಳು ಇವುಗಳಿಗೆ ಮಾತ್ರ ಬಾಧಕವುಂಟಾಗುವುದೇ ಹೊರತು ಆ ಭೂಮಿಯಲ್ಲಿ ಇತರರಿಗಿರುವ ಹಕ್ಕುಬಾಧ್ಯತೆ ಗಳಿಗೆ ಬಾಧಕವುಂಟಾಗುವುದಿಲ್ಲವೆಂಬುದನ್ನು ಮನಸ್ಸಿನಲ್ಲಿಟ್ಟಿರಬೇಕು.

6. ಆಬಾದುಮಾಡುವ ಭೂಮಿಯಲ್ಲಿ ಅರ್ಜಿದಾರನಿಗಿರುವ ಹಕ್ಕುಬಾಧ್ಯತೆಯು ಸಾಲಕ್ಕೀಡಾಗುವುದಾದರೆ ಆಬಾದಿಗಿಂತ ಮುಂಚೆ ಆ ಭೂಮಿಗೆ ಎಷ್ಟು ಬೆಲೆಯಾಗು ತ್ತಿದ್ದಿತೋ ಅದನ್ನು ಮಾತ್ರ 11 ನೆಯ ರೂಲಿನ ಉದ್ದೇಶಕ್ಕಾಗಿ ಯೋಚಿಸಬೇಕು. ಆಬಾದಿನ ಕಾರ್ಯವು ತತ್ಸಂಬಂಧದ ಭೂಮಿಯ ಚಕ್ಕುಬಂದಿಯೊಳಗೇ ಇರಬೇಕು.

7. ಋಣಿಯ ಹಕ್ಕನ್ನು ಈಡುಮಾಡಿಕೊಂಡಿರುವವರ ಹಕ್ಕು ಭೂಮಿಯಾಬಾದಿನ ಸಾಲದ ಆಕ್ಟಿನ 7 (1) ನೆಯ ನಿಯಮದಲ್ಲಿ ರಕ್ಷಿಸಲ್ಪಟ್ಟಿಲ್ಲ. ಅದುಕಾರಣ ಭೂಮಿಯು ರೆವಿನ್ಯೂ ರಿಕವರಿಯ ಆಕ್ಟಿನ 42 ನೆಯ ಸೆಕ್ಷನ್ನಿನ ಮೇರೆ ಹರಾಜು ಮಾಡಲ್ಪಟ್ಟರೆ, ಅಂತಹ ಈಡುಗಳೆಲ್ಲವೂ ನಶಿಸಿಹೋಗುವುವು. ಆದರೂ ಸರ್ಕಾರಕ್ಕೆ ನಷ್ಟವಾಗದಷ್ಟುಮಟ್ಟಿಗೆ ಇಂತಹ ಈಡುಗಳು ಪುರಸ್ಕರಿಸಲ್ಪಡತಕ್ಕವುಗಳಾಗಿವೆ. 14 ನೆಯ ರೂಲಿನ ಮೇರೆ ಮಾಡುವ ವಿಚಾರಣೆಯಲ್ಲಿ ಅಂತಹ ಈಡುಗಳಿವೆಯೆಂದು ಗೊತ್ತಾದರೆ, ಆಬಾದುಮಾಡುವ ಭೂಮಿಯಲ್ಲಿ ಋಣಿಗಿರುವ ಹಕ್ಕಿನ ಬೆಲೆಯೊಳಗೆ ಆ ಈಡುಗಳ ಬೆಲೆಯನ್ನು ಕಳೆದು ಉಳಿದುದಕ್ಕೆ ಮಾತ್ರ, ಸರ್ಕಾರಿ ಸಾಲಕ್ಕೆ ಈಡು ಮಾಡಿಕೊಳ್ಳುವ ವಿಷಯದಲ್ಲಿ ಅಂದಾಜವನ್ನು ಕಟ್ಟಬೇಕು. ಅಂತಹ ಈಡುಗಳನ್ನು ತಿಳಿಯಲು ವಿಸ್ತಾರವಿಚಾರಣೆಯನ್ನು ಮಾಡಬೇಕಾದುದಿಲ್ಲ. ಇತರರಿಗೀಡುಮಾಡಿದ್ದವನು ವಿಚಾರಣೆಯ ಕಾಲದಲ್ಲಿ ಆ ಸಂಗತಿಯನ್ನು ತಿಳಿಸದಿದ್ದರೆ ಈಡಿಲ್ಲವೆಂತಲೇ ಭಾವಿಸಿಕೊಳ್ಳಬಹುದು. ಆ ಭೂಮಿಯು ಆಬಾದಾಗುವುದರಿಂದ ಅದನ್ನೀಡುಮಾಡಿಕೊಂಡಿರುವವರ ಈಡಿನ ಬೆಲೆಯೂ ಹೆಚ್ಚುವುದೆಂಬುದನ್ನೂ ಯೋಚಿಸಬೇಕು.

8. ಆಬಾದುಮಾಡಲ್ಪಡುವ ಭೂಮಿಯಲ್ಲಿ ಸರ್ಕಾರಿ ಸಾಲವನ್ನು ಕೊಡುವುದಕ್ಕಿಂತ ಮೊದಲೇ ಇತರರಿಗಿದ್ದ ಹಕ್ಕುಬಾಧ್ಯತೆಗಳಿಗೆ ಆ ಭೂಮಿಯ ಹರಾಜಿನಿಂದ ಬಾಧಕವುಂಟಾಗುವುದಿಲ್ಲವೆಂಬುದನ್ನು ಆಕ್ಟಿನ 7 (1) ನೆಯ ನಿಯಮವು ಹೇಳುತ್ತದೆ. ಅಂತಹ ಇತರರ ಹಕ್ಕುಗಳಿಂದ ಸರ್ಕಾರಿ ಹಕ್ಕಿಗೆ ಕುಂದಕವುಂಟಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಇತರರಿಗೆ ಇಂತಹ ಹಕ್ಕುಗಳಿರುವ ಸಂದರ್ಭಗಳನ್ನೂ ಆ ಆ ಸಂದರ್ಭದಲ್ಲಿ ಇರಬೇಕಾದ ವಿಶೇಷ ಎಚ್ಚರಿಕೆಯನ್ನೂ ಕೆಳಗೆ ಕೊಟ್ಟಿದೆ.

1.

ಹಕ್ಕಿನ ಸ್ವಭಾವ:—ಹಿಂದೂ ವಿಧವೆಯ ಆಸ್ತಿಯ ಮೇಲೆ ಉತ್ತರವಾರಿಸ್ ದಾರರಿಗಿರುವ ಹಕ್ಕು.

ಮುಂಜಾಗ್ರತೆ:—ಅರ್ಜಿದಾರಳು ಹಿಂದೂ ವಿಧವೆಯಾದರೆ, ಉತ್ತರಾಧಿಕಾರಿಗಳ ಅನುಮತಿಯನ್ನು ಪಡೆಯಬೇಕು.

2.

ಹಕ್ಕಿನ ಸ್ವಭಾವ:—ಅವಿಭಕ್ತ ಹಿಂದೂ ಕುಟುಂಬದ ಸಂಸೃಷ್ಟರೊಳಗೆ ಕನಿಷ್ಠರಿಗಿರುವ ಹಕ್ಕು.

ಮುಂಜಾಗ್ರತೆ:—ಸಾಲವನ್ನು ಕೇಳುವ ಅವಿಭಕ್ತಕುಟುಂಬದ ಮ್ಯಾನೇಜರು ಆ ಸಾಲವು ಅವಿಭಕ್ತಕುಟುಂಬದ ಭೂಮಿಯ ಆಬಾದಿಗಾಗಿ ಅವಶ್ಯಕವಾಗಿದೆ ಎಂಬುದನ್ನು ನಿದರ್ಶನಮಾಡಿಕೊಡಬೇಕು. ಇಂತಹ ಸಂದರ್ಭದ ಸಾಲವನ್ನು ಸಾಧ್ಯವಾದಷ್ಟು ಹೆಚ್ಚು ಕಂತುಗಳಲ್ಲಿ ಋಣಿಗೆ ಸಲ್ಲಿಸಬೇಕು. ಮೊದಲ ಕಂತಿನ ಹಣವು ಸರಿಯಾಗಿ ವಿನಿಯೋಗವಾಗಿದೆ ಎಂಬುದನ್ನರಿತು ಮುಂದಣ ಕಂತನ್ನು ಕೊಡಬೇಕು.

3.

ಹಕ್ಕಿನ ಸ್ವಭಾವ:—ಒಂದು ಭೂಮಿಗೆ ಅನೇಕರು ಸಂಯುಕ್ತವಾದ ಹಿಡುವಳಿದಾರರಾಗಿದ್ದು, ಅವರೊಳಗೊಬ್ಬ ಮಾತ್ರ ಸಾಲಕ್ಕೆ ಮನುವೆಮಾಡಿಕೊಳ್ಳುವಲ್ಲಿ ಆ ಭೂಮಿಯ ಸಹಾಧಿಕಾರಿಗಳಿತರರಿಗಿರುವ ಹಕ್ಕು.

ಮುಂಜಾಗ್ರತೆ:—ಈ ಸಂದರ್ಭದಲ್ಲಿ ಮುಂದೆ ವಿವರಿಸಿರುವ ಷರತ್ತುಗಳಿಗನುಸಾರ ವಿನಾ ಸಾಲವನ್ನು ಕೊಡಕೂಡದು. (1) ಪ್ರತಿ ಪಟ್ಟೆದಾರನಿಗೂ ಆ ಭೂಮಿಯ ಫಸಲಿನೊಂದುಭಾಗಕ್ಕೆ ಮಾತ್ರ ಹಕ್ಕಿದ್ದರೆ ಸಂಯುಕ್ತವಾದ ಎಲ್ಲ ಪಟ್ಟೆದಾರರೂ ಸಾಲಕ್ಕೆ ಮನುವೆಮಾಡಿಕೊಳ್ಳಬೇಕು. (2) ಪ್ರತಿ ಪಟ್ಟೆದಾರನಿಗೂ ಆ ಭೂಮಿಯ ನಿಯತವಾದೊಂದು ಭಾಗಕ್ಕೆ ಮಾತ್ರ ಹಕ್ಕಿದ್ದರೆ ಅರ್ಜಿದಾರನು ತನ್ನ ಭಾಗದ ಭೂಮಿಯನ್ನು ಪೋಡ್‌ಮಾಡಿಸಿಕೊಂಡು ಬೇರೇ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. (3) ಮೇಲಿನ ಷರತ್ತುಗಳು ಪೂರ್ಣವಾಗದಿದ್ದಲ್ಲಿ ಸಾಲನೆಲ್ಲವೂ ಉತ್ಪತ್ತಿಯಾಗುವಷ್ಟು ಬೇರೇ ಈಡನ್ನೇ ಮಾಡಬೇಕು.

4

ಹಕ್ಕಿನ ಸ್ವಭಾವ:—ಮೈನರಿನ ಗಾರ್ಡಿಯನು ಮನುವೆ ಮಾಡಿಕೊಳ್ಳುವಲ್ಲಿ, ಮೈನರಿನ ಹಕ್ಕು.

ಮುಂಜಾಗ್ರತೆ:—ಅರ್ಜಿದಾರನು ಲಾ ಪ್ರಕಾರ ನಿಯುಕ್ತವಾದ ಮೈನರಿನ ಗಾರ್ಡಿಯನಾಗಿಯೂ ಇದ್ದು, ಮೈನರಿನ ಹಿತಾರ್ಥದ ಸದುದ್ದೇಶದಿಂದ ಸಾಲವೂ ಕೇಳಲ್ಪಟ್ಟಿದ್ದರೆ ಮೈನರಿನ ಭೂಮಿಯಾಬಾದಿಗಾಗಿ ಸಾಲವನ್ನು ಕೊಡಬಹುದು. ಸಾಲವನ್ನು ಅನೇಕ ಕಂತುಗಳಲ್ಲಿ ಕೊಡುವುದು, ಆ ಮೊಬಲಗು ಉದ್ದಿಷ್ಟ ಕಾರ್ಯಕ್ಕೆ ವಿನಿಯೋಗವಾಗುವುದನ್ನು ನೋಡಿಕೊಳ್ಳುವುದು—ಈ ಮುಂಜಾಗ್ರತೆಗಳು 2 ನೆಯ ಸಂದರ್ಭದಲ್ಲಿನಂತೆಯೇ ಅವಶ್ಯಕ.

ನೋಟ್:—ಪ್ರಜೆಗಳೊಳಗೆ ಹಿಂದೂ ಕುಟುಂಬಿಗಳ ಅನ್ಯೋನ್ಯ ಹಕ್ಕುಬಾಧ್ಯತೆಗಳನ್ನು ಮಾತ್ರ ಮೇಲೆ ಸೂಚಿಸಿದ್ದಾರೆ. ಉಳಿದ ಪ್ರಜೆಗಳಾದ ಮಹಮದ್ದೀಯರೂ, ಕ್ರೈಸ್ತರೂ ಇವರ ಕುಟುಂಬದವರ ಹಕ್ಕುಬಾಧ್ಯತೆಗಳನ್ನು ತಿಳಿಯಲಪೇಕ್ಷಿಸುವವರು ನಮ್ಮ "ವ್ಯವಹಾರ ನಿರ್ಣಯ" ದ 6-7 ನೆಯ ಪ್ರಕರಣಗಳನ್ನು ಓದಿಕೊಳ್ಳುವುದು.

9. ಆಬಾದು ಮಾಡಲ್ಪಡುವ ಭೂಮಿಯೇ ಈಡುಮಾಡಲ್ಪಟ್ಟಿದ್ದರೆ ಸರ್ಕಾರಿಯ ಹಕ್ಕು ಆಬಾದ್ ಆಕ್ಟಿನ 7 ನೆಯ ಸೆಕ್ಷನ್ನಿನ ಮೇರೆ ರಕ್ಷಿತವಾಗಿರುವುದರಿಂದ, ಪರಾಧೀನದ ಸರ್ಟಿಫಿಕೇಟಿಗಾಗಿ ರಿಜಿಸ್ಟ್ರೇಷನ್ ಡಿಪಾರ್ಟುಮೆಂಟಿಗೆ ನಿರ್ದೇಶಮಾಡಬೇಕಾದುದಿಲ್ಲ. ಖಾತರಿಗಾಗಿ ಜಮೀನುಗಳನ್ನು ಈಡುಮಾಡುವ ಸಂದರ್ಭದಲ್ಲಿ ಪೂರ್ವಾಧಿಗಳಿರುವಿಕೆ ಇಲ್ಲದಿರುವಿಕೆ ಇವುಗಳ ನಂಬುಗೆಯ ವಿಷಯದಲ್ಲಿ ಋಣಿಯೋ ಅಥವಾ ಅವನ ಜಾಮೀನುದಾರನೋ ಲೇಖನ ಪ್ರಮಾಣಮಾಡಲು ಒದ್ದರಾಗಿರುತ್ತಾರಾಗಿ, ಪರಾಧೀನದ ಸರ್ಟಿಫಿಕೇಟುಗಳು ಸಾಧಾರಣವಾಗಿ ಅನಪೇಕ್ಷಿತಗಳಾಗಿವೆ. ಅಸಾಧಾರಣಕಾರಣಗಳಿದ್ದರೆ ಮಾತ್ರ ಅವುಗಳನ್ನು ರಿಕಾರ್ಡುಮಾಡಿ ಸರ್ಟಿಫಿಕೇಟನ್ನು ಕೇಳಬೇಕು. ಸಾಲದ

ಹಣವು 750 ರೂ. ಗಿಂತ ಹೆಚ್ಚಿಲ್ಲದಿದ್ದರೆ ರಿಜಿಸ್ಟರ್ ಹುಡುಕುವ ಫೀಜನ್ನು ಸರ್ಕಾರವೇ ವಹಿಸಿಕೊಳ್ಳಬೇಕು.

10. ಬಂಜರ್ ಭೂಮಿಯನ್ನು ಕೃಷಿಯೋಗ್ಯತೆಗೂ, ಕುಷ್ಕಿ ಜಮೀನನ್ನು ತರಿ ಯೋಗ್ಯತೆಗೂ, ಇಂತಹ ಸಾಲದ ಹಣದ ಸಹಾಯದಿಂದ, ತಂದುಕೊಳ್ಳುವಲ್ಲಿ, 11 ನೆಯ ಸೆಕ್ಷನ್ನಿನ ಮೇರೆ ತತ್ಸಂಬಂಧಿಗಳು ಕಂದಾಯದ ವಿನಾಯತಿಯನ್ನು ಅಪೇಕ್ಷಿಸುತ್ತಾರೆ. ಇಂತಹ ಅಪೇಕ್ಷೆಗಳ ಸುಲಭ ವ್ಯವಸ್ಥೆಗಾಗಿ, ಯಾವ ಸಮಯಗಳಿಗೊಳಪಟ್ಟು ಕೃಷಿ ಯೋಗ್ಯವಾಗಿ ಮಾಡಲ್ಪಟ್ಟ ಜಮೀನುಗಳನ್ನು ಅನುಭವಿಸಬಹುದೋ, ತರಿ ಯೋಗ್ಯ ವಾಗಿ ಮಾಡಲ್ಪಟ್ಟ ಜಮೀನುಗಳಿಗೆ ನೀರನ್ನು ತೆಗೆದುಕೊಳ್ಳಬಹುದೋ, ಅಂತಹ ಸಮಯಗಳನ್ನು (ಕಂಡಿಷನ್ನುಗಳನ್ನು) ಕಲೆಕ್ಟರು ಸಾಲವನ್ನು ಕೊಡುವುದಕ್ಕಿಂತ ಮುಂಚಿತವಾಗಿಯೇ ನಿಷ್ಕರ್ಷಿಸಬೇಕು.

11. ಮೊದಲಿನ ಕಾರ್ಯದ ಪೂರ್ಣತೆಗಾಗಿಯೇ ಮತ್ತಷ್ಟು ಸಾಲಕ್ಕೆ ಮನು ವೆಯು ಬಂದರೆ, ಈ ಎರಡನೆಯ ಮನುವೆಯು ಮೊದಲ ಲೇವಾದೇವಿಗೇ ಸೇರಿದುದೆಂತ ಗ್ರಹಿಸಿ, ಮೊದಲು ಕೊಟ್ಟಿದ್ದ ಸಾಲ, ಈಗ ಕೊಡುವ ಸಾಲ ಈ ಎರಡರ ಮೊತ್ತಕ್ಕೆ ದೃಷ್ಟಿಕೊಟ್ಟು, ಸಾಲಕೊಡತಕ್ಕ ಅಧಿಕಾರಿಗಳು ಆ ಮನುವೆಯನ್ನು ವ್ಯವಸ್ಥಿಸಬೇಕು.

12. ಇನಾಮು ಗ್ರಾಮಗಳ, ಮತ್ತೂ, ಖಾಸ್ ಜನರ ಮಾಲೀಕತೆಗೊಳ ಪಟ್ಟ ಗ್ರಾಮಗಳ ಸಾಗುವಳಿದಾರರಿಗೂ 18–21 ರೂಲುಗಳಿಗನುಸಾರವಾಗಿ ಸಾಲಗ ಳನ್ನು ಕೊಡಬಹುದಾದರೂ, ವಾರ್ಷಿಕ ನಿಯೋಗದ ಹಣದ ಬಹು ಭಾಗವನ್ನು ಸರ್ಕಾ ರಿ ಗ್ರಾಮಗಳಲ್ಲಿ ಮಾತ್ರ ವಿನಿಯೋಗಿಸುವುದೂ, ಇನಾಮುದಾರರು ಮತ್ತು ಮಾಲೀ ಕರು ಒಪ್ಪುವ ಸಂದರ್ಭಗಳಲ್ಲಿ ಮಾತ್ರ ಸಾಗುವಳಿದಾರರಿಗೆ ಸಾಲಗಳನ್ನು ಕೊಡು ವುದೂ ಸಹ ಸದ್ಯಕ್ಕೆ ಉಚಿತವಾಗಿವೆ.

13. ಸಾಲ ಕೊಟ್ಟ ಆರ್ಡರುಗಳನ್ನೆಲ್ಲಾ ತಾಲ್ಲೂಕು ಕಚ್ಚೇರಿಯಲ್ಲಿ ರಟ್ಟು ಹಾಕಿ ಹೊಲೆದ ಪುಸ್ತಕಗಳಲ್ಲಿ ಬರೆದಿಡಬೇಕು. ಸಾಲಕೊಡಲಧಿಕೃತರಾದ ಪ್ರತಿ ಆಫಿಸರು ಸಾಲ ಕೊಡಲು ತಾವು ಮಾಡಿದ ಆರ್ಡರುಗಳಿಗೆ ಬೇರೇ ಜಂಜರ್ ನಂಬರುಗ ಳನ್ನು ಕೊಡಬೇಕು.

14. ಭೂಮಿಯಾಬಾದಿನ ಆಕ್ಟಿನ ಮೇರೆ ಯಾವ ಆಬಾದಿನ ಸಾಲಗಳಿಗೆ ಸಾಲ ಗಳು ಕೊಡಲ್ಪಟ್ಟಿವೆಯೋ, ಆ ಕಾರ್ಯಗಳು ನಡೆಯುತ್ತಿರುವಾಗ ಅವುಗಳನ್ನು, ರೆವಿ ನ್ಯೂ ಇನ್ಸ್‌ಪೆಕ್ಟರು, ತಹಸಿಲ್‌ದಾರರು, ಡಿವಿಷನಲ್ ಅಧಿಕಾರಿಗಳು ಕೂಡಿದ ಮಟ್ಟಿಗೆ ಮೇಲಿಂದ ಮೇಲೆ ಪರೀಕ್ಷಿಸುತ್ತ, ಅತಿ ವಿಳಂಬ, ಉಪೇಕ್ಷೆ, ಸಾಲದ ಹಣದ ದುರ್ವಿನಿ ಯೋಗದ ಸಂಭವ ಈ ಸಂದರ್ಭಗಳನ್ನೆಲ್ಲವನ್ನು ಲಕ್ಷಿಸಬೇಕು. ಸಾಲಗಳನ್ನು ಋಣಿಗೆ ಸಾಧಾರಣವಾಗಿ ಎರಡು ಕಂತುಗಳಲ್ಲ ಕೊಡಬೇಕು. ಮೊದಲ ಕಂತಿನ ಹಣಕ್ಕೆ ತಕ್ಕ ಕಾರ್ಯವು ತಮಗೆ ಸಮರ್ಪಕವಾಗುವಂತೆ ನಡೆದಿದೆಯೋ ಎಂಬುದನ್ನು ಸಾಲ ಕೊಡುವಧಿ ಕಾರಿಗಳು, 2 ನೇ ಕಂತನ್ನು ಕೊಡುವುದಕ್ಕಿಂತ ಮುಂಚೆಯೇ, ತಿಳಿದುಕೊಳ್ಳಬೇಕು.

ಕಾರ್ಯಗಳು ನಡೆಯುತ್ತಿರುವಾಗ, ಅವುಗಳನ್ನು ನೋಡಿಕೊಳ್ಳಲು, ಯೋಗ್ಯರೂ, ವಿಶ್ವಾಸಾರ್ಹರೂ ಆದ ಅಧೀನಾಧಿಕಾರಿಗಳನ್ನು ನೇಮಿಸುವ ಏರ್ಪಾಟುಗಳನ್ನು ಮಾಡುವುದು ಸಾಲ ಕೊಡಲಾಜ್ಞೆ ಮಾಡುವ ಪ್ರತಿಯಧಿಕಾರಿಯ ಕರ್ತವ್ಯವಾಗಿದೆ. ಯಾವ ಕಾರ್ಯಕ್ಕೆ ಕಲಾಕುಶಲರ ಕೌಶಲವವಶ್ಯಕವೋ ಅಂಥವುಗಳನ್ನು ಮರಹಮತ್ ಇಲಾಖೆಯಧಿಕಾರಿಯೊಬ್ಬರು ಪರೀಕ್ಷಿಸಬೇಕು. 26 ನೆಯ ರೂಲಿನ ಪ್ರಕಾರ ಸಾಲ ಕೊಡುವ ಆರ್ಡರುಗಳಲ್ಲಿ ಕಾರ್ಯಗಳೂ ಪೂರಯಿಸಲ್ಪಡಬೇಕಾದ ಅವಧಿಗಳೂ ನಿಷ್ಕರ್ಷಿಸಲ್ಪಡಬೇಕು; ಮತ್ತೂ, ಆ ಅವಧಿಗಳಾದ ಕೂಡಲೇ ಅವುಗಳನ್ನು ದರ್ಶಿಸಿ ರಿಪೋರ್ಟು ಮಾಡಬೇಕು. ಒಪ್ಪಿಕೆಗಳ ಪೂರ್ಣಾನುಸಾರವಾಗಿ ಕಾರ್ಯಗಳು ನಡೆದಿವೆಯೋ? ಆ ಕಾರ್ಯಗಳು ಎಷ್ಟು ಕಾಲ ಉಪಯೋಗಕ್ಕೆ ಬರುವುವು? ಎಂಬೀ ವಿಷಯಗಳನ್ನು ಕುರಿತು ಪೂರ್ಣವಾದೊಂದು ರಿಪೋರ್ಟನ್ನು ಸಾಲ ಕೊಟ್ಟಧಿಕಾರಿಗೆ ಮಾಡಬೇಕು. ಕಾರ್ಯವು ಪೂರಯಿಸಿಸಿರುವುದರಿಂದ, ಆರ್ಡರಿನಲ್ಲಿ ಮೊದಲನುಜ್ಞಿತವಾದ ವಾಯಿದೆಗಳ ಕಡಮೆ ಮಾಡುವ ಸಂದರ್ಭಗಳೆಲ್ಲವನ್ನು ಸಾಲ ಕೊಡಲಧಿಕೃತರಾದ ಪ್ರತಿ ಅಧಿಕಾರಿಯೂ ವರ್ಷಕೊಮ್ಮೆ ಡಿಸ್ಟ್ರಿಕ್ಟ್ ಕಲೆಕ್ಟರಿಗೆ ರಿಪೋರ್ಟನ್ನು ಮಾಡಬೇಕು.

15. ಡಿವಿಷನಲ್ ಅಧಿಕಾರಿಗಳು ಆ ಆ ತಾಲ್ಲೂಕಿಗೆ ಹೋದಾಗ್ಗೆ ಪ್ರತಿ ಸಾಲದ ರಿಕಾರ್ಡನ್ನೂ ತನಿಖೆಮಾಡಿ, ಆ ತನಿಖೆಯ ಫಲವನ್ನು ಕಲೆಕ್ಟರಿಗೆ ರಿಪೋರ್ಟು ಮಾಡಬೇಕು.

16. ಸಾಲ ಕೊಡಲಧಿಕೃತರಾದ ಅಧಿಕಾರಿಗಳು ತಮ್ಮ ಸರ್ಕಿಟುಗಳಲ್ಲಿ ಸಾಲಗಳನ್ನು ಸಾಧ್ಯವಾದ ಮಟ್ಟಿಗೆ ತಾವೇ ಋಣಿ ಹಸ್ತಗತಮಾಡಬೇಕಾದುದನ್ನು ಯತ್ನಿಸಬೇಕು.

17. ಸಿವಿಲ್ ಅಕೌಂಟ್ ಕೋಡಿನ 131 ನೆಯ ಆರ್ಟಿಕಲ್ಲಿನಲ್ಲಿರುವಂತೆ ಅಪೇಕ್ಷಿತವಾದ ಸಾಲದ ಹಣವನ್ನು ಖಜಾನೆಯಿಂದ ತೆಗೆದುಕೊಂಡು ಅದರ ಬಾಬನ್ನು ದಾಖಲ್ಮಾಡಬೇಕು. ಒಂದೇ ಬಿಲ್ಲಿನ ಮೇಲೆ ಖಜಾನೆಯಿಂದ ತರಿಸಬಹುದಾದ ಮೊಬಲಗಿನ ಪರಮಾವಧಿಗಳು ಈ ಮೇರೆ ಖಂಡಿಸಲ್ಪಟ್ಟಿವೆ. ಕಲೆಕ್ಟರು 2,000 ರೂ. ನ್ನೂ, ಡಿವಿಷನಲ್ ಆಫೀಸರು 1.000 ರೂ. ನ್ನೂ, ತಾಸಿಲ್‌ದಾರರು 500 ರೂ. ನ್ನೂ ಮಾತ್ರ ತರಿಸಬಹುದು. ಋಣಿಗಳಿಂದ ರಸೀತಿಗಳನ್ನು ತೆಗೆದುಕೊಂಡು, ಅವನ್ನು ಖಜಾನೆಯ ವೌಚರುಗಳೊಡನೆ ಅಕೌಂಟೆಂಟ್ ಜನರಲ್ರವರ ಆಫೀಸಿಗೆ ರವಾನಿಸಬೇಕು.

ಅಡ್ವಾನ್ಸ್ ಕೊಡಲು ಮೊಬಲಗನ್ನು ತೆಗೆದುಕೊಳ್ಳುವ ಪ್ರತಿ ಆಫೀಸರೂ ಅಡ್ವಾನ್ಸ್ ರಿಜಿಸ್ಟರೊಂದನ್ನು ಇಟ್ಟು ಅದನ್ನು ಸರ್ಕಿಟಿಗೆ ಹೋಗುವಾಗ್ಗೆ ಜತೆಯಲ್ಲಿ ತೆಗೆದುಕೊಂಡು ಹೋಗಬೇಕು. ತಾವು ಅಪ್ಪಣೆ ಮಾಡಿದ ಸಾಲಗಳನ್ನೆಲ್ಲಾ ಈ ರಿಜಿಸ್ಟರಸಲ್ಲಿ ಜಂಜರ್ ಸಂಬರಿಸ ಕೆಳಗೆ ತೋರಿಸಬೇಕು. ಕಾರ್ಯ ಮುಗಿದ ಬಳಿಕ, ಬಾಕಿ ಯುಳಿಯುವ ಮೊಬಲಗನ್ನು ಖಜಾನೆಯ "ಡಬ್ಬಲ್ ಲಾಕ್ ರಿಜಿಸ್ಟರ್" ಅಂತ ತೋರಿಸಬೇಕು.